ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬೆಂಗಳೂರಿನಲ್ಲಿ ಭಾನುವಾರ ನಡೆದ ಚಿತ್ರಸಂತೆಯಲ್ಲಿ ಕಂಡುಬಂದ ಜನಸ್ತೋಮ –ಪ್ರಜಾವಾಣಿ ಚಿತ್ರ

₹2 ಕೋಟಿ ವಹಿವಾಟು: 2 ಲಕ್ಷಕ್ಕೂ ಅಧಿಕ ಕಲಾಸಕ್ತರ ಭೇಟಿ

ಕುಂಚ ಕಾವ್ಯ ಅನಾವರಣ ಕಲಾಸಕ್ತರಿಗೆ ರಸದೌತಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐತಿಹಾಸಿಕ ತಾಣಗಳು, ವನ್ಯಜೀವಿಗಳು, ಗ್ರಾಮೀಣ ಜನಜೀವನದ ನೋಟ, ದೇವರ ಚಿತ್ರಗಳು, ಮಹಿಳೆಯ ಭಾವಗಳು, ಜಾನಪದ ಸಂಸ್ಕೃತಿ, ಖಜುರಾಹೋ ಶಿಲ್ಪಕಲೆ.... ಒಂದೇ ಎರಡೇ, ಇಂತಹ ಸಾವಿರಾರು ಕಲಾಕೃತಿಗಳು ಅಲ್ಲಿ ಅನಾವರಣಗೊಂಡಿದ್ದವು.

ಕರ್ನಾಟಕ ಚಿತ್ರಕಲಾ ಪರಿಷತ್ತು 'ಎಲ್ಲರಿಗಾಗಿ ಕಲೆ' ಎಂಬ ಧ್ಯೇಯವಾಕ್ಯದೊಂದಿಗೆ ನಗರದ ಕುಮಾರಕೃಪಾ ರಸ್ತೆಯಲ್ಲಿ ಭಾನುವಾರ ಏರ್ಪಡಿಸಿದ್ದ 19ನೇ ಚಿತ್ರಸಂತೆ ಕಲಾಲೋಕವನ್ನೇ ಸೃಷ್ಟಿಸಿತ್ತು. ಈ ಚಿತ್ರಸಂತೆಯು ಕಲಾವಿದರ ಪ್ರತಿಭೆ ಅನಾವರಣಕ್ಕೆ ವೇದಿಕೆ ಕಲ್ಪಿಸುವುದರ ಜೊತೆ ಅವರು ರಚಿಸಿದ ಕಲಾಕೃತಿಗಳ ಮಾರಾಟಕ್ಕೂ ಅವಕಾಶ ಒದಗಿಸಿತ್ತು. ಚಿತ್ರಸಂತೆಯು ಕಲಾವಿದರ ಮತ್ತು ಕಲಾಸಕ್ತರ ನಡುವೆ ಬಾಂಧವ್ಯ ಬೆಸೆಯುವ ಸೇತುವೆಯಾಯಿತು. ರಂಗುರಂಗಿನ ಕಲಾಕೃತಿಗಳು ಕಲಾರಸಿಕರ ಸಂಭ್ರಮವನ್ನೂ ಇಮ್ಮಡಿಗೊಳಿಸಿದವು. ಸ್ವಾತಂತ್ರ್ಯ ಸಂಭ್ರಮದ 75ನೇ ವಾರ್ಷಿಕೋತ್ಸವದ ಅಂಗವಾಗಿ ಈ ಬಾರಿ ಚಿತ್ರಸಂತೆಯನ್ನು ಸ್ವಾತಂತ್ರ್ಯ ಯೋಧರಿಗೆ ಸಮರ್ಪಿಸಲಾಗಿತ್ತು.

ಮರಳಿನ ಚಿತ್ರಕಲೆ, ಜಲವರ್ಣ, ಆ್ಯಕ್ರಿಲಿಕ್, ಮಧುಬನಿ, ತೈಲವರ್ಣ, ಡಿಜಿಟಲ್ ಪೇಂಟಿಂಗ್, ತಂಜಾವೂರು ಶೈಲಿ, ರಾಜಸ್ಥಾನಿ ಶೈಲಿ, ಕಾಫಿ ಪೇಂಟಿಂಗ್ ಮುಂತಾದ ನಾನಾ ಪ್ರಕಾರದ ಕಲಾಕೃತಿಗಳು ಗಮನಸೆಳೆದವು.

ಮಹಾರಾಷ್ಟ್ರ, ತಮಿಳುನಾಡು ಸೇರಿದಂತೆ ದೇಶದ ನಾನಾ ರಾಜ್ಯಗಳಿಂದ ಬಂದಿದ್ದ ಕಲಾವಿದರ ಸಮ್ಮಿಲನಕ್ಕೆ ಚಿತ್ರಸಂತೆ ವೇದಿಕೆ ಕಲ್ಪಿಸಿತ್ತು. ₹50 ರಿಂದ ₹8 ಲಕ್ಷದವರೆಗಿನ ಕಲಾಕೃತಿಗಳಿದ್ದವು. ಕೆಲವರು ದುಬಾರಿ ಬೆಲೆ ಕೇಳಿ ಅಚ್ಚರಿಪಟ್ಟರೂ, ಕಲಾವಿದರ ಪ್ರತಿಭೆ ಮತ್ತು ಶ್ರಮಕ್ಕೆ ತಲೆದೂಗಿದರು.

ವ್ಯಕ್ತಿ ಭಾವಚಿತ್ರ ಬರೆಯುವ ಕಲಾವಿದರೂ ಸಹ ಇದ್ದರು. ಕಲಾವಿದರ ಕೈಚಳಕದಲ್ಲಿ ತಮ್ಮದೇ ಚಿತ್ರ ಮೂಡುವ ಬಗೆಯನ್ನು ಕಂಡು ಜನ ನಿಬ್ಬೆರಗಾದರು.

ಬೆಳಿಗ್ಗೆಯಿಂದಲೇ ಜನರು ಚಿತ್ರಸಂತೆಯತ್ತ ಹೆಜ್ಜೆ ಹಾಕಿದ್ದರು. ಕಳೆದ ವರ್ಷ ಕೋವಿಡ್ ಕಾರಣಕ್ಕೆ ಆನ್‌ಲೈನ್ ಮೂಲಕ ಚಿತ್ರಸಂತೆ ನಡೆದಿತ್ತು. ಈ ಬಾರಿ ಚಿತ್ರ ಜಾತ್ರೆ ಗತವೈಭವಕ್ಕೆ ಮರಳಿದ್ದಕ್ಕೆ ಸಂಭ್ರಮಪಟ್ಟ ಕಲಾಸಕ್ತರು ಅಪೂರ್ವ ಕಲಾಕೃತಿಗಳನ್ನು ಖರೀದಿಸಿದರು.

IIನೇ ಪುಟ ನೋಡಿ

ಹೆಡ್‌ಕಾನ್‌ಸ್ಟೆಬಲ್ ಕುಂಚದಲ್ಲಿ ಜಾನಪದ ಕಲೆ!

ಹಾವೇರಿಯ ಹೆಡ್‌ಕಾನ್‌ಸ್ಟೆಬಲ್ ಕರಿಯಪ್ಪ ಹಂಚಿನಮಣಿ ಅವರು ಜಾನಪದ ನೃತ್ಯಗಳು, ಗ್ರಾಮೀಣ ಬದುಕು, ಹಂಪಿ ತಾಣಗಳ ಕಲಾಕೃತಿಗಳು ಗಮನಸೆಳೆದವು. ನೃತ್ಯ ಮತ್ತು ಸಂಗೀತದ ಸಮ್ಮಿಲನಗೊಳಿಸಿ ರಚಿಸಿದ್ದ ಇವರ ಕಲಾಕೃತಿಯೊಂದಕ್ಕೆ ₹2.5 ಲಕ್ಷ ಮೌಲ್ಯ ನಿಗದಿಪಡಿಸಿದ್ದರು. ಖಜುರಾಹೋ ಮಾದರಿ ಶಿಲ್ಪಕಲೆಗಳ ಕಲಾಕೃತಿಗಳು ಆಕರ್ಷಣೀಯವಾಗಿದ್ದವು.

ತಂಜಾವೂರು ಶೈಲಿಯಲ್ಲಿ ಕಲಾಕೃತಿ ರಚಿಸಿದ್ದ ಬೆಂಗಳೂರಿನ ಇಂದಿರಾನಗರದ ಜಿ.ಎ. ಮುರುಗನ್ ಅವರ ಕಲಾಕೃತಿಗೆ ₹3.5 ಲಕ್ಷ ಮೌಲ್ಯ ನಿಗದಿಪಡಿಸಿದ್ದರು.

ಫಿಕ್ಸ್‌ಡ್ ಆ್ಯನ್ಯುಯಿಟಿ ದರಗಳು
ಮಲ್ಟಿಪ್ಲೈ ಆ್ಯನ್ಯುಯಿಟಿ ಆಪ್ಷನ್‌ಗಳು
ಆ್ಯನ್ಯುಯಿಟಿ ಸಂದಾಯದ ವಿಭಿನ್ನ ವಿಧಾನಗಳು

ಎಲ್‌ಐಸಿಯ ಜೀವನ್ ಅಕ್ಷಯ್ VII
ನಾನ್-ಲಿಂಕ್ಡ್, ನಾನ್-ಪಾರ್ಟಿಸಿಪೇಟಿಂಗ್, ಇಂಡಿವೀಜ್ಯುವಲ್, ಇಮ್ಮೀಡಿಯಟ್ ಆನ್ಯುಯಿಟಿ ಪ್ಲಾನ್
UIN- 512N337V02 ಪ್ಲಾನ್ ನಂ.: 857

ಡೌನ್‌ಲೋಡ್ ಮಾಡಿರಿ ಎಲ್‌ಐಸಿಯ ಮೊಬೈಲ್ ಆಪ್ "MyLIC" | ಸಂದರ್ಶಿಸಿರಿ: licindia.in | ಕಾಲ್ ಸೆಂಟರ್ ಸರ್ವಿಸ್ (022) 6827 6827

ವಿವರಗಳಿಗಾಗಿ ನಿಮ್ಮ ಏಜೆಂಟರನ್ನು/ಸನಿಹದ ಎಲ್‌ಐಸಿ ಶಾಖೆಯನ್ನು ಸಂಪರ್ಕಿಸಿ ಅಥವಾ ನಿಮ್ಮ ನಗರದ ಹೆಸರನ್ನು SMS ಮಾಡಿ 56767474ಗೆ

ಮೋಸದ ದೂರವಾಣಿ ಕರೆಗಳು ಮತ್ತು ಕಾಲ್ಪನಿಕ/ಕೃತ್ರಿಮ ಆಫರ್‌ಗಳಿಂದ ಜಾಗರೂಕರಾಗಿರಿ! ಐಆರ್‌ಡಿಎಐ ಯಾವತ್ತೂ ವಿಮಾ ಪಾಲಿಸಿಗಳ ಮಾರಾಟ, ಬೋನಸ್‌ಗಳ ಘೋಷಣೆ ಅಥವಾ ಪ್ರೀಮಿಯಮ್‌ಗಳ ಹೂಡಿಕೆ ಮುಂತಾದ ಚಟುವಟಿಕೆಗಳಲ್ಲಿ ತೊಡಗುವುದಿಲ್ಲ. ಈ ಬಗೆಯ ಫೋನ್ ಕರೆಗಳನ್ನು ಪಡೆಯುವ ಸಾರ್ವಜನಿಕರು ಪೋಲೀಸರಲ್ಲಿ ದೂರು ಸಲ್ಲಿಸಬೇಕೆಂದು ಕೋರಿಕೊಳ್ಳುತ್ತೇವೆ.
ಅಪಾಯ ಅಂಶಗಳು, ಷರತ್ತು ಮತ್ತು ನಿಬಂಧನೆಗಳ ಕುರಿತು ಹೆಚ್ಚಿನ ಮಾಹಿತಿಗಾಗಿ, ಮಾರಾಟವನ್ನು ಮುಕ್ತಾಯಗೊಳಿಸುವ ಮುನ್ನ ದಯವಿಟ್ಟು ಮಾರಾಟ ಪುಸ್ತಿಕೆಯನ್ನು ಜಾಗರೂಕತೆಯಿಂದ ಓದಿಕೊಳ್ಳಿರಿ.

ನಮ್ಮೊಂದಿಗೆ ಸೇರಿಕೊಳ್ಳಿ: LIC India Forever
IRDAI Regn No.: 512

ಲೈಫ್ ಇನ್‌ಶೂರನ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ
LIFE INSURANCE CORPORATION OF INDIA
ಕ್ಷಣ ಕ್ಷಣವೂ ನಿಮ್ಮೊಂದಿಗೆ
LIC / MUD / 2021-22 / 50 / Kan

ಹಣಕಾಸು ವರ್ಷದ ಕೊನೆಯಲ್ಲಿ ₹500 ಕೋಟಿ ಬಳಕೆಗೆ ಅರ್ಜಿ ಆಹ್ವಾನ

‘ಸಾವಯವ ಸಿರಿ’ ಕೊನೆ ಕ್ಷಣದ ತರಾತುರಿ

• ಎಸ್. ರವಿಪ್ರಕಾಶ್

ಬೆಂಗಳೂರು: ‘ಸಾವಯವ ಸಿರಿ’ ಯೋಜನೆಯಡಿ ಮೂರು ವರ್ಷಗಳಲ್ಲಿ ₹ 500 ಕೋಟಿ ಬಳಕೆಗೆ ಫಲಾನುಭವಿಗಳನ್ನು ಗುರುತಿಸಲು ಹಾಲಿ ಆರ್ಥಿಕ ವರ್ಷದ ಕೊನೆಯ ಹಂತದಲ್ಲಿ ತರಾತುರಿಯಲ್ಲಿ ಪ್ರಕ್ರಿಯೆ ಆರಂಭಿಸಲಾಗಿದೆ. ಮೂರು ವರ್ಷಗಳ ಅವಧಿಗೆ ಒಮ್ಮೆಯೇ ಫಲಾನುಭವಿಗಳನ್ನು ಗುರುತಿಸಲು ನಿರ್ಧರಿಸಲಾಗಿದೆ.

ರಾಸಾಯನಿಕ ಮುಕ್ತ ಮತ್ತು ಸಾವಯವ ಕೃಷಿಗೆ ಉತ್ತೇಜನ ನೀಡಲು ರಾಜ್ಯ ಸರ್ಕಾರ ಪದೇ ಪದೇ ಘೋಷಣೆಗಳನ್ನು ಹೊರಡಿಸಿತ್ತು. ಇದಕ್ಕೆ ಹಣವನ್ನೂ ನಿಗದಿಪಡಿಸಿತ್ತು. ಆದರೆ, ಆರ್ಥಿಕ ವರ್ಷದ ಕೊನೆಯವರೆಗೂ ಯೋಜನೆಗೆ ಚಾಲನೆ ನೀಡಲಿಲ್ಲ. ಘೋಷಿಸಿದ್ದ ₹ 500 ಕೋಟಿ ಬಿಡುಗಡೆ ಮಾಡಲೂ ಇಲ್ಲ. ಯೋಜನೆ ಅವಧಿಯ ಮೂರು ವರ್ಷಗಳಲ್ಲಿ ಒಂದು ವರ್ಷ ಹಾಗೆಯೇ ಕಳೆದುಹೋಗಿದೆ.

‘ಸಾವಯವ ಸಿರಿ’ ಯೋಜನೆಗೆ ₹ 500 ಕೋಟಿ ಒದಗಿಸುವ ಘೋಷಣೆಯನ್ನು 2021-22ರ ಬಜೆಟ್‌ನಲ್ಲಿ ಪ್ರಕಟಿಸಲಾಗಿತ್ತು. ಆರ್ಥಿಕ ವರ್ಷ ಕೊನೆಗೊಳ್ಳಲು (ಮಾರ್ಚ್ 31) ನಾಲ್ಕು ದಿನವಷ್ಟೇ ಉಳಿದಿದೆ. ಈ ಅಲ್ಪಾವಧಿಯಲ್ಲೇ ಎಲ್ಲ ಪ್ರಕ್ರಿಯೆಗಳನ್ನು ಮುಗಿಸಿ ಕಾರ್ಯಾದೇಶ ನೀಡುವ ತಯಾರಿ ನಡೆದಿದೆ ಎಂಬ ಮಾಹಿತಿ ಲಭ್ಯವಾಗಿದೆ.

ಅರ್ಹತೆಗಳ ಕುರಿತೂ ಆಕ್ಷೇಪ: ಈ ಮಧ್ಯೆ ‘ಸಾವಯವ ಸಿರಿ’ ಯೋಜನೆಗೆ ಅರ್ಜಿ ಸಲ್ಲಿಸಲು ನಿಗದಿ ಮಾಡಿರುವ ‘ಅರ್ಹತೆ’ಗಳ ಬಗ್ಗೆಯೂ ತಕರಾರು ಕೇಳಿ ಬಂದಿದೆ. ಈ ಅರ್ಹತೆಯ ಮಾನದಂಡಗಳಿಂದಾಗಿ ಸ್ವಯಂಸೇವಾ ಸಂಸ್ಥೆಗಳು ಅರ್ಜಿ ಸಲ್ಲಿಸಲೂ ಸಾಧ್ಯವಾಗಿಲ್ಲ. ತೀರಾ ಕಡಿಮೆ ಅರ್ಜಿಗಳು ಬಂದ ಕಾರಣ ಅರ್ಹತೆಯಲ್ಲಿ ಕೆಲವನ್ನು ಸಡಿಲಿಸಲಾಗಿದೆ ಎಂದೂ ಮೂಲಗಳು ತಿಳಿಸಿವೆ.

ಪ್ರಜಾವಾಣಿ ವಿಶೇಷ

ಏನಿದು ‘ಸಾವಯವ ಸಿರಿ’ ಯೋಜನೆ?: ಸಾವಯವ ಕೃಷಿ ಪದ್ಧತಿಯನ್ನು ಉತ್ತೇಜಿಸಲು ರೈತರಿಗೆ ತರಬೇತಿ ನೀಡುವುದರ ಜತೆಗೆ ಪೂರಕವಾಗಿ ಅವರಿಗೆ ಹಸಿರೆಲೆ ಗೊಬ್ಬರ, ಬೀಜ ವಿತರಣೆ, ಸಾವಯವ ಗೊಬ್ಬರ ಉತ್ಪಾದನೆ, ಪೋಷಕಾಂಶ ನಿರ್ವಹಣೆಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು ಸೇವಾ ಸಂಸ್ಥೆಗಳ ಕಾರ್ಯ.

ಮೂರು ವರ್ಷಗಳಲ್ಲಿ ಮೂರು ಹಂತಗಳಲ್ಲಿ ಯೋಜನೆ ಅನುಷ್ಠಾನಗೊಳಿಸಲಾಗುವುದು. ಜಿಲ್ಲಾ ಮಟ್ಟದಲ್ಲಿ ಸಾಮಾಜಿಕ ಸಂಸ್ಥೆಗಳ ಮೂಲಕ, ತಾಲ್ಲೂಕು ಮಟ್ಟದಲ್ಲಿ ಸಾವಯವ ಕೃಷಿಕರ ಸಂಘ, ಸಂಸ್ಥೆ, ಒಕ್ಕೂಟಗಳ ಮೂಲಕ ಮತ್ತು ಕ್ಷೇತ್ರ ಮಟ್ಟದಲ್ಲಿ ಆಯ್ಕೆಯಾಗುವ ಫಲಾನುಭವಿಗಳಾಗಿ ಸಾವಯವ ಕೃಷಿಕರ ಮೂಲಕ ಜಾರಿ ಆಗಲಿದೆ.

ಜಿಲ್ಲಾ ಮಟ್ಟದಲ್ಲಿ ಆಯ್ಕೆಯಾಗುವ ಸಾಮಾಜಿಕ ಸಂಸ್ಥೆಗಳು ಟ್ರಸ್ಟ್, ಸೊಸೈಟಿ ಕಾಯ್ದೆಯಡಿ ನೋಂದಾಯಿತಗೊಂಡಿರಬೇಕು. ಈ ಸಂಸ್ಥೆಗಳು ಜಿಲ್ಲೆಯಲ್ಲಿ ಗುರುತಿಸುವ ರೈತರನ್ನು ಸಾವಯವ ಕೃಷಿಯ ವ್ಯಾಪ್ತಿಗೆ ಒಳಪಡಿಸುವ ಜವಾಬ್ದಾರಿ ಹೊಂದಿರುತ್ತವೆ. ತಾಲ್ಲೂಕಿನಿಂದ ಆಯ್ಕೆಯಾಗುವ ನೋಂದಾಯಿತ ಕೃಷಿಕರ ಸಂಘಗಳು ಪ್ರತಿ ತಾಲ್ಲೂಕಿನಲ್ಲಿ 750 ರೈತರನ್ನು ಗುರುತಿಸಿ ತಲಾ 30 ರೈತರನ್ನೊಳಗೊಂಡಂತೆ ಪ್ರತಿ ತಾಲ್ಲೂಕಿನಲ್ಲಿ 25 ಗುಚ್ಛಗಳನ್ನು (ಕ್ಲಸ್ಟರ್) ರಚಿಸಿ ಅನುಷ್ಠಾನಗೊಳಿಸಬೇಕು.

ಆಯಾ ಜಿಲ್ಲೆಗಳಲ್ಲಿ ಆಯ್ಕೆಯಾಗುವ ಸಾಮಾಜಿಕ ಸಂಸ್ಥೆಗಳು ರೈತರಿಗೆ ತರಬೇತಿ, ಅಧ್ಯಯನ ಪ್ರವಾಸ, ಕ್ಷೇತ್ರೋತ್ಸವಗಳಲ್ಲಿ ಪಾಲ್ಗೊಳ್ಳುವಂತೆ ಮಾಡುವುದು ಕಡ್ಡಾಯ.

ತರಾತುರಿಯ ವೇಳಾಪಟ್ಟಿ

- **16.02.22** ರಂದು ಅರ್ಜಿ ಆಹ್ವಾನ
- **21.02.22**ರೊಳಗೆ ಅರ್ಜಿಗಳ ಪರಿಶೀಲನೆ ಮತ್ತು ಶಿಫಾರಸ್ಸಿನೊಂದಿಗೆ ಚಾಲನಾ ಸಮಿತಿಗೆ ಅರ್ಜಿಗಳ ಮಂಡನೆ
- **28.02.22**ರೊಳಗೆ ರಾಜ್ಯ ಮಟ್ಟದ ಸಾವಯವ ಕೃಷಿ ಉನ್ನತ ಮಟ್ಟದ ಅಧಿಕಾರಯುಕ್ತ ಸಮಿತಿಯ ಅನುಮೋದನೆಗಾಗಿ ಕೇಂದ್ರ ಕಚೇರಿಗೆ ಸಲ್ಲಿಕೆ
- **03.03.22** ಸೇವಾ ಸಂಸ್ಥೆಗಳ ಆಯ್ಕೆಗಾಗಿ ರಾಜ್ಯ ಮಟ್ಟದ ಅನುಮೋದನೆ
- **10.03.22**ರೊಳಗೆ ಜಿಲ್ಲಾವಾರು ನೋಂದಾಯಿತ ಸೇವಾ ಸಂಸ್ಥೆಗಳಿಗೆ ಕಾರ್ಯಾದೇಶ ಮತ್ತು ಸೇವಾ ಸಂಸ್ಥೆಗಳ ಜತೆ ಒಪ್ಪಂದ ಹಾಗೂ ಜಂಟಿ ಖಾತೆ ತೆರೆಯುವಿಕೆ.
- **14.03.22** ರೊಳಗೆ ಜಂಟಿ ಖಾತೆಗೆ ಯೋಜನಾ ಅನುಷ್ಠಾನಕ್ಕಾಗಿ ಕೇಂದ್ರ ಕಚೇರಿಯಿಂದ ಅನುದಾನ ವರ್ಗಾವಣೆ
- **25.03.22** ರೊಳಗೆ ಜಿಲ್ಲಾ ಮಟ್ಟದ ಸೇವಾ ಸಂಸ್ಥೆಗಳು ಪ್ರತಿ ತಾಲ್ಲೂಕಿನ ಕ್ಷೇತ್ರಮಟ್ಟದಲ್ಲಿ ಆಯ್ಕೆಯಾಗುವ 750 ಕೃಷಿಕರಿಗೆ ತರಬೇತಿ, ಅಧ್ಯಯನ ಪ್ರವಾಸಕ್ಕೆ ಸಂಬಂಧಿಸಿದಂತೆ ಕ್ರಿಯಾ ಯೋಜನೆ ಸಿದ್ಧಪಡಿಸಿ ಉಪ ಕೃಷಿ ನಿರ್ದೇಶಕರಿಗೆ ಸಲ್ಲಿಸಬೇಕು.

ಆಕ್ಷೇಪಕ್ಕೆ ಕಾರಣವಾದ ‘ಅರ್ಹತೆ’

ಅರ್ಜಿ ಸಲ್ಲಿಸಲು ಇರುವ ಅರ್ಹತೆಗಳಲ್ಲಿ ಮುಖ್ಯವಾಗಿ ಎರಡು ಅಂಶಗಳು ಟೀಕೆಗೆ ಒಳಗಾಗಿವೆ. ‘ಕೆಲವೇ ಸೇವಾ ಸಂಸ್ಥೆಗಳಿಗೆ ಅನುಕೂಲ ಮಾಡಿಕೊಡುವ ಉದ್ದೇಶ ಇದರಲ್ಲಿದೆ’ ಎಂದು ಕೆಲವು ಸೇವಾ ಸಂಸ್ಥೆಗಳು ದೂರಿವೆ. ಸಾಮಾಜಿಕ ಸಂಸ್ಥೆಗಳು ಕನಿಷ್ಠ 10 ಹೆಕ್ಟೇರ್ ವ್ಯವಸಾಯ ಯೋಗ್ಯ ಜಮೀನು ಹೊಂದಿರಬೇಕು ಮತ್ತು ಈ ಸಂಸ್ಥೆಗಳು ಗೋಶಾಲೆಗಳನ್ನು ನಿರ್ವಹಿಸುತ್ತಿರಬೇಕು ಎಂಬ ಷರತ್ತು ಫಲಾನುಭವಿಗಳ ಆಯ್ಕೆಗೆ ನಿಗದಿಪಡಿಸಿರುವ ಮಾರ್ಗಸೂಚಿಗಳಲ್ಲಿದೆ. ಇದಕ್ಕೆ ಪೂರಕವಾದ ದಾಖಲೆ ಸಲ್ಲಿಸುವುದು ಕಡ್ಡಾಯ. ಇದಕ್ಕೆ ಆಕ್ಷೇಪ ವ್ಯಕ್ತವಾಗಿದೆ.

ವಿದೇಶಿ ಶಕ್ತಿಗಳಿಂದ ಷಡ್ಯಂತ್ರ: ಇಮ್ರಾನ್ ಖಾನ್

ಇಸ್ಲಾಮಾಬಾದ್(ಪಿಟಿಐ): ಪಾಕಿಸ್ತಾನ ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯ ಮಂಡನೆಗೆ ಪೂರ್ವಭಾವಿಯಾಗಿ ಭಾನುವಾರ ಇಲ್ಲಿ ಹಮ್ಮಿಕೊಂಡಿದ್ದ ಬೃಹತ್ ರ್‍ಯಾಲಿಯಲ್ಲಿ ಮಾತನಾಡಿದ ಪ್ರಧಾನಿ ಇಮ್ರಾನ್ ಖಾನ್, ‘ಸಮ್ಮಿಶ್ರ ಸರ್ಕಾರವನ್ನು ಬುಡಮೇಲುಗೊಳಿಸುವ ಷಡ್ಯಂತ್ರದಲ್ಲಿ ವಿದೇಶಿ ಶಕ್ತಿಗಳು ಶಾಮೀಲಾಗಿವೆ’ ಎಂದು ಆರೋಪಿಸಿದ್ದಾರೆ.

‘ಪಾಕಿಸ್ತಾನದಲ್ಲಿ ಸರ್ಕಾರವನ್ನು ಬದಲಿಸಲು ವಿದೇಶಿ ಹಣ ಬಳಸಲಾಗಿದೆ. ಇದಕ್ಕಾಗಿ ಸ್ಥಳೀಯ ರಾಜಕಾರಣಿಗಳನ್ನೂ ಬಳಸಿಕೊಳ್ಳಲಾಗಿದೆ. ಈ ಬಗ್ಗೆ ಸಾಕ್ಷ್ಯಗಳಿವೆ’ ಎಂದೂ ಹೇಳಿದ್ದಾರೆ.

ಹೂವಿನ ಪಲ್ಲಕ್ಕಿ ಯೋಗಿ ನಾರೇಯಣ ಯತೀಂದ್ರರ ಜಯಂತಿ ಅಂಗವಾಗಿ ಚಿಕ್ಕಬಳ್ಳಾಪುರದಲ್ಲಿ ಭಾನುವಾರ ಹೂವಿನ ಪಲ್ಲಕ್ಕಿಗಳಲ್ಲಿ ಕೈವಾರ ತಾತಯ್ಯನವರ ಭಾವಚಿತ್ರದ ಮೆರವಣಿಗೆ ನಡೆಯಿತು -ಪ್ರಜಾವಾಣಿ ಚಿತ್ರ

ಪುನೀತ್ ರಾಜಕುಮಾರ್ ಪುತ್ಥಳಿ ಅನಾವರಣಗೊಳಿಸಿದ ಮುಖ್ಯಮಂತ್ರಿ

‘ಕನ್ನಡಿಗರ ಮನೆ, ಮನದಲ್ಲಿ ಪುನೀತ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಟ ದಿವಂಗತ ಪುನೀತ್ ರಾಜಕುಮಾರ್ ಅವರು ಕನ್ನಡಿಗರ ಮನೆ, ಮನದಲ್ಲಿ ನೆಲೆಸಿದ್ದಾರೆ. ಜನರ ಅಪಾರ ಪ್ರೀತಿ, ವಿಶ್ವಾಸವನ್ನು ಪುನೀತ್ ಗಳಿಸಿದ್ದರು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸ್ಮರಿಸಿದರು.

ಬಿಬಿಎಂಪಿ ನೌಕರರ ಕನ್ನಡ ಸಂಘದ ವತಿಯಿಂದ ಪಾಲಿಕೆ ಕೇಂದ್ರ ಕಚೇರಿ ಆವರಣದಲ್ಲಿ ಸ್ಥಾಪಿಸಿರುವ ನಟ ದಿವಂಗತ ಪುನೀತ್ ರಾಜಕುಮಾರ್ ಅವರ ಪುತ್ಥಳಿಯನ್ನು ಭಾನುವಾರ ಅನಾವರಣಗೊಳಿಸಿ ಅವರು ಮಾತನಾಡಿದರು.

‘ರಾಜ್ಯದ ಹಳ್ಳಿ ಹಳ್ಳಿಗಳಲ್ಲೂ ಪುನೀತ್ ಅವರ ಭಾವಚಿತ್ರಗಳಿವೆ. ಪುನೀತ್ ಸಮಾಧಿಗೆ ಇಂದಿಗೂ ಅಭಿಮಾನಿಗಳ ದಂಡು ಬರುತ್ತಿದೆ. ಇಂದಿಗೂ ನಮ್ಮ ನಡುವೆಯೂ ಅವರಿದ್ದಾರೆ ಎನ್ನುವ ಭಾವನೆ ಇದೆ. ಅವರ ನಗು ಎಲ್ಲರನ್ನೂ ಸೆಳೆದಿತ್ತು. ಕನ್ನಡಿಗರ ಜತೆಗೆ, ಎಲ್ಲ ಭಾಷಿಕರನ್ನು ಆಕರ್ಷಿಸಿದ್ದರು. ಹಲವಾರು ಮೇರುನಟರು ಅವರ ನಟನೆ ಮತ್ತು ನಡವಳಿಕೆಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

‘ಮುಗ್ಧತೆ ದೇವರು ಕೊಡುವ ಕಾಣಿಕೆ. ಪುನೀತ್ ಮುಖದಲ್ಲಿ ಆ ಮುಗ್ಧತೆ ಇತ್ತು. ಅದೇ ಅವರ ಆಕರ್ಷಣೆ. ಪುನೀತ್ ಅವರಿಗೆ ‘ಕರ್ನಾಟಕ ರತ್ನ ಪ್ರಶಸ್ತಿ ಈಗಾಗಲೇ ಘೋಷಿಸಲಾಗಿದೆ. ಅವರ ಪ್ರತಿಭೆ ಮತ್ತು ಮಾನವೀಯ ಗುಣಗಳನ್ನು ಬಿಂಬಿಸುವ ರೀತಿಯಲ್ಲೇ ಅರ್ಥಪೂರ್ಣವಾಗಿ ದೊಡ್ಡ ಪ್ರಮಾಣದಲ್ಲಿ ಕಾರ್ಯಕ್ರಮ ಆಯೋಜಿಸಿ ಪ್ರಶಸ್ತಿಯನ್ನು ಪ್ರದಾನ ಮಾಡುತ್ತೇವೆ’ ಎಂದು ತಿಳಿಸಿದರು

ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರಿಗೆ ‘ಡಾ.ಪುನೀತ್ ರಾಜಕುಮಾರ್’ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಸಚಿವರಾದ ಮುನಿರತ್ನ, ಸಂಸದ ಪಿ.ಸಿ.ಮೋಹನ್, ಶಾಸಕ ರಿಜ್ವಾನ್ ಅರ್ಷದ್, ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್, ಮುಖ್ಯ ಆಯುಕ್ತ ಗೌರವ್ ಗುಪ್ತ, ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ.ಮಂಜುನಾಥ್ ಇದ್ದರು.

ಬಿಬಿಎಂಪಿ ಕೇಂದ್ರ ಕಚೇರಿ ಆವರಣದಲ್ಲಿ ಸ್ಥಾಪಿಸಿರುವ ನಟ ದಿವಂಗತ ಪುನೀತ್ ರಾಜಕುಮಾರ್ ಪುತ್ಥಳಿಯನ್ನು ಭಾನುವಾರ ಅನಾವರಣಗೊಳಿಸಲಾಯಿತು. ಬಿಬಿಎಂಪಿ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎ.ಅಮೃತರಾಜ್, ನಟರಾದ ರಾಘವೇಂದ್ರ ರಾಜಕುಮಾರ್, ಅಶ್ವಿನಿ ಪುನೀತ್ ರಾಜಕುಮಾರ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ನಟಿ ತಾರಾ, ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ.ಮಂಜುನಾಥ್, ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ, ಆಡಳಿತಾಧಿಕಾರಿ ರಾಕೇಶ್ ಸಿಂಗ್ ಮತ್ತಿತರರು ಇದ್ದಾರೆ.– ಪ್ರಜಾವಾಣಿ ಚಿತ್ರ

...ಕಲಾಸಕ್ತರಿಗೆ ರಸದೌತಣ

ಚಿತ್ರಸಂತೆಯಲ್ಲಿ ಪ್ರದರ್ಶಿಸಲಾದ ಕಲಾಕೃತಿಗಳು

1ನೇ ಪುಟದಿಂದ...

ವಿಂಡ್ಸರ್ ಮ್ಯಾನರ್ ವೃತ್ತದಿಂದ ಶಿವಾನಂದ ವೃತ್ತದವರೆಗೂ ಮುಖ್ಯ ರಸ್ತೆಯಲ್ಲಿ ಕಲಾ ಮಳಿಗೆಗಳು, ತಿನಿಸು ಇತರೆ ಗೃಹೋಪಯೋಗಿ ವಸ್ತುಗಳು, ಅಲಂಕಾರಿಕ ವಸ್ತುಗಳು, ತರಹೇವಾರಿ ಆಭರಣ ಮಳಿಗೆಗಳು ಕಲಾರಸಿಕರನ್ನು ಕೈಬೀಸಿ ಕರೆಯುತ್ತಿದ್ದವು. ಈ ರಸ್ತೆಯಲ್ಲಿ ವಾಹನ ಸಂಚಾರ ನಿರ್ಬಂಧಿಸಲಾಗಿತ್ತು.

ಕೆಳ ಭಾಗದಲ್ಲಿ ಕ್ಯಾಲೆಂಡರ್, ಮೇಲ್ಭಾಗದಲ್ಲಿ ಅಂದವಾದ ಚಿತ್ರ ಬಿಡಿಸಿರುವ ಗೋಡೆಗೆ ನೇತು ಹಾಕುವ ಹಾಗೂ ಫ್ರೇಮ್ ಹಾಕಿಸಿ ಇಡಬಹುದಾದ ಗ್ರೀಟಿಂಗ್ ಕಾರ್ಡ್ ಮಾದರಿಯ ಚಿತ್ರಗಳು ₹50ಕ್ಕೆ ಮಾರಾಟವಾದವು.

ನಾಗ್ಪುರದ ಅಮಿತ್ ಅವರು ಕಾಫಿ ಡಿಕಾಕ್ಷನ್ ಬಳಸಿ ನೆರಳು-ಬೆಳಕಿನ ಕಲಾಕೃತಿಗಳನ್ನು ರಚಿಸಿದ್ದರು.

ಚಿತ್ರಸಂತೆ ಸಾಮಾನ್ಯ ಕಲಾವಿದರಿಗೂ ಉತ್ತಮ ವೇದಿಕೆ ಕಲ್ಪಿಸುತ್ತದೆ.

ಸತೀಶ್ ಬಿರಾದಾರ,
ಕಲಾವಿದ, ವಿಜಯಪುರ

‘ಈ ಬಾರಿ ಚಿತ್ರಸಂತೆಯಲ್ಲಿ ಸುಮಾರು ₹1.5 ಕೋಟಿಯಿಂದ ₹2 ಕೋಟಿ ವಹಿವಾಟು ನಡೆದಿದೆ. ಸುಮಾರು 2 ಲಕ್ಷ ಜನ ಭೇಟಿ ನೀಡಿದ್ದಾರೆ. ಎಸ್ಸೆಸ್ಸೆಲ್ಸಿ ಪರೀಕ್ಷೆ, ಬಿಸಿಲು ಮತ್ತು ಕೋವಿಡ್ ಕಾರಣಗಳಿಂದಾಗಿ ಈ ಬಾರಿ ನಿರೀಕ್ಷಿಸಿದಷ್ಟು ಜನ ಭೇಟಿ ನೀಡಿಲ್ಲ. ಜನವರಿಯಲ್ಲೇ ನಡೆದಿದ್ದರೆ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಜನರು ಭೇಟಿ ನೀಡುತ್ತಿದ್ದರು’ ಎಂದು ಕರ್ನಾಟಕ ಚಿತ್ರಕಲಾ ಪರಿಷತ್ತು ಅಧ್ಯಕ್ಷ ಬಿ.ಎಲ್. ಶಂಕರ್ ತಿಳಿಸಿದರು.

ಮೈಸೂರಿನ ಕಲಾವಿದ ಗಂಗಾಧರ್ ಮೂರ್ತಿ ಅವರು ತಮ್ಮ ₹8 ಲಕ್ಷ ಮೌಲ್ಯದ ಕಲಾಕೃತಿಯನ್ನು ಚಿತ್ರಸಂತೆಯಲ್ಲಿ ಪ್ರದರ್ಶಿಸಿದ್ದರು

₹8 ಲಕ್ಷ ಮೌಲ್ಯದ ವನ್ಯಜೀವಿ ಕಲಾಕೃತಿ

ಮೈಸೂರಿನ ಕಲಾವಿದ ಗಂಗಾಧರಮೂರ್ತಿ ರಚಿಸಿದ್ದ ವನ್ಯಜೀವಿ ಕಲಾಕೃತಿಗಳು ಆಕರ್ಷಕವಾಗಿದ್ದವು. ಇವರು ರಚಿಸಿದ್ದ ಹುಲಿಗಳ ಕಲಾಕೃತಿಗೆ ₹8ಲಕ್ಷ ಮೌಲ್ಯ ನಿಗದಿಪಡಿಸಿದ್ದರು. ಕಬಿನಿ ಜಲಾಶಯದ ಪ್ರದೇಶದಲ್ಲಿ ತೆಗೆದ ಛಾಯಾಚಿತ್ರ ಆಧರಿಸಿ ಈ ಕಲಾಕೃತಿಯನ್ನು ಅವರು ರಚಿಸಿದ್ದಾರೆ. ಇದಕ್ಕಾಗಿ ಅವರು ಒಂದೂವರೆ ತಿಂಗಳು ಸಮಯ ತೆಗೆದುಕೊಂಡಿದ್ದಾರೆ.

‘ನಿಸರ್ಗ ಸಹಜವಾದ ಈ ಚಿತ್ರವು ವಿವಿಧ ಅಂಶಗಳನ್ನು ಒಳಗೊಂಡಿದೆ. ಕೌಶಲವು ಬೇಕು’ ಎಂದು ಗಂಗಾಧರಮೂರ್ತಿ ವಿವರಿಸಿದರು.

ಕೊಯಮತ್ತೂರಿನ ಗೋಕುಲಂ ವಿಜಯ ಅವರು ಮಹಿಳೆ ಹೂವು ಮಾರಾಟ ಮಾಡುವ ಕಲಾಕೃತಿಯನ್ನು ಪ್ರದರ್ಶಿಸಿದ್ದರು. ₹5 ಲಕ್ಷ ಮೌಲ್ಯವನ್ನು ಈ ಕಲಾಕೃತಿಗೆ ನಿಗದಿಪಡಿಸಲಾಗಿತ್ತು.

ಸೋಮವಾರ, ಮಾರ್ಚ್ 28, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 87 | ಪುಟ 14

● www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಪರೀಕ್ಷೆಗಳು ಮುಗಿದು, ಬೇಸಿಗೆ ರಜೆ ಶುರುವಾಗಿದೆ. ಮಕ್ಕಳಿಗೆ ಕಥಾಲೋಕವನ್ನು ಪರಿಚಯಿಸಲು ಇದು ಸಕಾಲ.

'ಬಲಿಜ ಸಮಾಜ ಬಲಿಷ್ಠಗೊಳಿಸಲು ಕ್ರಮ' 5

ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ.ಕೆಂಪಣ್ಣ

'ಪುಟಿನ್ ಯುದ್ಧವು ಉಕ್ರೇನ್–ರಷ್ಯಾಕ್ಕೆ ಸೀಮಿತವಲ್ಲ' 9

ಶೇ 40 ರಷ್ಟು ಲಂಚ: ಏಪ್ರಿಲ್‌ನಲ್ಲಿ ಪ್ರತಿಭಟನೆ 4

ಸಿಂಧುಗೆ ಸ್ವಿಸ್ ಓಪನ್ ಕಿರೀಟ

ಬಾಸೆಲ್, ಸ್ವಿಟ್ಜರ್ಲೆಂಡ್ (ಪಿಟಿಐ): ಭಾರತದ ಪಿ.ವಿ. ಸಿಂಧು, ಸ್ವಿಸ್ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯ ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ಪ್ರಶಸ್ತಿ ಗೆದ್ದುಕೊಂಡರು.

ಭಾನುವಾರ ನಡೆದ ಫೈನಲ್‌ನಲ್ಲಿ ಅವರು 21-16, 21-8ರಿಂದ ಥಾಯ್ಲೆಂಡ್‌ನ ಬುಸಾನನ್ ಒಂಗ್‌ಬಮ್ರುಂಗ್‌ಪನ್ ಅವರನ್ನು ಮಣಿಸಿದರು. ಪುರುಷರ ಸಿಂಗಲ್ಸ್‌ನಲ್ಲಿ ಎಚ್‌.ಎಸ್. ಪ್ರಣಯ್ 12- 21, 18-21ರಿಂದ ಇಂಡೊನೇಷ್ಯಾದ ಜೊನಾಥನ್ ಕ್ರಿಸ್ಟಿ ಎದುರು ಸೋತು ರನ್ನರ್‌ಅಪ್ ಆದರು. 12

ಚಿನಕುರಳಿ

ಪ್ರಕಾಶ್ ಶೆಟ್ಟಿ

ಧಾರ್ಮಿಕ ಭಾವನೆ ಪ್ರತಿನಿಧಿಸುವ ವಸ್ತ್ರಕ್ಕೆ ಅವಕಾಶವಿಲ್ಲ: ಸಚಿವ ಬಿ.ಸಿ. ನಾಗೇಶ್

ಎಸ್ಸೆಸ್ಸೆಲ್ಸಿ ಪರೀಕ್ಷೆ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಜಾಬ್ ಹಾಗೂ ಸಮವಸ್ತ್ರಕ್ಕೆ ಸಂಬಂಧಿಸಿದ ಗೊಂದಲಗಳ ನಡುವೆಯೇ 2021–22ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಗಳು ಸೋಮವಾರ ರಾಜ್ಯದಾದ್ಯಂತ ಆರಂಭವಾಗಲಿವೆ. ಏ. 11ರವರೆಗೆ ನಡೆಯಲಿರುವ ಪರೀಕ್ಷೆಯನ್ನು ಸುಗಮವಾಗಿ ನಡೆಸಲು ಸಾರ್ವಜನಿಕ ಶಿಕ್ಷಣ ಇಲಾಖೆ ಸಕಲ ಸಿದ್ಧತೆಗಳನ್ನು ಮಾಡಿಕೊಂಡಿದೆ.

ಎರಡು ವರ್ಷ ಕೋವಿಡ್‌ನಿಂದಾಗಿ ಪರೀಕ್ಷೆಯಲ್ಲಿ ಕೆಲ ಮಾರ್ಪಾಡುಗಳನ್ನುಮಾಡಲಾಗಿತ್ತು. ಈ ಬಾರಿ ಪೂರ್ಣ ಪ್ರಮಾಣದಲ್ಲಿ ಪರೀಕ್ಷೆಗಳು ನಡೆಯುತ್ತಿದೆ. 8.73 ಲಕ್ಷ ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದಾರೆ. ಇವರಲ್ಲಿ 4,52,732 ಬಾಲಕರು, 4,21,110 ಬಾಲಕಿಯರು, ನಾಲ್ವರು ತೃತೀಯ ಲಿಂಗಿಗಳು, 4,618 ಪುನರಾವರ್ತಿತ ಅಭ್ಯರ್ಥಿಗಳು, 46,200 ಮಂದಿ ಖಾಸಗಿ ಅಭ್ಯರ್ಥಿಗಳು.

ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳು ಸಮವಸ್ತ್ರ ಧರಿಸುವುದನ್ನು ಕಡ್ಡಾಯಗೊಳಿಸಿ ಶಿಕ್ಷಣ ಇಲಾಖೆ ಈಗಾಗಲೇ ಆದೇಶ ಹೊರಡಿಸಿದೆ.

'ಪರೀಕ್ಷಾ ಕೊಠಡಿಗಳಲ್ಲಿ ವಿದ್ಯಾರ್ಥಿಗಳಿಗೆ ಸಮವಸ್ತ್ರ ಕಡ್ಡಾಯ. ಯಾವುದೇ ಧಾರ್ಮಿಕ ಭಾವನೆ ಪ್ರತಿನಿಧಿಸುವ ವಸ್ತ್ರ ಧರಿಸಿ ಪರೀಕ್ಷೆ ಬರೆಯಲು ಅವಕಾಶವಿಲ್ಲ' ಎಂದು ಬಾಗಲಕೋಟೆಯಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಭಾನುವಾರ ಪುನರುಚ್ಚರಿಸಿದ್ದಾರೆ.

'ಕರ್ನಾಟಕ ಶಿಕ್ಷಣ ಕಾಯ್ದೆ, ರಾಜ್ಯ ಸರ್ಕಾರದ ಆದೇಶಗಳು, ಸುತ್ತೋಲೆಗಳು ಹಾಗೂ ತರಗತಿಗಳಲ್ಲಿ ಸಮವಸ್ತ್ರ ನಿಯಮಗಳಿಗೆ ಸಂಬಂಧಿಸಿದಂತೆ ಹೈಕೋರ್ಟ್ ಇತ್ತೀಚೆಗೆ ನೀಡಿರುವ ತೀರ್ಪಿನ ಪ್ರಕಾರ ಸಮವಸ್ತ್ರದಲ್ಲಿ ಮಕ್ಕಳು ಪರೀಕ್ಷೆಗೆ ಹಾಜರಾಗಬೇಕು. ಖಾಸಗಿ ಅಭ್ಯರ್ಥಿಗಳು, ಪುನರಾವರ್ತಿತ ಅಭ್ಯರ್ಥಿಗಳು ಸಮವಸ್ತ್ರ ಇಲ್ಲದೇ ಸಾಮಾನ್ಯ ದಿರಿಸಿನಲ್ಲಿ ಪರೀಕ್ಷೆ ಬರೆಯಲು ಅನುಮತಿ ನೀಡಲಾಗುತ್ತದೆ. ಈ ಬಗ್ಗೆ ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ಸೂಚಿಸಲಾಗಿದೆ' ಎಂದು ಅವರು ಸ್ಪಷ್ಟಪಡಿಸಿದರು.

5ನೇ ಪುಟ ನೋಡಿ

'ಸಮವಸ್ತ್ರಕ್ಕೆ ವಿನಾಯಿತಿ ನೀಡಿ'

ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಸಮವಸ್ತ್ರಕ್ಕೆ ವಿನಾಯಿತಿ ನೀಡಬೇಕು ಎಂದು ಹಲವು ಪೋಷಕರು, ಶಾಲಾ ಆಡಳಿತ ಮಂಡಳಿಗಳ ಪದಾಧಿಕಾರಿಗಳು ಒತ್ತಾಯಿಸಿದ್ದಾರೆ.

ಕೋವಿಡ್ ಕಾರಣಕ್ಕೆ ಎರಡು ವರ್ಷಗಳಿಂದ ಶಾಲೆಗಳು ಸರಿಯಾಗಿ ನಡೆದಿಲ್ಲ ಮತ್ತು ಮಕ್ಕಳಿಗೂ ಸಮವಸ್ತ್ರ ವಿತರಣೆಯಾಗಿಲ್ಲ. ಜತೆಗೆ, ಈ ಬಾರಿ ಕೆಲವು ಮಕ್ಕಳು ಆನ್‌ಲೈನ್ ಮೂಲಕವೇ ತರಗತಿಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಇಂತಹ ವಿದ್ಯಾರ್ಥಿಗಳ ಬಳಿ ಸಮವಸ್ತ್ರವೇ ಇಲ್ಲ ಎಂದು ತಿಳಿಸಿದ್ದಾರೆ.

'ಸಮವಸ್ತ್ರಕ್ಕೆ ಸಂಬಂಧಿಸಿ ನ್ಯಾಯಾಲಯದ ತೀರ್ಪು ಪಾಲಿಸಬೇಕು. ಎರಡು ವರ್ಷ ಕೋವಿಡ್ ಸಂಕಷ್ಟದಿಂದಾಗಿ ಅನೇಕ ಮಕ್ಕಳಿಗೆ ಸಮವಸ್ತ್ರ ಕಡ್ಡಾಯಗೊಳಿಸಿಲ್ಲ. ಹೀಗಾಗಿ, ಸಮವಸ್ತ್ರ ನಿಯಮದಿಂದ ವಿನಾಯಿತಿ ನೀಡಬೇಕು. ಧಾರ್ಮಿಕ ಉಡುಪು ಅಲ್ಲದಿರುವ ಸಾಮಾನ್ಯ ಉಡುಪು ಧರಿಸಲು ಅವಕಾಶ ಕಲ್ಪಿಸಬೇಕು' ಎಂದು ಖಾಸಗಿ ಶಾಲಾ ಆಡಳಿತ ಮಂಡಳಿಗಳ ಒಕ್ಕೂಟಗಳ ಪ್ರಧಾನ ಕಾರ್ಯದರ್ಶಿ ಡಿ. ಶಶಿಕುಮಾರ್ ಒತ್ತಾಯಿಸಿದ್ದಾರೆ.

ವಿದ್ಯಾರ್ಥಿಗಳಿಗೆ ಸೂಚನೆ

- ವಿದ್ಯಾರ್ಥಿಗಳಿಗೆ ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಬಸ್‌ಗಳಲ್ಲಿ ಉಚಿತ ಪ್ರಯಾಣಕ್ಕೆ ಅವಕಾಶ
- ವಿದ್ಯಾರ್ಥಿಗಳು, ಕರ್ತವ್ಯನಿರತ ಸಿಬ್ಬಂದಿ ಹೊರತುಪಡಿಸಿ ಪರೀಕ್ಷಾ ಕೇಂದ್ರದ ಬಳಿ ಅನ್ಯರಿಗೆ ಪ್ರವೇಶ ಇಲ್ಲ
- ಕೋವಿಡ್ ಇರುವ, ಸೋಂಕಿನ ಲಕ್ಷಣಗಳಿರುವವರಿಗೆ ಪ್ರತಿ ಪರೀಕ್ಷಾ ಕೇಂದ್ರದಲ್ಲೂ ಪ್ರತ್ಯೇಕ ಕೊಠಡಿ ವ್ಯವಸ್ಥೆ
- ಪರೀಕ್ಷೆಗೆ ಮುನ್ನ ಮತ್ತು ನಂತರ ಕೇಂದ್ರಗಳಲ್ಲಿ ಸೋಂಕು ನಿವಾರಕ ದ್ರಾವಣ ಸಿಂಪಡಿಸಲು ಸೂಚನೆ
- ಪ್ರತಿ ಕೊಠಡಿಯಲ್ಲಿ ಗರಿಷ್ಠ 20 ಮಕ್ಕಳು. ಒಂದು ಡೆಸ್ಕ್‌ನಲ್ಲಿ ಇಬ್ಬರು ವಿದ್ಯಾರ್ಥಿಗಳಿಗೆ ಅವಕಾಶ
- ನೀರಿನ ಬಾಟಲಿಗಳನ್ನು ವಿದ್ಯಾರ್ಥಿಗಳೇ ತರಬೇಕು.
- ವಿದ್ಯಾರ್ಥಿಗಳು ಸುರಕ್ಷಿತ ಅಂತರ ಕಾಪಾಡಬೇಕು. ಮಾಸ್ಕ್ ಧರಿಸಬೇಕು

'ಕಡಿಮೆ ಸಂಖ್ಯೆಯಲ್ಲಿದ್ದರೆ ಹಿಂದೂಗಳೂ ಅಲ್ಪಸಂಖ್ಯಾತರು'

ಸುಪ್ರೀಂ ಕೋರ್ಟ್‌ಗೆ ಕೇಂದ್ರ ಸರ್ಕಾರದ ಪ್ರಮಾಣಪತ್ರ

● ಆಶಿಶ್ ತ್ರಿಪಾಠಿ

ನವದೆಹಲಿ: 'ರಾಜ್ಯಗಳಲ್ಲಿ ಹಿಂದೂಗಳು ಅಥವಾ ಇತರ ಧರ್ಮದವರು ಕಡಿಮೆ ಸಂಖ್ಯೆಯಲ್ಲಿ ಇದ್ದರೆ, ರಾಜ್ಯಗಳು ಅಂತಹವರನ್ನು ತಮ್ಮ ಪ್ರಾದೇಶಿಕ ವ್ಯಾಪ್ತಿಯೊಳಗೆ ಅಲ್ಪಸಂಖ್ಯಾತರು ಎಂದು ಘೋಷಿಸಬಹುದು. ಈ ಮೂಲಕ, ಆ ಸಮುದಾಯಗಳು ತಮ್ಮದೇ ಆದ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಲು ಮತ್ತು ನಿರ್ವಹಣೆ ಮಾಡಲು ಅನುವು ಮಾಡಿಕೊಡಬಹುದು' ಎಂದು ಕೇಂದ್ರ ಸರ್ಕಾರ, ಸುಪ್ರೀಂ ಕೋರ್ಟ್‌ಗೆ ಹೇಳಿದೆ.

'ರಾಜ್ಯಗಳು ಧಾರ್ಮಿಕ ಮತ್ತು ಭಾಷಿಕ ಸಮುದಾಯಗಳನ್ನು, ತಮ್ಮ ಗಡಿವ್ಯಾಪ್ತಿಯಲ್ಲಿ ಅಲ್ಪಸಂಖ್ಯಾತ ಸಮುದಾಯ ಎಂದು ಘೋಷಿಸಬಹುದು. ಮಹಾರಾಷ್ಟ್ರ ಸರ್ಕಾರವು ಯಹೂದಿಗಳನ್ನು ಅಲ್ಪಸಂಖ್ಯಾತರು ಎಂದು 2016ರಲ್ಲಿ ಘೋಷಿಸಿದೆ. ಕರ್ನಾಟಕವು ಉರ್ದು, ತೆಲುಗು, ತಮಿಳು, ಮಲಯಾಳ, ಮರಾಠಿ, ತುಳು, ಲಂಬಾಣಿ, ಹಿಂದಿ, ಕೊಂಕಣಿ, ಗುಜರಾತಿ ಭಾಷೆಗಳನ್ನು ಅಲ್ಪಸಂಖ್ಯಾತರ ಭಾಷೆಗಳು ಎಂದು ಘೋಷಿಸಿದೆ' ಎಂದು ಸರ್ಕಾರವು ಹೇಳಿದೆ.

'ಅಲ್ಪಸಂಖ್ಯಾತ ಸಮುದಾಯಗಳಿಗೆ ಸೇರಿದ ಶೈಕ್ಷಣಿಕ ಸಂಸ್ಥೆಗಳನ್ನು, ರಾಜ್ಯ ಸರ್ಕಾರಗಳು ಅಲ್ಪಸಂಖ್ಯಾತರ ಸಂಸ್ಥೆಗಳು ಎಂದು ಘೋಷಿಸಬಹುದು' ಎಂದೂ ಸರ್ಕಾರವು ಹೇಳಿದೆ.

ಬಿಜೆಪಿ ನಾಯಕ ಮತ್ತು ವಕೀಲ ಅಶ್ವಿನಿ ಕುಮಾರ್ ಉಪಾಧ್ಯಾಯ ಅವರು ಸುಪ್ರೀಂ ಕೋರ್ಟ್‌ನಲ್ಲಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ವೇಳೆ ಕೇಂದ್ರ ಸರ್ಕಾರವು ಹೀಗೆ ಹೇಳಿದೆ. 'ಲಡಾಖ್, ಮಿಜೋರಾಂ, ಲಕ್ಷದ್ವೀಪ, ಕಾಶ್ಮೀರ, ಮೇಘಾಲಯ, ನಾಗಾಲ್ಯಾಂಡ್, ಅರುಣಾಚಲ ಪ್ರದೇಶ, ಪಂಜಾಬ್ ಮತ್ತು ಮಣಿಪುರದಲ್ಲಿ ಯಹೂದಿ, ಬಹಾಯಿ ಮತ್ತು ಹಿಂದೂ ಧರ್ಮಗಳನ್ನು ಅನುಸರಿಸುವವರ ಸಂಖ್ಯೆ ತೀರಾ ಕಡಿಮೆ ಇದೆ. ಈ ಧರ್ಮದವರು, ಈ ರಾಜ್ಯಗಳಲ್ಲಿ ತಮ್ಮದೇ ಆದ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಲು ಸಾಧ್ಯವಿಲ್ಲ' ಎಂದು ಅಶ್ವಿನಿ ತಮ್ಮ ಅರ್ಜಿಯಲ್ಲಿ ಹೇಳಿದ್ದರು.

'ಅರ್ಜಿದಾರರು ಹೇಳಿರುವುದು ತಪ್ಪು. ಈ ಸಮುದಾಯಗಳು ಆಯಾ ರಾಜ್ಯದಲ್ಲಿ ತಮ್ಮದೇ ಆದ ಶೈಕ್ಷಣಿಕ ಸಂಸ್ಥೆಗಳನ್ನು ಆರಂಭಿಸಿ, ನಿರ್ವಹಣೆ ಮಾಡಬಹುದು. ರಾಜ್ಯಮಟ್ಟದಲ್ಲಿ ಅಲ್ಪಸಂಖ್ಯಾತರನ್ನು ಗುರುತಿಸಲು, ಆಯಾ ರಾಜ್ಯ ಸರ್ಕಾರಗಳು ಅಗತ್ಯ ಮಾರ್ಗಸೂಚಿಗಳನ್ನು ರಚಿಸಬಹುದು' ಎಂದು ಕೇಂದ್ರ ಸರ್ಕಾರವು ಹೇಳಿದೆ.

'ಕಲ್ಯಾಣ ಕಾರ್ಯಕ್ರಮ ಎಲ್ಲರಿಗೂ ಅನ್ವಯವಲ್ಲ'

'ಅಲ್ಪಸಂಖ್ಯಾತರ ಕಲ್ಯಾಣ ಕಾರ್ಯಕ್ರಮಗಳು ಆ ಸಮುದಾಯದ ಎಲ್ಲರಿಗೂ ಅನ್ವಯವಾಗುವುದಿಲ್ಲ. ಬದಲಿಗೆ ಆಯಾ ಸಮುದಾಯದಲ್ಲಿ ಆರ್ಥಿಕವಾಗಿ ಹಿಂದುಳಿದವರಿಗಷ್ಟೇ ಅನ್ವಯವಾಗುತ್ತದೆ' ಎಂದು ಕೇಂದ್ರ ಸರ್ಕಾರವು ಹೇಳಿದೆ.

ಅಲ್ಪಸಂಖ್ಯಾತರಿಗೆಂದು ನಡೆಸಲಾಗುತ್ತಿರುವ ಯೋಜನೆಗಳ ಫಲ, ಕೆಲವು ರಾಜ್ಯಗಳಲ್ಲಿ ಧಾರ್ಮಿಕ ಅಲ್ಪಸಂಖ್ಯಾತರಾಗಿರುವ ಹಿಂದೂಗಳಿಗೆ ದೊರೆಯುತ್ತಿಲ್ಲ ಎಂದು ಅರ್ಜಿದಾರರು ಸಲ್ಲಿಸಿದ್ದ ಆಕ್ಷೇಪಕ್ಕೆ, ಸರ್ಕಾರವು ಈ ಪ್ರತಿಕ್ರಿಯೆ ನೀಡಿದೆ.

ಬೆಂಗಳೂರಿನಲ್ಲಿ ಬ್ಯಾಂಕ್ ನೌಕರರಿಂದ ಪ್ರತಿಭಟನೆ

ದೇಶವ್ಯಾಪಿ ಮುಷ್ಕರ: ರಾಜ್ಯದಲ್ಲೂ ಬೆಂಬಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ಕಾರ್ಮಿಕ ಸಂಘಟನೆಗಳ ಒಕ್ಕೂಟವು ಕೇಂದ್ರ ಸರ್ಕಾರದ ಕಾರ್ಮಿಕ–ರೈತ ವಿರೋಧಿ ಧೋರಣೆ ಖಂಡಿಸಿ ಮಾರ್ಚ್ 28 ಹಾಗೂ 29ರಂದು ದೇಶವ್ಯಾಪಿ ಮುಷ್ಕರಕ್ಕೆ ಕರೆ ನೀಡಿದ್ದು, ರಾಜ್ಯದಲ್ಲೂ ಹಲವು ಸಂಘಟನೆಗಳು ಬೆಂಬಲ ಸೂಚಿಸಿವೆ. ಇದರಿಂದಾಗಿ ಸೋಮವಾರ ಹಾಗೂ ಮಂಗಳವಾರ ಕೇಂದ್ರ ಸೇವೆಗಳಲ್ಲಿ ವ್ಯತ್ಯಯ ಉಂಟಾಗುವ ಸಾಧ್ಯತೆ ಇದೆ.

ಗ್ರಾಮೀಣ ಪ್ರದೇಶ, ತಾಲ್ಲೂಕು ಮಟ್ಟ ಹಾಗೂ ಕೈಗಾರಿಕಾ ಪ್ರದೇಶಗಳಲ್ಲಿ ಸಂಘಟನೆಗಳ ನೇತೃತ್ವದಲ್ಲಿ ಸೋಮವಾರ ಪ್ರತಿಭಟನೆಗಳು ನಡೆಯಲಿವೆ. ಬ್ಯಾಂಕ್, ವಿಮೆ, ಆದಾಯ ತೆರಿಗೆ, ಅಂಚೆ ಸೇರಿ ಹಲವು ಸೇವೆಗಳಲ್ಲಿ ಎರಡೂ ದಿನ ವ್ಯತ್ಯಯವಾಗುವ ಸಾಧ್ಯತೆ ಇದೆ. ಆಸ್ಪತ್ರೆ, ವೈದ್ಯಕೀಯ, ಹೋಟೆಲ್, ಸಾರಿಗೆ, ಆಟೊ, ಕ್ಯಾಬ್ ಸೇರಿದಂತೆ ಅಗತ್ಯ ಸೇವೆಗಳಲ್ಲಿ ಹಾಗೂ ತರಕಾರಿ ಮತ್ತಿತರ ಅಗತ್ಯ ವಸ್ತುಗಳ ಪೂರೈಕೆಯಲ್ಲಿ ಯಾವುದೇ ವ್ಯತ್ಯಯ ಉಂಟಾಗುವುದಿಲ್ಲ.

ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ ಮುಷ್ಕರಕ್ಕೆ ಬೆಂಬಲ ನೀಡಿದೆ. ಇದು, ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಬಸ್‌ಗಳ ಸಂಚಾರದ ಮೇಲೆ ಪರಿಣಾಮ ಬೀರುವುದಿಲ್ಲ. ಧರಣಿಯನ್ನಷ್ಟೇ ನಡೆಸುವುದಾಗಿ ಕಾರ್ಮಿಕರು ತಿಳಿಸಿದ್ದಾರೆ.

ಬ್ಯಾಂಕ್ ನೌಕರರ ಪ್ರತಿಭಟನೆ: 'ಬೆಂಗಳೂರಿನ ಮೈಸೂರು ಬ್ಯಾಂಕ್ ವೃತ್ತ ಹಾಗೂ ಕೆನರಾ ಬ್ಯಾಂಕ್ ಮುಖ್ಯ ಕಚೇರಿ ಎದುರು ಸೋಮವಾರ ಬೆಳಿಗ್ಗೆ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ' ಎಂದು ಕೆನರಾ ಬ್ಯಾಂಕ್ ನೌಕರರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಜಿ. ರಾಧಾಕೃಷ್ಣ 'ಪ್ರಜಾವಾಣಿ'ಗೆ ತಿಳಿಸಿದರು.

ಕಾಂಗ್ರೆಸ್ ಭವನ ಎದುರು ಪ್ರತಿಭಟನೆ: ರಾಷ್ಟ್ರೀಯ ಮಜ್ದೂರ್ ಕಾಂಗ್ರೆಸ್ ಸಂಘಟನೆ ವತಿಯಿಂದ ರೇಸ್‌ಕೋರ್ಸ್ ರಸ್ತೆಯ ಕಾಂಗ್ರೆಸ್ ಭವನದ ಎದುರು ಬೆಳಿಗ್ಗೆ 11 ಕ್ಕೆ ಪ್ರತಿಭಟನೆ ನಡೆಯಲಿದೆ.

2ನೇ ಪುಟ ನೋಡಿ

ಇನ್ನೊಂದು ಸುದ್ದಿ 10

ಬಿಜೆಪಿ ಚುನಾವಣಾ ತಾಲೀಮು ಆರಂಭ

ಪ್ರಧಾನಿ ಮೋದಿ, ಶಾ ಏಪ್ರಿಲ್ ಮೊದಲ ವಾರ ರಾಜ್ಯಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ವಿಧಾನಸಭೆ ಚುನಾವಣೆಗೆ ಒಂದು ವರ್ಷ ಬಾಕಿ ಇರುವಾಗಲೇ ಚುನಾವಣಾ ತಾಲೀಮು ಆರಂಭಿಸಲು ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಏಪ್ರಿಲ್ ಮೊದಲ ವಾರ ರಾಜ್ಯಕ್ಕೆ ಭೇಟಿ ನೀಡಲಿದ್ದಾರೆ.

ಯಾವುದೇ ರಾಜ್ಯದಲ್ಲಿ ಚುನಾವಣೆ ಇದ್ದರೂ ಸರಿ ಸುಮಾರು ಒಂದು ವರ್ಷ ಮೊದಲೇ ಪ್ರಧಾನಿ ಮೋದಿ ಮತ್ತು ಶಾ ಅವರು ಅಲ್ಲಿಗೆ ಭೇಟಿ ನೀಡುತ್ತಾರೆ. ಈ ಮೂಲಕ ಚುನಾವಣಾ 'ಕಾವು' ಎಬ್ಬಿಸುವುದು ಬಿಜೆಪಿ ಚುನಾವಣಾ ತಂತ್ರದ ಭಾಗ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಹಲವು ಯೋಜನೆಗಳಿಗೆ ಚಾಲನೆ, ಉದ್ಘಾಟನೆ ಇತ್ಯಾದಿಗಳ ಮೂಲಕ ವೇದಿಕೆ ಸಜ್ಜುಗೊಳಿಸುತ್ತಾರೆ.

ಇತ್ತೀಚೆಗೆ ಉತ್ತರ ಪ್ರದೇಶ, ಪಂಜಾಬ್, ಗೋವಾ, ಉತ್ತರಾಖಂಡ, ಮಣಿಪುರಗಳಲ್ಲೂ ಇದೇ ವಿಧಾನ ಅನುಸರಿಸಿದ್ದರು. ಚುನಾವಣೆಗೂ ಮೊದಲು ಭೇಟಿ ನೀಡಿ ಚುನಾವಣಾ ಸಮರಕ್ಕೆ ಮುನ್ನುಡಿ ಬರೆಯುತ್ತಾರೆ. ಕರ್ನಾಟಕದಲ್ಲೂ ಈ ಕಾರ್ಯತಂತ್ರ ಪುನರಾವರ್ತನೆ ಆಗಲಿದೆ.

ಅಮಿತ್ ಶಾ ಏಪ್ರಿಲ್ 1ರಂದು ತುಮಕೂರು ಸಿದ್ಧಗಂಗಾ ಮಠಕ್ಕೆ ಭೇಟಿ ನೀಡುವರು. ನಂತರ ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆಯುವ ಸಹಕಾರ ಸಮಾವೇಶದಲ್ಲಿ ಭಾಗಿಯಾಗಿ 'ಕ್ಷೀರ ಸಮೃದ್ಧಿ ಬ್ಯಾಂಕ್' ಉದ್ಘಾಟಿಸುವರು.

5ನೇ ಪುಟ ನೋಡಿ



ಲಿ॥ ಸಿರಸಂಗಿ ಲಿಂಗರಾಜ ದೇಸಾಯಿ

ಲಿ॥ ಬಿ.ಎಂ. ಪಾಟೀಲ

- ಸಿರಸಂಗಿ ಲಿಂಗರಾಜ ದೇಸಾಯಿಯವರು ಲಿಂಗಾಯತ ಸಮುದಾಯವನ್ನು ಒಗ್ಗೂಡಿಸಲು ಪೂಜ್ಯ ಶ್ರೀ ಹಾನಗಲ್ ಕುಮಾರಸ್ವಾಮಿಗಳ ನೇತೃತ್ವದಲ್ಲಿ, ಅರಟಾಳ ರುದ್ರಗೌಡರೊಂದಿಗೆ ಸೇರಿ ಅಖಿಲ ಭಾರತ ವೀರಶೈವ ಮಹಾಸಭಾ ಅನ್ನು ಸ್ಥಾಪಿಸಿ, ಪ್ರಥಮ ದೇಣಿಗೆ ನೀಡಿದರು.
- ಲಿಂಗರಾಜ ದೇಸಾಯಿಯವರು 1904 ಮತ್ತು 1905 ರಲ್ಲಿ ನಡೆದ ಅಖಿಲ ಭಾರತ ವೀರಶೈವ ಮಹಾಸಭೆಯ ಪ್ರಥಮ ಹಾಗೂ ದ್ವಿತೀಯ ಅಧಿವೇಶನಗಳ ಅಧ್ಯಕ್ಷರಾಗಿದ್ದರು.
- ಈ ಅಧಿವೇಶನಗಳಲ್ಲಿ ಲಿಂಗರಾಜ ದೇಸಾಯಿಯವರು ನೀಡಿದ ಕರೆಯ ಮೇರೆಗೆ ಬೆಳಗಾವಿಯಲ್ಲಿ ಕೆ.ಎಲ್.ಇ., ಬಿಜಾಪುರದಲ್ಲಿ ಬಿ.ಎಲ್.ಡಿ.ಇ., ಕಲಬುರ್ಗಿಯಲ್ಲಿ ಹೆಚ್.ಕೆ.ಇ., ಬಾಗಲಕೋಟೆಯಲ್ಲಿ ಬಸವೇಶ್ವರ ವಿದ್ಯಾವರ್ಧಕ ಸಂಘ, ಬಳ್ಳಾರಿಯಲ್ಲಿ ವೀರಶೈವ ವಿದ್ಯಾವರ್ಧಕ ಸಂಘ, ಹೀಗೆ ಜಿಲ್ಲೆಗೊಂದರಂತೆ ಲಿಂಗಾಯತ ಶಿಕ್ಷಣ ಸಂಸ್ಥೆಗಳು ಆರಂಭಗೊಂಡು ಸ್ವಾತಂತ್ರ್ಯ ಪೂರ್ವದಲ್ಲಿಯೇ ಲಕ್ಷಾಂತರ ಜನರಿಗೆ ಅಕ್ಷರದ ದಾಸೋಹ ನೀಡಲು ಸಾಧ್ಯವಾಯಿತು.
- ತಮ್ಮ ಸಂಸ್ಥಾನದ ಸಮಸ್ತ ಆಸ್ತಿಯನ್ನು ಸಮಾಜದ ಪ್ರತಿಭಾವಂತ ಮಕ್ಕಳ ಶಿಕ್ಷಣಕ್ಕೆ ಬಳಕೆ ಮಾಡಿಕೊಳ್ಳಲು ವಿಲ್ ಬರೆದರು.
- ಲಿಂಗರಾಜ ಟ್ರಸ್ಟ್ ಪೋಷಣೆಯಡಿ ಬೆಳೆದ ಪ್ರಮುಖ ರಾಷ್ಟ್ರ ನಾಯಕರು: ಬಿ.ಡಿ. ಜತ್ತಿ, ಎಸ್.ಆರ್. ಬೊಮ್ಮಾಯಿ, ಎಸ್.ಆರ್. ಕಂಠಿ, ರತ್ನಪ್ಪಣ್ಣ ಕುಂಬಾರ್; ನ್ಯಾಯಮೂರ್ತಿ ವಿ.ಎಸ್. ಮಳಿಮಠ, ದಕ್ಷ ಆಡಳಿತಗಾರರಾದ ಡಿ.ಸಿ. ಪಾವಟೆ, ಶಿವಾನಂದ ಜಾಮದಾರ
- ಸಿರಸಂಗಿ ಲಿಂಗರಾಜ ದೇಸಾಯಿಯವರ ವಂಶಸ್ಥರಾದ ಎಂ.ಬಿ. ಪಾಟೀಲರು ಇಂದು ಸಿರಸಂಗಿ ಲಿಂಗರಾಜ ಟ್ರಸ್ಟ್‌ನ ಟ್ರಸ್ಟಿಯಾಗಿದ್ದಾರೆ.
- ಎಂ.ಬಿ. ಪಾಟೀಲರ ತಂದೆ ಲಿ॥ ಬಿ.ಎಂ. ಪಾಟೀಲರು 5 ಬಾರಿ ಶಾಸಕರು, ಸಚಿವರಾಗಿ ಸೇವೆ
- ಹಿಂದುಳಿದ ವಿಜಯಪುರದಲ್ಲಿ ಬಿ.ಎಲ್.ಡಿ.ಇ. ಸಂಸ್ಥೆಯಿಂದ ವೈದ್ಯಕೀಯ–ಇಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕಾಲೇಜುಗಳನ್ನು ಸ್ಥಾಪಿಸಿದ ಶಿಕ್ಷಣ ಕ್ರಾಂತಿಯ ಹರಿಕಾರರು
- ಅವರ ಆಕಸ್ಮಿಕ ನಿಧನದಿಂದ ಎಂ.ಬಿ. ಪಾಟೀಲರು 1990ರಲ್ಲಿ ನಡೆದ ಉಪ ಚುನಾವಣೆಯಲ್ಲಿ ಸ್ಪರ್ಧಿಸಿದರು.
- 5 ಬಾರಿ ಶಾಸಕರು, ಒಮ್ಮೆ ಲೋಕಸಭಾ ಸದಸ್ಯರು
- ಎಂ.ಬಿ. ಪಾಟೀಲರು ರಾಜ್ಯದ ಜಲಸಂಪನ್ಮೂಲ ಮತ್ತು ಗೃಹ ಸಚಿವರಾಗಿ ತಮ್ಮ ಅಭೂತಪೂರ್ವ, ರಚನಾತ್ಮಕ ಕಾರ್ಯಗಳ ಮೂಲಕ ಜನಮಾನಸದಲ್ಲಿ ನೆಲೆ ನಿಂತಿದ್ದಾರೆ.
- ವಚನ ಪಿತಾಮಹ ಫ.ಗು. ಹಳಕಟ್ಟಿಯವರ ನೆನಪಿನಲ್ಲಿ ನಾಡಿನ ಪ॥ ಪೂಜ್ಯ ಮಠಾಧೀಶರುಗಳ ನೇತೃತ್ವದಲ್ಲಿ ಸಂಶೋಧನಾ ಕೇಂದ್ರ ಸ್ಥಾಪಿಸಿ, ಹಳಕಟ್ಟಿಯವರು ಸಂಪಾದಿಸಿದ್ದ ಸಮಗ್ರ ವಚನ ಸಾಹಿತ್ಯವನ್ನು 15 ಸಂಪುಟಗಳಲ್ಲಿ ಪ್ರಕಟಿಸಿದ್ದಾರೆ.
- ವಿಜಯಪುರವನ್ನು ಆಳಿದ ಆದಿಲ್ ಶಾಹಿ ಅರಸರ ಕಾಲದ ದಖನಿ, ಉರ್ದು ಭಾಷೆಯಲ್ಲಿನ ಸಾಹಿತ್ಯವನ್ನು ಕನ್ನಡಕ್ಕೆ ಅನುವಾದಿಸಿ 19 ಸಂಪುಟಗಳಲ್ಲಿ ಪ್ರಕಟಿಸಿದ್ದಾರೆ.
- ಖ್ಯಾತ ಸಂಶೋಧಕ ಡಾ. ಎಂ.ಎಂ. ಕಲಬುರ್ಗಿಯವರ ಸಮಗ್ರ ಸಾಹಿತ್ಯವನ್ನು 40 ಸಂಪುಟಗಳಲ್ಲಿ ಮರುಮುದ್ರಿಸಿದ ಕೀರ್ತಿ ಎಂ.ಬಿ. ಪಾಟೀಲರಿಗೆ ಸಲ್ಲುತ್ತದೆ.

ವಿ.ಸೂಚನೆ: ವಾಹನ ನಿಲುಗಡೆ ವ್ಯವಸ್ಥೆಯನ್ನು ಕಾರ್ಯಕ್ರಮ ನಡೆಯುವ ಗಾಯತ್ರಿ ವಿಹಾರದ ಪಕ್ಕದ ಗೇಟ್–2, ತ್ರಿಪುರ ವಾಸಿನಿ ಇಲ್ಲಿ ಮಾಡಲಾಗಿದೆ. ದಯವಿಟ್ಟು ಎಲ್ಲರೂ ಅಲ್ಲಿಯೇ ವಾಹನ ನಿಲುಗಡೆ ಮಾಡತಕ್ಕದ್ದು.

ಅನ್ನ–ಅಕ್ಷರ–ಆಶ್ರಯ–ಆರೋಗ್ಯ–ಅಭಿವೃದ್ಧಿಗಾಗಿ

ಕರ್ನಾಟಕದಲ್ಲಿ ಮತ್ತೆ ಕಾಂಗ್ರೆಸ್

ಪದಗ್ರಹಣ ಸಮಾರಂಭ

ಡಾ ಎಂ. ಬಿ. ಪಾಟೀಲ

ಕೆಪಿಸಿಸಿ ಪ್ರಚಾರ ಸಮಿತಿಯ ಅಧ್ಯಕ್ಷರು

28 ಮಾರ್ಚ್ 2022

ಸೋಮವಾರ, ಮಧ್ಯಾಹ್ನ 2 ಕ್ಕೆ

ಸ್ಥಳ: ಗಾಯತ್ರಿ ವಿಹಾರ (ಗೇಟ್ 4)

ಅರಮನೆ ಮೈದಾನ, ಬೆಂಗಳೂರು

ಸರ್ವರಿಗೂ ಆದರದ ಸುಸ್ವಾಗತ

110 ವರ್ಷಗಳ ಇತಿಹಾಸದ ಬಿಜಾಪುರ ಲಿಂಗಾಯತ ಜಿಲ್ಲಾ ಶಿಕ್ಷಣ ಸಂಸ್ಥೆ ಅಧ್ಯಕ್ಷರಾಗಿ 1200 ಹಾಸಿಗೆಗಳ ಚಾರಿಟೆಬಲ್ ಆಸ್ಪತ್ರೆ ಮೂಲಕ ಉತ್ತರ ಕರ್ನಾಟಕದ ಬಡ ರೋಗಿಗಳ ಸೇವೆ ಮಾಡುತ್ತಿರುವ, ಕೋಟಿ ವೃಕ್ಷಗಳನ್ನು ನೆಟ್ಟು ಬರದ ನಾಡಿನಲ್ಲಿ ಮಾನವ ನಿರ್ಮಿತ ಅರಣ್ಯ ಬೆಳೆಸಿದ ಪರಿಸರ ಪ್ರೇಮಿ, ಜಲ–ವೃಕ್ಷ–ಶಿಕ್ಷಣದ ರಾಯಭಾರಿ, ಶರಣ ಶ್ರೀ ಎಂ.ಬಿ. ಪಾಟೀಲರು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ, ಪ್ರಚಾರ ಸಮಿತಿ ಅಧ್ಯಕ್ಷರಾಗಿ ನೇಮಕಗೊಂಡು ಮಾರ್ಚ್ 28, 2022 ರಂದು ಪದಗ್ರಹಣ ಮಾಡುತ್ತಿದ್ದಾರೆ.

ಶುಭ ಕೋರುವವರು: ಎಂ.ಬಿ. ಪಾಟೀಲರ ಅಭಿಮಾನಿ ಬಳಗ

ದಂಡದ ಹಣದಲ್ಲಿ ‘ಖೋಟಾ’ ನೋಟು ಪತ್ತೆ

ಪತ್ತೆಯಾದ 500 ಮುಖಬೆಲೆಯ ಖೋಟಾ ನೋಟು

ಬೆಂಗಳೂರು: ರಸ್ತೆ ಸಂಚಾರ ನಿಯಮ ಉಲ್ಲಂಘಿಸುವ ಜನರಿಂದ ಸಂಗ್ರಹಿಸುತ್ತಿರುವ ದಂಡದ ಹಣದಲ್ಲಿ ‘ಖೋಟಾ’ ನೋಟುಗಳು ಪತ್ತೆಯಾಗುತ್ತಿದ್ದು, ಸಂಚಾರ ಪೊಲೀಸರನ್ನು ಚಿಂತೆಗೀಡು ಮಾಡಿದೆ.

ನಗರದಲ್ಲಿ ವಾಹನಗಳ ದಟ್ಟಣೆ ಸಾಮಾನ್ಯವಾಗಿದ್ದು, ಸಂಚಾರ ನಿಯಮ ಉಲ್ಲಂಘಿಸುವರ ಸಂಖ್ಯೆಯೂ ಹೆಚ್ಚುತ್ತಿದೆ. ಅಂಥವರಿಗೆ ದಂಡ ವಿಧಿಸುವ ಜವಾಬ್ದಾರಿ ಸಂಚಾರ ಪೊಲೀಸರ ಮೇಲಿದೆ. ರಸ್ತೆ ಹಾಗೂ ಪ್ರಮುಖ ಸ್ಥಳಗಳಲ್ಲಿ ವಾಹನಗಳನ್ನು ತಡೆದು ಪೊಲೀಸರು, ದಂಡ ವಸೂಲಿ ಮಾಡುತ್ತಿದ್ದಾರೆ.

ಪೊಲೀಸರಿಗೆ ಸಿಕ್ಕಿ ಬೀಳುವ ಕೆಲವರು, ದಂಡ ಪಾವತಿಗೆ ಖೋಟಾ ನೋಟುಗಳನ್ನು ನೀಡುತ್ತಿದ್ದಾರೆ. ರಶೀದಿ ನೀಡುವ ಭರದಲ್ಲಿ ನೋಟು ಪರಿಶೀಲಿಸುವುದನ್ನೇ ಪೊಲೀಸರು ಮರೆಯುತ್ತಿದ್ದಾರೆ. ದಂಡದ ಹಣವನ್ನು ಹಿರಿಯ ಅಧಿಕಾರಿಗಳಿಗೆ ಹಸ್ತಾಂತರಿಸುವ ವೇಳೆಯಲ್ಲಿ ಖೋಟಾ ನೋಟುಗಳು ಪತ್ತೆಯಾಗುತ್ತಿವೆ.

ದಂಡ ವಸೂಲಿ ಮಾಡಿದ್ದ ಅಧಿಕಾರಿಯೇ, ಖೋಟಾ ನೋಟುಗಳನ್ನು ಹರಿದುಹಾಕಿ ಅಸಲಿ ನೋಟುಗಳನ್ನು ನೀಡುತ್ತಿದ್ದಾರೆ. ಇದರಿಂದ ಅವರ ಜೇಬಿಗೂ ಕತ್ತರಿ ಬೀಳುತ್ತಿದೆ.

‘ಹಿರಿಯ ಅಧಿಕಾರಿಗಳ ಸೂಚನೆಯಂತೆ ಆಯ್ದ ಸ್ಥಳಗಳಲ್ಲಿ ನಿಂತು ದಂಡ ವಸೂಲಿ ಮಾಡುತ್ತೇವೆ. ನಿಯಮಗಳನ್ನು (ಹೆಲ್ಮೆಟ್ ಹಾಕದಿರುವುದು, ಸಿಗ್ನಲ್ ಜಂಪ್, ಮೊಬೈಲ್‌ನಲ್ಲಿ ಮಾತನಾಡುತ್ತ ಚಾಲನೆ ಮುಂತಾದುವು) ಉಲ್ಲಂಘನೆ ಕಂಡುಬಂದಾಗ ವಾಹನ ತಡೆದು ತಪಾಸಣೆ ನಡೆಸುತ್ತೇವೆ. ಚಾಲಕರಿಂದ ದಂಡ ವಸೂಲಿ ಮಾಡುತ್ತೇವೆ. ಕೆಲವರು ಖೋಟಾ ನೋಟುಗಳನ್ನು ಕೊಟ್ಟು ವಂಚಿಸುತ್ತಿದ್ದಾರೆ’ ಎಂದು ಸಂಚಾರ ವಿಭಾಗದ ಸಬ್ ಇನ್‌ಸ್ಪೆಕ್ಟರ್ ಒಬ್ಬರು ಹೇಳಿದರು.

‘ದಂಡ ತೆರಲು ನೀಡಿದ ನೋಟುಗಳನ್ನು ಕೂಲಂಕಷವಾಗಿ ಪರಿಶೀಲನೆ ಮಾಡುವುದಿಲ್ಲ. ಜನರನ್ನು ನಂಬಿ ಪಡೆದುಕೊಳ್ಳುತ್ತೇವೆ. ಖೋಟಾ ನೋಟುಗಳು ಸೇರಿಕೊಂಡಿರುವುದು ದಂಡದ ಮೊತ್ತವನ್ನು ಸಂಬಂಧಪಟ್ಟವರಿಗೆ ಹಸ್ತಾಂತರಿಸುವಾಗ ಪತ್ತೆಯಾಗುತ್ತಿದೆ’ ಎಂದೂ ತಿಳಿಸಿದರು.

‘₹ 500, ₹ 2,000 ಮುಖಬೆಲೆಯ ಖೋಟಾ ನೋಟುಗಳು ಹಲವು ಬಾರಿ ಸಿಕ್ಕಿವೆ. ಅಂಥ ನೋಟುಗಳನ್ನು ಹರಿದು ಹಾಕಿ, ಅಷ್ಟೇ ಮೊತ್ತವನ್ನು ಕೈಯಿಂದ ಪಾವತಿಸಿದ್ದೇವೆ’ ಎಂದೂ ಹೇಳಿದರು.

ಪರಿಶೀಲಿಸಲು ಸೂಚನೆ: ಸಂಚಾರ ವಿಭಾಗದ ಅಧಿಕಾರಿಯೊಬ್ಬರು, ‘ದಂಡ ಪಡೆಯುವ ವೇಳೆಯಲ್ಲೇ ನೋಟು ಪರಿಶೀಲನೆ ನಡೆಸುವಂತೆ ಸಿಬ್ಬಂದಿಗೆ ಸೂಚನೆ ನೀಡಲಾಗಿದೆ. ಖೋಟಾ ನೋಟು ಕೊಡುವವರನ್ನು ಹಿಡಿದು ಕಾನೂನು ಕ್ರಮ ಕೈಗೊಳ್ಳುವಂತೆಯೂ ತಿಳಿಸಲಾಗಿದೆ’ ಎಂದರು.

ಚಾಮರಾಜನಗರ ತಾಲ್ಲೂಕು ತೆಂಗು ಬೆಳೆಗಾರರ ಸಂಸ್ಕರಣ ಮತ್ತು ಮಾರಾಟ ಸಹಕಾರ ಸಂಘ ನಿಯಮಿತ

ನೋಂದಾಯಿತ ಕಛೇರಿ : ಜನನ ಮಂಟಪದ ಹತ್ತಿರ, ರಥದ ಬೀದಿ, ಚಾಮರಾಜನಗರ–571313. ಕಾರ್ಖಾನೆ : ಕೆ.ಎಸ್.ಡಬ್ಲ್ಯೂ.ಸಿ. ಗೋದಾಮು ನಂತರ, ಕಾಳನಹುಂಡಿ ರಸ್ತೆ, ಎನ್.ಹೆಚ್.–105ಎ ಕ್ರಾಸ್

ಮೊಬೈಲ್ ಸಂಖ್ಯೆ : ಅಧ್ಯಕ್ಷರು : 7337888371
ಸಿಇಓ : 7337888372, ಪ್ಲಾಂಟ್ ಇಂಜಿನಿಯರ್ : 7337888373
e-mail : suvarnakalpatharu@gmail.com www.suvarnakalpatharu.com

ಸಂಖ್ಯೆ : 185/ಹೊರಗುತ್ತಿಗೆ, ಪ್ಯಾಕೇಜ್ ಮತ್ತು ಭದ್ರತಾ ಸಿಬ್ಬಂದಿ/ಇ–ಟೆಂಡರ್/002/2021–22
ದಿನಾಂಕ: 25–03–2022

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೋಕ್ಯೂರ್‌ಮೆಂಟ್ ಟೆಂಡರ್)

ಮೇಲ್ಕಂಡ ಸಹಕಾರ ಸಂಘದಿಂದ ಹೊರಸಂಪನ್ಮೂಲ ಏಜೆನ್ಸಿಯಿಂದ ಈ ಕೆಳಕಂಡ ಸೇವೆಗಳಿಗಾಗಿ ಅರ್ಹ ನೋಂದಾಯಿತ ಏಜೆನ್ಸಿಯಿಂದ ಟೆಂಡರ್ ಆಹ್ವಾನಿಸಲಾಗಿದೆ.

ಕ್ರ. ಸಂ.	ಸೇವೆಗಳ ವಿವರ	ಇ.ಎಂ.ಡಿ. ಮೊತ್ತ ರೂ.ಗಳಲ್ಲಿ
1.	11 ತಿಂಗಳ ಅವಧಿಗೆ ಪ್ಯಾಕೇಜ್ ವ್ಯವಸ್ಥೆಯಲ್ಲಿ ಕುಶಲ, ಅರೆಕುಶಲ ಮತ್ತು ಕುಶಲರಲ್ಲದ ಕಾರ್ಮಿಕರಿಂದ ತೆಂಗಿನಕಾಯಿಯನ್ನು ಸಂಸ್ಕರಿಸಿ ತೆಂಗಿನಪುಡಿ ತಯಾರಿಸುವ ಬಗ್ಗೆ	1,08,000/–
2.	ತೆಂಗು ಸಂಸ್ಕರಣ ಘಟಕಕ್ಕೆ 11 ತಿಂಗಳ ಅವಧಿಗೆ ಮಾನವ ದಿನಗಳ ಗುತ್ತಿಗೆ ಆಧಾರದ ಮೇಲೆ ಭದ್ರತಾ ಸಿಬ್ಬಂದಿಯನ್ನು ಒದಗಿಸುವುದು	8,000/–

1. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 20–04–2022ರ ಸಂಜೆ 16.00 ಗಂಟೆವರೆಗೆ
2. ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 22–04–2022ರ ಮಧ್ಯಾಹ್ನ 15.00 ಗಂಟೆಯ ನಂತರ
3. ಆರ್ಥಿಕ ಬಿಡ್ ತೆರೆಯುವ ದಿನಾಂಕ : 25–04–2022ರ ಮಧ್ಯಾಹ್ನ 15.00 ಗಂಟೆಯ ನಂತರ

ಸೂಚನೆ : ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಮತ್ತು ಇತರೆ ಬದಲಾವಣೆಗಳಿದ್ದಲ್ಲಿ ಹಾಗೂ ಹೆಚ್ಚಿನ ವಿವರಗಳಿಗೆ ಗುತ್ತಿಗೆದಾರರು ವೆಬ್‌ಸೈಟ್ : https://eproc.karnataka.nic.in ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು.

ಸಹಿ/– ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

General

Multiple Vacancy

MANAGER, FIELD OFFICER, TELECALLERS, LADY OFFICE ASSISTANTS for our office Vijaya Nagar. Contact: 9341289221/9066990362

WANTED
RETIRED BANK OFFICERS
A NBFC registered with RBI based at Bangalore requires retired bank Officers in scale I, II or III to manage the branches in and around Bangalore, Mangalore, Chamrajanagar. *Please send resume to :*
chemmfinance@gmail.com
Mob : 93432 17227

Graphic Designers

WANTED DTP Operator/ Graphic Designer Corel Draw, Illustrator & Photoshop for a Pvt Limited Company in around Rajajinagar Contact: 23307910/ 9108458798

JOB
To Place your Classified Ads Contact: 9886213331

BUSINESS

Business Offers

Finance

WANTED BUSINESS Partner Non Veg Hotel 10 Lakhs Investment Monthly Income 2 Lakhs: 9606701007/ 8892501007

NRI'S INVESTMENT
And Finance availableOn LowInterest Against properties, Lands, Building, sites, Flats,converted Lands, Agriculture Lands Also Towards Businesses call 7411265189

REAL ESTATE BUYING

General

General

FOR AGRICULTURE Land Conversion,Change of land use,Phodi, Approvals/ Sanctions, NOC's, RERA Project Registration, Property Documentation work. Call Verna Developers, MG-Road, Bengaluru. 9916310226/ 9620253180.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH DECCAN HERALD
SELL, RENT, BUY PROPERTY
THROUGH PROPERTY CLASSIFIEDS ADS IN DECCAN HERALD & PRAJAVANI NEWS PAPER
BOOK YOUR CLASSIFIEDS ADS ONLINE
WWW.DHCLASSIFIEDS.COM

ಪ್ರಜಾವಾಣಿ ಕ್ಲಾಸಿಫೈಡ್ಸ್
FOR MORE INFORMATION CONTACT 9880856233 | 9886213331
Email: santhoshkumar@deccanherald.co.in

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.
ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ:
peoplesproblem@prajavani.co.in.
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

ವಾರದಲ್ಲೇ ಕಿತ್ತುಹೋದ ಡಾಂಬರು

ಸುಂಕದಕಟ್ಟೆಯ ಅರಳಿಮರ ರಸ್ತೆಯಲ್ಲಿ ಡಾಂಬರು ಕಿತ್ತು ಬಂದಿರುವುದು

ಸುಂಕದಕಟ್ಟೆಯ ಅರಳಿಮರ ರಸ್ತೆಯಲ್ಲಿ ಬಿಬಿಎಂಪಿ ಉದ್ಯಾನವಿದೆ. ಸಮೀಪದ ರಸ್ತೆಯಲ್ಲಿ ತಿಂಗಳ ಹಿಂದೆ ಒಳಚರಂಡಿ ಮಾರ್ಗದ ದುರಸ್ತಿ ಕಾಮಗಾರಿ ನಡೆದಿತ್ತು. ಅಗೆದ ಮಾರ್ಗವನ್ನು ಸರಿಯಾಗಿ ಮುಚ್ಚಿರಲಿಲ್ಲ. ವಾರದ ಹಿಂದಷ್ಟೇ ರಸ್ತೆಗೆ ಡಾಂಬರು ಹಾಕಲಾಗಿತ್ತು. ಆದರೆ, ಮಳೆ ಸುರಿದಿದ್ದರಿಂದ ಲಾರಿಯೊಂದು ಸಂಚರಿಸುವಾಗ ಈ ರಸ್ತೆಯಲ್ಲಿ ಸಿಲುಕಿತು. ಇದರಿಂದ ಹಳ್ಳ ನಿರ್ಮಾಣವಾಗಿ, ಡಾಂಬರು ಕಿತ್ತು ಬಂದಿದೆ.

ಕಾಮಗಾರಿ ನಡೆದಿದ್ದ ಮಾರ್ಗದ ಉದ್ದಕ್ಕೂ ಅಲ್ಲಲ್ಲಿ ಇದೇ ರೀತಿ ಗುಂಡಿಗಳು ನಿರ್ಮಾಣವಾಗಿವೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ರಸ್ತೆ ದುರಸ್ತಿಗೆ ಮುಂದಾಗಬೇಕು. ರಸ್ತೆಗೆ ಡಾಂಬರು ಹಾಕುವ ಕಾಮಗಾರಿ ಗುಣಮಟ್ಟದಿಂದ ಕೂಡಿರುವಂತೆ ನೋಡಿಕೊಳ್ಳಬೇಕು.

ಮನೋಜ್, ಸ್ಥಳೀಯ ನಿವಾಸಿ

ಒಣಮರ ತೆರವು ಮಾಡಿ


ಸಿದ್ಧಾರ್ಥ ನಗರದ ಮನೆಗಳ ಬಳಿ ಒಣಮರದಿಂದ ಅಪಾಯ

ಕೋರಮಂಗಲ ವಾರ್ಡ್‌ನ ಮಡಿವಾಳ ಸಂತೆ ಮಾರುಕಟ್ಟೆಗೆ ಹೊಂದಿಕೊಂಡಿರುವ ಸಿದ್ಧಾರ್ಥ ನಗರದ ಮನೆಗಳಿಗೆ ಇಲ್ಲಿನ ಒಣ ಮರದ ರೆಂಬೆಗಳು ಅಪಾಯ ತಂದೊಡ್ಡಿವೆ. ಇವುಗಳನ್ನು ತೆರವು ಮಾಡುವಂತೆ ಬಿಬಿಎಂಪಿಯ ಅರಣ್ಯ ವಿಭಾಗ ಅಧಿಕಾರಿಗಳಿಗೆ ಹಾಗೂ ಸ್ಥಳೀಯ ಜನಪ್ರತಿನಿಧಿಗಳಿಗೆ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ.

ಮರ ಒಣಗಿರುವುದರಿಂದ ಗಾಳಿ–ಮಳೆಗೆ ಬೀಳುತ್ತಲೇ ಇರುತ್ತವೆ. ಇದರಿಂದಾಗಿ ನಿವಾಸಿಗಳು ಭಯದಲ್ಲೇ ದಿನ ಕಳೆಯುತ್ತಿದ್ದಾರೆ. ಅವಘಡಗಳು ಸಂಭವಿಸುವ ಮುನ್ನವೇ ತಡೆಗಟ್ಟುವುದು ಒಳ್ಳೆಯದು. ಮರ ಒಣಗಿರುವುದರಿಂದ ಅದನ್ನು ತೆರವು ಮಾಡುವುದು ಸೂಕ್ತ. ಈ ಬಗ್ಗೆ ಸಂಬಂಧಪಟ್ಟ ಇಲಾಖೆಯವರು ಕ್ರಮ ಕೈಗೊಳ್ಳಬೇಕು.

ಆಂಜನೇಯ, ಸಿದ್ಧಾರ್ಥ ನಗರ

ರಸ್ತೆ ಪಕ್ಕದಲ್ಲೇ ರಾಶಿ ಕಸ

ರೂಪೇನ ಅಗ್ರಹಾರದ ಎನ್‌ಜಿ.ಆರ್‌ಬಡಾವಣೆಯ ರಸ್ತೆ ಪಕ್ಕದ ಜಾಗದಲ್ಲಿ ಕಸದ ರಾಶಿ

ರೂಪೇನ ಅಗ್ರಹಾರದ ಎನ್.ಜಿ.ಆರ್.ಬಡಾವಣೆಯ ರಸ್ತೆಯ ಪಕ್ಕದಲ್ಲೇ ಕಸ ರಾಶಿ ಬೀಳುತ್ತಿದೆ. ಇದು ಖಾಸಗಿ ಜಾಗ ಆಗಿರುವುದರಿಂದ ದಿನೇ ದಿನೇ ಭಾರಿ ಪ್ರಮಾಣದ ಕಸ ಸಂಗ್ರಹವಾಗುತ್ತಿದೆ. ಸ್ಥಳೀಯ ಪೇಯಿಂಗ್ ಗೆಸ್ಟ್ (ಪಿ.ಜಿ) ಮಾಲೀಕರು ಕಸ ಎಸೆಯುತ್ತಾರೆ.

ಬಿಬಿಎಂಪಿಯವರೂ ಇಲ್ಲೇ ಕಸ ಸುರಿದು ಹೋಗುತ್ತಾರೆ. ವಿಲೇವಾರಿ ಮಾಡದ ಕಾರಣ ಈ ಜಾಗ ಕಸದ ತೊಟ್ಟಿಯಾಗಿ ಬದಲಾಗಿದೆ. ಪಕ್ಕದಲ್ಲೇ ರಸ್ತೆ ಇರುವುದರಿಂದ ಸಾರ್ವಜನಿಕರಿಗೆ ಭಾರಿ ಸಮಸ್ಯೆ ಎದುರಾಗಿದೆ. ಇಲ್ಲಿ ಕಸ ಹಾಕುವುದನ್ನು ತಡೆಯಬೇಕು ಅಥವಾ ಸಂಗ್ರಹವಾದ ಕಸವನ್ನು ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಬೇಕು.

ಸಂತೋಷ್, ರೂಪೇನ ಅಗ್ರಹಾರ ನಿವಾಸಿ

ಮೂಲಸೌಕರ್ಯವಿಲ್ಲದ ಶಂಕರಪ್ಪ ಬಡಾವಣೆ


ಶಂಕರಪ್ಪ ಬಡಾವಣೆಯಲ್ಲಿರುವ ಡಾಂಬರು ರಸ್ತೆ ಕಾಣದ ರಸ್ತೆ

ರಾಜರಾಜೇಶ್ವರಿ ನಗರದ ಕೆಂಚನಹಳ್ಳಿ ಬಳಿಯ ಶಂಕರಪ್ಪ ಬಡಾವಣೆಯು ಸುಮಾರು 10 ವರ್ಷಗಳಿಂದ ಮೂಲಸೌಕರ್ಯಗಳಿಂದ ವಂಚಿತವಾಗಿದೆ. ಇಲ್ಲಿ ನೂರಾರು ಮನೆಗಳಿದ್ದು, ಸೂಕ್ತ ರಸ್ತೆ ಸಂಪರ್ಕವೇ ಇಲ್ಲ. ಒಳಚರಂಡಿ ಸಂಪರ್ಕವನ್ನೂ ಕಲ್ಪಿಸಿಲ್ಲ. ವಾರದಲ್ಲಿ ಎರಡು ದಿನ ಮಾತ್ರ ಕುಡಿಯುವ ನೀರು ಪೂರೈಕೆಯಾಗುತ್ತಿದ್ದು, ನೀರಿನ ಸಮಸ್ಯೆ ಹೆಚ್ಚಾಗಿದೆ. ಬಡಾವಣೆಯ ಮನೆಗಳಿಗೆ ನೆಪಮಾತ್ರಕ್ಕೆ ರಸ್ತೆಯಿದ್ದು, ಹತ್ತಾರು ವರ್ಷಗಳಿಂದ ಡಾಂಬರು ಕಂಡಿಲ್ಲ. ಮಕ್ಕಳು ಹಾಗೂ ವೃದ್ಧರಿಗೆ ಇಲ್ಲಿನ ರಸ್ತೆಗಳಲ್ಲಿ ನಡೆದಾಡಲು ಸಮಸ್ಯೆಯಾಗಿದೆ. ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಪಾಲಿಕೆ ಅಧಿಕಾರಿಗಳು ಬಡಾವಣೆಗೆ ಉತ್ತಮ ರಸ್ತೆ ನಿರ್ಮಿಸಿಕೊಡಬೇಕು.

ರಂಗನಾಥ, ಸ್ಥಳೀಯ ನಿವಾಸಿ

ವಾಲಿದ ಕಂಬ: ವಿದ್ಯುತ್ ಪ್ರವಹಿಸುವ ಆತಂಕ

ಮುನೇಶ್ವರ ನಗರದಲ್ಲಿ ವಾಲಿರುವ ವಿದ್ಯುತ್ ಕಂಬ

ಜ್ಞಾನಭಾರತಿ ವಾರ್ಡ್ ವ್ಯಾಪ್ತಿಯ ಮುನೇಶ್ವರ ನಗರದ 14ನೇ ಅಡ್ಡರಸ್ತೆಯಲ್ಲಿರುವ ವಿದ್ಯುತ್ ಕಂಬ ವಾಲಿದೆ. ಇದು, ಜನವಸತಿ ಪ್ರದೇಶ ಆಗಿರುವುದರಿಂದ ಮಕ್ಕಳು ಹಾಗೂ ಹಿರಿಯರು ಹೆಚ್ಚಾಗಿ ಓಡಾಡುತ್ತಾರೆ. ಕಂಬ ವಾಲಿರುವುದರಿಂದ ಯಾವ ಕ್ಷಣದಲ್ಲಾದರೂ ನೆಲಕ್ಕುರುಳಿ, ವಿದ್ಯುತ್ ಪ್ರವಹಿಸುವ ಸಾಧ್ಯತೆ ಇದೆ. ಅಪಾಯದ ಸ್ಥಿತಿಯಲ್ಲಿರುವ ಈ ಕಂಬವನ್ನು ಕೂಡಲೇ ತೆರವು ಮಾಡಿದರೆ ಒಳ್ಳೆಯದು. ಕಂಬ ಇರುವ ಆಸುಪಾಸಿನಲ್ಲೇ ಸ್ಥಳೀಯರು ಕಾರುಗಳನ್ನು ನಿಲ್ಲಿಸುತ್ತಾರೆ. ಅಪಾಯ ಸಂಭವಿಸುವ ಮೊದಲೇ ಬೆಸ್ಕಾಂ ಅಧಿಕಾರಿಗಳು ಎಚ್ಚೆತ್ತುಕೊಳ್ಳಬೇಕು. ಕಂಬವನ್ನು ತೆರವು ಮಾಡಿ, ಹೊಸ ಕಂಬವನ್ನು ಅಳವಡಿಸಲು ಕ್ರಮ ಕೈಗೊಳ್ಳಬೇಕು.

ತುಕಾರಾಂ, ಮಲ್ಲತ್ತಹಳ್ಳಿ

ಬೇಡಿಕೆ ಈಡೇರಿಕೆ: ನೌಕರರಿಂದ ವಾರದ ಗಡುವು

ಬೆಂಗಳೂರು: ನಿವೃತ್ತ ಐಎಎಸ್ ಅಧಿಕಾರಿ ಪಿ.ಎನ್. ಶ್ರೀನಿವಾಸಾಚಾರಿ ಅಧ್ಯಕ್ಷತೆಯ ಮಾನವ ಸಂಪನ್ಮೂಲ ಸಮಿತಿ ಸಲ್ಲಿಸಿದ್ದ ವರದಿಯನ್ನು ವಾರದೊಳಗೆ ಅನುಷ್ಠಾನಗೊಳಿಸಬೇಕು ಎಂದು ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಆರೋಗ್ಯ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರು ಆಗ್ರಹಿಸಿದ್ದಾರೆ.

ಈ ಬಗ್ಗೆ ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆ ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರ ಸಂಘ ಮತ್ತು ಭಾರತೀಯ ಮಜ್ದೂರ್ ಸಂಘವು ಮುಖ್ಯಮಂತ್ರಿಗೆ ಮನವಿ ಸಲ್ಲಿಸಿದೆ. ಬೇಡಿಕೆ ಈಡೇರಿಸದಿದ್ದರೆ ಹೋರಾಟ ನಡೆಸಲಾಗುವುದು ಎಂದು ನೌಕರರು ಸರ್ಕಾರವನ್ನು ಎಚ್ಚರಿಸಿದ್ದಾರೆ.

‘ರಾಜ್ಯದಲ್ಲಿ 30 ಸಾವಿರಕ್ಕೂ ಅಧಿಕ ಮಂದಿ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಸೇವೆ ಸಲ್ಲಿಸುತ್ತಿದ್ದಾರೆ. ಸರ್ಕಾರ ಈಗಾಗಲೇ ಭರವಸೆ ನೀಡಿರುವುದಂತೆ ಶೇ 15 ರಷ್ಟು ಹೆಚ್ಚುವರಿ ವೇತನವನ್ನು ಪ್ರಸಕ್ತ ವರ್ಷದಿಂದಲೇ ಜಾರಿಗೆ ತರಬೇಕು. 4 ಸಾವಿರಕ್ಕೂ ಅಧಿಕ ನೌಕರರು 16 ವರ್ಷ ಹಾಗೂ ಅದಕ್ಕಿಂತ ಹೆಚ್ಚಿನ ಅವಧಿಗೆ ಸೇವೆ ಸಲ್ಲಿಸಿದ್ದಾರೆ. ಆದರೆ, ಈ ನೌಕರರಿಗೆ ಯಾವುದೇ ಸೇವಾ ಭದ್ರತೆ ಇಲ್ಲ. ಗುತ್ತಿಗೆ ನವೀಕರಣ ಸಂದರ್ಭದಲ್ಲಿ ನೌಕರರಿಗೆ ಬೆದರಿಕೆ ಹಾಕಿ, ಕೆಲಸ ಮಾಡಿಸಿಕೊಳ್ಳಲಾಗುತ್ತಿದೆ’ ಎಂದು ಸಂಘದ ರಾಜ್ಯ ಘಟಕದ ಅಧ್ಯಕ್ಷ ವಿಶ್ವಾರಾಧ್ಯ ಎಚ್.ವೈ. ಬೇಸರ ವ್ಯಕ್ತಪಡಿಸಿದ್ದಾರೆ.

ಎಂ.ಬಿ. ಪಾಟೀಲ ಪದಗ್ರಹಣ ಇಂದು

ಬೆಂಗಳೂರು: ಕೆಪಿಸಿಸಿ ಚುನಾವಣಾ ಪ್ರಚಾರ ಸಮಿತಿ ಅಧ್ಯಕ್ಷರಾಗಿ ನೇಮಕಗೊಂಡಿರುವ ಶಾಸಕ ಎಂ.ಬಿ. ಪಾಟೀಲ ಅವರ ಪದಗ್ರಹಣ ಸಮಾರಂಭ ಸೋಮವಾರ ನಡೆಯಲಿದೆ.

ನಗರದ ಅರಮನೆ ಮೈದಾನದ ಗಾಯತ್ರಿ ವಿಹಾರದಲ್ಲಿ ಮಧ್ಯಾಹ್ನ 3 ಗಂಟೆಗೆ ನಡೆಯುವ ಸಮಾರಂಭದಲ್ಲಿ ಪ್ರದೇಶ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಸಹಿತ ಹಲವು ಗಣ್ಯರು ಭಾಗವಹಿಸುವವರು.

ಸಾವಂತ್ ಪ್ರಮಾಣವಚದಲ್ಲಿ ಬೊಮ್ಮಾಯಿ ಭಾಗಿ

ಬೆಂಗಳೂರು: ಸೋಮವಾರ ನಡೆಯಲಿರುವ ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಪ್ರಮಾಣವಚನ ಸಮಾರಂಭದಲ್ಲಿ ರಾಜ್ಯದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪಾಲ್ಗೊಳ್ಳುವರು.

‘ಧಾರಣಾ ಶಕ್ತಿ ತುಂಬುವ ಸಂಗೀತಗಾರರು’

ಪ್ರಜಾವಾಣಿ ವಾರ್ತೆ

ಬಿ.ಆರ್‌.ರವಿಕಾಂತೇಗೌಡ ಅವರು ವಿದ್ವಾಂಸ ರಾ.ವಿಶ್ವೇಶ್ವರನ್ ಅವರಿಗೆ ‘ಜೀವಮಾನ ಸಾಧನೆ ಪುರಸ್ಕಾರ’, ಮೃದಂಗ ವಾದಕ ಜಿ.ವಿ.ಕೃಷ್ಣಪ್ರಸಾದ್ ಅವರಿಗೆ ‘ಕಲಾಜ್ಯೋತಿ’ ಹಾಗೂ ವಿದುಷಿ ಚಂದನಬಾಲ ಕಲ್ಯಾಣ್ ಅವರಿಗೆ ‘ನಾದಜ್ಯೋತಿ ಪುರಸ್ಕಾರ’ ಪ್ರದಾನ ಮಾಡಿದರು. (ಎಡದಿಂದ) ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್ ಗೌರವ ಕಾರ್ಯದರ್ಶಿ ಸತ್ಯನಾರಾಯಣ ರಾವ್ ಕಟ್ಟೆ, ಜಂಟಿ ಕಾರ್ಯದರ್ಶಿ ಸಿ.ರಮೇಶ್, ಟ್ರಸ್ಟಿ ಸಿ.ಎಸ್‌.ಉಷಾ, ಉಪಾಧ್ಯಕ್ಷ ಪ್ರಭಾಕರ ಶಾಸ್ತ್ರಿ, ಅಧ್ಯಕ್ಷ ಸೂತ್ರಂ ನಾಗರಾಜ ಶಾಸ್ತ್ರಿ, ಟ್ರಸ್ಟಿ ಎಸ್‌.ಶೇಖರ್ ಮತ್ತು ಎಚ್‌.ಎನ್‌. ಶ್ರೀನಿವಾಸ ಕುಮಾರ್ ಇದ್ದಾರೆ —ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಸೃಜನಶೀಲ ಸಂಗೀತಗಾರರು ನಮ್ಮಲ್ಲಿ ಧಾರಣಾ ಶಕ್ತಿ ತುಂಬಬಲ್ಲರು. ಗಾಯನದ ಮೂಲಕವೇ ಹಿಮಾಲಯದ ಚಿತ್ರಣ ಕಟ್ಟಿಕೊಡುವ ಹಾಗೂ ನದಿಯ ಹರಿಯುವ ಭಾವನೆಯನ್ನು ಕೇಳುಗರ ಮನದಲ್ಲಿ ಮೂಡಿಸುವ ಸವಾಲು ಸಂಗೀತಗಾರರ ಮುಂದಿದೆ’ ಎಂದು ಸಂಚಾರ ವಿಭಾಗದ ಜಂಟಿ ಕಮಿಷನರ್ ಬಿ.ಆರ್.ರವಿಕಾಂತೇಗೌಡ ತಿಳಿಸಿದರು.

ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, 57ನೇ ನಾದಜ್ಯೋತಿ ಸಂಗೀತ ಸಂಭ್ರಮದ ಅಂಗವಾಗಿ ಭಾನುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಎಲ್ಲಾ ಕಲೆಗಳಿಗೆ ಮೂಲ ಸಂಗೀತ. ಇದು ಆದಿಮ ಕಲೆ. ಸಂಗೀತವು ಕೇಳುಗರನ್ನು ಮೈಮರೆಸುತ್ತದೆ. ಸಂಗೀತ ದಿಗ್ಗಜರ ಮಾರ್ಗದರ್ಶನದಲ್ಲಿ ಸಂಗೀತ ಪರಂಪರೆ ಮುಂದುವರಿಸಿಕೊಂಡು ಹೋಗಬೇಕು. ಆಗ ಮಾತ್ರ ಸಮಾಜದ ಉಳಿವು ಸಾಧ್ಯ. ಸಂಗೀತ ಅಥವಾ ಕಲಾ ಪರಂಪರೆಯ ಜೊತೆ ನಮ್ಮ ಮಕ್ಕಳನ್ನು ಬೆಸೆಯಬೇಕು. ಇಲ್ಲದಿದ್ದರೆ ದೊಡ್ಡ ಅಪಾಯ ಎದುರಾಗಲಿದೆ’ ಎಂದು ಹೇಳಿದರು.

ವೀಣೆ ವಿದ್ವಾಂಸ ರಾ.ವಿಶ್ವೇಶ್ವರನ್ ಅವರಿಗೆ ‘ಜೀವಮಾನ ಸಾಧನೆ ಪುರಸ್ಕಾರ’, ಮೃದಂಗ ವಿದ್ವಾಂಸ ಜಿ.ವಿ.ಕೃಷ್ಣಪ್ರಸಾದ್ ಅವರಿಗೆ ‘ಕಲಾಜ್ಯೋತಿ’ (ಇಬ್ಬರಿಗೂ ತಲಾ ₹20 ಸಾವಿರ ನಗದು ಮತ್ತು ಸ್ಮರಣಿಕೆ) ಹಾಗೂ ವಿದುಷಿ ಚಂದನಬಾಲ ಕಲ್ಯಾಣ್ ಅವರಿಗೆ ‘ನಾದಜ್ಯೋತಿ ಪುರಸ್ಕಾರ’ವನ್ನು (₹15 ಸಾವಿರ ನಗದು ಮತ್ತು ಸ್ಮರಣಿಕೆ) ಪ್ರದಾನ ಮಾಡಲಾಯಿತು.

‘ತ್ಯಾಗರಾಜರು ಹಾಗೂ ಮುತ್ತುಸ್ವಾಮಿ ದೀಕ್ಷಿತರನ್ನು ಆದರ್ಶವಾಗಿಟ್ಟುಕೊಂಡಿದ್ದೇನೆ. ಅವರ ಪಥದಲ್ಲಿ ನಡೆಯಲು ಯತ್ನಿಸುವುದು ಅತಿಶ್ರೇಷ್ಠವಾದುದು ಎಂದು ನಂಬಿದ್ದೇನೆ. ಈ ಪ್ರಶಸ್ತಿಯನ್ನು ಸರಸ್ವತಿಯ ಪಾದಕ್ಕೆ ಅರ್ಪಿಸುತ್ತೇನೆ’ ಎಂದು ರಾ.ವಿಶ್ವೇಶ್ವರನ್ ತಿಳಿಸಿದರು.

‘ರಾ.ಸೀತಾರಾಮ್ ಅವರು ನನ್ನ ಅಣ್ಣ, ಅವರೇ ನನ್ನ ಮೊದಲ ಗುರು. ಅವರ ಸ್ಮರಣಾರ್ಥವಾಗಿ ನೀಡುತ್ತಿರುವ ಜೀವಮಾನ ಸಾಧನೆ ಗೌರವವನ್ನು ಸ್ವೀಕರಿಸಿದ್ದು ಸಂತೋಷ ತಂದಿದೆ’ ಎಂದರು.

ವಿದ್ವಾಂಸ ಜಿ.ವಿ. ಕೃಷ್ಣಪ್ರಸಾದ್, ‘ಪ್ರಜಾವಾಣಿಯಲ್ಲಿ ಮೊದಲಿಂದಲೂ ‘ಕಲಾ ವಿಮರ್ಶೆ’ ಪ್ರಕಟವಾಗುತ್ತಿತ್ತು. ಅದು ಈಗ ನಿಂತುಹೋಗಿದೆ. ಅದನ್ನು ಮತ್ತೆ ಪುನರಾರಂಭಿಸಬೇಕು’ ಎಂದು ಮನವಿ ಮಾಡಿದರು.

‘ಪ್ರಜಾವಾಣಿ’ಯ ಕಾರ್ಯ ನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಇದ್ದರು.

ಚಾಮರಾಜನಗರದಲ್ಲಿ ಗಾಂಜಾ ಬೆಳೆ: ಐವರ ಬಂಧನ

ಬೆಂಗಳೂರು: ಚಾಮರಾಜನಗರ ಜಿಲ್ಲೆಯಲ್ಲಿ ಅಕ್ರಮವಾಗಿ ಬೆಳೆದ ಗಾಂಜಾವನ್ನು ನಗರಕ್ಕೆ ತಂದು ಮಾರುತ್ತಿದ್ದ ಆರೋಪದಡಿ ಐವರನ್ನು ಕೋರಮಂಗಲ ಪೊಲೀಸರು ಬಂಧಿಸಿದ್ದಾರೆ.

‘ಶಿವರಾಜ್, ರಮೇಶ್, ಮಂಜುನಾಥ್, ಮೂರ್ತಿ ಹಾಗೂ ಅಭಿಲಾಷ್ ಬಂಧಿತರು. ಇವರಿಂದ ₹ 40 ಲಕ್ಷ ಮೌಲ್ಯದ 102 ಕೆ.ಜಿ 200 ಗ್ರಾಂ ಗಾಂಜಾ ಜಪ್ತಿ ಮಾಡಲಾಗಿದೆ’ ಎಂದು ಆಗ್ನೇಯ ವಿಭಾಗದ ಡಿಸಿಪಿ ಶ್ರೀನಾಥ್ ಜೋಷಿ ತಿಳಿಸಿದರು.

‘ನಗರದಲ್ಲಿ ವ್ಯವಸ್ಥಿತ ತಂಡ ಕಟ್ಟಿಕೊಂಡು ಆರೋಪಿಗಳು ಗಾಂಜಾ ಮಾರುತ್ತಿದ್ದರು. ಕೋರಮಂಗಲ 1ನೇ ಹಂತದ ಬಳ್ಳಾರಿ ಕಾಲೊನಿ ಬಳಿ ಮಾರ್ಚ್ 16ರಂದು ಆರೋಪಿಯೊಬ್ಬ ಗಾಂಜಾ ಮಾರಲು ಬಂದಿದ್ದ. ಕಾರ್ಯಾಚರಣೆ ನಡೆಸಿ ಆತನನ್ನು ಬಂಧಿಸಲಾಯಿತು. ಆತ ನೀಡಿದ್ದ ಮಾಹಿತಿ ಆಧರಿಸಿ ಉಳಿದ ಆರೋಪಿಗಳನ್ನು ಸೆರೆ ಹಿಡಿಯಲಾಯಿತು’ ಎಂದೂ ತಿಳಿಸಿದರು.

ಪುಷ್ಪಪುರ ಗ್ರಾಮಸ್ಥರಿಂದ ಖರೀದಿ: ‘ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನ ಪುಷ್ಪಪುರ ಗ್ರಾಮದಲ್ಲಿ ಕೆಲವರು ಗಾಂಜಾ ಬೆಳೆಯುತ್ತಿದ್ದಾರೆ. ಅವರ ಬಳಿಯೇ ಆರೋಪಿಗಳು ಗಾಂಜಾ ಖರೀದಿಸುತ್ತಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ’ ಎಂದು ವಿವರಿಸಿದರು.

ಎಚ್.ಎಸ್.ಆರ್ ಬಡಾವಣೆ, ಕೆ.ಆರ್. ಪುರ, ಬೇಗೂರು, ಕೋಣನಕುಂಟೆ ಸೇರಿದಂತೆ ವಿವಿಧ ಠಾಣೆಗಳ ವ್ಯಾಪ್ತಿಯಲ್ಲೂ ಆರೋಪಿಗಳು ಗಾಂಜಾ ಮಾರುತ್ತಿದ್ದರು’ ಎಂದರು.

ದೇಶವ್ಯಾಪಿ ಮುಷ್ಕರ: ರಾಜ್ಯದಲ್ಲೂ ಬೆಂಬಲ

ಒಂದನೇ ಪುಟದಿಂದ

ಭಾರಿ ಪ್ರತಿಭಟನೆ ನಾಳೆ: ಮುಷ್ಕರಕ್ಕೆ ಬೆಂಬಲ ಸೂಚಿಸಿರುವ ರಾಜ್ಯದ ಸಂಘಟನೆಗಳು, ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಮಾರ್ಚ್ 29ರಂದು ಭಾರಿ ಪ್ರತಿಭಟನೆ ಹಮ್ಮಿಕೊಂಡಿವೆ. ಉದ್ಯಾನದಲ್ಲೇ ಬಹಿರಂಗ ಸಭೆಯನ್ನೂ ಆಯೋಜಿಸಲಾಗಿದೆ.

ಮುಷ್ಕರಕ್ಕೆ ಬೆಂಬಲ ನೀಡಿದ ಪ್ರಮುಖ ಸಂಘಟನೆಗಳು:

ಅಖಿಲ ಭಾರತ ಕಾರ್ಮಿಕ ಒಕ್ಕೂಟ ಕಾಂಗ್ರೆಸ್ (ಎಐಟಿಯುಸಿ), ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು), ಆಲ್ ಇಂಡಿಯಾ ಯುನೈಟೆಡ್ ಟ್ರೇಡ್ ಯೂನಿಯನ್ ಸೆಂಟರ್ (ಎಐಯುಟಿಯುಸಿ), ಟ್ರೇಡ್ ಯೂನಿಯನ್ ಕೋ–ಆರ್ಡಿನೇಷನ್ ಸೆಂಟರ್ (ಟಿಯುಸಿಸಿ), ಅಖಿಲ ಭಾರತ ಕಾರ್ಮಿಕ ಸಂಘಟನೆಗಳ ಕೇಂದ್ರೀಯ ಸಮಿತಿ (ಎಐಸಿಸಿಟಿಯು), ಗಾರ್ಮೆಂಟ್ಸ್ ಮತ್ತು ಟೆಕ್ಸ್‌ಟೈಲ್ಸ್ ವರ್ಕರ್ಸ್ ಯೂನಿಯನ್ (ಜಿಎಟಿಡಬ್ಲ್ಯು), ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ, ಭಾರತೀಯ ರಾಷ್ಟ್ರೀಯ ಮಜ್ದೂರ್ ಕಾಂಗ್ರೆಸ್ (ಐಎನ್‌ಟಿಯುಸಿ)

ನಗರದ ಎಚ್‌ಎಸ್‌ಆರ್ ಬಡಾವಣೆಯಲ್ಲಿ ಭಾನುವಾರ ನಡೆದ ‘ಮುಗ್ಧ ಸಿಲ್ಕ್ಸ್’ ರೇಷ್ಮೆ ಸೀರೆಗಳ ಮಳಿಗೆ ಉದ್ಘಾಟನಾ ಕಾರ್ಯಕ್ರಮದಲ್ಲಿ ನಟಿ ಆಶಿಕಾ ರಂಗನಾಥ್ (ಮಧ್ಯದಲ್ಲಿರುವವರು) ಭಾಗವಹಿಸಿದ್ದರು.

ಲಾರಿ ಚಕ್ರದಡಿ ಸಿಲುಕಿ ಬೈಕ್ ಸವಾರರು ಸಾವು

ಕುಂದಾಣ(ದೇವನಹಳ್ಳಿ): ನಂದಿಬೆಟ್ಟದಿಂದ ಬೆಂಗಳೂರಿಗೆ ಹಿಂದಿರುಗುತ್ತಿದ್ದ ವೇಳೆ ಭಾನುವಾರ ಸಂಭವಿಸಿದ ಅಪಘಾತದಲ್ಲಿ ವಿದ್ಯಾರ್ಥಿಗಳಿಬ್ಬರು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಬೆಂಗಳೂರಿನ ಕೆ.ಜಿ. ಹಳ್ಳಿ ನಿವಾಸಿ ಸಯ್ಯದ್ ಆಸಿಬ್ (20) ಮತ್ತು ದೊಡ್ಡಬಳ್ಳಾಪುರದ ಅಜುಂ ತಾಜ್(18) ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾರೆ.

ನಗರದಲ್ಲಿ ಇಂದು

ಕರ್ನಾಟಕ ಮಾಧ್ಯಮ ಅಕಾಡೆಮಿಯಿಂದ ಲ್ಯಾಪ್‌ಟಾಪ್ ವಿತರಣೆ: ಸಚಿವ ಕೋಟ ಶ್ರೀನಿವಾಸ ಪೂಜಾರಿ, ಅತಿಥಿಗಳು–ಸಚಿವ ಬಿ.ಶ್ರೀರಾಮುಲು, ಪ್ರತಾಪಸಿಂಹ ನಾಯಕ್, ಪಿ.ಎಸ್.ಹರ್ಷ, ಅಧ್ಯಕ್ಷತೆ–ಸದಾನಂದ ಶೆಣೈ, ಸ್ಥಳ–ಪ್ರೆಸ್‌ಕ್ಲಬ್, ಬೆಳಿಗ್ಗೆ 9.30

ಎನರ್ಜಿ ಸ್ವರಾಜ್ ಯಾತ್ರ–ಸೌರಶಕ್ತಿ ಕುರಿತು ವಿಚಾರ ಸಂಕಿರಣ: ಪ್ರೊ.ಚೇತನ್ ಸಿಂಗ್ ಸೋಲಂಕಿ, ಆಯೋಜನೆ–ಬಿಎಂಎಸ್ ಕಾಲೇಜ್ ಆಫ್ ಎಂಜಿನಿಯರಿಂಗ್, ಸ್ಥಳ–ಅಮೃತ ಮಹೋತ್ಸವ ಸಭಾಂಗಣ, ಬಸವನಗುಡಿ, ಮಧ್ಯಾಹ್ನ 2

ಬಿ.ಆರ್.ಅಂಬೇಡ್ಕರ್ ಹಾಗೂ ಬಾಬು ಜಗಜೀವನರಾಂ ಸ್ಮಾರಕ ನಾಟಕೋತ್ಸವ ಹಾಗೂ ಸಾಂಸ್ಕೃತಿಕ ಕಲಾಮೇಳ: ಕವಿ ಸಿದ್ದಲಿಂಗಯ್ಯ ಸ್ಮರಣೆ, ಉದ್ಘಾಟನೆ–ಶಶಿಕಲಾ ಗೋಪಾಲ್, ಅಧ್ಯಕ್ಷತೆ–ಕೆ.ಎಸ್. ವೆಂಕಟೇಶಲು, ಅತಿಥಿಗಳು–ಕೆ.ಪಿ. ಅಶ್ವತ್ಥನಾರಾಯಣ, ನಾಗೇಂದ್ರ ಪ್ರಸಾದ್, ಭಾಗ್ಯಶ್ರೀ, ಸುಬ್ಬರಾಯುಡು, ಭೀಮಜ್ಯೋತಿ ಶ್ರೀನಿವಾಸ, ‘ಧರ್ಮರಾಜ್ಯ ಸ್ಥಾಪನೆ’ ಪೌರಾಣಿಕ ನಾಟಕ–ಬೆಂಗಳೂರು ಮೋಹನ್ ತಂಡ, ಆಯೋಜನೆ–ವಿ.ಕೆ. ಎಂ.ಕಲಾವಿದರು, ಸ್ಥಳ–ರವೀಂದ್ರ ಕಲಾಕ್ಷೇತ್ರ, ಸಂಜೆ 4

ಸಿರಿಗನ್ನಡ ಮಿತ್ರ ತಂಡದ ವಾರ್ಷಿಕೋತ್ಸವ: ಉದ್ಘಾಟನೆ–ಎಂ.ಆರ್. ವೆಂಕಟೇಶ್, ಅತಿಥಿಗಳು–ಶ್ರೀಧರ ರಾಯಸಂ, ಎಸ್.ಸತೀಶ್ ರೆಡ್ಡಿ, ಸ್ಥಳ–ಸಿಲ್ವರ್ ವ್ಯಾಲಿ ಕಾಲೇಜು ಸಭಾಂಗಣ, ಮಲ್ಲೇಶ್ವರ, ಸಂಜೆ 4.30

ಕನ್ನಡ ನುಡಿ:ಗೀತ, ನೃತ್ಯ, ಕವಿ ಸಮ್ಮೇಳನ: ಸಂಜೆ 4ಕ್ಕೆ ಕವಿಗೋಷ್ಠಿ ಉದ್ಘಾಟನೆ–ತಾ.ನಂ.ಕುಮಾರಸ್ವಾಮಿ, ಅಧ್ಯಕ್ಷತೆ–ಕಾ.ವೆಂ.ಶ್ರೀನಿವಾಸಮೂರ್ತಿ, ಅತಿಥಿ–ಬಾನಂದೂರು ಕೆಂಪಯ್ಯ, ಸಂಜೆ 6ಕ್ಕೆ

ಗೀತ–ನೃತ್ಯ ಉದ್ಘಾಟನೆ: ವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಸ್ವಾಮೀಜಿ, ಅತಿಥಿಗಳು–ಸಿ.ಸೋಮಶೇಖರ್, ಬಿ.ವಿ.ರಾಜಾರಾಂ, ಎಂ.ತಿಮ್ಮಯ್ಯ, ಆಯೋಜನೆ–ರಂಗ ಸಂಸ್ಥಾನ, ಆಯೋಜನೆ–ಸೇವಾ ಸದನ, ಮಲ್ಲೇಶ್ವರ

ಬೆಂಗಳೂರು ನಗರ ಜಿಲ್ಲಾ ಅಮೃತ ರಂಗಮಹೋತ್ಸವ: ಉದ್ಘಾಟನೆ–ಎಚ್.ಎನ್.ಸುರೇಶ್, ಅತಿಥಿಗಳು–ಪ್ರೊ.ಆರ್.ಭೀಮಸೇನ, ಕೆ.ಎಸ್. ಉಪಾಧ್ಯಾಯ, ‘ಏಗ್ದಾಗೆಲ್ಲಾ ಐತೆ’ ನಾಟಕ ಪ್ರದರ್ಶನ–ಪರಂಪರಾ ಕಲ್ಚರಲ್ ಫೌಂಡೇಷನ್, ಆಯೋಜನೆ–ಕರ್ನಾಟಕ ನಾಟಕ ಅಕಾಡೆಮಿ, ಸ್ಥಳ–ಖಿಂಚ ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಸಂಜೆ 5.30ರಿಂದ

ಶಿವಸಂಚಾರ ನಾಟಕೋತ್ಸವ–ಸಮಾರೋಪ ಮತ್ತು ದತ್ತಿ ಉಪನ್ಯಾಸ: ಭಾಷಣ–ಸಿ.ಸೋಮಶೇಖರ್, ಉಪನ್ಯಾಸ–ಜಯಕುಮಾರ್, ಸಿಂ. ರಾ.ಹೊನ್ನಲಿಂಗಯ್ಯ, ಸಿ.ಆರ್. ಉಮಾಶಂಕರ್, ಅಧ್ಯಕ್ಷತೆ–ಶೈಲಜಾ ವಿ.ಸೋಮಣ್ಣ, ನಾಟಕ ಪ್ರದರ್ಶನ–ಒಕ್ಕಲಿಗ ಮುದ್ದಣ್ಣ, ಆಯೋಜನೆ–ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಬಸವ ಇಂಟರ್‌ನ್ಯಾಷನಲ್ ಫೌಂಡೇಷನ್, ಸ್ಥಳ–ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 5.30

‘ನಾದಜ್ಯೋತಿ ಸಂಗೀತ ಸಂಭ್ರಮ’ದ ಸಮಾರೋಪ: ವಿದುಷಿ ಚಂದನಬಾಲ ಕಲ್ಯಾಣ್ ಅವರಿಂದ ಗಾಯನ, ಸಂಗೀತ ತಂಡ–ಎನ್.ವಾಸುದೇವ್, ಬಿ.ಆರ್. ರವಿಕುಮಾರ್, ಮತ್ತೂರು ಆರ್. ಶ್ರೀನಿಧಿ, ಆಯೋಜನೆ–ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ–ಶ್ರೀರಾಮ ಮಂದಿರ, ಮಲ್ಲೇಶ್ವರ, ಸಂಜೆ 6

ಸಿಎಂಆರ್ ವಿಶ್ವವಿದ್ಯಾಲಯ ಘಟಿಕೋತ್ಸವ: ಅತಿಥಿಗಳು–ರಾಜ್ಯಪಾಲ ಥಾವರಚಂದ್ ಗೆಹಲೋತ್, ಐಐಎಸ್‌ಸಿ ನಿರ್ದೇಶಕ ಪ್ರೊ.ಗೋವಿಂದನ್ ರಂಗರಾಜನ್, ರಾಜ್ಯಸಭಾ ಸದಸ್ಯ ಕೆ.ಸಿ.ರಾಮಮೂರ್ತಿ, ಕುಲಪತಿ ಸಬಿತಾ ರಾಮಮೂರ್ತಿ, ದಿನೇಶ್ ವರ್ಮಾ, ಸ್ಥಳ–ಧ್ವನಿ ಸಭಾಂಗಣ, ಸಿಎಂಆರ್‌ಐಟಿ ಆವರಣ, ಎಇಸಿಎಸ್ ಬಡಾವಣೆ, ಐಟಿಪಿಎಲ್ ಮುಖ್ಯರಸ್ತೆ, ಬೆಳಿಗ್ಗೆ 10.45

ಗೋವಿಂದನ್ ರಂಗರಾಜನ್

ಸಂಸದರಾದ ತೇಜಸ್ವಿ ಸೂರ್ಯ, ಮುನಿಸ್ವಾಮಿ ಭಾಗಿ

‘ಸ್ವಾತಂತ್ರ್ಯಕ್ಕಾಗಿ ಸೈಕಲ್’ ರ್‍ಯಾಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾತಂತ್ರ್ಯೋತ್ಸವದ 75ನೇ ವರ್ಷಾಚರಣೆ ಪ್ರಯುಕ್ತ ಏರ್ಪಡಿಸಲಾದ ‘ಸ್ವಾತಂತ್ರ್ಯಕ್ಕಾಗಿ ಸೈಕಲ್’ ರ್‍ಯಾಲಿಯಲ್ಲಿ ಸಂಸದರಾದ ತೇಜಸ್ವಿ ಸೂರ್ಯ ಹಾಗೂ ಎಸ್. ಮುನಿಸ್ವಾಮಿ ಅವರು ಭಾನುವಾರ ಸೈಕಲ್ ಸವಾರಿ ನಡೆಸಿದರು.

ಪದ್ಮಶ್ರೀ ಪ್ರಶಸ್ತಿ ವಿಜೇತ ಡಾ.ಕೆ.ವೈ. ವೆಂಕಟೇಶ್, ಪ್ಯಾರಾ ಅಥ್ಲೀಟ್ ಆನಂದ್ ಅವರು ವಿಧಾನಸೌಧದ ಬಳಿ ಜಾಥಾ ಉದ್ಘಾಟಿಸಿದರು. ಸಂಸದ ತೇಜಸ್ವಿ ಸೂರ್ಯ ಅವರು ಸಂಗಡಿಗರೊಂದಿಗೆ ವಿಧಾನ ಸೌಧದಿಂದ ಕೋಲಾರದವರೆಗೆ ಸೈಕಲ್‌ನಲ್ಲಿ ಸಾಗಿದರು. ಇನ್ನೊಬ್ಬ ಸಂಸದ ಎಸ್.ಮುನಿಸ್ವಾಮಿ ಅವರು ನರಸಾಪುರದಲ್ಲಿ ಜಾಥಾವನ್ನು ಸೇರಿಕೊಂಡರು.

‘ಪ್ರಧಾನಿ ನರೇಂದ್ರ ಮೋದಿ ಅವರು ನೀಡಿದ ಈ ಕರೆಯ ಮೇರೆಗೆ ವಿಶ್ವ ಯೋಗ ದಿನಾಚರಣೆ, ಫಿಟ್ ಇಂಡಿಯಾದಂತಹ ಅನೇಕ ಅಭಿಯಾನಗಳನ್ನು ಕೈಗೊಳ್ಳಲಾಗಿದೆ. ಇವುಗಳಿಂದ ಕ್ರೀಡೆ ಮತ್ತು ಸದೃಢ ಆರೋಗ್ಯ ವೃದ್ಧಿಗೆ ಸಾಕಷ್ಟು ಉತ್ತೇಜನ ದೊರಕಿದೆ’ ಎಂದು ತೇಜಸ್ವಿ ಸೂರ್ಯ ತಿಳಿಸಿದರು.

‘ಇಂತಹ ಅಭಿಯಾನಗಳು ದೈಹಿಕ ಆರೋಗ್ಯದ ಕಡೆಗೆ ಗಮನ ಹರಿಸಲು ಪೂರಕ’ ಎಂದು ಎಸ್.ಮುನಿಸ್ವಾಮಿ ತಿಳಿಸಿದರು.

ಸೈಕಲ್ ಜಾಥಾ ಮೂಲಕ 75 ಕಿ.ಮೀ ದೂರವನ್ನು ಕ್ರಮಿಸಲಾಗಿದೆ. 750 ಮಂದಿ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದಾರೆ. ಡೆಕಥ್ಲಾನ್, ಫಾಸ್ಟ್ ಅಂಡ್ ಅಪ್, ಜಯಂತ್ ಪ್ರೊ ಬೈಕ್ಸ್, ಬೆಂಗಳೂರು ರಾಂಡೋನಿಯರ್ಸ್, ರೆಕಾರ್ಡ್ ಮತ್ತು ನಿತ್ಯ ನಿರಂತರ ಸೇವಾ ಟ್ರಸ್ಟ್‌ಗಳು ಜಾಥಾಕ್ಕೆ ಸಹಯೋಗ ನೀಡಿವೆ ಎಂದು ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಅವರ ಕಚೇರಿಯು ಪ್ರಕಟಣೆ ತಿಳಿಸಿದೆ.

ತೇಜಸ್ವಿ ಸೂರ್ಯ ಅವರು ಸಂಗಡಿಗರೊಂದಿಗೆ ಭಾನುವಾರ ಸೈಕಲ್ ಸವಾರಿ ನಡೆಸಿದರು – ಪ್ರಜಾವಾಣಿ ಚಿತ್ರ

‘ಸಿನಿಮಾ ನೋಡುವ ರೀತಿ ಬದಲಾಗಲಿ’

‘ದಿ ಕಾಶ್ಮೀರ್ ಫೈಲ್ಸ್’ ಕುರಿತ ಸಂವಾದದಲ್ಲಿ ನಟ ಪ್ರಕಾಶ್ ಬೆಳವಾಡಿ ಅಭಿಪ್ರಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಯುವ ಸಮುದಾಯ ಸಿನಿಮಾವನ್ನು ಅರ್ಥೈಸಿಕೊಳ್ಳುವ ರೀತಿ ಬದಲಾಗಬೇಕು’ ಎಂದು ನಟ ಪ್ರಕಾಶ್ ಬೆಳವಾಡಿ ಅಭಿಪ್ರಾಯಪಟ್ಟರು.

‘ಮಂಥನ’ ಹಮ್ಮಿಕೊಂಡಿದ್ದ ಮೇಕಿಂಗ್ ಆಫ್ ‘ದಿ ಕಾಶ್ಮೀರ್ ಫೈಲ್ಸ್’ ವಿಮರ್ಶೆ ಮತ್ತು ಸಂವಾದ’ ಕಾರ್ಯಕ್ರಮದಲ್ಲಿ ಭಾನುವಾರ ಅವರು ಮಾತನಾಡಿದರು.

‘ಕಾಶ್ಮೀರದಲ್ಲಿ ನಡೆದ ಘಟನಾವಳಿಗಳ ಆಧಾರದಲ್ಲಿ ಸಿನಿಮಾ ರೂಪುಗೊಂಡಿದೆ. ಅಲ್ಲಿನವರಿಗೆ ಈಗಲೂ ನ್ಯಾಯ ಸಿಕ್ಕಿಲ್ಲ. ನಿರ್ದೇಶಕರು ಇದನ್ನು ಹೇಳುವ ಪ್ರಯತ್ನ ಮಾಡಿದ್ದಾರೆ’ ಎಂದರು.

‘ಮನುಷ್ಯತ್ವವಿರುವವರಿಗೆ ಸಿನಿಮಾದಲ್ಲಿನ ಪಾತ್ರಗಳ ಬಗೆಗೆ ಮರುಕ ಹುಟ್ಟಬೇಕು. ಮರುಕ ವ್ಯಕ್ತಪಡಿಸದವರ ಬಗ್ಗೆ ಅನುಮಾನ ಮೂಡುತ್ತದೆ. ಸಿನಿಮಾದ ಕುರಿತು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ನೀಡಿರುವ ಹೇಳಿಕೆ ಬೇಸರ ತರಿಸಿದೆ. ಅವರು ಬಹಳ ಅಪಾಯಕಾರಿ ಮನುಷ್ಯ ಎಂಬುದು ಈಗ ಮನದಟ್ಟಾಗಿದೆ. ಸಮಚಿತ್ತದಿಂದ ಕೂಡಿದ ಸಿನಿಮಾವಿದು. ಅವರು ಎಚ್ಚರ ತಪ್ಪಿ ಹೇಳಿಕೆ ನೀಡಿಲ್ಲ. ಯಾವುದೋ ಲೆಕ್ಕಾಚಾರ ಇಟ್ಟುಕೊಂಡೇ ಮಾತನಾಡಿದ್ದಾರೆ’ ಎಂದು ತಿಳಿಸಿದರು.

ಲೇಖಕ ಜಿ.ಬಿ.ಹರೀಶ್, ‘ಇಸ್ಲಾಂ ಹೋರಾಟವು ಭಾರತ ಕಟ್ಟಿರುವ ವಿದ್ಯೆಯ ವಿರುದ್ಧದ ಹೋರಾಟ. ಶಾರದಾ ಎಂಬ ಪಾತ್ರದ ಮೇಲೆ ನಡೆಯುವ ಆಕ್ರಮಣ, ಅತ್ಯಾಚಾರದ ಮೂಲಕ ನಿರ್ದೇಶಕರು ಇದನ್ನು ಸೂಚ್ಯವಾಗಿ ತೋರಿಸಿದ್ದಾರೆ’ ಎಂದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ರೋಹಿತ್ ಚಕ್ರತೀರ್ಥ, ‘ಸಿನಿಮಾದಲ್ಲಿ ತೋರಿಸಿರುವ ವಿಷಯಗಳನ್ನು ಪಠ್ಯಪುಸ್ತಕಗಳಲ್ಲಿ ಅಳವಡಿಸಿ ಬಾಲ್ಯದಲ್ಲೇ ಅದನ್ನು ನಾವೆಲ್ಲಾ ಓದುವಂತೆ ಮಾಡಬೇಕಿತ್ತು. ಕಾಶ್ಮೀರ ಪಂಡಿತರ ಇತಿಹಾಸ ಹೇಳುವುದರ ಜೊತೆಗೆ ಬುದ್ಧಿಜೀವಿಗಳ ಬೂಟಾಟಿಕೆಯ ಬಗ್ಗೆಯೂ ಸಿನಿಮಾ ಬೆಳಕು ಚೆಲ್ಲುತ್ತದೆ’ ಎಂದರು.

‘ಗಮನ ಬೇರೆಡೆ ಸೆಳೆಯಲು ವಿವಾದ ಸೃಷ್ಟಿ’

ಬೆಂಗಳೂರು: ‘ತಾಯಂದಿರು, ಮಠಾಧೀಶರು, ವಿವಿಧ ಧರ್ಮದ ಜನರು ತಲೆ ಮೇಲೆ ಹಾಕುವ ಬಟ್ಟೆ (ದುಪ್ಪಟ್ಟಾ) ಗೌರವದ ಸೂಚಕ ಎಂದು ಸಿದ್ದರಾಮಯ್ಯ ಹೇಳಿದ್ದ ಮಾತನ್ನು ಬಿಜೆಪಿ ತಿರುಚುವ ಕೆಲಸ ಮಾಡುತ್ತಿದೆ’ ಎಂದು ಕಾಂಗ್ರೆಸ್ ಮುಖಂಡ ಎಚ್. ಆಂಜನೇಯ ಆರೋಪಿಸಿದ್ದಾರೆ.

ಹೇಳಿಕೆ ಬಿಡುಗಡೆ ಮಾಡಿರುವ ಅವರು, ‘ಹಿಜಾಬ್ ವಿಷಯವನ್ನು ಶಾಲೆಯ ಮುಖ್ಯ ಶಿಕ್ಷಕರ ಹಂತದಲ್ಲೇ ಬಗೆಹರಿಸಬೇಕಿತ್ತು. ಇದೇ ವಿಚಾರ ಮುಂದಿಟ್ಟುಕೊಂಡು ಧರ್ಮಗಳ ಮಧ್ಯೆ ಕಂದಕ ಸೃಷ್ಟಿಸಲಾಗಿದೆ. ನ್ಯಾಯಾಲಯದ ಸಮಯವನ್ನೂ ವ್ಯರ್ಥ ಮಾಡುವ ಮಟ್ಟಕ್ಕೆ ಬೆಳೆಸಲಾಗಿದೆ. ಇದಕ್ಕೆ ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿ ನಾಯಕರ ಮನಸ್ಸಿನಲ್ಲಿರುವ ವಿಷದ ನಂಜು ಕಾರಣ. ಈಗ ಹಿಜಾಬ್ ವಿವಾದ ತಣ್ಣಗಾಗುತ್ತಿದ್ದಂತೆಯೇ ಆತಂಕಕ್ಕೆ ಒಳಗಾಗಿರುವ ಬಿಜೆಪಿ ನಾಯಕರು, ಅದನ್ನು ಜೀವಂತವಾಗಿ ಇಡುವ ಪ್ರಯತ್ನ ನಡೆಸುತ್ತಿದ್ದಾರೆ’ ಎಂದು ಹೇಳಿದ್ದಾರೆ.

‘ಸಿದ್ದರಾಮಯ್ಯ ಅವರು ಹೇಳಿದ ಮಾತನ್ನೇ ತಿರುಚುವ ಮೂಲಕ ನಾಡಿನ ಮಠಾಧೀಶರನ್ನು ಅಪಮಾನಗೊಳಿಸುವ ಕೆಲಸವನ್ನು ಬಿಜೆಪಿ ಮಾಡುತ್ತಿದೆ’ ಎಂದು ಅವರು ತಿಳಿಸಿದ್ದಾರೆ.

ಗಿರಿನಗರದಲ್ಲಿ ವಿಜಯಾ ಚಾರಿಟಬಲ್ ಟ್ರಸ್ಟ್‌ನ ಹೊಸ ಶಾಖೆಯನ್ನು ಶಾಸಕ ಎಲ್.ಎ.ರವಿಸುಬ್ರಹ್ಮಣ್ಯ ಉದ್ಘಾಟಿಸಿದರು. ಟ್ರಸ್ಟ್‌ನ ಅಧ್ಯಕ್ಷೆ ಲತಾಶ್ರೀ ಹಾಗೂ ಡಾ.ನಕುಲ್, ನಂದಿನಿ ವಿಜಯ ವಿಠ್ಠಲ ಇದ್ದಾರೆ.

‘ಶಿರವಸ್ತ್ರ ಧರಿಸಲು ಅವಕಾಶ ಕಲ್ಪಿಸಿ’

ಬೆಂಗಳೂರು: ಸಮವಸ್ತ್ರದ ಭಾಗವಾಗಿಯೇ ಮುಸ್ಲಿಂ ಹೆಣ್ಣು ಮಕ್ಕಳು ಶಿರವಸ್ತ್ರ ಧರಿಸಿ ಪರೀಕ್ಷೆ ಬರೆಯಲು ಅವಕಾಶ ನೀಡಬೇಕು ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಆಗ್ರಹಿಸಿದೆ.

ಮಾರ್ಚ್ 28ರಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆಗಳು ನಡೆಯಲಿದ್ದು, ವಿದ್ಯಾರ್ಥಿಗಳು ಕಡ್ಡಾಯವಾಗಿ ಸಮವಸ್ತ್ರ ಧರಿಸಬೇಕು ಎಂದು ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದೆ. ಪರೀಕ್ಷೆ ಸಮಯದಲ್ಲಿ ಈ ಸುತ್ತೋಲೆ ಹೊರಡಿಸಿರುವುದು ಖಂಡನೀಯ ಎಂದು ಸಂಘಟನೆ ತಿಳಿಸಿದೆ.

ಹೆಣ್ಣು ಮಕ್ಕಳ ಸಾಂವಿಧಾನಿಕ ಶೈಕ್ಷಣಿಕ ಹಕ್ಕನ್ನು ರಕ್ಷಿಸಬೇಕು. ಈ ನಿಟ್ಟಿನಲ್ಲಿ ಸರ್ಕಾರ ಕ್ರಮಗಳನ್ನು ಕೈಗೊಳ್ಳಬೇಕು. ರಾಜ್ಯದಲ್ಲಿ ಯಾವುದೇ ಯಾವುದೇ ವಿದ್ಯಾರ್ಥಿನಿಯೂ ಪರೀಕ್ಷೆಯಿಂದ ಹೊರಗುಳಿಯದಂತೆ ಕ್ರಮಕೈಗೊಂಡು ಸೌಹಾರ್ದ ಕಾಪಾಡಬೇಕು ಎಂದು ಸಂಘಟನೆ ಒತ್ತಾಯಿಸಿದೆ.

ನಿಧನ ವಾರ್ತೆ

ನಾರಾಯಣ ಶೆಟ್ಟಿ



ಬೆಂಗಳೂರು: ನಗರದ ಮಾಗಡಿ ರಸ್ತೆಯ ಇ.ಟಿ.ಎ ಗಾರ್ಡನ್ ನಿವಾಸಿ ನಾರಾಯಣ ಶೆಟ್ಟಿ (85) ಅವರು ಅನಾರೋಗ್ಯದಿಂದಾಗಿ ಭಾನುವಾರ ಬೆಳಿಗ್ಗೆ ನಿಧನರಾದರು.

ಇವರು, ಪತ್ರಿಕಾ ವಿತರಕ ಮೋಹನ್ ಕುಮಾರ್ ಅವರ ತಂದೆ.

ಸ್ವತಂತ್ರ ತನಿಖೆಗೆ ಆದೇಶಿಸಿದರೆ ಎಲ್ಲ ಮಾಹಿತಿ ಒದಗಿಸಲು ಸಿದ್ಧ ● ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ.ಕೆಂಪಣ್ಣ

ಶೇ 40ರಷ್ಟು ಲಂಚ: ಏಪ್ರಿಲ್‌ನಲ್ಲಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಡಿ.ಕೆಂಪಣ್ಣ

ಬೆಂಗಳೂರು: ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಗುತ್ತಿಗೆದಾರರಿಂದ ಶೇಕಡ 40ರಷ್ಟು ಲಂಚ ಪಡೆಯುವುದು ಇನ್ನೂ ನಿಂತಿಲ್ಲ. ಲಂಚದ ಹಾವಳಿ ನಿಯಂತ್ರಣಕ್ಕೆ ಆಗ್ರಹಿಸಿ ಏಪ್ರಿಲ್ ಕೊನೆಯ ವಾರ 50,000 ಗುತ್ತಿಗೆದಾರರೊಂದಿಗೆ ಬೆಂಗಳೂರಿನಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ.ಕೆಂಪಣ್ಣ ತಿಳಿಸಿದರು.

ಜಾಗೃತ ಕರ್ನಾಟಕ ಸಂಘಟನೆಯು ಭಾನುವಾರ ಆಯೋಜಿಸಿದ್ದ 'ಶೇಕಡ 40ರಷ್ಟು ಕಮಿಷನ್ ಯಾರಿಗೂ ಆಘಾತ ತರದ ಭಾರಿ ಹಗರಣ; ಕರ್ನಾಟಕಕ್ಕೇನು ಕಾದಿದೆ?' ಕುರಿತ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ವ್ಯವಸ್ಥೆಯಲ್ಲಿ ಏನಾದರೂ ಸುಧಾರಣೆ ಆಗಬಹುದು ಎಂಬ ನಿರೀಕ್ಷೆ ನಾವು ಆರೋಪ ಮಾಡಿದಾಗ ಇತ್ತು. ಆದರೆ, ಯಾವ ಬದಲಾವಣೆಯೂ ಆಗಿಲ್ಲ' ಎಂದರು.

'ವಿವಿಧ ಕಾಮಗಾರಿಗಳನ್ನು ನಡೆಸುವ ಗುತ್ತಿಗೆದಾರರಿಂದ ಶೇ 40ರಷ್ಟು ಲಂಚ ಪಡೆಯುವುದು ಈಗಲೂ ನಿಂತಿಲ್ಲ. ಭ್ರಷ್ಟಾಚಾರದ ಕುರಿತು ನಾವು ನೀಡಿರುವ ದೂರುಗಳ ಬಗ್ಗೆ ಸರ್ಕಾರ ಯಾವ ಕ್ರಮವನ್ನೂ ಜರುಗಿಸಿಲ್ಲ. ಶಾಸಕರು, ಸಂಸದರು, ಸಚಿವರು, ಅಧಿಕಾರಿಗಳು ಎಷ್ಟು ಮೊತ್ತದ ಲಂಚ ಪಡೆಯುತ್ತಾರೆ ಎಂಬುದನ್ನು ದೂರಿನಲ್ಲಿ ನಿಖರವಾಗಿ ಹೇಳಿದ್ದೇವೆ. ಸರ್ಕಾರ ತನಿಖೆ ನಡೆಸಲಿ. ನಮ್ಮ ಆರೋಪದಲ್ಲಿ ಸುಳ್ಳಿದ್ದರೆ ನಮ್ಮನ್ನು ಜೈಲಿಗೆ ಕಳುಹಿಸಲಿ' ಎಂದು ಸವಾಲು ಹಾಕಿದರು.

ಹಿಂದಿನ ವಿಧಾನಸಭಾ ಚುನಾವಣೆ ವೇಳೆ ರಾಜ್ಯದಲ್ಲಿನ ಸರ್ಕಾರವನ್ನು ಪ್ರಧಾನಿ ನರೇಂದ್ರ ಮೋದಿ '10 ಪರ್ಸೆಂಟ್ ಸರ್ಕಾರ' ಎಂದು ಟೀಕಿಸಿದ್ದರು. ಈಗ ಲಂಚದ ಪ್ರಮಾಣ ಶೇ 40ಕ್ಕೆ ಏರಿದೆ. ಶಾಸಕರಿಗೆ ಶೇ 15ರಷ್ಟು ಲಂಚ ಕೊಡದಿದ್ದರೆ ಗುತ್ತಿಗೆದಾರರಿಗೆ ಕಾರ್ಯಾದೇಶವೇ ಸಿಗುವುದಿಲ್ಲ. ಸಂಪೂರ್ಣ ಮಾಹಿತಿಯೊಂದಿಗೆ ಪ್ರಧಾನಿ, ಮುಖ್ಯಮಂತ್ರಿ, ರಾಜ್ಯಪಾಲರಿಗೆ ದೂರು ಸಲ್ಲಿಸಲಾಗಿದೆ.

ಯಾರಿಂದಲೂ ಸ್ಪಂದನೆ ಸಿಕ್ಕಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮಾಹಿತಿ ಒದಗಿಸಲು ಸಿದ್ಧ: 'ಲಂಚದ ಆರೋಪಕ್ಕೆ ದಾಖಲೆ ಕೊಡುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕೇಳುತ್ತಿದ್ದಾರೆ. ಲಂಚ ಕೊಟ್ಟವರು ಮತ್ತು ಪಡೆದವರು ದಾಖಲೆ ಇಟ್ಟುಕೊಳ್ಳುತ್ತಾರಾ? ನಾವು ಮಾಡಿರುವ ಆರೋಪಕ್ಕೆ ಈಗಲೂ ಬದ್ಧ. ಈ ಕುರಿತು ಸ್ವತಂತ್ರ ತನಿಖೆಗೆ ಆದೇಶಿಸಿದರೆ ಎಲ್ಲ ಮಾಹಿತಿಗಳನ್ನೂ ಒದಗಿಸಲು ಸಿದ್ಧ' ಎಂದು ಕೆಂಪಣ್ಣ ಹೇಳಿದರು.

'ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮಕ್ಕೆ (ಕೆಆರ್‌ಐಡಿಎಲ್) ಮೂಲಕ ₹ 25,000 ಕೋಟಿ ಮೊತ್ತದ ಕಾಮಗಾರಿಗಳನ್ನು ನಡೆಸಲಾಗಿದೆ. ಅದರಲ್ಲಿ ಶೇ 20ರಷ್ಟಾದರೂ ಕೆಲಸ ಆಗಿದೆಯೆ ಎಂಬುದನ್ನು ಸರ್ಕಾರ ತೋರಿಸಲಿ. ಆಗ ಅವರು ಹೇಳಿದಂತೆ ನಾವು ಕೇಳುತ್ತೇವೆ' ಎಂದು ಕೆಂಪಣ್ಣ ತಿಳಿಸಿದರು.

ವಿಕೇಂದ್ರೀಕರಣವೇ ಮದ್ದು: ನಿವೃತ್ತ ಐಎಎಸ್ ಅಧಿಕಾರಿ ಟಿ.ಆರ್. ರಘುನಂದನ್ ಮಾತನಾಡಿ, 'ಅಧಿಕಾರ ವಿಕೇಂದ್ರೀಕರಣದಿಂದ ಭ್ರಷ್ಟಾಚಾರ ತಡೆಯಲು ಸಾಧ್ಯ. ವಿಕೇಂದ್ರೀಕೃತ ವ್ಯವಸ್ಥೆಯಲ್ಲಿ ಭ್ರಷ್ಟಾಚಾರ ಪ್ರಕರಣಗಳು ಬೇಗ ಬಯಲಿಗೆ ಬರುತ್ತವೆ' ಎಂದರು.

ಕಾರ್ಯನೀತಿ ವಿಶ್ಲೇಷಕ ಕೆ.ಸಿ. ರಘು ಮತ್ತು ಚಿಕ್ಕಬಳ್ಳಾಪುರ ಶಾಶ್ವತ ನೀರಾವರಿ ಹೋರಾಟ ಸಮಿತಿ ಅಧ್ಯಕ್ಷ ಆರ್. ಆಂಜನೇಯ ರೆಡ್ಡಿ ಅವರು ಮಾತನಾಡಿದರು.

'ಪ್ರಜಾವಾಣಿ'ಯಿಂದ ಚರ್ಚೆಗೆ ಬಂತು

'ಕಾಮಗಾರಿಗಳನ್ನು ನಡೆಸುತ್ತಿರುವ ವಿವಿಧ ಇಲಾಖೆಗಳಲ್ಲಿ ಶೇ 40 ರಷ್ಟು ಲಂಚ ಪಡೆಯುತ್ತಿರುವ ಕುರಿತು ಪ್ರಧಾನಿ, ಮುಖ್ಯಮಂತ್ರಿ, ರಾಜ್ಯಪಾಲರಿಗೆ ನಾವು ದೂರು ನೀಡಿದ್ದೆವು. ಆದರೆ, ಸಣ್ಣ ಚರ್ಚೆಯೂ ಆರಂಭವಾಗಿರಲಿಲ್ಲ. 'ಪ್ರಜಾವಾಣಿ' ಪತ್ರಿಕೆ ಈ ಕುರಿತು ವಿಸ್ತೃತವಾಗಿ ವರದಿಗಳನ್ನು ಪ್ರಕಟಿಸಿತು. ಆ ಬಳಿಕ ಸಾರ್ವಜನಿಕ ವಲಯದಲ್ಲಿ ಈ ಕುರಿತು ಚರ್ಚೆ ಆರಂಭವಾಯಿತು. ಈ ವಿಚಾರದಲ್ಲಿ ಪತ್ರಿಕೆಗೆ ನಾವು ಆಭಾರಿ' ಎಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ಹೇಳಿದರು.

ನಲ್ಲಿ ಸಂಪರ್ಕ: ಕರ್ನಾಟಕ ಸೇರಿ ದೊಡ್ಡ ರಾಜ್ಯಗಳ ಸಾಧನೆ ಕಳಪೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಪುರಸ್ಕೃತ 'ಜಲ ಜೀವನ ಮಿಷನ್'ನಡಿ ಗ್ರಾಮೀಣ ಪ್ರದೇಶಗಳ ಮನೆಗಳಿಗೆ ನಲ್ಲಿ ಮೂಲಕ ನೀರು ಪೂರೈಸುವಲ್ಲಿ ಸಣ್ಣ ರಾಜ್ಯಗಳಿಗೆ ಹೋಲಿಸಿದರೆ, ಕರ್ನಾಟಕ ಸೇರಿದಂತೆ ದೊಡ್ಡ ರಾಜ್ಯಗಳು ಹಿಂದಿವೆ.

ಬಿಜೆಪಿ ಸಂಸದ ಸಂಜಯ್ ಜೈಸ್ವಾಲ್ ನೇತೃತ್ವದ ಸಂಸದೀಯ ಸ್ಥಾಯಿ ಸಮಿತಿ ಇತ್ತೀಚೆಗೆ ಸಂಸತ್‌ನಲ್ಲಿ ಮಂಡಿಸಿರುವ ವರದಿಯಲ್ಲಿ ಈ ವಿಷಯ ಹೇಳಲಾಗಿದೆ.

'ನಲ್ಲಿ ಸಂಪರ್ಕ ನೀಡುವ ವಿಷಯದಲ್ಲಿ ಮಾತ್ರವಲ್ಲ, ಈ ಉದ್ದೇಶಕ್ಕಾಗಿ ಕೇಂದ್ರದ ಅನುದಾನವನ್ನು ಬಳಸಿಕೊಳ್ಳುವಲ್ಲಿ ದೊಡ್ಡ ರಾಜ್ಯಗಳ ಸಾಧನೆ ತೃಪ್ತಿಕರವಾಗಿಲ್ಲ' ಎಂದು ಸಮಿತಿಯು ಕಳವಳ ವ್ಯಕ್ತಪಡಿಸಿದೆ.

ನಲ್ಲಿ ಮೂಲಕ ನೀರು ಪೂರೈಕೆಗಾಗಿ ಕರ್ನಾಟಕದಲ್ಲಿ 97.92 ಲಕ್ಷ ಮನೆಗಳನ್ನು ಗುರುತಿಸಲಾಗಿದೆ. ಈ ಪೈಕಿ, ಕಳೆದ ಫೆಬ್ರುವರಿಯಲ್ಲಿ ಸಿದ್ಧಪಡಿಸಲಾದ ಅಂಕಿ–ಅಂಶಗಳಂತೆ 45.44 ಲಕ್ಷ ಮನೆಗಳಿಗೆ ನಲ್ಲಿ ಸಂಪರ್ಕ ನೀಡಲಾಗಿದೆ.

ಕರ್ನಾಟಕದಲ್ಲಿರುವ ಒಟ್ಟು ಮನೆಗಳ ಪೈಕಿ ಶೇ 46.41ರಷ್ಟು ಫಲಾನುಭವಿಗಳಿಗೆ ನಲ್ಲಿ ಸಂಪರ್ಕ ನೀಡಿದಂತಾಗಿದ್ದು, ರಾಷ್ಟ್ರೀಯ ಸರಾಸರಿ ಶೇ 46.48ರಷ್ಟಿದೆ ಎಂದು ವರದಿಯಲ್ಲಿ ವಿವರಿಸಲಾಗಿದೆ.

ಉತ್ತರಪ್ರದೇಶ, ಛತ್ತೀಸಗಡ, ಜಾರ್ಖಂಡ, ಪಶ್ಚಿಮ ಬಂಗಾಳ, ರಾಜಸ್ಥಾನ, ಅಸ್ಸಾಂ, ಮಧ್ಯಪ್ರದೇಶ, ಕೇರಳ, ತಮಿಳುನಾಡು ರಾಜ್ಯಗಳು ಸಹ ಈ ಯೋಜನೆ ಅನುಷ್ಠಾನದಲ್ಲಿ ಹಿಂದಿವೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

6 ಜಿಲ್ಲೆಗಳು ಕೋವಿಡ್ ಮುಕ್ತ

ಬೆಂಗಳೂರು: ರಾಜ್ಯದಲ್ಲಿ ಬೀದರ್ ಸೇರಿದಂತೆ ಆರು ಜಿಲ್ಲೆಗಳು ಕೋವಿಡ್ ಮುಕ್ತವಾದರೆ, ಯಾದಗಿರಿ ಸೇರಿದಂತೆ 15 ಜಿಲ್ಲೆಗಳಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ ಹತ್ತಕ್ಕಿಂತ ಕಡಿಮೆ ಇದೆ.

ಕೋವಿಡ್ ಪರೀಕ್ಷೆಗಳ ಸಂಖ್ಯೆ, ಈಗ 26,596ಕ್ಕೆ ಇಳಿದಿದೆ. ಕಳೆದೊಂದು ತಿಂಗಳಿನಿಂದ ಹೊಸ ಪ್ರಕರಣಗಳು ಹಾಗೂ ಪರೀಕ್ಷೆಗಳ ಸಂಖ್ಯೆ ಇಳಿಮುಖ ಮಾಡಿದೆ. ಭಾನುವಾರ 64 ಮಂದಿಗೆ ಸೋಂಕು ದೃಢಪಟ್ಟಿದ್ದು, ಒಬ್ಬರು ಮೃತಪಟ್ಟಿರುವುದು ದೃಢಪಟ್ಟಿದೆ.

ರಾಜ್ಯದಲ್ಲಿ ಸೋಂಕಿತರ ಸಂಖ್ಯೆ 39.45 ಲಕ್ಷ ದಾಟಿದೆ. ಕೋವಿಡ್ ಪೀಡಿತರಲ್ಲಿ 39.03 ಲಕ್ಷ ಮಂದಿ ಚೇತರಿಸಿಕೊಂಡಿದ್ದಾರೆ. ದಾವಣಗೆರೆ, ಗದಗ, ಹಾವೇರಿ, ಕೋಲಾರ, ರಾಯಚೂರು ಜಿಲ್ಲೆಯಲ್ಲಿ ಸದ್ಯ ಪ್ರಕರಣಗಳಿಲ್ಲ.

ಸುದ್ದಿ 2 ನಿಮಿಷ

ಸಾಂಸ್ಕೃತಿಕ ಸಂಸ್ಥೆಗಳ ಸ್ವಾಯತ್ತೆಗೆ ಆಗ್ರಹಪಡಿಸಿ ಪ್ರಸನ್ನ ಉಪವಾಸ

ಮೈಸೂರು: ಸಾಂಸ್ಕೃತಿಕ ಸಂಸ್ಥೆಗಳ ಸ್ವಾಯತ್ತೆಗೆ ಆಗ್ರಹಿಸಿ ರಂಗಕರ್ಮಿ ಪ್ರಸನ್ನ ಭಾನುವಾರ ಒಂದು ದಿನದ ಉಪವಾಸ ನಡೆಸಿದರು.

ಹೆಗ್ಗೋಡುವಿನಿಂದ ಶನಿವಾರ ರಾತ್ರಿ ಉಪವಾಸ ಕೈಗೊಂಡು ಭಾನುವಾರ ನಸುಕಿನಲ್ಲಿ ಮೈಸೂರು ತಲುಪಿದ ಅವರು ಸ್ನೇಹಿತರ ಮನೆಯಲ್ಲಿ ಕೆಲಕಾಲ ವಿಶ್ರಾಂತಿ ಪಡೆದರು. ಬಳಿಕ ರಂಗಾಯಣ ಆವರಣಕ್ಕೆ ಬಂದರು.

ಸುದ್ದಿಗಾರರೊಂದಿಗೆ ಮಾತನಾಡಿ, 'ರಂಗಾಯಣದ 'ಬಹುರೂಪಿ' ಉತ್ಸವದ ಸಮಾರೋಪದಲ್ಲಿ ನಡೆದಿದ್ದ ಮರ್ಯಾದೆ ಮೀರಿದ ಘಟನೆ ಹೋರಾಟಕ್ಕೆ ಪ್ರೇರಣೆ ನೀಡಿದೆ. ಅವರನ್ನು ಕ್ಷಮಿಸಿದ್ದೇವೆ. ಅವರೂ ಕ್ಷಮೆ ಒಪ್ಪಿದ್ದಾರೆ. ರಂಗಭೂಮಿ, ಸಾಂಸ್ಕೃತಿಕ ಮರ್ಯಾದೆ ಕಾಪಾಡುವ ಕೆಲಸಕ್ಕಾಗಿ ಹೋರಾಟ ಆರಂಭಿಸಲಾಗುವುದು' ಎಂದರು.

'ಒಂದೂವರೆ ತಿಂಗಳು ಎಲ್ಲರ ಬಳಿಗೆ ಹೋಗುವೆ. ಎಲ್ಲರೂ ಹೋರಾಟದಲ್ಲಿ ಭಾಗವಹಿಸಬೇಕು. ದೇಗುಲಕ್ಕೆ ಹೋದಂತೆ ಕೈ, ಕಾಲು ಹಾಗೂ ಮನಸ್ಸು ತೊಳೆದುಕೊಂಡು ಬಂದು ಸಮಷ್ಟಿಯ ಹಿತದ ಮಾತುಗಳನ್ನಾಡಬೇಕು' ಎಂದು ಹೇಳಿದರು.

'ಎಲ್ಲ ಸಂಸ್ಥೆಗಳೂ ಮರ್ಯಾದೆಯ ಸಂಸ್ಥೆಗಳಾಗಬೇಕು. ರಾಮರಾಜ್ಯದ ಮರ್ಯಾದೆ ಎಂದರೆ ಶ್ರಮಜೀವದ ಮರ್ಯಾದೆ ಹೊರತು ಪೂಜಾರಿ ಸಂಸ್ಕೃತಿಯ ಮರ್ಯಾದೆಯಲ್ಲ' ಎಂದರು.

'ಸಂಸ್ಕೃತಿ, ಭಾಷೆ ಕಲಿಸಬಲ್ಲ ಮಾಧ್ಯಮಗಳನ್ನು ಸರ್ಕಾರ ಕಪಿಮುಷ್ಟಿಯಲ್ಲಿರಿಸಿಕೊಂಡಿದೆ. ರಂಗಪ್ರದರ್ಶನ ಅಥವಾ ಕಲೆ, ಸಂಸ್ಕೃತಿಯ ವಿಷಯದಜನರನ್ನು ಸರ್ಕಾರ ಭಿಕ್ಷುಕರಂತೆ ಕಾಣುತ್ತಿದೆ. ಅಧಿಕಾರಿಶಾಹಿ ಕುತ್ತಿಗೆ ಹಿಚುಕುತ್ತಿದೆ' ಎಂದು ಕಿಡಿಕಾರಿದರು.



'ಟಿಪ್ಪುಗೆ ಮೈಸೂರು ಹುಲಿ ಎಂಬ ಬಿರುದು ಕೊಟ್ಟವರು ಯಾರು'

ಬೆಂಗಳೂರು: 'ಟಿಪ್ಪುವಿಗೆ 'ಮೈಸೂರು ಹುಲಿ' ಹಾಗೂ 'ಸುಲ್ತಾನ್' ಎಂಬ ಬಿರುದುಗಳನ್ನು ಕೊಟ್ಟವರು ಯಾರು. ಈ ಕುರಿತ ದಾಖಲೆಗಳು ಯಾರ ಬಳಿಯಾದರೂ ಇವೆಯೇ' ಎಂದು ಪಠ್ಯಪುಸ್ತಕ ಪರಿಶೀಲನಾ ಸಮಿತಿ ಅಧ್ಯಕ್ಷ ರೋಹಿತ್ ಚಕ್ರತೀರ್ಥ ಪ್ರಶ್ನಿಸಿದರು.

'ಮಂಥನ' ಹಮ್ಮಿಕೊಂಡಿದ್ದ ಮೇಕಿಂಗ್ ಆಫ್ 'ದಿ ಕಾಶ್ಮೀರ್ ಫೈಲ್ಸ್' ವಿಮರ್ಶೆ ಮತ್ತು ಸಂವಾದ' ಕಾರ್ಯಕ್ರಮದಲ್ಲಿ ಭಾನುವಾರ ಮಾತನಾಡಿದ ಅವರು, 'ನಾವು ಸುಳ್ಳು ಇತಿಹಾಸಗಳನ್ನೇ ಸೃಷ್ಟಿಸುತ್ತಿದ್ದೇವೆ ಎಂಬುದಕ್ಕೆ ಇದೇ ನಿದರ್ಶನ' ಎಂದರು.

'ಕಾರ್ಕೋಟ ವಂಶದ ಲಲಿತಾದಿತ್ಯನು ಕಾಶ್ಮೀರದ ಪ್ರಮುಖ ರಾಜ. ಈತ 36 ವರ್ಷ ರಾಜ್ಯಭಾರ ಮಾಡಿದ್ದ. ಮಾರ್ತಾಂಡ ದೇವಸ್ಥಾನ ನಿರ್ಮಿಸಿ ಅಭಿವೃದ್ಧಿಪಡಿಸಿದ್ದ. ದೇಶದ ಎಲ್ಲಾ ವಿದ್ವಾಂಸರಿಗೆ ನೆಲೆ ಕಲ್ಪಿಸಿದ್ದ. ಹೀಗಾಗಿ ಈ ವರ್ಷದ ಪಠ್ಯಕ್ರಮದಲ್ಲಿ ಈತನ ಕುರಿತ ಪಾಠ ಸೇರ್ಪಡೆ ಮಾಡಿದ್ದೇವೆ' ಎಂದು ತಿಳಿಸಿದರು.

'ದೇಶದ ವಿವಿಧ ಪ್ರಾಂತ್ಯಗಳಲ್ಲಿ ಧೀಮಂತಿಕೆ ತೋರಿದವರ ಬಗ್ಗೆ ನಾವು ಅರಿಯದಿದ್ದರೆ ಈ ದೇಶ ಪರಕೀಯವಾಗಿಯೇ ಉಳಿಯಲಿದೆ. ಹೀಗಾಗಿ ಅಹೊಂ ರಾಜವಂಶದ ಕುರಿತ ಪಾಠವನ್ನೂ ಪಠ್ಯಕ್ರಮದಲ್ಲಿ ಪರಿಚಯಿಸಿದ್ದೇವೆ' ಎಂದು ಹೇಳಿದರು.

ವಟ್ಟಮ್ಮನಹಳ್ಳಿ: ದೊಡ್ಡ ಆಲಿಕಲ್ಲಿನ ಮಳೆ

ಪ್ರಜಾವಾಣಿ ವಾರ್ತೆ

ಹಗರಿಬೊಮ್ಮನಹಳ್ಳಿ (ವಿಜಯನಗರ ಜಿಲ್ಲೆ): ತಾಲ್ಲೂಕಿನ ವಟ್ಟಮ್ಮನಹಳ್ಳಿ ಗ್ರಾಮದಲ್ಲಿ ಭಾನುವಾರ ಸಂಜೆ ಬೃಹತ್ ಗಾತ್ರದ ಆಲಿಕಲ್ಲು ಸಹಿತ ಮಳೆಯಾಗಿದೆ. ಒಂದೊಂದು ಆಲಿಕಲ್ಲು 5 ರಿಂದ 10 ಕೆ.ಜಿ. ತೂಕ ಇತ್ತು.

ಆಲಿಕಲ್ಲು ಮಳೆಯಿಂದಾಗಿ 25ಕ್ಕೂ ಹೆಚ್ಚು ರೈತರ ರೈತರ 150 ಎಕರೆ ಪಪ್ಪಾಯಿ, 100 ಎಕರೆ ದಾಳಿಂಬೆ, 10 ಎಕರೆಯಷ್ಟು ಬೀಜೋತ್ಪಾದನೆಯ ಟೊಮೆಟೊ, ಬದನೆ ಬೆಳೆ ನಷ್ಟವಾಗಿದೆ ಎಂದು ಗ್ರಾಮದ ವಿ.ಎಚ್.ವೀರನಗೌಡ ತಿಳಿಸಿದ್ದಾರೆ.

ಹೂವಿನಹಡಗಲಿ ತಾಲ್ಲೂಕಿನಲ್ಲಿಯೂ ಬಿರುಗಾಳಿ ಸಹಿತ ಮಳೆ ಸುರಿದಿದೆ.

ಶಿವಮೊಗ್ಗ ವರದಿ: ಜಿಲ್ಲೆಯ ಹಲವಡೆ ಭಾನುವಾರ ಮಳೆಯಾಗಿದೆ. ಸಾಗರ ತಾಲ್ಲೂಕಿನ ಹಲವು ಭಾಗಗಳು, ಹೊಸನಗರ, ಭದ್ರಾವತಿ, ಕಾರ್ಗಲ್‌ನಲ್ಲಿಜೋರಾಗಿಮಳೆಯಾಗಿದೆ.

ಹುಬ್ಬಳ್ಳಿ ವರದಿ: ನವಲಗುಂದದಲ್ಲಿ ಗಾಳಿ–ಮಳೆಗೆ ಪಟ್ಟಣದ ಹಲವೆಡೆ ಮರಗಳು ಉರುಳಿವೆ. ನಾಲ್ಕು ತಾಸು ವಿದ್ಯುತ್ ಸ್ಥಗಿತವಾಗಿತ್ತು.

ತಾಲ್ಲೂಕಿನ ತಿರ್ಲಾಪೂರ, ಯಮನೂರು ರಸ್ತೆಯಲ್ಲಿ ವಿದ್ಯುತ್ ಕಂಬ ಬಿದ್ದು ವಾಹನ ಸಂಚಾರ ಸ್ಥಗಿತಗೊಂಡಿತ್ತು. ಆಯಟ್ಟಿ ಮತ್ತು ಶಿರೂರ ಗ್ರಾಮದಲ್ಲಿ ಸಹ ವಿದ್ಯುತ್ ಕಂಬಗಳು ಬಿದ್ದಿವೆ.

ಬಂಡೀಪುರದಲ್ಲಿ ಉತ್ತಮ ಮಳೆ (ಗುಂಡ್ಲುಪೇಟೆ): ಬಂಡೀಪುರ ರಾಷ್ಟ್ರೀಯ ಹುಲಿ ಸಂರಕ್ಷಿತ ಪ್ರದೇಶದ ವಲಯದಲ್ಲಿ ಉತ್ತಮ ಮಳೆಯಾಗಿದೆ.

ಗೋಪಾಲಸ್ವಾಮಿ ಬೆಟ್ಟ, ಕುಂದುಕೆರೆ, ಮೂಲನ ಹೊಳೆ, ಮದ್ದೂರು ವಲಯದಲ್ಲಿ ಮಳೆಆಗಿದೆ. 'ಇನ್ನೂ ಒಂದೆರಡು ಮಳೆಯಾದರೆ ಕೆರೆಗಳಿಗೆ ನೀರು ಬರುತ್ತದೆ' ಎಂದು ವಲಯ ಅರಣ್ಯಾಧಿಕಾರಿ ಶ್ರೀನಿವಾಸ್ ಅವರು ತಿಳಿಸಿದರು.

ವಟ್ಟಮ್ಮನಹಳ್ಳಿ ಗ್ರಾಮದಲ್ಲಿ ಭಾನುವಾರ ಮಳೆಯಲ್ಲಿ ಬಿದ್ದ ದೊಡ್ಡ ಆಲಿಕಲ್ಲನ್ನು ರೈತರೊಬ್ಬರು ಪ್ರದರ್ಶಿಸಿದರು

ಹೊಳಲ್ಕೆರೆ: ಹನುಮಾನ್ ಮಂದಿರ ತೆರವು

ಹೊಳಲ್ಕೆರೆ (ಚಿತ್ರದುರ್ಗ ಜಿಲ್ಲೆ): ಪಟ್ಟಣದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಆವರಣದಲ್ಲಿದ್ದ ಹನುಮಾನ್ ಮಂದಿರವನ್ನು ತಾಲ್ಲೂಕು ಆಡಳಿತ ಭಾನುವಾರ ತೆರವುಗೊಳಿಸಿತು.

ವಿರೋಧ ವ್ಯಕ್ತಪಡಿಸಿದ ವಿಶ್ವ ಹಿಂದೂ ಪರಿಷತ್‌ನ ಎಂಟು ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು. ತೆರವು ಕಾರ್ಯಾಚರಣೆಗೆ ಅಧಿಕಾರಿಗಳು ಬಂದಾಗ ವಿಎಚ್‌ಪಿ ಕಾರ್ಯಕರ್ತರು ವಿರೋಧ ವ್ಯಕ್ತಪಡಿಸಿದರು.

ಶಿವಮೊಗ್ಗ ವಿಭಾಗೀಯ ಕಾರ್ಯದರ್ಶಿ ಚಂದ್ರಶೇಖರ್ ಸೇರಿ ಎಂಟು ಜನರನ್ನು ಪೊಲೀಸರು ವಶಕ್ಕೆ ಪಡೆದರು. 'ಬಸ್ ನಿಲ್ದಾಣದ ಅಂಚಿನಲ್ಲಿ ಹೊಸ ದೇಗುಲ ನಿರ್ಮಿಸಲಾಗಿದೆ. ಹಳೆಯ ದೇವಾಲಯ ತೆರವು ವಿರುದ್ಧ ದೇವಾಲಯ ಸಮಿತಿ ತಡೆಯಾಜ್ಞೆ ತಂದಿತ್ತು. ಈಗ ತಡೆಯಾಜ್ಞೆ ತೆರವಾಗಿದೆ. ಆಂಜನೇಯ ಸ್ವಾಮಿ ವಿಗ್ರಹವನ್ನು ಹೊಸ ದೇವಸ್ಥಾನಕ್ಕೆ ಸ್ಥಳಾಂತರಿಸಿ ತೆರವುಗೊಳಿಸಲಾಗಿದೆ' ಎಂದು ಕೆಎಸ್ ಆರ್‌ಟಿಸಿ ಡಿಸಿ ಸತ್ಯ ಮತ್ತು ಪುರಸಭೆ ಮುಖ್ಯಾಧಿಕಾರಿ ಎ.ವಾಸಿಂ, ತಿಳಿಸಿದ್ದಾರೆ.

ಮಳೆ ಗಾಳಿಗೆ 30 ಟನ್ ದ್ರಾಕ್ಷಿ ಮಣ್ಣುಪಾಲು

ತಿಕೋಟಾ (ವಿಜಯಪುರ ಜಿಲ್ಲೆ): ತಾಲ್ಲೂಕಿನ ಯತ್ನಾಳ ಗ್ರಾಮದಲ್ಲಿ ಹಣ್ಣಾಗಿ ಕಟಾವಿಗೆ ಬಂದ ದ್ರಾಕ್ಷಿ ಪಡ ಶನಿವಾರ ಸುರಿದ ಭಾರಿ ಗಾಳಿ–ಮಳೆಗೆ ನೆಲಕ್ಕುರುಳಿದ್ದು, 30 ಟನ್‌ಗಳಷ್ಟು ಹಣ್ಣಾದ ದ್ರಾಕ್ಷಿ ಮಣ್ಣುಪಾಲಾಗಿವೆ.

ಅನೀಲ ಶಂಕರ ದೇವಕಾತೆ ಎಂಬ ರೈತರ ಈ ದ್ರಾಕ್ಷಿ ಪಡ ಹಾಳಾಗಿದೆ. 'ಈ ವರ್ಷ ಉತ್ತಮ ಆದಾಯದ ನಿರೀಕ್ಷೆ ಇತ್ತು, ಕೈಗೆ ಬಂದ ತುತ್ತು ಬಾಯಿಗೆ ಬರದಂತಾಗಿದೆ' ಎಂದು ಅವರು ಅಳಲು ತೋಡಿಕೊಂಡರು.

ಸ್ಥಳಕ್ಕಾಗಮಿಸಿದ ತಾಲ್ಲೂಕು ಸಹಾಯಕ ತೋಟಗಾರಿಕೆ ಅಧಿಕಾರಿ ಹಾಗೂ ಗ್ರಾಮ ಲೆಕ್ಕಾಧಿಕಾರಿ ಹಾನಿ ಪರಿಶೀಲನೆ ನಡೆಸಿ ಸರ್ಕಾರದಿಂದ ಪರಿಹಾರ ಕೊಡುವ ಭರವಸೆ ನೀಡಿದರು.

'ಕಾಯ್ದೆ ಮಾಡಿದ್ದು ಕಾಂಗ್ರೆಸ್'

ಮೈಸೂರು: 'ಸಿದ್ದರಾಮಯ್ಯ ಎಲ್ಲ ವಿಚಾರದಲ್ಲೂ ರಾಜಕೀಯ ಲಾಭ ಪಡೆಯಲು ಪ್ರಯತ್ನಿಸುತ್ತಾರೆ' ಎಂದು ಸಚಿವ ಕೆ.ಸಿ. ನಾರಾಯಣಗೌಡ ಟೀಕಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಹಿಂದೂ ಧಾರ್ಮಿಕ ಕೇಂದ್ರಗಳ ಬಳಿ ಮುಸ್ಲಿಂ ವ್ಯಾಪಾರಿಗಳಿಗೆ ನಾವು ನಿರ್ಬಂಧ ಹೇರಿದ್ದಲ್ಲ. ಕಾಂಗ್ರೆಸ್ ಸರ್ಕಾರ ಹಿಂದೆ ಕಾನೂನು ರೂಪಿಸಿತ್ತು' ಎಂದರು.

'ಎನ್‌ಆರ್‌ಸಿ ಮತ್ತೆ ಜಾರಿಯಾಗಲಿ'

ಗುವಾಹಟಿ: ಅಸ್ಸಾಂನಲ್ಲಿ ರಾಷ್ಟ್ರೀಯ ಪೌರತ್ವ ನೋಂದಣಿ (ಎನ್‌ಆರ್‌ಸಿ) ಪ್ರಕ್ರಿಯೆಯನ್ನು ಪರಿಷ್ಕರಿಸಬೇಕು ಮತ್ತು ಈಗಾಗಲೇ ನಡೆದಿರುವುದನ್ನು ಮರು ಪರಿಶೀಲನೆಗೆ ಒಳಪಡಿಸಬೇಕು ಎಂದು ಅಲ್ಲಿನ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಹೇಳಿದ್ದಾರೆ.

ಭಾನುವಾರ ಇಲ್ಲಿ ಹಮ್ಮಿಕೊಂಡಿದ್ದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಎನ್‌ಆರ್‌ಸಿಯನ್ನು ಮತ್ತೆ ಜಾರಿ ಮಾಡಬೇಕೆಂದು ನಾವು ಆಗ್ರಹಿಸುತ್ತಿದ್ದೇವೆ. ಈ ಕುರಿತು ಆಲ್ ಅಸ್ಸಾಂ ಸ್ಟೂಡೆಂಟ್ಸ್ ಯೂನಿಯನ್‌ನಂತಹ ಸಂಘಟನೆಗಳ ಜೊತೆಗೆ ಮಾತುಕತೆ ನಡೆಸುತ್ತಿದ್ದೇವೆ' ಎಂದಿದ್ದಾರೆ.

ಬಾಂಗ್ಲಾದೇಶದ ಗಡಿಯಲ್ಲಿರುವ ಜಿಲ್ಲೆಗಳ ಶೇ 20ರಷ್ಟು ಮತ್ತು ರಾಜ್ಯದ ಇತರ ಜಿಲ್ಲೆಗಳ ಶೇ 10ರಷ್ಟು ಅರ್ಜಿಗಳನ್ನು ಮರುಪರಿಶೀಲನೆಗೆ ಒಳಪಡಿಸಬೇಕೆಂದು ಕೋರಿ ಅಸ್ಸಾಂನ ಬಿಜೆಪಿ ನೇತೃತ್ವದ ಸರ್ಕಾರವು ಈ ಹಿಂದೆ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು.

ಒಳನೋಟ
ಕಾಸಿದ್ದರಷ್ಟೇ ಕನ್ನಡದ ಕೆಲಸ

ಬೆಂಗಳೂರು: 'ಕಾಸಿದ್ದರಷ್ಟೇ ಕನ್ನಡದ ಕೆಲಸ!' ಶೀರ್ಷಿಕೆಯಡಿ 'ಪ್ರಜಾವಾಣಿ'ಯಲ್ಲಿ ಭಾನುವಾರ (ಮಾರ್ಚ್ 27) ಪ್ರಕಟವಾದ 'ಒಳನೋಟ' ವರದಿಗೆ ರಾಜ್ಯದಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

'ವಿಷಯ ತಜ್ಞರ ಸಮಿತಿ ರಚನೆ ಅಗತ್ಯ'

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನೀಡುವ ವಾರ್ಷಿಕ ಧನಸಹಾಯಕ್ಕೆ ಜಾನಪದ, ಸಂಗೀತ, ನೃತ್ಯ, ನಾಟಕ ಸೇರಿದಂತೆ ವಿವಿಧ ಕಲಾ ಪ್ರಕಾರಗಳಲ್ಲಿ ತಜ್ಞರ ಪ್ರತ್ಯೇಕ ಸಮಿತಿಗಳನ್ನು ರಚಿಸುವುದು ಅಗತ್ಯ. ಸಾಂಸ್ಕೃತಿಕ ನೀತಿಗೆ ಸಂಬಂಧಿಸಿದಂತೆ ನನ್ನ ಅಧ್ಯಕ್ಷತೆಯ ಸಮಿತಿ ಈ ಬಗ್ಗೆ ಶಿಫಾರಸು ಮಾಡಿತ್ತು. ಇದು ಅನುಷ್ಠಾನಗೊಂಡಿದ್ದರೆ ಸಂಘ– ಸಂಸ್ಥೆಗಳ ಆಯ್ಕೆಯಲ್ಲಿ ತಕ್ಕಮಟ್ಟಿಗೆ ಪಾರದರ್ಶಕತೆ ಬರುತ್ತಿತ್ತು. ಕೆಲಸ ಮಾಡುತ್ತಿರುವ ಸಂಘ–ಸಂಸ್ಥೆಗಳನ್ನೂ ಗುರುತಿಸಲು ಸಾಧ್ಯವಾಗುತ್ತಿತ್ತು. ಈಗ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿ ಇರುವುದರಿಂದ ಆಯ್ಕೆಯಲ್ಲಿ ಪಾರದರ್ಶಕತೆ ಮರೆಯಾಗಿದೆ. ಅನುದಾನ ನೀಡುವಿಕೆ ಅಧಿಕಾರಿಗಳ ಮಟ್ಟದಲ್ಲಿ ನಿರ್ಧಾರವಾಗಬಾರದು. ರಾಜ್ಯಮಟ್ಟದಲ್ಲಿ ಮತ್ತು ಪ್ರಾದೇಶಿಕ ಕಚೇರಿಗಳ ಹಂತದಲ್ಲಿ ವಿಭಾಗವಾರು ತಜ್ಞರ ಸಮಿತಿ ರಚನೆ ಮಾಡಬೇಕು.

ರಾಜಕಾರಣಿಗಳು ಶಿಫಾರಸು ಮಾಡಿದರೂ ಅಧಿಕಾರಿಗಳು ಅದನ್ನು ಸಮಿತಿಯ ಪರಿಶೀಲನೆ, ತೀರ್ಮಾನಕ್ಕೆ ಒಳಪಡಿಸಬೇಕು. ವಿಶೇಷ ಘಟಕ ಯೋಜನೆ ವ್ಯಾಪ್ತಿಯಲ್ಲಿ ಅನುದಾನ ನೀಡಿಕೆಗಾಗಿ ಪ್ರತ್ಯೇಕ ತಜ್ಞರ ಸಮಿತಿ ರಚಿಸಬೇಕು. ಅನುದಾನ ಕೇಳುವ ಸಂಸ್ಥೆಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ನೋಂದಣಿ ಮಾಡಿಸಿಕೊಳ್ಳುವುದು ಕಡ್ಡಾಯವಾಗಬೇಕು. ಸಾಂಸ್ಕೃತಿಕ ಸ್ವರೂಪವಿಲ್ಲದ ಹಾಗೂ ಸಾಂಸ್ಕೃತಿಕ ವ್ಯಕ್ತಿಗಳನ್ನು ಒಳಗೊಳ್ಳದ ಸಂಸ್ಥೆಗಳಿಗೆ ಇಲಾಖೆಯು ಅನುದಾನ ಕೊಡಬೇಕಾಗಿಲ್ಲ. ಅನುದಾನ ನೀಡಿದ ಬಳಿಕ ಅದರ ಸದುಪಯೋಗದ ಬಗ್ಗೆ ತಪಾಸಣೆ ಆಗಬೇಕು. ತಜ್ಞರ ಸಮಿತಿ ಅದನ್ನು ಪರಿಶೀಲಿಸಬೇಕು. ಈ ಎಲ್ಲವನ್ನೂ ಶಿಫಾರಸು ಮಾಡಲಾಗಿತ್ತು.

–ಬರಗೂರು ರಾಮಚಂದ್ರಪ್ಪ, ಸಾಹಿತಿ

ಅನುದಾನ ನುಂಗಣ್ಣರ ಪಾಲು

ಕನ್ನಡ ಸಾಹಿತ್ಯ, ಸಂಸ್ಕೃತಿಯು ಭಾಷೆಯನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಆದರೆ ಇವುಗಳ ನೆರವಿಗೆ ಸರ್ಕಾರ ಕೊಡುವ ಅನುದಾನ, ಸ್ವಾರ್ಥರ ಹಾಗೂ ಪ್ರಭಾವಿಗಳ ಪಾಲಾಗುತ್ತಿರುವುದು ವಿಪರ್ಯಾಸ. ಇದರಿಂದ ನಿಸ್ವಾರ್ಥ ಸಾಹಿತಿಗಳು, ಕಲಾವಿದರು ಹಾಗೂ ಕಲಾಪೋಷಕರಿಗೆ ಅನ್ಯಾಯವಾಗುತ್ತಿದೆ. ಕನ್ನಡ ಸಂಸ್ಕೃತಿ ಉಳಿವಿಗಾಗಿ ಉತ್ತಮ ಪರಿಶೀಲನಾ ಸಮಿತಿ ರಚಿಸುವುದು ಅನಿವಾರ್ಯ.

ವಿಜಯ ಎಚ್.ಹೂಗಾರ, ಬಾಗಲಕೋಟೆ

ಜಿಲ್ಲಾ ಮಟ್ಟದಲ್ಲಿ ಅನುದಾನ ಸಿಗಲಿ



ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವಾರ್ಷಿಕ ಅನುದಾನವನ್ನು ಆಯಾ ಜಿಲ್ಲೆಯಲ್ಲಿರುವ ಇಲಾಖೆ ಕಚೇರಿಗಳಿಗೆ ಕಳುಹಿಸಿ, ಅಲ್ಲಿಂದಲೇ ಹಣ ಬಿಡುಗಡೆ ಮಾಡುವ ಕ್ರಮ ಜಾರಿಗೊಳಿಸಿ. ಇದರಿಂದ ಗ್ರಾಮೀಣ ಭಾಗದ ಕಲಾವಿದರಿಗೆ ಹಾಗೂ ಕಲಾ ತಂಡಗಳಿಗೆ ಉಪಕಾರ ಆಗಲಿದೆ. ಗ್ರಾಮೀಣ ಪ್ರದೇಶದವರಿಗೆ ಮೊದಲ ಆದ್ಯತೆ ನೀಡಿ.

ಪಿ.ಪ್ರಭಾಕರ ಕಲ್ಯಾಣಿ, ಉಡುಪಿ

ಸುಳ್ಳು ಮಾಹಿತಿ ನೀಡುವ ಕಲಾವಿದರು

ಚಿತ್ರ ಕಲಾವಿದರಿಗೆ ನೀಡುವ ಅನುದಾನದಲ್ಲೂ ತಾರತಮ್ಯ ಎದ್ದು ಕಾಣುತ್ತಿದೆ. ಸಿಗುವ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಳ್ಳದೆ, ಇಲಾಖೆಗೆ ಸುಳ್ಳು ಮಾಹಿತಿ ನೀಡುವ ಕಲಾವಿದರಿದ್ದಾರೆ. ಇದನ್ನು ತಡೆಯಲು ಇಲಾಖೆ ಸರಿಯಾದ ಮಾನದಂಡಗಳನ್ನು ನಿಗದಿ ಮಾಡಬೇಕು. ಉತ್ತಮ ಕಲಾವಿದರನ್ನು ಆಯ್ಕೆ ಮಾಡಿ ಅನುದಾನ ನೀಡಬೇಕು. ಸಾಂಸ್ಕೃತಿಕ ವಲಯಕ್ಕೆ ಆಗ ಮಾತ್ರ ನ್ಯಾಯ ಸಿಗಲಿದೆ.

ಎನ್.ಮೂರ್ತಿ, ತುಮಕೂರು

ವೈಯಕ್ತಿಕ ಬಳಕೆಗೆ ಕಡಿವಾಣ ಬೇಕು

ಮಂಜೂರಾದ ಹಣವನ್ನು ಯಾವ ರೀತಿ ವೈಯಕ್ತಿಕವಾಗಿ ಬಳಸಿಕೊಳ್ಳುತ್ತಾರೆ ಎಂಬುದರ ಮೇಲೆ ಒಳನೋಟ ವರದಿ ಬೆಳಕು ಚೆಲ್ಲಿದೆ. ಅನುದಾನ ಬಳಕೆಯ ಕುರಿತು ವಿಚಾರಣೆಗೆ ಪರಿಣಾಮಕಾರಿ ಸಮಿತಿ ರಚಿಸಬೇಕು. ಕನ್ನಡಪರ ಕಾರ್ಯಕ್ರಮಗಳನ್ನು ಸೊಗಸಾಗಿ ಆಯೋಜಿಸಬೇಕು.

ಶಶಿಕಾಂತ್ ಬಂಡಪ್ಪ, ಕಲಬುರಗಿ

ಅನುದಾನಕ್ಕೆ ಅಲೆದಾಟ ಬೇಡ

ಸಾಂಸ್ಕೃತಿಕ ಮತ್ತು ಕಲಾ ಚಟುವಟಿಕೆಗಳು ಮರೆಯಾಗದಂತೆ ಸರ್ಕಾರ ಕಾಪಾಡಿಕೊಳ್ಳಬೇಕು. ಈ ಮೂಲಕ ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ಉಳಿಸಿ, ಬೆಳೆಸಬೇಕು. ಈ ಕಾರ್ಯದಲ್ಲಿ ನಿರತರಾಗಿರುವ ಅರ್ಹ ಕಲಾವಿದರಿಗೆ ಅನುದಾನ ಸಿಗುವಂತೆ ಮಾಡುವುದು ಸರ್ಕಾರದ ಕರ್ತವ್ಯ. ಆದರೆ, ಈಗ ಅನುದಾನಕ್ಕಾಗಿ ಅಲೆದಾಟ ತಪ್ಪಿಲ್ಲ.

ಅನಿತಾ, ಬೆಳಗಾವಿ

ಕೆ.ಎಂ.ಎಫ್ **ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ**

ಕಹಾಮ ಸಂಕೀರ್ಣ, ಡಾ.ಎಂ.ಹೆಚ್ ಮರೀಗೌಡ ರಸ್ತೆ, ಬೆಂಗಳೂರು 560 029
ಫೋನ್ 25536625, 25536789 ಫ್ಯಾಕ್ಸ್: 080–25536105 ಇಮೇಲ್: kmfengg@gmail.com/engg@kmf.coop

ಸಂಖ್ಯೆ: ಕಹಾಮ/ಅಭಿ/ICP-Stickline machines/01350/2021–22 ದಿನಾಂಕ: 28.03.2022

ಇ–ಪ್ರೊಕ್ಯೂರ್‌ಮೆಂಟ್ ಅಡಿಯಲ್ಲಿ ಟೆಂಡರ್ ಪ್ರಕಟಣೆ (2ನೇ ಕರೆ) (ದ್ವಿಲಕೋಟೆ ಪದ್ಧತಿಯಲ್ಲಿ)

ಕರ್ನಾಟಕ ಹಾಲು ಮಹಾ ಮಂಡಳವು ಈ ಕೆಳಗಿನ ಕೋಷ್ಟಕದಲ್ಲಿ ನೀಡಿರುವ ಕೆಲಸಕ್ಕಾಗಿ ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಮರು ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತರು ವೆಬ್ ಸೈಟ್ www.eproc.karnataka.gov.in ಮೂಲಕ ಟೆಂಡರನ್ನು ಸಲ್ಲಿಸಬಹುದಾಗಿದೆ. [Helpdesk No-080 23010900/23010901 E-mail :hphelpdesk.blr@intarvo.com]

ಕ್ರಮ ಸಂಖ್ಯೆ	ಕಾಮಗಾರಿ ವಿವರ	ಸಂಖ್ಯೆ	ಇ.ಎಂ.ಡಿ. ರೂ.ಪೈ.	ಗುತ್ತಿಗೆ ಅವಧಿ
1	ಐಸ್ ಕ್ರೀಂ ಪ್ಲಾಂಟ್, ಮದರ್ ಡೇರಿ ಬೆಂಗಳೂರು ಘಟಕದಲ್ಲಿ Fully automated stickline machine (6000 S.P.H) ಸರಬರಾಜು, ಅಳವಡಿಕೆ ಮತ್ತು ಚಾಲನೆಗೊಳಿಸುವ ಕೆಲಸಗಳು.	1 ಜಾಬ್	3,00,000/–	06 ತಿಂಗಳು
1	ಐಸ್ ಕ್ರೀಂ ಪ್ಲಾಂಟ್, ಬಳ್ಳಾರಿ ಘಟಕದಲ್ಲಿ Fully automated stickline machine (6000 S.P.H) ಸರಬರಾಜು, ಅಳವಡಿಕೆ ಮತ್ತು ಚಾಲನೆಗೊಳಿಸುವ ಕೆಲಸಗಳು.	1 ಜಾಬ್	3,00,000/–	06 ತಿಂಗಳು

1. ಟೆಂಡರ್ ಷೆಡ್ಯೂಲ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ:28.03.2022 ರಿಂದ 27.04.2022 ರ ಸಾಯಂಕಾಲ 4:00 ಗಂಟೆಯವರೆಗೆ.
2. ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ 27.04.2022 ರ ಸಾಯಂಕಾಲ 4:00 ಗಂಟೆಯವರೆಗೆ.
3. ಟೆಂಡರುಗಳನ್ನು (Cover 1) ತೆರೆಯುವ ದಿನಾಂಕ 29.04.2022 ರಂದು ಬೆಳಗ್ಗೆ 11.30 ಗಂಟೆಗೆ.

ಇನ್ನಿತರೆ ನಿಬಂಧನೆಗಳು, ಷರತ್ತುಗಳು ಹಾಗೂ ಟೆಂಡರ್‌ನ ತಿದ್ದುಪಡಿ / ಬದಲಾವಣೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್ ಸೈಟ್ http://epoc.karnataka.gov.in ನಲ್ಲಿ ಪಡೆಯಬಹುದಾಗಿದೆ.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/–
ನಿರ್ದೇಶಕರು (ಅಭಿಯಂತರ–2)

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಅರ್ಹ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ / ಇಎಂಡಿ (ರೂ.)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ
	ಮುಖ್ಯ ಅಭಿಯಂತರರ ಕಚೇರಿ (ಪಶ್ಚಿಮ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560009				
1	ಕೇಂದ್ರ	ಬೆಂಜಮಂ/ಕಾನಿಅಕೇಂದ್ರ/ಪಿಬಿ/3534/2021–22, ದಿನಾಂಕ: 23.03.2022	16,29,667/– / 40,750/–	11.04.2022ರ ಸಂಜೆ 5:00 ಗಂಟೆಯವರೆಗೆ	12.04.2022ರ ಸಂಜೆ 5:01 ಗಂಟೆಯ ನಂತರ
	ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಕೇಂದ್ರ)				
2	ನೈರುತ್ಯ	ಬೆಂಜಮಂ/ಕಾನಿಅ(ನೈರುತ್ಯ)/ಪಿಬಿ/3602/2021–22, ದಿನಾಂಕ: 22.03.2022	25,58,115/– / 51,200/–	11.04.2022ರ ಸಂಜೆ 4:00 ಗಂಟೆಯವರೆಗೆ	13.04.2022ರ ಮಧ್ಯಾಹ್ನ 3:00 ಗಂಟೆಯ ನಂತರ
3			43,15,694/– / 86,400/–		
	ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ನೈರುತ್ಯ)				
	ಮುಖ್ಯ ಅಭಿಯಂತರರ ಕಚೇರಿ (ಪೂರ್ವ), 7ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560009				
4	ಆಗ್ನೇಯ–2	ಬೆಂಜಮಂ/ಕಾನಿಅ(ಆಗ್ನೇಯ–2)/ಪಿಬಿ/4033/2021–22, ದಿನಾಂಕ: 15.03.2022	18,12,350/– / 45,310/–	11.04.2022ರ ಸಂಜೆ 4:00 ಗಂಟೆಯವರೆಗೆ	13.04.2022ರ ಸಂಜೆ 4:30 ಗಂಟೆಯ ನಂತರ
5		ಬೆಂಜಮಂ/ಕಾನಿಅ(ಆಗ್ನೇಯ–2)/ಪಿಬಿ/4039/2021–22, ದಿನಾಂಕ: 15.03.2022	8,55,304/– / 21,400/–		
6		ಬೆಂಜಮಂ/ಕಾನಿಅ(ಆಗ್ನೇಯ–2)/ಪಿಬಿ/4037/2021–22, ದಿನಾಂಕ: 15.03.2022	39,33,382/– / 78,670/–		
	ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಆಗ್ನೇಯ–2)				
7	ಪೂರ್ವ–1	ಬೆಂಜಮಂ/ಕಾನಿಅ(ಪೂ)–1/ಪಿಬಿ/2505/2021–22, ದಿನಾಂಕ: 21.03.2022	34,40,138.43 / 68,810/–	11.04.2022ರ ಸಂಜೆ 4:00 ಗಂಟೆಯವರೆಗೆ	13.04.2022ರ ಸಂಜೆ 5:00 ಗಂಟೆಯ ನಂತರ
8		ಬೆಂಜಮಂ/ಕಾನಿಅ(ಪೂ)–1/ಪಿಬಿ/2507/2021–22, ದಿನಾಂಕ: 21.03.2022	70,95,715.30 / 1,41,915/–		
9			54,16,347.10 / 1,08,330/–		
10			54,16,347.10 / 1,08,330/–		
	ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಪೂರ್ವ–1)				
	ಮುಖ್ಯ ಅಭಿಯಂತರರ ಕಚೇರಿ (ತ್ಯಾ.ನೀ.ನಿ.), 5ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560009				
11	ಅಮುಅ (ತ್ಯಾ.ನೀ.ನಿ–3) (ಎಸ್‌ಟಿಪಿ–ಕೆ–ವ್ಯಾಲಿ)	ಬೆಂಜಮಂ/ಅಮುಅ(ತ್ಯಾ.ನೀ.ನಿ.)–3/ಪಿಬಿ/703/2021–22, ದಿನಾಂಕ: 21.03.2022	62,54,000/– / 1,56,350/–	04.04.2022ರ ಸಂಜೆ 4:00 ಗಂಟೆಯವರೆಗೆ	05.04.2022ರ ಸಂಜೆ 4:05 ಗಂಟೆಗೆ
	ಸಹಿ/– ಅಮುಅ (ತ್ಯಾ.ನೀ.ನಿ–3) (ಎಸ್‌ಟಿಪಿ–ಕೆ–ವ್ಯಾಲಿ)				
12	ತ್ಯಾ.ನೀ.ನಿ.– (ಕೆ&ಟಿ ವ್ಯಾಲಿ)	ಬೆಂಜಮಂ/ಇಡಬ್ಲ್ಯೂಕೆಟಿ/ಪಿಬಿ/2412/2021–22, ದಿನಾಂಕ: 23.03.2022	87.68 ಲಕ್ಷಗಳು / 1.76 ಲಕ್ಷಗಳು	04.04.2022ರ ಸಂಜೆ 4:00 ಗಂಟೆಯವರೆಗೆ	06.04.2022ರ ಸಂಜೆ 4:00 ಗಂಟೆಗೆ
	ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ತ್ಯಾ.ನೀ.ನಿ.–ಕೆ&ಟಿ ವ್ಯಾಲಿ)				
	ಮುಖ್ಯ ಅಭಿಯಂತರರ ಕಚೇರಿ (ಕಾವೇರಿ), 5ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560009.				
13	ಕಾವೇರಿ ಮುಖ್ಯ ಕಾಮಗಾರಿಗಳ ವಿಭಾಗ	ಬೆಂಜಮಂ/ಇಸಿಹೆಚ್‌ಟಿಇ/ಎಸ್‌ಟಿಆರ್/7/2021/5914/2021–22, ದಿನಾಂಕ: 22.03.2022	88,73,740/– / 1,77,475/–	12.04.2022ರ ಮಧ್ಯಾಹ್ನ 3:00 ಗಂಟೆವರೆಗೆ	13.04.2022ರ ಸಂಜೆ 4:00 ಗಂಟೆ ನಂತರ
	ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಕಾಮುಕಾವಿ)				
	ಮುಖ್ಯ ಅಭಿಯಂತರರ ಕಚೇರಿ, (ವಿನ್ಯಾಸ) 9ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560009				
14	ಕೇಂದ್ರ ಉಗ್ರಾಣ	ಬೆಂಜಮಂ/ಕಾನಿಅ (ಕೇಂದ್ರ ಉಗ್ರಾಣ)/ಸಕಾನಿಅ/ಸಅ/ಸಉಅ/ಉಗ್ರಾಣ/902/2021–22, ದಿನಾಂಕ: 25.03.2022	95,67,770/– / 1,91,355/–	08.04.2022ರ ಸಂಜೆ 4:00 ಗಂಟೆಯೊಳಗೆ	11.04.2022ರ ಮಧ್ಯಾಹ್ನ 12:00 ಗಂಟೆಗೆ
	ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಕೇಂದ್ರ ಉಗ್ರಾಣ)				

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತ ಮಾಹಿತಿಯನ್ನು **https://eproc.karnataka.gov.in** ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.
DIPR/CP/BCPL/3929/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ANAB ACCREDITED ISO 9001:2015 NVT-QC CERTIFICATE NO. 2790095

ನಂ. 5/6, 5ನೇ ಮಹಡಿ, ಜಲಭವನ, ಬನ್ನೇರುಘಟ್ಟ ಮುಖ್ಯ ರಸ್ತೆ, ಬೆಂಗಳೂರು – 560 029, ದೂ: 080–26539004/41106504
ಇ–ಮೇಲ್: cekwbbng@gmail.com ವೆಬ್‌ಸೈಟ್: https://eproc.karnataka.gov.in

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಈ ಕೆಳಕಂಡ ಕಾಮಗಾರಿಗೆ ಅರ್ಹ ಏಜೆನ್ಸಿ/ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಇಡುಗಂಟು ಟೆಂಡರ್‌ಗಳನ್ನು (ದ್ವಿ ಲಕೋಟೆ ಪದ್ಧತಿಯಲ್ಲಿ) ಆಹ್ವಾನಿಸಲಾಗಿದೆ.

ಸಂಖ್ಯೆ: **KWB/TEC/CE(B)/CLK DC Works/2496/2021-22 Date: 25-03-2022**

ಕಾಮಗಾರಿಯ ಹೆಸರು ಮತ್ತು ವಿವರ: ಚಳ್ಳಕೆರೆ ನಗರಸಭೆ ಠೇವಣಿ ಕೊಡುಗೆಯಡಿ ಕೆ.ಪಿ.ಟಿ.ಸಿ.ಎಲ್ ಸಬ್‌ಸ್ಟೇಶನ್ ಹಿಂಭಾಗ 5.00 ಲಕ್ಷ ಲೀ ಸಾಮರ್ಥ್ಯದ ಮೇಲ್ಮಟ್ಟ ಆರ್.ಸಿ.ಸಿ. ಸಾಫ್ಟ್ ಟೈಪ್ 12 Mts ಸ್ಟೇಜಿಂಗ್ ಜಲಸಂಗ್ರಹಾಗಾರ ನಿರ್ಮಿಸುವ ಹಾಗೂ ಚಳ್ಳಕೆರೆ ನಗರದ ಪ್ರವಾಸಿ ಮಂದಿರದ ಮುಂಭಾಗದಿಂದ ಉದ್ದೇಶಿತ ಜಲಸಂಗ್ರಹಾಗಾರದ ಸ್ಥಳದವರೆಗೆ 250ಮಿ.ಮೀ. ವ್ಯಾಸದ ಡಿ.ಐ. ಕೆ–7 ಕೊಳವೆಮಾರ್ಗ ಅಳವಡಿಸಿ, ಪರೀಕ್ಷಿಸುವುದು ಹಾಗೂ ಚಾಲನೆಗೊಳಿಸುವುದು.

ಕೆಲಸದ ಇಂಡೆಂಟ್ ಸಂಖ್ಯೆ: No:KUWSDB/2021-22/WS/WORK_INDENT3126

ಟೆಂಡರಿಗಿಟ್ಟ ಅಂದಾಜು ಮೊತ್ತ ಜಿ.ಎಸ್.ಟಿ ಹೊರತುಪಡಿಸಿ(ರೂ.ಲಕ್ಷಗಳಲ್ಲಿ) : 161.22
ಭದ್ರತಾ ಠೇವಣಿ ಹಣ (ರೂ.ಲಕ್ಷಗಳಲ್ಲಿ): 2.42
ಟೆಂಡರ್ ಪ್ರಕ್ರಿಯ ಶುಲ್ಕ (ರೂ.): ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪ್ರಕಾರ
ಪೂರ್ಣಗೊಳಿಸಲು ಕಾಲಾವಧಿ ಮಳೆಗಾಲ ಸೇರಿ (ತಿಂಗಳು) : 9 ತಿಂಗಳು.

ಟೆಂಡರ್ ಕಾರ್ಯ ಸೂಚಿ:–

1) ದಾಖಲೆಗಳ ಲಭ್ಯತೆ: 28–03–2022 ರಿಂದ. 2) ವಿಚಾರಣೆ / ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ ಹಾಗೂ ಸಮಯ: 06–04–2022 ರಂದು 11.00 ಗಂಟೆಯವರೆಗೆ. 3) ಬಿಡ್ ಪೂರ್ವ ಸಭೆಯ ದಿನಾಂಕ: 06–04–2022 ರಂದು 11.30 ಗಂಟೆಗೆ. 4) ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್‌ಗಳನ್ನು ಸಲ್ಲಿಸಲು/ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಹಾಗೂ ಸಮಯ: 12–04–2022 ರಂದು 17.30 ಗಂಟೆಯವರೆಗೆ. 5) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ: 16–04–2022 ರಂದು 11.00 ಗಂಟೆಯ ನಂತರ. 6) ಹಣಕಾಸು ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ: 19–04–2022 ರಂದು 11.00 ಗಂಟೆಯ ನಂತರ.

ಹೆಚ್ಚಿನ ವಿವರಗಳನ್ನು ಕೆಳಸಹಿದಾರರಿಂದ ಅಥವಾ ವೆಬ್‌ಸೈಟ್: (https://eproc.karnataka.gov.in) ನಲ್ಲಿ ಅಥವಾ ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ : 080–22371090 / 22373788, ಇ–ಮೇಲ್ ಸಹಾಯ: hphelpdesk.blr@intarvo.com ಸಂಪರ್ಕಿಸಬಹುದು.

ಸಹಿ/– ಮುಖ್ಯ ಅಭಿಯಂತರರು,
ಕನನಿಸ ಮತ್ತು ಒಚ ಮಂಡಳಿ, ಬೆಂಗಳೂರು

ವಾ.ಸಾ.ಸಂ.ಇ/ವಾಪ್ರ/3937/ಆಕಾರ್/21–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ಸಾಮಾಜಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ • ಕೈವಾರ ತಾತಯ್ಯ ಜಯಂತಿ ಆಚರಣೆ

ಬಲಿಜ ಸಮಾಜ ಬಲಿಷ್ಠಗೊಳಿಸಲು ಕ್ರಮ

ಪ್ರಜಾವಾಣಿ ವಾರ್ತೆ

ಬಸವರಾಜ ಬೊಮ್ಮಾಯಿ, ವಿಶ್ವೇಶ್ವರ ಹೆಗಡೆ ಕಾಗೇರಿ, ಬಿಜೆಪಿ ಮುಖಂಡ ಬಿ.ಎಸ್. ಯಡಿಯೂರಪ್ಪ, ಪಿ.ಸಿ. ಮೋಹನ್ ಹಾಗೂ ಸುನೀಲ್ ಕುಮಾರ್ ಅವರು ಕೈವಾರ ತಾತಯ್ಯ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.

ಬೆಂಗಳೂರು: 'ಬಲಿಜ ಸಮಾಜವನ್ನು ಬಲಿಷ್ಠ ಸಮಾಜವನ್ನಾಗಿ ರೂಪಿಸುತ್ತೇವೆ. ಈ ಸಮಾಜದ ಗ್ರಾಮೀಣ ಪ್ರದೇಶದ ಮಕ್ಕಳಿಗೆ ಶಿಕ್ಷಣ ಮತ್ತು ಉದ್ಯೋಗ ಒದಗಿಸಲು ಕ್ರಮ ವಹಿಸಲಿದ್ದೇವೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಗರದಲ್ಲಿ ಭಾನುವಾರ ಹಮ್ಮಿಕೊಂಡ ಯೋಗಿನಾರೇಯಣ ಯತೀಂದ್ರ ಕೈವಾರ ತಾತಯ್ಯ ಜಯಂತಿ ಉದ್ಘಾಟಿಸಿ ಅವರು ಮಾತನಾಡಿದರು. 'ಹಿಂದುಳಿದ ವರ್ಗಗಳ ಶ್ರೇಯೋಭಿವೃದ್ಧಿ ನಮ್ಮ ಬದ್ಧತೆ. ಈಗಾಗಲೇ ಇರುವ ಕಾರ್ಯಕ್ರಮಗಳಿಗೆ ಇನ್ನಷ್ಟು ಶಕ್ತಿ ತುಂಬುವ ಕೆಲಸ ಮಾಡುತ್ತೇವೆ' ಎಂದರು.

'ಸಮಾಜದಲ್ಲಿ ಸಾಮರಸ್ಯ ಮತ್ತು ಶಾಂತಿ ಇರಬೇಕು. ಹೀಗಾಗಿ, ವೈಚಾರಿಕತೆಯ ಪ್ರಚಾರವೂ ಸರ್ಕಾರದ ಕರ್ತವ್ಯ. ಕೈವಾರ ತಾತಯ್ಯ ಅವರು ನಾಡಿಗೆ ಸ್ಫೂರ್ತಿ. ಅವರ ತತ್ವ, ಆದರ್ಶದ ಮೇಲೆ ನಮ್ಮ ಬದುಕನ್ನು ರೂಪಿಸಿಕೊಳ್ಳಬೇಕು. ಅವರ ತತ್ವಪದ ಇಂದಿಗೂ ಪ್ರಸ್ತುತ. ಸರ್ಕಾರ ಕೈವಾರ ತಾತಯ್ಯ ಜಯಂತಿ ಆಚರಣೆ ಜಾರಿಗೆ ತರುವುದರ ಹಿಂದೆ ಸಂಸದ ಪಿ.ಸಿ ಮೋಹನ್ ಅವರ ಶ್ರಮವೂ ಇದೆ' ಎಂದರು.

ವಿಧಾನ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, 'ಕೈವಾರಕ್ಕೆ ಹೋದರೆ ಪ್ರೇರಣೆ, ಆಧ್ಯಾತ್ಮಿಕ ಭಾವನೆ ಮೂಡುತ್ತದೆ. ನಮ್ಮ ಸನಾತನ ಹಿಂದೂ ಧರ್ಮದ ಪ್ರತಿನಿಧಿಗಳು ಸೃಷ್ಟಿಯ ಅರಿವಿಗಾಗಿ ಜೀವನ ಸಮರ್ಪಿಸಿಕೊಂಡರು. ಭಕ್ತಿ ಮಾರ್ಗದಿಂದ ಸೃಷ್ಟಿಯ ಸತ್ಯ ತಿಳಿಯಲು ಸಾಧ್ಯ' ಎಂದರು.

ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನೀಲ್ ಕುಮಾರ್, 'ಕೈವಾರ ತಾತಯ್ಯ ಅವರು ತಮ್ಮ ಕೀರ್ತನೆಗಳ ಮೂಲಕ ಸಮಾಜದ ಅಂಕು–ಡೊಂಕುಗಳನ್ನು ತಿದ್ದುವ ಪ್ರಯತ್ನ ಮಾಡಿದರು. ಅವರ ಆದರ್ಶಗಳನ್ನು ಜನರಿಗೆ ತಲುಪಿಸಬೇಕು. ಮುಂದಿನ ವರ್ಷ ಇನ್ನಷ್ಟು ವಿಜೃಂಭಣೆಯಿಂದ ಅವರ ಜಯಂತಿಯನ್ನು ಆಚರಿಸಲಾಗುವುದು' ಎಂದು ಹೇಳಿದರು.

₹ 50 ಕೋಟಿ ಮೀಸಲಿಡಿ: ಸಂಸದ ಪಿ.ಸಿ. ಮೋಹನ್, 'ಸರ್ಕಾರವು ಬಲಿಜ ಭವನ ನಿರ್ಮಾಣಕ್ಕೆ ₹ 50 ಕೋಟಿ ಮೀಸಲಿಡಬೇಕು. ಕೈವಾರದಲ್ಲಿ 10 ಎಕರೆ ಜಾಗದಲ್ಲಿ ತಾತಯ್ಯ ಅವರ ಅಧ್ಯಯನಪೀಠ ಸ್ಥಾಪಿಸಬೇಕು' ಎಂದು ಆಗ್ರಹಿಸಿದರು.

'ಕೋಲಾರ ಮತ್ತು ಚಿಕ್ಕಬ್ಳಾಪುರದ ಜನರಿಗೆ ಪರಿಚಿತರಾಗಿದ್ದ ಕಾಲಜ್ಞಾನಿ ತಾತಯ್ಯ ಅವರು ಜಯಂತಿ ಆಚರಣೆಯಿಂದ ಇಡೀ ರಾಜ್ಯಕ್ಕೆ ಪರಿಚಿತರಾದರು. ಬಲಿಜ ಜನಾಂಗದ ಸ್ಥಿತಿಗತಿಗಳನ್ನು ಬಿ.ಎಸ್.ಯಡಿಯೂರಪ್ಪ ಅವರು ಪರಿಶೀಲಿಸಿ, ಶಿಕ್ಷಣಕ್ಕೆ ಸೀಮಿತವಾಗಿ ಪ್ರವರ್ಗ 2 ಎ ಅಡಿ ಮೀಸಲಾತಿ ಕಲ್ಪಿಸಿದ್ದರು ಅದರಿಂದ ಲಕ್ಷಾಂತರ ವಿದ್ಯಾರ್ಥಿಗಳಿಗೆ ಅನುಕೂಲ ಆಗಿದೆ. 2 ಎ ಮೀಸಲಾತಿ ಪೂರ್ಣ ಪ್ರಮಾಣದಲ್ಲಿ ಲಭ್ಯವಾಗಬೇಕು' ಎಂದರು.

ಕಾಂಗ್ರೆಸ್ ಮುಖಂಡ ಸಿ.ಎಸ್. ದ್ವಾರಕನಾಥ್, 'ತಾತಯ್ಯ ಅವರು ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ಸಾಹಿತ್ಯ ರಚಿಸಿದ್ದಾರೆ. ಜನರ ಕಣ್ಣು ತೆರೆಸುವಂತಹ ಪದ್ಯಗಳನ್ನು ಬರೆದಿದ್ದಾರೆ. ಶರಣ, ದಾಸ ಮತ್ತು ಸೂಫಿ ಪರಂಪರೆಗಳಿಗೆ ಕೊಂಡಿಯಾಗಿ ಕೆಲಸ ಮಾಡಿದ್ದಾರೆ. ಅವರ ಕುರಿತು ಎಲ್ಲರೂ ತಿಳಿದುಕೊಳ್ಳಬೇಕು' ಎಂದು ಹೇಳಿದರು.

ತವರು ಜಿಲ್ಲೆಯಲ್ಲಿ ಅದ್ದೂರಿ ಆಚರಣೆ

ಚಿಕ್ಕಬಳ್ಳಾಪುರ: ಯೋಗಿ ನಾರೇಯಣ ಯತೀಂದ್ರರ (ಕೈವಾರ ತಾತಯ್ಯ) ಜಯಂತಿ ನಗರದಲ್ಲಿ ಭಾನುವಾರ ಬಲಿಜ ಸಮುದಾಯದ ಸಹಕಾರದಲ್ಲಿ ಅದ್ದೂರಿಯಾಗಿ ನಡೆಯಿತು.

ರಾಜ್ಯ ಸರ್ಕಾರದ ವತಿಯಿಂದ ಆಚರಿಸಲಾಗುತ್ತಿರುವ ತಾತಯ್ಯನವರ ಮೊದಲ ಜಯಂತಿ ಇದು. ಬಲಿಜ ಸಮಾಜಕ್ಕೆ ಚಿಕ್ಕಬಳ್ಳಾಪುರ ಪ್ರಧಾನ ನೆಲೆ ಎನಿಸಿದೆ. ಜಿಲ್ಲೆಯಲ್ಲಿ ಈ ಸಮುದಾಯ ಗಣನೀಯವಾಗಿದೆ. ಯೋಗಿ ನಾರೇಯಣರ ತಪೋಕ್ಷೇತ್ರ ಕೈವಾರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನಲ್ಲಿದೆ. ಹೀಗಾಗಿ, ಜಯಂತಿ ಕಾರ್ಯಕ್ರಮವನ್ನು ಜಿಲ್ಲೆಯಲ್ಲಿ ವಿಜೃಂಭಣೆಯಿಂದ ಆಚರಿಸಲಾಯಿತು.

ಕೋಲಾರ, ತುಮಕೂರು, ನೆರೆಯ ಆಂಧ್ರಪ್ರದೇಶದಿಂದಲೂ ಕೈವಾರ ತಾತಯ್ಯ ಅವರ ಭಕ್ತರು ಜಯಂತಿಯಲ್ಲಿ ಭಾಗಿಯಾಗಿದ್ದರು. ವಿವಿಧ ಹಳ್ಳಿಗಳಿಂದ ಯತೀಂದ್ರರ ಭಾವಚಿತ್ರ ಒಳಗೊಂಡ ಪಲ್ಲಕ್ಕಿಗಳು ನಗರದ ಕೈವಾರ ತಾತಯ್ಯ ದೇಗುಲದ ಬಳಿ ಬಂದವು.

ಅಪಾರ ಸಂಖ್ಯೆಯ ಭಕ್ತರು, ಪಲ್ಲಕ್ಕಿಗಳು ಮತ್ತು ಕಲಾತಂಡಗಳೊಂದಿಗೆ ಮೆರವಣಿಗೆಯಲ್ಲಿ ಭಾಗಿಯಾಗಿದ್ದರು. ಭಜನಾ ತಂಡಗಳು ಕೈವಾರ ತಾತಯ್ಯ ಅವರ ತತ್ವಪದ, ಕೀರ್ತನೆ ಹಾಡಿದವು.

ಬಲಿಜ ಸಮುದಾಯವನ್ನು '2ಎ'ಗೆ ಸೇರಿಸಬೇಕು. ಚಿಕ್ಕಬಳ್ಳಾಪುರದಲ್ಲಿ ಬಲಿಜ ಭವನ ನಿರ್ಮಿಸಲು ಎರಡು ಎಕರೆ ಜಮೀನು ನೀಡಬೇಕು. ವಿದ್ಯಾರ್ಥಿ ನಿಲಯ ನಿರ್ಮಾಣಕ್ಕೆ ಸಹಕರಿಸಬೇಕು. ಶಿಡ್ಲಘಟ್ಟ ತಾಲ್ಲೂಕು ಜಂಗಮ ಕೋಟೆಯಲ್ಲಿ ನಿರ್ಮಾಣ ಆಗುತ್ತಿರುವ ಬೆಂಗಳೂರು ಉತ್ತರ ವಿ.ವಿ ಕ್ಯಾಂಪಸ್‌ನಲ್ಲಿ ಕೈವಾರ ತಾತಯ್ಯ ಅಧ್ಯಯನ ಪೀಠ ಸ್ಥಾಪಿಸಬೇಕು ಸರ್ಕಾರಕ್ಕೆ ಒತ್ತಾಯಿಸುವ ಮನವಿಯನ್ನು ಸಚಿವರಾದ ಎಂ.ಟಿ.ಬಿ.ನಾಗರಾಜು, ಡಾ.ಕೆ.ಸುಧಾಕರ್ ಅವರಿಗೆ ಸಲ್ಲಿಸಲಾಯಿತು.

'ಸರ್ಕಾರದಿಂದ ಜಯಂತಿ ಆಚರಿಸುತ್ತಿರುವುದು ಸಮುದಾಯಕ್ಕೆ ಸಂತೋಷವಾಗಿದೆ' ಕೈವಾರ ಯೋಗಿ ನಾರೇಯಣ ಮಠದ ಧರ್ಮಾಧಿಕಾರಿ ಎಂ.ಆರ್.ಜಯರಾಂ ಅವರು ಪ್ರತಿಕ್ರಿಯಿಸಿದರು.

6 ಕಡೆಗಳಲ್ಲಿ ಚಿತ್ರಕಲಾ ಗ್ಯಾಲರಿ

'ಚಿತ್ರಕಲಾ ಪರಿಷತ್‌ಗೆ ಡೀಮ್ಡ್ ವಿ.ವಿ. ಸ್ಥಾನಮಾನ ಕಲ್ಪಿಸಲು ಕ್ರಮ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕದ ಚಿತ್ರಕಲೆಗೆ ತವರೂರು ಚಿತ್ರಕಲಾ ಪರಿಷತ್ತು. ಇದು ಎಲ್ಲೆಡೆ ವ್ಯಾಪಿಸಬೇಕೆಂಬ ಉದ್ದೇಶದಿಂದ ಆರು ಸ್ಥಳಗಳಲ್ಲಿ ಪ್ರಾದೇಶಿಕ ಚಿತ್ರಕಲಾ ಗ್ಯಾಲರಿ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಕರ್ನಾಟಕ ಚಿತ್ರಕಲಾ ಪರಿಷತ್ತು ವತಿಯಿಂದ ಭಾನುವಾರ ಆಯೋಜಿಸಿದ್ದ ಚಿತ್ರಸಂತೆಯ 19ನೇ ಆವೃತ್ತಿಗೆ ಭಾರತಾಂಬೆ ಕಲಾಕೃತಿಯ ಪಕ್ಕ ಹಸ್ತಾಕ್ಷರ ಹಾಕುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

'ಸ್ವಾಯತ್ತ ಸಂಸ್ಥೆಯಾಗಿರುವ ಚಿತ್ರಕಲಾ ಪರಿಷತ್ತಿಗೆ ಡೀಮ್ಡ್ ವಿಶ್ವವಿದ್ಯಾಲಯದ ಸ್ಥಾನಮಾನ ನೀಡಬೇಕೆಂಬ ಬೇಡಿಕೆಯಿದೆ. ಮುಂಬರುವ ವಿಧಾನ ಮಂಡಲ ಅಧಿವೇಶನದಲ್ಲಿ ಡೀಮ್ಡ್ ವಿಶ್ವವಿದ್ಯಾಲಯವೆಂದು ಘೋಷಿಸಲು ಕ್ರಮ ಕೈಗೊಳ್ಳಲಾಗುವುದು' ಎಂದರು.

'ಚಿತ್ರಕಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಹಲವಾರು ಸಂಸ್ಥೆಗಳನ್ನು ತಂದು ಚಿತ್ರಕಲೆಗೆ ಹೊಸ ಆಯಾಮವನ್ನು ನೀಡುವ ನಿಟ್ಟಿನಲ್ಲಿ ಕ್ರಮವಹಿಸಲಾಗುವುದು' ಎಂದು ಭರವಸೆ ನೀಡಿದರು.

'ಚಿತ್ರಸಂತೆ ಒಂದು ಅಭೂತಪೂರ್ವ ಕಲ್ಪನೆ. ಕಲಾವಿದರು ಮತ್ತು ಕಲಾ ಪೋಷಕರ ಸಂಗಮವೇ ಚಿತ್ರ ಸಂತೆ. ಹಲವಾರು ಉದಯೋನ್ಮುಖ ಕಲಾವಿದರಿದ್ದಾರೆ. ಕಲೆ ಎನ್ನುವುದು ಪ್ರತಿ ಮನುಷ್ಯನ ಒಳಗಿರುವ ಪ್ರತಿಭೆ. ವಿಶ್ವಕರ್ಮ ಜನಾಂಗದವರು ಪಂಚಕಲೆಯಲ್ಲಿ ಅದ್ಭುತ ಸಾಧನೆ ಮಾಡಿದ್ದಾರೆ' ಎಂದರು.

ಐಸ್‌ಕ್ರೀಮ್ ಖರೀದಿಸಿದ ಸಿ.ಎಂ

ಚಿತ್ರಸಂತೆಗೆ ಚಾಲನೆ ನೀಡಿದ ಬಳಿಕ ಒಂದು ಸುತ್ತು ಹಾಕಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, ಐಸ್ ಕ್ರೀಮ್ ಮಾರುತ್ತಿರುವುದನ್ನು ಗಮನಿಸಿದರು. ಬಿಸಿಲಿನ ತಾಪವೂ ಹೆಚ್ಚಾಗಿತ್ತು. ಬಾಲ್ಯದಿಂದಲೂ ಇಷ್ಟವಾದ ಜಾಯ್ ಮ್ಯಾಂಗೋ ಕ್ರೀಮ್ ಐಸ್ ಕ್ಯಾಂಡಿಯನ್ನು ತಾವೇ ಹಣ ಪಾವತಿಸಿ ಖರೀದಿಸಿ, ಸವಿದರು.

ಸಿದ್ದರಾಮಯ್ಯ ಅವರಿಗೆ ಸಚಿವ ಈಶ್ವರಪ್ಪ ಕಿವಿಮಾತು

ಮುಸ್ಲಿಮರಿಗೆ ಬುದ್ಧಿ ಹೇಳಿ; ಓಲೈಕೆ ಬಿಡಿ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: 'ಸ್ವಾಮೀಜಿಗಳು ತಲೆಯ ಮೇಲೆ ಬಟ್ಟೆ ಹಾಕುತ್ತಾರೆ ಎಂಬ ತಮ್ಮ ಹೇಳಿಕೆಯನ್ನು ರಾಜ್ಯದ ಯಾವುದೇ ಹಿರಿಯ ಮಠಾಧೀಶರು ವಿರೋಧಿಸಿಲ್ಲ ಎನ್ನುವ ಮೂಲಕ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಹಿಂದೂ ಸಮಾಜ ಒಡೆಯುತ್ತಿದ್ದಾರೆ' ಎಂದು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಭಾನುವಾರ ಆರೋಪಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದಅವರು, 'ವೀರಶೈವರು, ಲಿಂಗಾಯತರನ್ನು ಒಡೆದು ಈಗಾಗಲೇ ಶಿಕ್ಷೆ ಅನುಭವಿಸಿರುವ ಅವರು, ಈಗ ಸಾಧು–ಸಂತರನ್ನು ಹಿರಿಯರು, ಕಿರಿಯರು ಎಂದು ಒಡೆಯುವ ಕೆಲಸ ಮಾಡುತ್ತಿದ್ದಾರೆ. ಅದರ ಫಲ ಉಣ್ಣಲಿದ್ದಾರೆ' ಎಂದರು.

> **ತುಘಲಕ್ ಬುದ್ಧಿವಂತನಾಗಿದ್ದರೂ ಮೂರ್ಖನಾಗಿದ್ದ. ಅಂತೆಯೇ ಸಿದ್ಧರಾಮಯ್ಯ ಅವರು ಆಗಾಗ್ಗೆ ಮೂರ್ಖತನ ಪ್ರದರ್ಶಿಸುತ್ತಾರೆ. ಅವರು ಎಲ್ಲ ಮಠಾಧೀಶರ ಕ್ಷಮೆಯಾಚಿಸಲಿ**
> **ಬಿ.ಶ್ರೀರಾಮುಲು,** ಸಾರಿಗೆ ಸಚಿವ

> **ನಾಸ್ತಿಕವಾದದಿಂದ ಹಿಂದೂ ಸಮಾಜದ ಗುರುಗಳು, ಹಿಂದುತ್ವವಾದವನ್ನು ಸಿದ್ದರಾಮಯ್ಯ ಬೈಯ್ಯೋದು ಆಗಬಾರದು. ಇದಕ್ಕೇ ಕಾಂಗ್ರೆಸ್ ಪಕ್ಷ ನೆಲಸಮ ಆಗಿದೆ**
> **ಪ್ರಮೋದ ಮುತಾಲಿಕ್**
> ಶ್ರೀರಾಮಸೇನೆ ರಾಷ್ಟ್ರೀಯ ಅಧ್ಯಕ್ಷ

'ಹಿರಿಯ, ಕಿರಿಯ ಸ್ವಾಮೀಜಿಗಳು ಎಂಬುದಕ್ಕೆ ಏನು ಮಾನದಂಡ? ಸರ್ವವನ್ನು ತ್ಯಾಗ ಮಾಡಿ ಬಂದವರನ್ನು ಸ್ವಾಮೀಜಿ ಎನ್ನುತ್ತೇವೆ. ಸಿದ್ದರಾಮಯ್ಯ ಹೇಳಿಕೆಯನ್ನು ಅವರ ಪುತ್ರ ಯತೀಂದ್ರ ಬಿಟ್ಟರೆ ಕಾಂಗ್ರೆಸ್‌ನ ಯಾವ ನಾಯಕನೂ ಸಮರ್ಥಿಸಿಕೊಂಡಿಲ್ಲ' ಎಂದರು.

'ಹಿಜಾಬ್ ವಿಚಾರದಲ್ಲಿ ಹೈಕೋರ್ಟ್ ತೀರ್ಪು ಕುರಿತಂತೆ ಶಿಕ್ಷಣ ಬಿಡುತ್ತೇವೆ, ಧರ್ಮ ಬಿಡುವುದಿಲ್ಲ ಎಂದು ಮುಸ್ಲಿಂ ಹೆಣ್ಣುಮಕ್ಕಳು ಹೇಳುತ್ತಾರೆ. ಅವರಿಗೆ ಬುದ್ಧಿ ಹೇಳುವುದನ್ನು ಬಿಟ್ಟು ಸಿದ್ದರಾಮಯ್ಯ ಮುಸ್ಲಿಮರ ಓಲೈಸುವ ಕೆಲಸ ಮಾಡುತ್ತಿದ್ದಾರೆ' ಎಂದರು.

'ಸಿದ್ದರಾಮಯ್ಯ ಬಾದಾಮಿಯಲ್ಲಿ ಮತ್ತೆ ಗೆಲ್ಲುವುದಿಲ್ಲ. ಅಂತಿಮವಾಗಿ ಜಮೀರ್ ಅಹಮದ್ ಪ್ರತಿನಿಧಿಸುವ ಚಾಮರಾಜಪೇಟೆ ಕ್ಷೇತ್ರವೇ ದಿಕ್ಕು. ಅಲ್ಲಿ ಚುನಾವಣೆಗೆ ಸ್ಪರ್ಧಿಸಲು ಮುಸ್ಲಿಮರ ಓಲೈಸಲು ಸಿದ್ದರಾಮಯ್ಯ ಹೀಗೆ ಹೇಳಿಕೆ ನೀಡುತ್ತಿದ್ದಾರೆ' ಎಂದು ಟೀಕಿಸಿದರು.

ಅಪಘಾತ: ರಂಗಭೂಮಿ ಕಲಾವಿದೆಯರ ಸಾವು

ಪ್ರಜಾವಾಣಿ ವಾರ್ತೆ



ಮಂಜುಳಾ

ಗೀತಾ

ರಾಣೆಬೆನ್ನೂರು (ಹಾವೇರಿ ಜಿಲ್ಲೆ): ತಾಲ್ಲೂಕಿನ ಕಾಕೋಳ ಗ್ರಾಮದ ಸೇತುವೆ ಸಮೀಪ ಹೆದ್ದಾರಿಯಲ್ಲಿ ಸಂಭವಿಸಿದ ಅಪಘಾತದಲ್ಲಿ ದಾವಣಗೆರೆಯ ರಂಗ ಕಲಾವಿದೆಯರಾದ ಯು.ಮಂಜುಳಾ (40) ಹಾಗೂ ಗೀತಾ (34) ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾರೆ.

ಭಾನುವಾರ ಸಂಜೆ ಲಾರಿಗೆ ಕಾರು ಗುದ್ದಿ ಅಪಘಾತ ಸಂಭವಿಸಿದೆ. ಇನ್ನಿಬ್ಬರು ಮಹಿಳೆಯರು ಗಾಯಗೊಂಡಿದ್ದಾರೆ. ಈ ರಂಗ ಕಲಾವಿದೆಯರು ದಾವಣಗೆರೆಯಿಂದ ಅಂಕೋಲಾಕ್ಕೆ ತೆರಳುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಮಂಜುಳಾ ಮತ್ತು ಗೀತಾ ಇಬ್ಬರೂ ದಾವಣಗೆರೆಯ ಕೆ.ಬಿ.ಆರ್. ಡ್ರಾಮಾ ಕಂಪನಿ ಕಲಾವಿದೆಯರಾಗಿದ್ದರು. ಜತೆಗೆ ದಾವಣಗೆರೆಯ ಎಲ್ಲ ಆರ್ಕೆಸ್ಟ್ರಾ ಕಂಪನಿಗಳಲ್ಲಿ ನೃತ್ಯ ಕಲಾವಿದರಾಗಿ ಭಾಗವಹಿಸುತ್ತಿದ್ದರು. ದಾವಣಗೆರೆಯ ವಿನೋಬನಗರದ ನಿವಾಸಿಗಳಾಗಿದ್ದರು. ಮಂಜುಳಾ ಅವರ ತಾಯಿ ವಿಜಯಮ್ಮ, ಗೀತಾ ಅವರ ಹೆತ್ತವರಾದ ಗಣೇಶ್ ಮತ್ತು ಮಂಜುಳಾ ಎಲ್ಲರೂ ಕಲಾವಿದರಾಗಿದ್ದರು ಎಂದು ಕೆ.ಬಿ.ಆರ್.ಡ್ರಾಮಾ ಕಂಪನಿಯ ಚಿಂದೋಡಿ ಶಂಭುಲಿಂಗಪ್ಪ ಮಾಹಿತಿ ನೀಡಿದ್ದಾರೆ.

ರಾಣೆಬೆನ್ನೂರು ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಉತ್ತರ ಕನ್ನಡ ಜಿಲ್ಲೆಯ ಕುಮಟಾದಲ್ಲಿ ಭಾನುವಾರ ನಡೆದ ಕೊಂಕಣಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ (ಎಡದಿಂದ) ಗೋಪಾಲಕೃಷ್ಣ ಪೈ (ಕೊಂಕಣಿ ಕಥಾ ಸಂಕಲ: ಲವ್ ಲೆಟರ್ಸ್ ವಾಜ್ಜಿತಾಲೊ ಮ್ಹಾಂತಾರೊ), ಫಾ. ಜೊವಿನ್ ವಿಶ್ವಾಸ್ (ಕೊಂಕಣಿ ಕವನ ಸಂಕಲನ: ಲಾರಾಚೆಂ ಗೀತ್), ಎಚ್.ಎಂ. ಪೆರ್ನಾಳ್ (ಕೊಂಕಣಿ ಲೇಖನ ಸಂಗ್ರಹ: ರೂಪಾಂ ಅನಿ ರೂಪಕಾಂ) ಅವರಿಗೆ 2021ನೇ ಸಾಲಿನ ಪುಸ್ತಕ ಬಹುಮಾನ, ನಾಗೇಶ ಅಣ್ವೇಕರ್ (ಸಾಹಿತ್ಯ), ದಿನೇಶ ಪ್ರಭು (ಕಲೆ) ಹಾಗೂ ಮಾಧವ ಖಾರ್ವಿ(ಜಾನಪದ) ಅವರಿಗೆ 2021ನೇ ಸಾಲಿನ ಗೌರವ ಪ್ರಶಸ್ತಿ ನೀಡಲಾಯಿತು. ಪುರಸಭೆ ಅಧ್ಯಕ್ಷೆ ಅನುರಾಧಾ ಬಾಳೇರಿ, ಕೊಂಕಣಿ ಅಕಾಡೆಮಿ ಅಧ್ಯಕ್ಷ ಕೆ.ಜಗದೀಶ ಪೈ, ಶಾಸಕ ದಿನಕರ ಶೆಟ್ಟಿ, ಮುರಳೀಧರ ಪ್ರಭು, ಅಕಾಡೆಮಿ ಸದಸ್ಯ ಚಿದಾನಂದ ಭಂಡಾರಿ ಇದ್ದಾರೆ

ಕಂದಕಕ್ಕೆ ಉರುಳಿದ ಬಸ್: 8 ಸಾವು

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ ಭಾಕರಾಪೇಟ ಗುಡ್ಡಗಾಡು ಪ್ರದೇಶದಲ್ಲಿ ಖಾಸಗಿ ಬಸ್‌ವೊಂದು ಆಳವಾದ ಕಂದಕಕ್ಕೆ ಉರುಳಿದ್ದು, ಪರಿಣಾಮ ಎಂಟು ಜನರು ಮೃತಪಟ್ಟಿದ್ದು, ಹಲವರು ಗಾಯಗೊಂಡಿದ್ದಾರೆ.

ಅವಘಡ ಶನಿವಾರ ರಾತ್ರಿ ಸಂಭವಿಸಿದೆ. ಬಸ್‌ನಲ್ಲಿ ಸುಮಾರು 60 ಜನರಿದ್ದರು. ಅನಂತಪುರಂನ ಧರ್ಮಾವರಂನಿಂದ ತಿರುಪತಿಯ ತಿರುಚನೂರ್‌ಗೆ ನಿಶ್ಚಿತಾರ್ಥ ಕಾರ್ಯಕ್ರಮದಲ್ಲಿ ಭಾಗವಹಿಸಲು ತೆರಳುತ್ತಿದ್ದರು. ಗಾಯಾಳುಗಳಲ್ಲಿ ಕೆಲವರ ಸ್ಥಿತಿ ಗಂಭೀರವಾಗಿದೆ.

ಕಠಿಣ ತಿರುವುಗಳಿದ್ದ ರಸ್ತೆಯಲ್ಲಿ ಬಸ್ ಸಾಗುತ್ತಿತ್ತು. ಚಾಲಕನಿಗೆ ರಸ್ತೆಯ ಪರಿಚಯ ಅಷ್ಟಾಗಿ ಇರಲಿಲ್ಲ. ಆದರೂ ಚಾಲಕ ಅತಿವೇಗವಾಗಿ ಬಸ್ ಚಲಾಯಿಸಿದ್ದೇ ಅವಘಡಕ್ಕೆ ಕಾರಣ ಎಂದು ಸ್ಥಳಕ್ಕೆ ಭೇಟಿ ನೀಡಿದ್ದ ಸಾರಿಗೆ ಇಲಾಖೆಯ ಅಧಿಕಾರಿಗಳು ತಿಳಿಸಿದರು.

ಚಾಲಕ ಮೊಹಮ್ಮದ್ ರಸೂಲ್ ಹಾಗೂ ಮಾಲಿಶೆಟ್ಟಿ ಮುರಳಿ, ವೆಂಗಪ್ಪ ಸೇರಿದಂತೆ ಏಳು ಪ್ರಯಾಣಿಕರು ಮೃತಪಟ್ಟಿದ್ದಾರೆ. ಅವಘಡಕ್ಕೆ ಸ್ವಲ್ಪ ಹೊತ್ತು ಮೊದಲಷ್ಟೇ ಪ್ರಯಾಣಿಕರು ನಿಧಾನವಾಗಿ ಬಸ್ ಚಲಿಸುವಂತೆ ಚಾಲಕನಿಗೆ ತಿಳಿಸಿದ್ದರು ಎಂದು ತಿಳಿಸಿದ್ದಾರೆ. ಅಗ್ನಿಶಾಮಕ ಸೇವೆ ಸಿಬ್ಬಂದಿಯ ನೆರವಿನಲ್ಲಿ ಪೊಲೀಸರು ರಕ್ಷಣಾ ಕಾರ್ಯ ನಡೆಸಿದರು. 'ಮೃತರ ಕುಟುಂಬಕ್ಕೆ ತಲಾ ₹ 2 ಲಕ್ಷ, ಗಾಯಾಳುಗಳಿಗೆ ತಲಾ ₹ 50 ಸಾವಿರ ಪರಿಹಾರವನ್ನು ಮುಖ್ಯಮಂತ್ರಿ ಘೋಷಿಸಿದ್ದಾರೆ' ಎಂದು ಅವರು ತಿಳಿಸಿದ್ದಾರೆ.

ಮುಸ್ಲಿಮರ ಹೊರಹಾಕಿ ಎನ್ನುತ್ತದೆಯೇ ಬಿಜೆಪಿ ಸಂವಿಧಾನ: ಎಚ್.ವಿಶ್ವನಾಥ್ ಪ್ರಶ್ನೆ

'ಮುಸ್ಲಿಂ ವರ್ತಕರಿಗೆ ನಿರ್ಬಂಧ ಸರಿಯಲ್ಲ'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಮುಸ್ಲಿಂ ವರ್ತಕರಿಗೆ ನಿರ್ಬಂಧ ವಿಧಿಸಿರುವುದು ಸರಿಯಲ್ಲ. ಅದನ್ನು ಯಾರೂ ಒಪ್ಪುವುದಿಲ್ಲ. ಈ ವಿಷಯದಲ್ಲಿ ಸರ್ಕಾರ ಮಧ್ಯಪ್ರವೇಶಿಸಬೇಕು' ಎಂದು ಬಿಜೆಪಿಯ ವಿಧಾನಪರಿಷತ್ ಸದಸ್ಯ ಎ.ಎಚ್. ವಿಶ್ವನಾಥ್ ಒತ್ತಾಯಿಸಿದರು.

ಜಿಲ್ಲೆಯ ಗೋಕಾಕ್‌ನಲ್ಲಿ ಪತ್ರಕರ್ತರೊಂದಿಗೆ ಭಾನುವಾರ ಮಾತನಾಡಿದ ಅವರು, 'ಬದುಕನ್ನು ಯಾರೂ ಕಸಿದುಕೊಳ್ಳಬಾರದು. ಆದರೆ, ಈ ವಿಷಯದಲ್ಲಿ ಸರ್ಕಾರದ ಮೌನ ತಿಳಿಯುತ್ತಿಲ್ಲ' ಎಂದರು.

'ದೇವಸ್ಥಾನ, ಜಾತ್ರೆ ಮೊದಲಾದ ಕಡೆಗಳಲ್ಲಿ ವ್ಯಾಪಾರ ಮಾಡುವವರ ಬಂಡವಾಳ ₹500 ಇರುವುದಿಲ್ಲ. ಅಂಥವರ ಹೊಟ್ಟೆ ಮೇಲೆ ಹೊಡೆದರೆ ಅವರೇನು ತಿನ್ನಬೇಕು? ಹೊಟ್ಟೆ ಮಹತ್ವದ್ದು. ಧರ್ಮ, ಜಾತಿ, ಪಕ್ಷ ನಂತರದ್ದು. ಅವರು ಈ ದೇಶದ ಪ್ರಜೆಗಳಲ್ಲವೇ? ನಿರ್ಬಂಧ ವಿಧಿಸುವುದು ಅಸ್ಪೃಶ್ಯತೆ ಆಚರಣೆಯಲ್ಲದೇ ಮತ್ತೇನೂ ಅಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಜಾತಿ–ಧರ್ಮದ ಆಧಾರದ ಮೇಲೆ ರಾಜಕಾರಣ ಮಾಡುವುದು ಅಪಾಯ. ಒಂದು ಅಥವಾ ಎರಡು ಚುನಾವಣೆ ಗೆಲ್ಲಬಹುದು. ನಂತರ..' ಎಂದು ಪ್ರಶ್ನಿಸಿದರು.

'ಮುಸ್ಲಿಮರನ್ನು ಹೊರ ಹಾಕುತ್ತೇವೆ, ಅವರು ಈ ದೇಶದಲ್ಲಿರಬಾರದು ಎಂದು ಬಿಜೆಪಿ ಸಂವಿಧಾನದಲ್ಲಿ ಬರೆಯಲಾಗಿದೆಯೇ? ಹೀಗೆಯೇ ಮುಂದುವರಿದರೆ ಏನಾಗುತ್ತದೆ?' ಎಂದು ಕಳವಳ ವ್ಯಕ್ತಪಡಿಸಿದರು.

ಅವಕಾಶ ಬೇಡ: ಬಜರಂಗದಳ ಮನವಿ

ಚಾಮರಾಜನಗರ: ಗುಂಡ್ಲುಪೇಟೆ ತಾಲ್ಲೂಕಿನ ಹಿಮವದ್ ಗೋಪಾಲಸ್ವಾಮಿ ಬೆಟ್ಟದಲ್ಲಿ ಸೋಮವಾರ (ಮಾರ್ಚ್ 28) ನಡೆಯುವ ಜಾತ್ರೆಯಲ್ಲಿ ಅನ್ಯಧರ್ಮೀಯರಿಗೆ ಅಂಗಡಿ ತೆರೆಯಲು ಅವಕಾಶ ನೀಡಬಾರದು ಎಂದು ಬಜರಂಗದಳ ಮನವಿ ಮಾಡಿದೆ.

'2002ರ ಹಿಂದೂ ಧಾರ್ಮಿಕ ಸಂಸ್ಥೆ ಮತ್ತು ದತ್ತಿ ಕಾಯ್ದೆಯಲ್ಲಿರುವಂತೆ ಜಾತ್ರಾ ಮಹೋತ್ಸವದಲ್ಲಿ ಹಿಂದೂಗಳನ್ನು ಬಿಟ್ಟು ಬೇರೆ ಧರ್ಮದವರಿಗೆ ಅವಕಾಶ ನೀಡಬಾರದು' ಎಂದು ತಹಶೀಲ್ದಾರ್‌ಗೆ ಬಜರಂಗದಳ ಸಂಚಾಲಕ ನಂದೀಶ್ ಮನವಿ ಸಲ್ಲಿಸಿದ್ದಾರೆ.

'ಬೆಟ್ಟದ ಕೆಳಭಾಗದಲ್ಲಿ ಅಂದರೆ ಗೇಟ್ ಹತ್ತಿರ, ಮುಸ್ಲಿಂ ಸಮುದಾಯದವರಿಗೆ ಸೇರಿರುವ ಅಂಗಡಿಗಳನ್ನೂ ಕೂಡಲೇ ತೆರವುಗೊಳಿಸಬೇಕು. ಮುಂದೆ ಅನ್ಯಧರ್ಮೀಯರಿಗೆ ಅವಕಾಶ ನೀಡಬಾರದು' ಎಂದು ಒತ್ತಾಯಿಸಿದ್ದಾರೆ.

ಈ ಬಗ್ಗೆ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ತಹಶೀಲ್ದಾರ್ ರವಿಶಂಕರ್, 'ಗೋಪಾಲಸ್ವಾಮಿ ಬೆಟ್ಟದಲ್ಲಿ ವ್ಯಾಪಾರ ಮಾಡಲು ಯಾರಿಗೂ ಅವಕಾಶ ಇಲ್ಲ. ಮಳಿಗೆಗೆ ಅನುಮತಿ ನೀಡುವ ಬಗ್ಗೆ ಸರ್ಕಾರದಿಂದ ಯಾವುದೇ ಸೂಚನೆ ಬಂದಿಲ್ಲ' ಎಂದರು.

ಕೆಜಿಎಫ್–2 ಟ್ರೇಲರ್ ಬಿಡುಗಡೆಗೊಳಿಸಿದ ನಟ ಶಿವರಾಜ್ ಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಐ ಲವ್ ಯೂ... ಯು ಶುಡ್ ಲವ್ ಮಿ...' ಎಲ್ಲರೂ ಕೆಜಿಎಫ್-2 ಸಿನಿಮಾ ಪ್ರೀತಿಸಬೇಕು ಎಂದು ಹೇಳುವ ಮೂಲಕ ನಟ ಶಿವರಾಜ್ ಕುಮಾರ್ ಚಿತ್ರದ ಟ್ರೇಲರ್ ಬಿಡುಗಡೆ ಮಾಡಿದರು.

ಕನ್ನಡ, ಹಿಂದಿ, ತಮಿಳು, ತೆಲುಗು ಹಾಗೂ ಮಲಯಾಳಂ ಭಾಷೆಗಳಲ್ಲಿ ಬಹುನಿರೀಕ್ಷಿತ 'ಕೆಜಿಎಫ್ ಚಾಪ್ಟರ್ 2' ಟ್ರೇಲರ್ ಹೊರ ಬಂದಿದೆ. ಚಿತ್ರದ ಕನ್ನಡ ಟ್ರೈಲರ್ ಬಿಡುಗಡೆಯಾಗಿ ಒಂದು ಗಂಟೆಯಲ್ಲಿ 17 ಲಕ್ಷ ವೀಕ್ಷಣೆ ಕಂಡಿತು.

ಭಾನುವಾರ ಬೆಂಗಳೂರಿನ ಒರಾಯನ್ ಮಾಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಯಶ್, ಸಂಜಯ್ ದತ್, ರವೀನಾ ಟಂಡನ್, ಶ್ರೀನಿಧಿ ಶೆಟ್ಟಿ ಸೇರಿ ಚಿತ್ರದ ಬಹುತೇಕ ನಟರು ಭಾಗವಹಿಸಿದ್ದರು. ಬಾಲಿವುಡ್ ಸಿನಿಮಾ ನಿರ್ಮಾಪಕ ಕರಣ್ ಜೋಹರ್ ಅವರು ನಟ ಪುನೀತ್ ರಾಜ್‌ಕುಮಾರ್ ನೆನಪು ಮಾಡಿಕೊಂಡರು. ಮೌನವಹಿಸಿ 'ಅಪ್ಪು' ಅವರಿಗೆ ಗೌರವ ಸಲ್ಲಿಸಲಾಯಿತು.

ಟ್ರೇಲರ್‌ನಲ್ಲಿರುವ 'ವಯ್ಲೆನ್ಸ್ ಲೈಕ್ಸ್ ಮಿ....' ಸಾಲು ಉಲ್ಲೇಖಿಸಿದ ಶಿವರಾಜ್ ಕುಮಾರ್, 'ಯಶ್ ನನ್ನ ಸಹೋದರನ ಹಾಗೆ' ಎಂದರು. 'ಭಿನ್ನ ನಿರೀಕ್ಷೆಯೊಂದಿಗೆ ಬಂದಿದ್ದೀರಿ. ನಾವೂ ಭಿನ್ನವಾದ ಪ್ರಸ್ತುತಿಗೆ ಪ್ರಯತ್ನಿಸಿದ್ದೇವೆ' ಎಂದು ನಟ ಯಶ್ ಹೇಳಿದರು.

ನಟ ಸಂಜತ್ ದತ್, '40 ವರ್ಷಗಳ ಚಿತ್ರ ಜೀವನದಲ್ಲಿ ಇದು ಅದ್ಭುತ ಅನುಭವ ನೀಡಿದ ಚಿತ್ರ' ಎಂದರು.

'ಚಿತ್ರ ನಿರೀಕ್ಷೆ ಮೀರಿ ಯಶಸ್ಸು ಗಳಿಸುವ ವಿಶ್ವಾಸವಿದೆ. ನಿರ್ಮಾಪಕ ವಿಜಯ್ ಕಿರಗಂದೂರು, ನಿರ್ದೇಶಕ ಪ್ರಶಾಂತ್ ನೀಲ್ ಹಾಗೂ ಇಡೀ ಚಿತ್ರತಂಡಕ್ಕೆ ಅಭಿನಂದನೆಗಳು' ಎಂದು ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.

ಜಮ್ಮು: ತಾಪಮಾನ 37 ಡಿಗ್ರಿ ಸೆಲ್ಸಿಯಸ್

ಜಮ್ಮು (ಪಿಟಿಐ): ಜಮ್ಮುವಿನಲ್ಲಿ ಭಾನುವಾರ ಗರಿಷ್ಠ ತಾಪಮಾನ 37.3 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ. 76 ವರ್ಷಗಳ ಹಿಂದಿನ ದಾಖಲೆ ಮುರಿದಂತಾಗಿದೆ.

1945ರ ಮಾ.31ರಂದು 37.2 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು ಎಂದು ಹವಾಮಾನ ಇಲಾಖೆ ನಿರ್ದೇಶಕ ಸೋನಮ್ ಲೋಟಸ್ ತಿಳಿಸಿದ್ದಾರೆ.

'ದೇಶದಾದ್ಯಂತ 20,000 ಬೀದಿ ಬದಿ ಮಕ್ಕಳು ಪತ್ತೆ'

ನವದೆಹಲಿ (ಪಿಟಿಐ): ದೇಶದಾದ್ಯಂತ 20,000 ಬೀದಿ ಬದಿಯ ಮಕ್ಕಳನ್ನು ಪತ್ತೆ ಹಚ್ಚಲಾಗಿದ್ದು, ಇದೀಗ ಅವರಿಗೆ ಪುನರ್ವಸತಿ ಕಲ್ಪಿಸುವ ಪ್ರಕ್ರಿಯೆ ನಡೆಯುತ್ತಿದೆ ಎಂದು ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ರಾಷ್ಟ್ರೀಯ ಆಯೋಗ (ಎನ್‌ಸಿಪಿಸಿಆರ್) ಮುಖ್ಯಸ್ಥ ಪ್ರಿಯಾಂಕ್ ಕಾನೂಂಗೊ ತಿಳಿಸಿದ್ದಾರೆ.

ದೇಶದಾದ್ಯಂತ 15-20 ಲಕ್ಷ ಮಕ್ಕಳು ಬೀದಿ ಬದಿಯಲ್ಲಿ ವಾಸ ಮಾಡುತ್ತಿರುವ ಸಾಧ್ಯತೆಯಿದೆ ಎಂದು ಅಂದಾಜಿಸಿದ್ದಾರೆ.

ದೇಶದಲ್ಲಿ ಬೀದಿ ಬದಿ ಮಕ್ಕಳ ಪರಿಸ್ಥಿತಿ ಬಗ್ಗೆ ಸುದ್ದಿಸಂಸ್ಥೆ ಜತೆ ಭಾನುವಾರ ಮಾತನಾಡಿದ ಅವರು, 'ಬೀದಿ ಮಕ್ಕಳ ನೋಂದಣಿಗಾಗಿ 'ಬಾಲ ಸ್ವರಾಜ್' ವೆಬ್ ಪೋರ್ಟಲ್ ಆರಂಭಿಸಲಾಗಿದ್ದು, ಬೀದಿ ಮಕ್ಕಳ ಮೇಲೆ ನಿಗಾ ವಹಿಸಬಹುದಾಗಿದೆ ಮತ್ತು ಅವರಿಗೆ ಪುನರ್ವಸತಿ ಕಲ್ಪಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುತ್ತದೆ. ಬೀದಿ ಬದಿ ಮಕ್ಕಳ ಪುನರ್ವಸತಿಗೆ ಕೆಲ ರಾಜ್ಯಗಳು ಏನೂ ಮಾಡುತ್ತಿಲ್ಲ' ಎಂದರು.

ಎಸ್ಸೆಸ್ಸೆಲ್ಸಿ ಪರೀಕ್ಷೆ ಇಂದಿನಿಂದ

ಒಂದನೇ ಪುಟದಿಂದ

3,444 ಪರೀಕ್ಷಾ ಕೇಂದ್ರಗಳು | **45,289** ಕೊಠಡಿಗಳು ಸಂಖ್ಯೆ | **15,387** ಒಟ್ಟು ನೋಂದಾಯಿತ ಶಾಲೆಗಳು

'ಪರೀಕ್ಷೆಗೆ ಸಂಬಂಧಿಸಿದ ಸೂಚನೆಗಳನ್ನು ಮಕ್ಕಳು ಕಟ್ಟುನಿಟ್ಟಾಗಿ ಪಾಲಿಸಬೇಕು. ಶಿಕ್ಷಣ ಇಲಾಖೆ ಆದೇಶಗಳು ಹಾಗೂ ನ್ಯಾಯಾಲಯದ ತೀರ್ಪನ್ನು ಮಕ್ಕಳು ಪಾಲಿಸುವ ಮೂಲಕ ಪರೀಕ್ಷೆ ಬರೆದು ತಮ್ಮ ಶೈಕ್ಷಣಿಕ ಭವಿಷ್ಯದ ಏಳಿಗೆಯ ಕಡೆ ಗಮನ ಹರಿಸುತ್ತಾರೆ ಎನ್ನುವ ಸಂಪೂರ್ಣ ವಿಶ್ವಾಸವಿದೆ' ಎಂದು ಸಚಿವರು ಹೇಳಿದರು.

'ಹಿಜಾಬ್ ವಿಚಾರದಲ್ಲಿ ಹೈಕೋರ್ಟ್ ನೀಡಿರುವ ಆದೇಶವನ್ನು ಈಗಾಗಲೇ ಆಯಾ ಶಾಲೆಗಳ ಮುಖ್ಯಸ್ಥರು ಪಾಲಿಸುತ್ತಿದ್ದಾರೆ. ಶಾಲೆಯ ಕಾಂಪೌಂಡ್ ಒಳಗೆ ಹಿಜಾಬ್ ಧರಿಸಿ ಬರಬಹುದು. ಪರೀಕ್ಷಾ ಕೊಠಡಿ ಒಳಗೆ ಧರಿಸಲು ಅವಕಾಶವಿಲ್ಲ. ಗೈರುಹಾಜರಾದವರಿಗೆ ಯಾವುದೇ ಕಾರಣಕ್ಕೂ ಮರುಪರೀಕ್ಷೆ ಮಾಡುವುದಿಲ್ಲ. ಬದಲಿಗೆ ಪೂರಕ ಪರೀಕ್ಷೆ ಬರೆಯಬಹುದು' ಎಂದೂ ಅವರು ಸ್ಪಷ್ಟಪಡಿಸಿದರು.

ಪ್ರತಿ ಬಾರಿಯಂತೆ ಪರೀಕ್ಷಾ ಕೇಂದ್ರಗಳ ಸುತ್ತಲೂ ನಿಷೇಧಾಜ್ಞೆ ಜಾರಿ ಇರಲಿದೆ ಎಂದರು.

ಆತಂಕ ಪಡುವ ಅಗತ್ಯವಿಲ್ಲ: ಪಠ್ಯಕ್ರಮದಲ್ಲಿರುವ ವಿಷಯವನ್ನು ಬಿಟ್ಟು ಪರೀಕ್ಷೆಯಲ್ಲಿ ಬೇರೆ ಪ್ರಶ್ನೆಗಳು ಬರುವುದಿಲ್ಲ. ಹೀಗಾಗಿ, ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ಆತಂಕ ಬೇಡ. ಈ ಬಾರಿ ಪ್ರಶ್ನೆ ಪತ್ರಿಕೆಯಲ್ಲಿ ಪ್ರಶ್ನೆಗಳ ಆಯ್ಕೆಗೆ ಅವಕಾಶ ಮಾಡಿಕೊಡಲಾಗಿದೆ. ಹೀಗಾಗಿ ಪರ್ಯಾಯ ಪ್ರಶ್ನೆಗಳನ್ನು ತೆಗೆದುಕೊಳ್ಳಬಹುದು' ಎಂದು ಸಚಿವರು ತಿಳಿಸಿದರು.

ಸಿ.ಸಿ.ಟಿ.ವಿ ಕ್ಯಾಮೆರಾ ಕಣ್ಗಾವಲಿನಲ್ಲಿ ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 1.45ರವರೆಗೆ ಪರೀಕ್ಷೆಗಳು ನಡೆಯಲಿವೆ. ಪ್ರತಿ ವಿಷಯಕ್ಕೂ ಪ್ರಶ್ನೆಪತ್ರಿಕೆ ಓದಲು 15 ನಿಮಿಷ ಸಮಯ ನೀಡಲಾಗುತ್ತದೆ.

ಭಯಪಡದೆ ಪರೀಕ್ಷೆ ಬರೆಯಿರಿ:ಬೊಮ್ಮಾಯಿ

ಹುಬ್ಬಳ್ಳಿ: 'ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಸಿದ್ಧತೆ ಮಾಡಿಕೊಳ್ಳಲಾಗಿದ್ದು, ವಿದ್ಯಾರ್ಥಿಗಳು ಯಾವುದೇ ಭಯವಿಲ್ಲದೆ ಪರೀಕ್ಷೆ ಎದುರಿಸಬೇಕು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

'ಹಿಜಾಬ್ ವಿವಾದದ ಕುರಿತು ಈಗಾಗಲೇ ಹೈಕೋರ್ಟ್ ತೀರ್ಪು ನೀಡಿದೆ. ನಂತರವೂ ವಿವಾದಾತ್ಮಕ ಹೇಳಿಕೆ ನೀಡುವ ಅವಶ್ಯಕತೆ ಇಲ್ಲ' ಎಂದು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

ಪರೀಕ್ಷಾ ವೇಳಾಪಟ್ಟಿ	
ಮಾ. 28ಕ್ಕೆ	ಪ್ರಥಮ ಭಾಷೆ ಪರೀಕ್ಷೆ
ಮಾ.30ಕ್ಕೆ	ದ್ವಿತೀಯ ಭಾಷೆ
ಏ. 4ಕ್ಕೆ	ಗಣಿತ
ಏ. 6ಕ್ಕೆ	ಸಮಾಜ ವಿಜ್ಞಾನ
ಏ. 8ಕ್ಕೆ	ತೃತೀಯ ಭಾಷೆ ಹಿಂದಿ
ಏ. 11ಕ್ಕೆ	ವಿಜ್ಞಾನ

ಬಿಜೆಪಿ ಚುನಾವಣಾ ತಾಲೀಮು ಆರಂಭ

ಒಂದನೇ ಪುಟದಿಂದ

ನರೇಂದ್ರ ಮೋದಿ ಅವರು ಏ.5ರಂದು ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಉದ್ಘಾಟನೆ ಹಾಗೂ ಉಪನಗರ ರೈಲು ಯೋಜನೆ ಕಾಮಗಾರಿಗಳ ಚಾಲನೆಯಲ್ಲಿ ಭಾಗವಹಿಸುವರು. ಉಭಯ ನಾಯಕರ ಭೇಟಿಯನ್ನು ಚುನಾವಣಾ ತಯಾರಿಗೆ ಪೂರಕವಾಗಿ ಬಳಸಿಕೊಳ್ಳಲು ಬಿಜೆಪಿಯ ರಾಜ್ಯ ನಾಯಕರು ಯೋಚಿಸಿದ್ದಾರೆ.

ರಾಜ್ಯ ಬಿಜೆಪಿ ಈಗಾಗಲೇ ಸದ್ದು ಗದ್ದಲವಿಲ್ಲದೇ ಬೇರು ಮಟ್ಟದಲ್ಲಿ ಕಾರ್ಯಕರ್ತರನ್ನು ಅಣಿಗೊಳಿಸುವ ಕಾರ್ಯ ನಡೆಸಿದೆ.

ಪ್ರಮುಖರ ಸಮಿತಿ ಸಭೆ ಸಾಧ್ಯತೆ: ಅಮಿತ್ ಶಾ ಭೇಟಿಯ ಸಂದರ್ಭದಲ್ಲಿ ಬಿಜೆಪಿ ರಾಜ್ಯ ಘಟಕದ ಪ್ರಮುಖರ ಸಮಿತಿ (ಕೋರ್ ಕಮಿಟಿ) ಸಭೆಯನ್ನೂ ನಡೆಸುವ ಸಾಧ್ಯತೆ ಇದೆ. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಕೇಂದ್ರ ಗೃಹ ಸಚಿವರ ಜತೆ ಪಕ್ಷದ ಪ್ರಮುಖರ ಸಮಿತಿ ಸಭೆ ನಿಗದಿಗೆ ಪ್ರಯತ್ನಿಸುತ್ತಿದ್ದಾರೆ. ಆದರೆ, ಇನ್ನೂ ಅಂತಿಮಗೊಂಡಿಲ್ಲ ಎಂಬ ಮಾಹಿತಿ ಲಭ್ಯವಾಗಿದೆ. ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಸಭೆಯಲ್ಲಿ ಕೂಡ ಭಾಗವಹಿಸುವ ಸಾಧ್ಯತೆ ಇದೆ.

ಈ ಸಭೆ ನಡೆದಲ್ಲಿ ಚುನಾವಣಾ ತಯಾರಿಯ ಕಾರ್ಯಸೂಚಿ ಕುರಿತು ಚರ್ಚಿಸುವ ಸಾಧ್ಯತೆ ಇದೆ. ಪಕ್ಷದ ವಿವಿಧ ನಾಯಕರ ರಾಜ್ಯ ಪ್ರವಾಸ, ರಾಜ್ಯ ರಾಜಕೀಯದಲ್ಲಿನ ಬೆಳವಣಿಗೆಗಳು ಸೇರಿದಂತೆ ಪ್ರಮುಖ ವಿಷಯಗಳ ಕುರಿತು ಅಮಿತ್ ಶಾ ಅವರೊಂದಿಗೆ ಚರ್ಚಿಸಿ, ಒಪ್ಪಿಗೆ ಪಡೆಯಲು ಯೋಚಿಸಲಾಗಿದೆ. ಅದು ಸಾಧ್ಯವಾದರೆ ಏಪ್ರಿಲ್ ಅಂತ್ಯದೊಳಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೇರಿದಂತೆ ಬಿಜೆಪಿ ನಾಯಕರು ರಾಜ್ಯ ಪ್ರವಾಸ ಆರಂಭಿಸಲಿದ್ದಾರೆ ಎಂದು ಮೂಲಗಳು ಮಾಹಿತಿ ನೀಡಿವೆ.

ಈ ಮಧ್ಯೆ ಸಚಿವ ಸಂಪುಟ ವಿಸ್ತರಣೆಯ ಬಗ್ಗೆ ಚರ್ಚೆ ಆರಂಭವಾಗಿದ್ದು, ವಿಸ್ತರಣೆಗೆ ಏಪ್ರಿಲ್‌ನಲ್ಲಿ ಹಸಿರು ನಿಶಾನೆ ನೀಡುವ ಸಾಧ್ಯತೆ ಇದೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಮೋದಿ ಜತೆ ಇಸ್ರೇಲ್ ಪ್ರಧಾನಿ ರಾಜ್ಯಕ್ಕೆ?

ಏಪ್ರಿಲ್ 5 ರಂದು ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಇಸ್ರೇಲ್ ಪ್ರಧಾನಿ ನಫ್ತಾಲಿ ಬೆನೆಟ್ ಕೂಡ ರಾಜ್ಯಕ್ಕೆ ಭೇಟಿ ನೀಡುವ ಸಾಧ್ಯತೆ ಇದೆ. ಉಭಯ ನಾಯಕರು ಒಟ್ಟಾಗಿ ರಾಜ್ಯ ಪ್ರವಾಸ ಕೈಗೊಳ್ಳುವ ಕುರಿತು ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಕ್ಕೆ ಮಾಹಿತಿ ರವಾನಿಸಿದೆ ಎಂದು ಗೊತ್ತಾಗಿದೆ.

ಸೃಜನಾತ್ಮಕ ದೃಶ್ಯೀಕರಣ. ಹಾರ್ಲಿಕ್ಸ್ ದೈನಂದಿನ ಆಹಾರದ ಭಾಗವಾಗಿ ಸೇವಿಸಬೇಕಾದ ಪೌಷ್ಟಿಕ ಪಾನೀಯವಾಗಿದೆ.

ಅಮೆರಿಕ ಅಧ್ಯಕ್ಷರ ಟೀಕಾಪ್ರಹಾರ ● ಲುವಿವ್ ನಗರದ ಮೇಲೆ ಕ್ರೂಸ್ ಕ್ಷಿಪಣಿಗಳ ದಾಳಿ ನಡೆಸಿದ ರಷ್ಯಾ

ಅಧಿಕಾರದಲ್ಲಿ ಪುಟಿನ್ ಇರಬಾರದು: ಬೈಡನ್

ವಾರ್ಸಾ, ಪೋಲೆಂಡ್: 'ಕಟುಕನಾಗಿರುವ ವ್ಲಾದಿಮಿರ್ ಪುಟಿನ್ ಇನ್ನು ಅಧಿಕಾರದಲ್ಲಿ ಇರಬಾರದು' ಎಂದು ಅಮೆರಿಕ ಅಧ್ಯಕ್ಷ ಜೋ ಬೈಡನ್ ವಾಗ್ದಾಳಿ ನಡೆಸಿದ್ದಾರೆ.

'ನ್ಯಾಟೊ ಸದಸ್ಯ ರಾಷ್ಟ್ರಗಳ ಒಂದಿಂಚು ಪ್ರದೇಶವನ್ನು ವಶಪಡಿಸಿಕೊಳ್ಳುವ ಬಗ್ಗೆಯೂ ರಷ್ಯಾ ಯೋಚನೆ ಮಾಡಬಾರದು' ಎಂದೂ ಆ ರಾಷ್ಟ್ರಕ್ಕೆ ಎಚ್ಚರಿಕೆಯನ್ನೂ ನೀಡಿದರು.

ಪೋಲೆಂಡ್‌ನ ವಾರ್ಸಾ ನಗರದಲ್ಲಿ ಉಕ್ರೇನ್‌ನ ಸಚಿವರೊಂದಿಗೆ ಸಭೆ ನಡೆಸಿದ ನಂತರ ರಾಯಲ್ ಕ್ಯಾಸಲ್‌ನಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಬೈಡನ್, ಪುಟಿನ್ ವಿರುದ್ಧ ಕಟು ಟೀಕೆ ಮಾಡಿದರು, ರಷ್ಯಾ ಪ್ರಜೆಗಳ ಕುರಿತು ಅಷ್ಟೇ ಮೃದು ಮಾತುಗಳನ್ನಾಡಿದರು.

'ರಷ್ಯನ್ನರು ನಮ್ಮ ಶತ್ರುಗಳಲ್ಲ. ಆದರೂ, ರಷ್ಯಾ ಮೇಲೆ ಅಮೆರಿಕ ಸೇರಿದಂತೆ ಪಾಶ್ಚಿಮಾತ್ಯ ರಾಷ್ಟ್ರಗಳು ಭಾರಿ ನಿರ್ಬಂಧಗಳನ್ನು ಹೇರಿವೆ. ಇಂಥ ಬೆಳವಣಿಗೆಗೆ ರಷ್ಯನ್ನರು ತಮ್ಮ ಅಧ್ಯಕ್ಷರನ್ನೇ ದೂರಬೇಕು' ಎಂದು ಬೈಡನ್ ಹೇಳಿದರು.

ಪುಟಿನ್ ವಿರುದ್ಧ ವಾಗ್ದಾಳಿಯನ್ನು ಬೈಡನ್ ಹರಿತಗೊಳಿಸಿದ ಬೆನ್ನಲ್ಲೇ, ಶ್ವೇತಭವನವು ಪರಿಸ್ಥಿತಿಯನ್ನು ತಿಳಿಗೊಳಿಸಲು ಮುಂದಾಯಿತು. 'ಅಧ್ಯಕ್ಷ ಬೈಡನ್ ಅವರು ರಷ್ಯಾದಲ್ಲಿನ ಆಡಳಿತ ಬದಲಾಗಬೇಕು ಎಂದು ಬಯಸುತ್ತಿಲ್ಲ. ನೆರೆ ರಾಷ್ಟ್ರಗಳು ಸೇರಿದಂತೆ ಪ್ರಾದೇಶಿಕವಾಗಿ ತನ್ನ ಪ್ರಭಾವವನ್ನು ಹೆಚ್ಚಿಸಿಕೊಳ್ಳಲು ಪುಟಿನ್ ಪ್ರಯತ್ನಿಸುತ್ತಿರುವ ಬಗ್ಗೆ ಅವರು ಪ್ರಸ್ತಾಪಿಸಿದ್ದಾರೆ' ಎಂದು ಶ್ವೇತಭವನ ಸಮಜಾಯಿಷಿ ನೀಡಿದೆ.

'ಇಂತಹ ವೈಯಕ್ತಿಕ ಟೀಕೆ, ದಾಳಿಗಳಿಂದಾಗಿ, ಬಿಕ್ಕಟ್ಟು ನಿವಾರಣೆ ಹಾಗೂ ದ್ವಿಪಕ್ಷೀಯ ಸಂಬಂಧಕ್ಕೆ ಪುನಶ್ಚೇತನ ನೀಡುವ ಪ್ರಯತ್ನಗಳಿಗೆ ಮತ್ತಷ್ಟು ಹಿನ್ನಡೆಯಾಗಲಿದೆ' ಎಂದು ಶ್ವೇತಭವನದ ಅಧಿಕಾರಿಯೊಬ್ಬರು ಅಭಿಪ್ರಾಯಪಟ್ಟಿದ್ದಾರೆ.

ಇಂಧನ ಸಂಗ್ರಹಾಗಾರದ ಮೇಲೆ ದಾಳಿ

ಲಂಡನ್ (ರಾಯಿಟರ್ಸ್): ಪಶ್ಚಿಮ ಉಕ್ರೇನ್‌ನ ಲುವಿವ್ ನಗರದ ಮೇಲೆ, ಹೆಚ್ಚು ನಿಖರವಾಗಿ ಗುರಿತಲುಪುವ ಸಾಮರ್ಥ್ಯದ ಕ್ರೂಸ್ ಕ್ಷಿಪಣಿಗಳಿಂದ ದಾಳಿ ನಡೆಸಲಾಗಿದೆ ಎಂದು ರಷ್ಯಾ ರಕ್ಷಣಾ ಸಚಿವಾಲಯ ಭಾನುವಾರ ಹೇಳಿದೆ.

ಲುವಿವ್ ನಗರದಲ್ಲಿರುವ ಉಕ್ರೇನ್ ಪಡೆಗಳಿಗೆ ಸೇರಿದ ಇಂಧನ ಸಂಗ್ರಹಾಗಾರದ ಮೇಲೆ ಬಹುದೂರದ ವರೆಗೆ ಚಿಮ್ಮಬಲ್ಲ ಕ್ಷಿಪಣಿಗಳಿಂದ ದಾಳಿ ನಡೆಸಲಾಗಿದೆ. ಯುದ್ಧವಿಮಾನದ ವ್ಯವಸ್ಥೆಗಳನ್ನು ದುರಸ್ತಿ ಮಾಡುವ ಘಟಕ, ರಾಡಾರ್ ಕೇಂದ್ರಗಳು, ಯುದ್ಧಟ್ಯಾಂಕ್‌ಗಳನ್ನು ನಿಲುಗಡೆ ಮಾಡಿರುವ ಪ್ರದೇಶಗಳನ್ನು ಗುರಿಯಾಗಿಸಿ ಕ್ರೂಸ್ ಕ್ಷಿಪಣಿಗಳಿಂದ ದಾಳಿ ನಡೆಸಲಾಗಿದೆ ಎಂದು ಸಚಿವಾಲಯ ಹೇಳಿದೆ.

'ಪಶ್ಚಿಮ ರಾಷ್ಟ್ರಗಳಿಗೆ ಧೈರ್ಯ ಇಲ್ಲ'

ಲುವಿವ್, ಉಕ್ರೇನ್: ದೇಶದ ಮೇಲೆ ದಾಳಿ ನಡೆಸುತ್ತಿರುವ ರಷ್ಯಾ ವಿರುದ್ಧ ಹೋರಾಡಲು ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಧೈರ್ಯ ಇಲ್ಲ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಟೀಕಿಸಿದ್ದಾರೆ.

ಪಾಶ್ಚಿಮಾತ್ಯ ರಾಷ್ಟ್ರಗಳ ಧೋರಣೆ ಬಗ್ಗೆ ಉದ್ವೇಗದಿಂದಲೇ ಮಾತನಾಡಿದ ಝೆಲೆನ್‌ಸ್ಕಿ, ಮತ್ತೊಂದೆಡೆ, ರಷ್ಯಾ ಪಡೆಗಳನ್ನು ಹಿಮ್ಮೆಟ್ಟಿಸಲು ಹೋರಾಟ ನಡೆಸುತ್ತಿರುವ ಉಕ್ರೇನ್‌ಗೆ ಯುದ್ಧವಿಮಾನಗಳು ಹಾಗೂ ಟ್ಯಾಂಕ್‌ಗಳನ್ನು ಪೂರೈಸುವಂತೆಯೂ ಅಂಗಲಾಚಿದ್ದಾರೆ. ಪೋಲೆಂಡ್‌ನಲ್ಲಿ ಉಕ್ರೇನ್‌ನ ಅಧಿಕಾರಿಗಳೊಂದಿಗೆ ಅಮೆರಿಕ ಅಧ್ಯಕ್ಷ ಬೈಡನ್ ಸಭೆ ನಡೆಸಿದ ನಂತರ ಅವರು ವರ್ಚುವಲ್ ಆಗಿ ಮಾತನಾಡಿದರು.

'ಉಕ್ರೇನ್‌ಗೆ ಆಕ್ರಮಣಕಾರಿ ಶಸ್ತ್ರಾಸ್ತ್ರಗಳನ್ನು ಯಾರು ಮತ್ತು ಹೇಗೆ ಪೂರೈಕೆ ಮಾಡಬೇಕು ಎಂಬ ಬಗ್ಗೆ ಪಶ್ಚಿಮ ರಾಷ್ಟ್ರಗಳು ಮೀನಮೇಷ ಎಣಿಸುತ್ತಿವೆ. 'ಇನ್ನೊಂದೆಡೆ ರಷ್ಯಾ ಪಡೆಗಳಿಂದ ಕ್ಷಿಪಣಿ ದಾಳಿ ಮುಂದುವರಿದಿದ್ದು, ಜನರು ಸಾಯುತ್ತಿದ್ದಾರೆ' ಎಂದು ವಾಗ್ದಾಳಿ ನಡೆಸಿದರು.

'ಮರಿಯುಪೊಲ್ ರಕ್ಷಣೆಗಾಗಿ ಉಕ್ರೇನ್ ಪಡೆಗಳು ನಡೆಸುತ್ತಿರುವ ದೃಢವಾದ ಹೋರಾಟ, ಯೋಧರ ಸ್ಥೈರ್ಯ-ಸಾಹಸ ಅದ್ಭುತ' ಎಂದು ಬಣ್ಣಿಸಿದ್ದಾರೆ.

ರಷ್ಯಾ ಪಡೆಗಳು ನಡೆಸಿದ ವಾಯು ದಾಳಿಯಿಂದ ಹಾರ್ಕಿವ್ ನಗರದ ಮಧ್ಯಭಾಗದಲ್ಲಿ ಸೃಷ್ಟಿಯಾಗಿರುವ ಹೊಂಡವನ್ನು ವ್ಯಕ್ತಿಯೊಬ್ಬರು ಭಾನುವಾರ ಪರಿಶೀಲಿಸಿದರು –ಎಪಿ ಚಿತ್ರ

'ರಷ್ಯಾದಿಂದ ಖನಿಜಯುಕ್ತ ಕಲ್ಲಿದ್ದಲು ಆಮದು ದುಪ್ಪಟ್ಟು'

ನವದೆಹಲಿ (ಪಿಟಿಐ): ರಷ್ಯಾದಿಂದ ಖನಿಜಯುಕ್ತ ಕಲ್ಲಿದ್ದಲು ಆಮದು ಮಾಡಿಕೊಳ್ಳುವುದನ್ನು ಭಾರತ ಮುಂದುವರಿಸಲಿದೆ ಎಂದು ಕೇಂದ್ರ ಉಕ್ಕು ಖಾತೆ ಸಚಿವ ರಾಮ್‌ಚಂದ್ರ ಪ್ರಸಾದ್ ಸಿಂಗ್ ಅವರು ಭಾನುವಾರ ಹೇಳಿದರು.

ಉಕ್ಕು ಉತ್ಪಾದನೆಗೆ ಪ್ರಮುಖವಾಗಿ ಅಗತ್ಯವಿರುವ ಖನಿಜಯುಕ್ತ ಕಲ್ಲಿದ್ದಲು ಆಮದು ಪ್ರಮಾಣವನ್ನು ದುಪ್ಪಟ್ಟುಗೊಳಿಸಲು ಸರ್ಕಾರ ಚಿಂತನೆ ನಡೆಸಿದೆ. ಭಾರತವು ಒಟ್ಟಾರೆ 45 ಲಕ್ಷ ಟನ್ ಕಲ್ಲಿದ್ದಲು ಆಮದು ಮಾಡಿಕೊಂಡಿದೆ ಎಂದರು.

ಇಷ್ಟು ಪ್ರಮಾಣದ ಕಲ್ಲಿದ್ದಲನ್ನು ಯಾವ ಅವಧಿಯಲ್ಲಿ ಆಮದು ಮಾಡಿಕೊಳ್ಳಲಾಗಿದೆ ಎಂಬುದನ್ನು ಸಚಿವರು ಸ್ಪಷ್ಟವಾಗಿ ತಿಳಿಸಲಿಲ್ಲ.

ಉಕ್ರೇನ್–ರಷ್ಯಾ ಯುದ್ಧದ ಹಿನ್ನೆಲೆಯಲ್ಲಿ ಜಪಾನ್ ಹಾಗೂ ಪಶ್ಚಿಮದ ಹಲವು ರಾಷ್ಟ್ರಗಳು ರಷ್ಯಾದ ಮೇಲೆ ನಿರ್ಬಂಧ ಹೇರಿವೆ.

ಉಕ್ಕು ತಯಾರಿಕೆ, ಉಷ್ಣ ವಿದ್ಯುತ್ ಉತ್ಪಾದನೆಗೆ ಬಳಸುವ ಈ ಕಲ್ಲಿದ್ದಲು ಯುದ್ಧದಿಂದಾಗಿ ರಷ್ಯಾದಿಂದ ಸುಗಮವಾಗಿ ಬರುತ್ತಿಲ್ಲ. ಸುಮಾರು 10.6 ಲಕ್ಷ ಟನ್ ಕಲ್ಲಿದ್ದಲು ಈ ತಿಂಗಳು ಭಾರತಕ್ಕೆ ರವಾನೆ ಆಗಬೇಕಿದೆ ಎಂದು ಅಂಕಿಅಂಶಗಳು ತಿಳಿಸಿವೆ.

ಭಾರತವು ರಷ್ಯಾದಿಂದ ಖನಿಜಯುಕ್ತ ಕಲ್ಲಿದ್ದಲು ಆಮದು ಮಾಡಿಕೊಳ್ಳುವ ಆರನೇ ಅತಿದೊಡ್ಡ ರಾಷ್ಟ್ರವಾಗಿದೆ. ವಿವಿಧ ರಾಷ್ಟ್ರಗಳು ನಿರ್ಬಂಧ ಹೇರಿರುವ ಕಾರಣ ಭಾರತ ಮತ್ತು ಚೀನಾದ ಖರೀದಿದಾರರಿಗೆ ಹೆಚ್ಚು ಸ್ಪರ್ಧಾತ್ಮಕ ದರದಲ್ಲಿ ನೀಡುವ ಸಂಭವವಿದೆ.

32ನೇ ದಿನದ ಬೆಳವಣಿಗೆಗಳು

- ರಷ್ಯಾ ಮತ್ತು ಉಕ್ರೇನ್ ನಡುವೆ ಎರಡನೇ ಸುತ್ತಿನ ಮಾತುಕತೆ ಸೋಮವಾರದಿಂದ (ಮಾರ್ಚ್ 28–30) ಮೂರು ದಿನಗಳ ಕಾಲ ಟರ್ಕಿಯಲ್ಲಿ ನಡೆಯಲಿದೆ: ಉಕ್ರೇನ್‌ನ ಸಂಧಾನಕಾರ ಡೇವಿಡ್ ಅರಖಾಮಿಯಾ ಹೇಳಿಕೆ
- ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು ಉಕ್ರೇನ್‌ನ ಇಬ್ಬರು ಸಚಿವರನ್ನು ಪೋಲೆಂಡ್ ರಾಜಧಾನಿ ವಾರ್ಸಾದಲ್ಲಿ ಭೇಟಿ ಮಾಡಿದರು. ಉಕ್ರೇನ್ ಮೇಲೆ ರಷ್ಯಾ ಯುದ್ಧ ಆರಂಭಿಸಿದ ಬಳಿಕ ಉಕ್ರೇನ್ ಸಚಿವರ ಜತೆಗಿನ ಅಧ್ಯಕ್ಷ ಬೈಡನ್ ಅವರ ಮೊದಲ ಮುಖಾಮುಖಿ ಭೇಟಿ ಇದಾಗಿದೆ.
- ಉಕ್ರೇನ್ ಮೇಲಿನ ದಾಳಿ ವೇಳೆ ರಷ್ಯಾ ಸೇನೆಯ ಮತ್ತೊಬ್ಬ ಲೆಫ್ಟಿನೆಂಟ್ ಜನರಲ್ ಯಕೋವ್ ರೆಜಂಟ್ಸೆವ್ ಅವರು ಹತ್ಯೆಗೀಡಾಗಿದ್ದಾರೆ. ಇದರೊಂದಿಗೆ ಉಕ್ರೇನ್ ಮೇಲೆ ಯುದ್ಧ ಸಾರಿದಾಗಿನಿಂದ ಈವರೆಗೆ ರಷ್ಯಾದ 7 ಜನರಲ್‌ಗಳು ಬಲಿಯಾದಂತಾಗಿದೆ. ನೈತಿಕ ಸ್ಥೈರ್ಯ ಕಳೆದುಕೊಂಡ ರಷ್ಯಾ ಸೇನಾ ಸಿಬ್ಬಂದಿಯೇ ಉದ್ದೇಶಪೂರ್ವಕವಾಗಿ ಹತ್ಯೆ ಮಾಡಿದ್ದಾರೆ ಎನ್ನಲಾಗಿದೆ.
- ಉಕ್ರೇನ್‌ನಲ್ಲಿ ಸಂಭವಿಸುತ್ತಿರುವ ಘಟನೆಗಳು ಯಾವಾಗ ಬೇಕಾದರೂ ವಿಶ್ವವ್ಯಾಪಿಯಾಗಿ ಪರಿವರ್ತನೆಯಾಗಬಹುದು. ಹೀಗಾಗಿ ಎಲ್ಲಾ ದೇಶಗಳು ಇಂಥ ತುರ್ತು ಪರಿಸ್ಥಿತಿ ಉದ್ಭವಿಸಿದಾಗ ಅವುಗಳನ್ನು ಹೇಗೆ ನಿಭಾಯಿಸಬೇಕು ಮತ್ತು ಸುಧಾರಿಸಿಕೊಳ್ಳಲು ಏನೆಲ್ಲಾ ಸಿದ್ಧತೆ ಮಾಡಿಕೊಳ್ಳಬೇಕು ಎಂಬಂತೆ ಶಿಕ್ಷಣ ವ್ಯವಸ್ಥೆಯನ್ನು ರೂಪಿಸಿಕೊಳ್ಳಬೇಕು ಎಂದು ಯುನೆಸ್ಕೊ ಜಾಗತಿಕ ಶಿಕ್ಷಣ ನಿಗಾ ವರದಿ ಸಲಹೆ ನೀಡಿದೆ.
- ಉಕ್ರೇನ್‌ನ ಹಾರ್ಕಿವ್‌ನಲ್ಲಿರುವ ಪರಮಾಣು ಸಂಶೋಧನಾ ಕೇಂದ್ರದ ಮೇಲೆ ರಷ್ಯಾ ಶೆಲ್ ದಾಳಿ ನಡೆಸಿದೆ. ಈ ದಾಳಿಯಲ್ಲಿ ಏನೆಲ್ಲಾ ಹಾನಿಯಾಗಿದೆ ಎಂಬುದು ಲೆಕ್ಕ ಹಾಕಲು ಸಾಧ್ಯವಾಗುತ್ತಿಲ್ಲ: ಉಕ್ರೇನ್ ಪರಮಾಣು ಮೇಲ್ವಿಚಾರಕ ಸಂಸ್ಥೆ
- ರಷ್ಯಾದ ಆಡಳಿತ ವ್ಯವಸ್ಥೆಯನ್ನು ಬದಲಾಯಿಸುವ ಯಾವುದೇ ಯೋಜನೆ ನಮಗಿಲ್ಲ: ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕನ್ ಸ್ಪಷ್ಟನೆ.
- ಉಕ್ರೇನ್‌ನ ಇಂಧನ ಮತ್ತು ಆಹಾರ ಸಂಗ್ರಹಾಗಾರಗಳನ್ನು ರಷ್ಯಾ ನಾಶಪಡಿಸಲು ಆರಂಭಿಸಿದೆ. ಹೀಗಾಗಿ ಉಗ್ರಾಣದಲ್ಲಿರುವ ದಾಸ್ತಾನುಗಳನ್ನು ಬೇರೆ ಕಡೆ ಸ್ಥಳಾಂತರಿಸಲಿದೆ: ಉಕ್ರೇನ್ ಆಂತರಿಕ ಸಚಿವಾಲಯದ ಸಲಹೆಗಾರ ಮಾಹಿತಿ
- ಉಕ್ರೇನ್ ಮೇಲಿನ ಯುದ್ಧ ಮತ್ತು ರಷ್ಯಾ ಮೇಲಿನ ಆರ್ಥಿಕ ನಿರ್ಬಂಧಗಳನ್ನು ಹೇರಿವೆ. ಇದರಿಂದ ಉದ್ಯೋಗ ಸಮಸ್ಯೆ ಎದುರಾಗಲಿದ್ದು, ಆಹಾರ ಪದಾರ್ಥಗಳ ಬೆಲೆ ಏರಿಕೆ ಆಗಲಿದೆ. ಈ ಮೂಲಕ ಮಧ್ಯ ಪ್ರಾಚ್ಯ ಸೇರಿದಂತೆ ಇನ್ನಿತರ ದೇಶಗಳಲ್ಲಿ ನಾಗರಿಕ ಶಾಂತಿಗೆ ಭಂಗವಾಗಲಿದೆ: ಅಂತರರಾಷ್ಟ್ರೀಯ ಹಣಕಾಸು ನಿಧಿ ಸಂಸ್ಥೆ ಎಚ್ಚರಿಕೆ
- ಉಕ್ರೇನ್ ಅನ್ನು ರಷ್ಯಾದ ದಾಳಿಯಿಂದ ರಕ್ಷಿಸುವ ನಿಟ್ಟಿನಲ್ಲಿ ನ್ಯಾಟೊ ಸೇರಿದಂತೆ ಇನ್ನಿತರ ದೇಶಗಳು ರಷ್ಯಾದ ಜತೆ ಮಾತುಕತೆ ನಡೆಸಲೇಬೇಕು. ಉಕ್ರೇನ್ ತನ್ನನ್ನು ತಾನು ರಕ್ಷಿಸಿಕೊಳ್ಳಲು ಹೆಚ್ಚಿನ ಬೆಂಬಲ ಬೇಕಿದೆ: ಟರ್ಕಿ ಅಧ್ಯಕ್ಷರ ವಕ್ತಾರ

ಮಾಲ್ಡೀವ್ಸ್: ಭಾರತ ನಿರ್ಮಿತ 'ಕರಾವಳಿ ರಾಡಾರ್ ವ್ಯವಸ್ಥೆ' ಹಸ್ತಾಂತರ

ಮಾಲೆ, ಮಾಲ್ಡೀವ್ಸ್: ಮಾಲ್ಡೀವ್ಸ್‌ನಲ್ಲಿ ಭಾರತ ನಿರ್ಮಿಸಿರುವ 'ಕರಾವಳಿ ರಾಡಾರ್ ವ್ಯವಸ್ಥೆ'ಯನ್ನು ಸೇನಾ ಪಡೆಗಳ ಮುಖ್ಯಸ್ಥರಿಗೆ ವಿದೇಶಾಂಗ ಸಚಿವ ಎಸ್.ಜೈಶಂಕರ್ ಭಾನುವಾರ ಹಸ್ತಾಂತರಿಸಿದರು.

ಅಡ್ಡು ನಗರದಲ್ಲಿ ಭಾರತದ ಅನುದಾನದಲ್ಲಿ ನಿರ್ಮಿಸಲಾಗಿರುವ 'ಪೊಲೀಸ್ ತರಬೇತಿ ಹಾಗೂ ಕಾನೂನು ಕಾಲೇಜು' ಅನ್ನು (ಎನ್‌ಸಿಪಿಎಲ್‌ಇ) ಸಹ ಅವರು ಇದೇ ಸಂದರ್ಭದಲ್ಲಿ ಉದ್ಘಾಟಿಸಿದರು. ಮಾಲ್ಡೀವ್ಸ್ ಅಧ್ಯಕ್ಷ ಇಬ್ರಾಹಿಂ ಮೊಹಮ್ಮದ್ ಸೊಲಿಹ್ ಉಪಸ್ಥಿತರಿದ್ದರು.

ಬಳಿಕ ಮಾತನಾಡಿದ ಅವರು, 'ರಕ್ಷಣಾ ಕ್ಷೇತ್ರದಲ್ಲಿನ ಸಹಕಾರವು ಭಾರತ ಮತ್ತು ಮಾಲ್ಡೀವ್ಸ್ ನಡುವಿನ ಬಾಂಧವ್ಯದ ಮುಖ್ಯ ಆಧಾರಸ್ತಂಭಗಳಲ್ಲೊಂದು' ಎಂದು ಹೇಳಿದರು.

'ಕರಾವಳಿ ರಾಡಾರ್ ವ್ಯವಸ್ಥೆಯಿಂದ ಮಾಲ್ಡೀವ್ಸ್‌ನದು ಮಾತ್ರವಲ್ಲ, ಹಿಂದೂಮಹಾಸಾಗರ ಪ್ರದೇಶದ ಭದ್ರತೆ ಹೆಚ್ಚಲಿದೆ. ಈ ಪ್ರದೇಶದಲ್ಲಿ ಅಭಿವೃದ್ಧಿ ಹಾಗೂ ಶಾಂತಿ ಸ್ಥಾಪನೆಗೂ ನೆರವಾಗಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಹಿಂದೂಮಹಾಸಾಗರ ಪ್ರದೇಶದಲ್ಲಿ ಚೀನಾದ ಪೀಪಲ್ಸ್ ಲಿಬರೇಷನ್ ಆರ್ಮಿಯ (ಪಿಎಲ್‌ಎ) ನೌಕಾಪಡೆಯು ತನ್ನ ಪ್ರಾಬಲ್ಯವನ್ನು ಹೆಚ್ಚಿಸಿಕೊಳ್ಳುತ್ತಿರುವ ಸಂದರ್ಭದಲ್ಲಿ ಭಾರತ ಇಲ್ಲಿ ಕರಾವಳಿ ರಾಡಾರ್ ವ್ಯವಸ್ಥೆ ನಿರ್ಮಿಸಿರುವುದಕ್ಕೆ ಮಹತ್ವ ಬಂದಿದೆ.

ಭಯೋತ್ಪಾದನಾ ಕೃತ್ಯದ ಸಂಚು ಆರೋಪ: 9 ಸೆರೆ

ನವದೆಹಲಿ: ಮಾಲ್ಡೀವ್ಸ್‌ನ ಅಡ್ಡು ನಗರದಲ್ಲಿ ಭಾನುವಾರ ಭಯೋತ್ಪಾದನಾ ಕೃತ್ಯ ಎಸಗಲು ಸಂಚು ರೂಪಿಸಿದ ಆರೋಪದಲ್ಲಿ 9 ಜನರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ದ್ವೀಪಕಲ್ಪದ ಎರಡನೇ ದೊಡ್ಡ ನಗರವಾದ ಅಡ್ಡುನಲ್ಲಿ ನಿರ್ಮಿಸಲಾಗಿರುವ ಪೊಲೀಸ್ ತರಬೇತಿ ಕಾಲೇಜಿನ ಉದ್ಘಾಟನಾ ಕಾರ್ಯಕ್ರಮದಲ್ಲಿ ವಿದೇಶಾಂಗ ಸಚಿವ ಎಸ್. ಜೈಶಂಕರ್ ಪಾಲ್ಗೊಂಡಿದ್ದರು.

'ಶಂಕಿತ ಭಯೋತ್ಪಾದಕರ ಬಂಧನಕ್ಕೆ ಸಂಬಂಧಿಸಿದಂತೆ ಭಾರತ ಹಾಗೂ ಮಾಲ್ಡೀವ್ಸ್‌ನ ಭದ್ರತಾ ಸಂಸ್ಥೆಗಳು ನಿರಂತರ ಸಂಪರ್ಕದಲ್ಲಿವೆ' ಎಂದು ಕೇಂದ್ರ ಸರ್ಕಾರದ ಮೂಲಗಳು ತಿಳಿಸಿವೆ.

'ಪೊಲೀಸ್ ತರಬೇತಿ ಹಾಗೂ ಕಾನೂನು ಕಾಲೇಜು' ಉದ್ಘಾಟನಾ ಕಾರ್ಯಕ್ರಮದಲ್ಲಿ ವಿದೇಶಾಂಗ ಸಚಿವ ಎಸ್. ಜೈಶಂಕರ್, ಮಾಲ್ಡೀವ್ಸ್ ಅಧ್ಯಕ್ಷ ಇಬ್ರಾಹಿಂ ಮೊಹಮ್ಮದ್ ಸೊಲಿಹ್ ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

ಬಿರ್‌ಭೂಮ್ ಸಜೀವ ದಹನ ಪ್ರಕರಣ: ಹಲವು ತಂಡಗಳಲ್ಲಿ ಕಾರ್ಯಾಚರಣೆ

ತನಿಖೆ ತೀವ್ರಗೊಳಿಸಿದ ಸಿಬಿಐ

ರಾಮ್‌ಪುರಹಾಟ್ (ಪಶ್ಚಿಮ ಬಂಗಾಳ) (ಪಿಟಿಐ): ಇಲ್ಲಿನ ಬೋಗ್‌ತುಇ ಗ್ರಾಮದಲ್ಲಿ ಎಂಟು ಜನರನ್ನು ಸಜೀವವಾಗಿ ದಹನ ಮಾಡಿದ ಪ್ರಕರಣದ ವಿಚಾರಣೆಯ ಭಾಗವಾಗಿ ಸಿಬಿಐ, ಗಾಯಾಳುಗಳ ಜತೆ ಮಾತುಕತೆ ನಡೆಸಿದೆ. ಪ್ರಕರಣದ ತನಿಖೆಗಾಗಿ ಇಲ್ಲಿ ತಾತ್ಕಾಲಿಕ ಶಿಬಿರ ಆರಂಭಿಸಿರುವ ಸಿಬಿಐ, ಹಲವು ತಂಡಗಳಾಗಿ ಕೆಲಸ ಮಾಡುತ್ತಿದೆ. ತನಿಖೆಯನ್ನು ತೀವ್ರಗೊಳಿಸಿದೆ.

ಮಾರ್ಚ್ 22ರಂದು ನಡೆದಿದ್ದ ಘಟನೆಯಲ್ಲಿ 10ಕ್ಕೂ ಹೆಚ್ಚು ಮನೆಗಳಿಗೆ ಬೆಂಕಿ ಹಚ್ಚಲಾಗಿತ್ತು. ಒಂದೇ ಕುಟುಂಬದ ಎಂಟು ಜನರು ಬೆಂಕಿಗೆ ಆಹುತಿಯಾಗಿದ್ದರು. ಅವರನ್ನು ಸಜೀವವಾಗಿ ಸುಡುವ ಮುನ್ನ, ತೀವ್ರವಾಗಿ ಥಳಿಸಲಾಗಿತ್ತು ಎಂದು ಶವಪರೀಕ್ಷೆ ನಡೆಸಿದ್ದ ರಾಮ್‌ಪುರಹಾಟ್ ಆಸ್ಪತ್ರೆಯ ಮೂಲಗಳು ಹೇಳಿದ್ದವು. ಸರ್ಕಾರವು ಪ್ರಕರಣದ ತನಿಖೆಗೆ ಎಸ್‌ಐಟಿ ನೇಮಿಸಿತ್ತು. ತನಿಖೆಯನ್ನು ಸಿಬಿಐಗೆ ವಹಿಸಬೇಕು ಎಂದು ಕಲ್ಕತ್ತ ಹೈಕೋರ್ಟ್‌ನಲ್ಲಿ ಹಲವರು ಅರ್ಜಿ ಸಲ್ಲಿಸಿದ್ದರು. ಆ ಅರ್ಜಿಗಳನ್ನು ತಿರಸ್ಕರಿಸಿದ್ದ ಹೈಕೋರ್ಟ್, ಸ್ವಯಂಪ್ರೇರಿತವಾಗಿ ಮೊಕದ್ದಮೆ ದಾಖಲಿಸಿಕೊಂಡಿತ್ತು.

ಎಸ್‌ಐಟಿ, ತನಿಖೆಯನ್ನು ನಿರೀಕ್ಷಿತ ಮಟ್ಟದಲ್ಲಿ ನಡೆಸಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ್ದ ಹೈಕೋರ್ಟ್, ತನಿಖೆಯನ್ನು ಸಿಬಿಐಗೆ ವಹಿಸಿ ಶುಕ್ರವಾರ ಆದೇಶ ಹೊರಡಿಸಿತ್ತು. ತಕ್ಷಣವೇ ತನಿಖೆ ಆರಂಭಿಸುವಂತೆ ಸಿಬಿಐಗೆ ಸೂಚಿಸಿತ್ತು. ಈ ಪ್ರಕಾರ ಸಿಬಿಐ ಶುಕ್ರವಾರ ರಾತ್ರಿಯೇ ಪ್ರಕರಣ ದಾಖಲಿಸಿಕೊಂಡು, ಶನಿವಾರದಿಂದಲೇ ತನಿಖೆ ಆರಂಭಿಸಿತ್ತು.

ಡಿಐಜಿ ರ‍್ಯಾಂಕ್‌ನ ಅಧಿಕಾರಿಯ ನೇತೃತ್ವದಲ್ಲಿ ಸಿಬಿಐ ತನಿಖೆ ನಡೆಸುತ್ತಿದೆ. ಶನಿವಾರವೇ ಇಲ್ಲಿಗೆ ಬಂದಿರುವ ಸಿಬಿಐ ಅಧಿಕಾರಿಗಳು, ಇಲ್ಲಿನ ಪ್ರವಾಸಿ ಮಂದಿರದಲ್ಲಿ ತಾತ್ಕಾಲಿಕ ಕಚೇರಿ ಆರಂಭಿಸಿದ್ದಾರೆ. ಅಧಿಕಾರಿಗಳ ಒಂದು ತಂಡವು ಘಟನಾ ಸ್ಥಳಕ್ಕೆ ಶನಿವಾರ ಮತ್ತು ಭಾನುವಾರ ಎರಡೂ ದಿನ ಭೇಟಿ ನೀಡಿ, ಸಾಕ್ಷ್ಯಗಳನ್ನು ಸಂಗ್ರಹಿಸಿದೆ. ಸ್ಥಳೀಯರು ಮತ್ತು ಸಂತ್ರಸ್ತ ಕುಟುಂಬಗಳ ಸದಸ್ಯರಿಂದ ಮಾಹಿತಿ ಸಂಗ್ರಹಿಸಿದೆ. ಇದರ ಜತೆಯಲ್ಲಿಯೇ ದೆಹಲಿಯ ಕೇಂದ್ರೀಯ ವಿಧಿ–ವಿಜ್ಞಾನ ಪ್ರಯೋಗಾಲಯದ ಅಧಿಕಾರಿಗಳು ಘಟನಾ ಸ್ಥಳದಿಂದ ಮಾದರಿ ಸಂಗ್ರಹಿಸಿದ್ದಾರೆ.

ಸಿಬಿಐ ಅಧಿಕಾರಿಗಳ ಮತ್ತೊಂದು ತಂಡವು ಭಾನುವಾರ ರಾಮ್‌ಪುರಹಾಟ್‌ನ ಆಸ್ಪತ್ರೆಗೆ ಭೇಟಿ ನೀಡಿ, ಅಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮೂವರ ಜತೆ ಮಾತುಕತೆ ನಡೆಸಿದೆ. 'ಘಟನೆ ಹೇಗಾಯಿತು ಎಂಬುದರ ಬಗ್ಗೆ ಗಾಯಾಳುಗಳು ಏನು ಹೇಳುತ್ತಾರೆ ಎಂಬುದನ್ನು ದಾಖಲಿಸಿಕೊಳ್ಳುವುದು ನಮ್ಮ ಉದ್ದೇಶವಾಗಿತ್ತು' ಎಂದು ಸಿಬಿಐ ಅಧಿಕಾರಿಗಳು ಹೇಳಿದ್ದಾರೆ.

ಅಗ್ನಿಶಾಮಕ ದಳದ ಸಿಬ್ಬಂದಿ ವಿಚಾರಣೆ: ಬೆಂಕಿಗೆ ಆಹುತಿಯಾಗಿದ್ದ ಮನೆಗಳನ್ನು ನಂದಿಸುವಾಗ ಇದ್ದ ಸ್ಥಿತಿಯ ಬಗ್ಗೆ ಮಾಹಿತಿ ಪಡೆಯಲು ಸಿಬಿಐ ಅಧಿಕಾರಿಗಳು, ಅಗ್ನಿಶಾಮಕ ದಳದ ಸಿಬ್ಬಂದಿಯನ್ನು ವಿಚಾರಣೆಗೆ ಒಳಪಡಿಸಿದ್ದಾರೆ.

ಹೈಕೋರ್ಟ್‌ನಲ್ಲಿ, ಪ್ರಕರಣದ ಮುಂದಿನ ವಿಚಾರಣೆ ಏಪ್ರಿಲ್ 7ಕ್ಕೆ ನಿಗದಿಯಾಗಿದೆ. ಅದಕ್ಕೂ ಮುನ್ನ ತನಿಖೆಯ ಪ್ರಗತಿ ವರದಿಯನ್ನು ಸಲ್ಲಿಸಿ ಎಂದು ಸಿಬಿಐಗೆ ಹೈಕೋರ್ಟ್ ಸೂಚಿಸಿತ್ತು.

> **ಸಿಬಿಐ ತನಿಖೆಯನ್ನು ಪ್ರಭಾವಿಸಲು ಬಿಜೆಪಿ ಯತ್ನಿಸುತ್ತಿರುವ ಸೂಚನೆಗಳು ಸಿಕ್ಕಿವೆ. ಬಿಜೆಪಿ ತನ್ನ ರಾಜಕೀಯ ಹಿತಾಸಕ್ತಿಗಾಗಿ ತನಿಖೆಯನ್ನು ಬಳಸಿಕೊಳ್ಳುತ್ತಿದೆ**
> **ಕುನಾಲ್ ಘೋಷ್,** ಟಿಎಂಸಿ ವಕ್ತಾರ

> **ಅವರ ಆರೋಪಗಳ ಬಗ್ಗೆ ಮಾತನಾಡುವುದೇನಿದೆ? ಬಿರ್‌ಭೂಮ್ ಹತ್ಯೆಯ ನಂತರ ಟಿಎಂಸಿ ಸರ್ಕಾರವು ಜನರ ವಿಶ್ವಾಸವನ್ನು ಕಳೆದುಕೊಂಡಿದೆ**
> **ಸಮಿಕ್ ಭಟ್ಟಾಚಾರ್ಯ,** ಬಿಜೆಪಿ ವಕ್ತಾರ

'ಪಶ್ಚಿಮ ಬಂಗಾಳದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕುಸಿದುಬಿದ್ದಿದೆ. ರಾಜ್ಯದಲ್ಲಿ ಆಂತರಿಕ ಕ್ಷೋಭೆ ಉಂಟಾಗಿದೆ. ಕೇಂದ್ರ ಸರ್ಕಾರವು 355ನೇ ವಿಧಿಯನ್ನು ಜಾರಿ ಮಾಡಿ, ರಾಜ್ಯವನ್ನು ರಕ್ಷಿಸಬೇಕು' ಎಂದು ಒತ್ತಾಯಿಸಿ ಕಾಂಗ್ರೆಸ್ ಕಾರ್ಯಕರ್ತರು ಕೋಲ್ಕತ್ತದಲ್ಲಿ ಭಾನುವಾರ ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

'ಓಡಿಹೋದವರ ಹೆಸರು ಪಟ್ಟಿ ಮಾಡಿ'

'ಪ್ರಕರಣದ ತನಿಖೆಯ ಭಾಗವಾಗಿ ಬೋಗ್‌ತುಇ ಗ್ರಾಮಸ್ಥರನ್ನೂ ವಿಚಾರಣೆಗೆ ಒಳಪಡಿಸಲು ನಿರ್ಧರಿಸಲಾಗಿದೆ. ಯಾರನ್ನೆಲ್ಲಾ ವಿಚಾರಣೆಗೆ ಒಳಪಡಿಸಬೇಕು ಎಂಬ ಪಟ್ಟಿಯನ್ನು ಸಿದ್ಧಪಡಿಸಲಾಗುತ್ತಿದೆ. ಶೀಘ್ರ ಗ್ರಾಮಸ್ಥರ ವಿಚಾರಣೆ ಆರಂಭಿಸಲಾಗುತ್ತದೆ' ಎಂದು ಸಿಬಿಐ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

'ಘಟನೆಯ ನಂತರ ಗ್ರಾಮದ ಹಲವರು ಓಡಿಹೋಗಿದ್ದಾರೆ. ಹೀಗೆ ಓಡಿಹೋದವರ ಹೆಸರು ಮತ್ತು ವಿವರಗಳನ್ನು ಪಟ್ಟಿ ಮಾಡಿಕೊಡಲು ಸ್ಥಳೀಯಾಡಳಿತಕ್ಕೆ ಸೂಚನೆ ನೀಡಲಾಗಿದೆ. ಓಡಿಹೋದವರನ್ನು ಕರೆಸಿ, ವಿಚಾರಣೆಗೆ ಒಳಪಡಿಸಲಾಗುತ್ತದೆ' ಎಂದು ಆ ಅಧಿಕಾರಿ ಮಾಹಿತಿ ನೀಡಿದ್ದಾರೆ.

ಸಂಕ್ಷಿಪ್ತ ಸುದ್ದಿ

ದುಷ್ಕರ್ಮಿಗಳ ಪತ್ತೆಗೆ ಎಸ್‌ಐಟಿ ರಚನೆ ಕೋರಿ 'ಸುಪ್ರೀಂ'ಗೆ ಅರ್ಜಿ

ನವದೆಹಲಿ: ಜಮ್ಮು–ಕಾಶ್ಮೀರದಲ್ಲಿ 1989–2003ರ ಅವಧಿಯಲ್ಲಿ ನಡೆದಿದೆ ಎನ್ನಲಾದ ಹಿಂದೂಗಳು ಹಾಗೂ ಸಿಖ್ಖರ 'ಹತ್ಯಾಕಾಂಡ'ದ ದುಷ್ಕರ್ಮಿಗಳ ಪತ್ತೆಗಾಗಿ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸುವಂತೆ ಕೋರಿ ಸುಪ್ರೀಂಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಲಾಗಿದೆ.

'ವಿ ದಿ ಸಿಟಿಜೆನ್ಸ್' ಎಂಬ ಸ್ವಯಂ ಸೇವಾ ಸಂಸ್ಥೆಯು ವಕೀಲ ವರುಣಕುಮಾರ್ ಸಿನ್ಹಾ ಅವರ ಮೂಲಕ ಈ ಅರ್ಜಿ ಸಲ್ಲಿಸಿದೆ.

ಈ 'ಹತ್ಯಾಕಾಂಡ'ದಲ್ಲಿ ಎಷ್ಟು ಜನ ಹಿಂದೂಗಳು ಹಾಗೂ ಸಿಖ್ಖರು ಪ್ರಾಣ ಕಳೆದುಕೊಂಡಿದ್ದಾರೆ, ಎಷ್ಟು ಜನ ಬದುಕುಳಿದಿದ್ದಾರೆ ಎಂಬ ಬಗ್ಗೆ ಗಣತಿ ನಡೆಸಬೇಕು. ಆಗ ಜಮ್ಮು–ಕಾಶ್ಮೀರ ತೊರೆದವರು ಈಗ ದೇಶದ ವಿವಿಧ ಭಾಗಗಳಲ್ಲಿ ನೆಲೆಸಿದ್ದಾರೆ. ಅವರ ಪುನರ್ವಸತಿಗೆ ಕ್ರಮ ಕೈಗೊಳ್ಳುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಬೇಕು ಎಂದು ಪಿಐಎಲ್‌ನಲ್ಲಿ ಕೋರಲಾಗಿದೆ.

ಕ್ಷಿಪಣಿ ಪ್ರಯೋಗ ಯಶಸ್ವಿ

ಬಾಲಾಸೋರ್ (ಪಿಟಿಐ): ಭಾರತ ತನ್ನ ಮಧ್ಯಮ ಶ್ರೇಣಿಯ ವಾಯುಮಾರ್ಗದಲ್ಲಿ ಗುರಿಯಾಗಿಸಿ ಭೂಮಿಯಿಂದ ಪ್ರಯೋಗಿಸಬಹುದಾದ ಕ್ಷಿಪಣಿಯ ಪರೀಕ್ಷಾರ್ಥ ಪ್ರಯೋಗವನ್ನು ಒಡಿಶಾದ ಚಾಂದಿಪುರ್‌ನಲ್ಲಿ ಭಾನುವಾರ ಯಶಸ್ವಿಯಾಗಿ ನಡೆಸಿತು.

ದೂರಗಾಮಿ ಗುರಿಯನ್ನು ಅಂದಾಜಿಸಿ ಅತಿವೇಗವಾಗಿ ಮುನ್ನುಗ್ಗುವ ಈ ಕ್ಷಿಪಣಿಯ ಪ್ರಯೋಗ ಬೆಳಿಗ್ಗೆ 10.30ಕ್ಕೆ ನಡೆಯಿತು ಎಂದು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯು (ಡಿಆರ್‌ಡಿಒ) ಹೇಳಿಕೆಯಲ್ಲಿ ತಿಳಿಸಿದೆ.

ಅಮರನಾಥ ಯಾತ್ರೆ: ಜೂನ್ 30 ರಿಂದ ಆರಂಭ

ಜಮ್ಮು (ಪಿಟಿಐ): ಅಮರನಾಥ ದೇವಾಲಯಕ್ಕೆ ವಾರ್ಷಿಕ 43 ದಿನಗಳ ತೀರ್ಥಯಾತ್ರೆಯು ಜೂನ್ 30 ರಿಂದ ಆರಂಭವಾಗುವುದು ಎಂದು ಅಧಿಕಾರಿಯೊಬ್ಬರು ಭಾನುವಾರ ಹೇಳಿದ್ದಾರೆ.

ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹ ಅವರ ಅಧ್ಯಕ್ಷತೆಯಲ್ಲಿ ನಡೆದ ಶ್ರೀ ಅಮರನಾಥ ದೇವಾಲಯ ಮಂಡಳಿಯ ಸಭೆಯು ಈ ನಿರ್ಧಾರ ಕೈಗೊಂಡಿದೆ.

ಏ.2ರಿಂದ ಅರ್ಜಿ ಸಲ್ಲಿಕೆ ಪ್ರಕ್ರಿಯೆ

ನವದೆಹಲಿ (ಪಿಟಿಐ): ವಿವಿಧ ಕೇಂದ್ರೀಯ ವಿಶ್ವವಿದ್ಯಾಲಯಗಳ ಪದವಿ ಕೋರ್ಸ್‌ಗಳಿಗೆ ಪ್ರವೇಶ ಕಲ್ಪಿಸಲು ನಡೆಸಲಿರುವ ಸಾಮಾನ್ಯ ವಿಶ್ವವಿದ್ಯಾಲಯ ಪ್ರವೇಶ ಪರೀಕ್ಷೆಗೆ (ಸಿಯುಇಟಿ) ಅರ್ಜಿ ಸಲ್ಲಿಸುವ ಪ್ರಕ್ರಿಯೆ ಏಪ್ರಿಲ್ 2ರಿಂದ ಆರಂಭವಾಗಲಿದೆ.

ಪರೀಕ್ಷೆ ನಡೆಸಲಿರುವ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ಈ ಪ್ರಕಟಣೆ ನೀಡಿದೆ. ಪ್ರವೇಶ ಪರೀಕ್ಷೆಯು ಕಂಪ್ಯೂಟರ್ ಆಧರಿತ ಪರೀಕ್ಷೆ ಮಾದರಿಯದ್ದಾಗಿರುತ್ತದೆ. ಕೋರ್ಸ್‌ಗಳ ವಿವರ ಆಯಾ ವಿಶ್ವವಿದ್ಯಾಲಯಗಳ ವೆಬ್‌ಸೈಟ್‌ನಲ್ಲಿ ಲಭ್ಯವಿದೆ ಎಂದು ತಿಳಿಸಿದೆ.

ಅರ್ಜಿ ಸಲ್ಲಿಸಲು ಏ.30 ಕಡೇ ದಿನ. ವಿವರಗಳಿಗೆ ಆಸಕ್ತರು ವೆಬ್‌ಸೈಟ್ ವೀಕ್ಷಿಸಿ: ವಿಳಾಸ: https://cuet.samarth.ac.in/.

ಕೋವಿಡ್: ಧ್ವನಿ ಸಂದೇಶ ಕೈಬಿಡಲು ಚಿಂತನೆ

ನವದೆಹಲಿ: ಕೋವಿಡ್–19ರ ಕುರಿತು ಜನರಲ್ಲಿ ಜಾಗೃತಿ ಮೂಡಿಸಲು ದೂರವಾಣಿ ಕರೆಗಿಂತ ಮೊದಲು ಪ್ರಸಾರವಾಗುತ್ತಿದ್ದ ಧ್ವನಿ ಸಂದೇಶವನ್ನು ಕೈಬಿಡಲು ಸರ್ಕಾರ ಚಿಂತನೆ ನಡೆಸಿದೆ.

ಈ ಧ್ವನಿ ಸಂದೇಶದ ಕಾರಣ ತುರ್ತು ಸಂದರ್ಭಗಳಲ್ಲಿ ನಿರ್ಣಾಯಕ ಕರೆಗಳು ವಿಳಂಬವಾಗುತ್ತಿದ್ದು, ಈ ಕಾರಣಕ್ಕೆ ಕೈಬಿಡಲು ಚಿಂತನೆ ನಡೆಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಕೋವಿಡ್: ಶಾಂಘೈ ಲಾಕ್‌ಡೌನ್

ಶಾಂಘೈ (ಎಎಫ್‌ಪಿ): ಚೀನಾದ ದೊಡ್ಡ ನಗರಗಳಲ್ಲೊಂದಾದ ಶಾಂಘೈನಲ್ಲಿ ರೂಪಾಂತರ ಓಮೈಕ್ರಾನ್ ತಳಿ ಸೋಂಕಿನ ಪ್ರಕರಣಗಳು ಹೆಚ್ಚುತ್ತಿವೆ. ಹಾಗಾಗಿ, ಸೋಮವಾರದಿಂದ ನಗರದಲ್ಲಿ ಹಂತಹಂತವಾಗಿ ಲಾಕ್‌ಡೌನ್ ಜಾರಿಗೊಳಿಸಲಾಗುವುದು ಎಂದು ಸ್ಥಳೀಯ ಆಡಳಿತ ತಿಳಿಸಿದೆ.

ನಗರದ ಪೂರ್ವ ಭಾಗದಲ್ಲಿ ಸೋಮವಾರದಿಂದ ಅನ್ವಯವಾಗುವಂತೆ ಲಾಕ್‌ಡೌನ್ ಜಾರಿಗೊಳಿಸಲಾಗುವುದು. ಪಶ್ಚಿಮ ಭಾಗದಲ್ಲಿ ಏಪ್ರಿಲ್ 1ರಿಂದ ಲಾಕ್‌ಡೌನ್ ಜಾರಿಯಾಗಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆಂಧ್ರಪ್ರದೇಶದ ಅಮರಾವತಿಯಲ್ಲಿರುವ ವೆಲ್ಲೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ವಿಶ್ವವಿದ್ಯಾಲಯದ ವಿದ್ಯಾರ್ಥಿ ಸುಧಾಂಶು ದೊಡ್ಡಿ ಅವರಿಗೆ ಅಮೆರಿಕದ ಪ್ರತಿಷ್ಠಿತ ಕಂಪನಿಯಲ್ಲಿ ಉದ್ಯೋಗ ಲಭಿಸಿದ್ದಕ್ಕಾಗಿ ಇತ್ತೀಚೆಗೆ ವಿ.ವಿಯಲ್ಲಿ ಸನ್ಮಾನಿಸಲಾಯಿತು

ಅಮರಾವತಿ: ವಿಐಟಿ ವಿದ್ಯಾರ್ಥಿಗೆ ವಾರ್ಷಿಕ ₹ 63 ಲಕ್ಷ ವೇತನದ ಉದ್ಯೋಗ

ಅಮರಾವತಿ, ಆಂಧ್ರಪ್ರದೇಶ: ನಗರದಲ್ಲಿರುವ ವೆಲ್ಲೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ವಿಐಟಿ) ವಿಶ್ವವಿದ್ಯಾಲಯದ ಬಿ.ಟೆಕ್ (ಸಿಎಸ್‌ಇ) ವಿದ್ಯಾರ್ಥಿ ಸುಧಾಂಶು ದೊಡ್ಡಿ ಅವರು ಇತ್ತೀಚೆಗೆ ನಡೆದ ಅಂತರರಾಷ್ಟ್ರೀಯ ಕ್ಯಾಂಪಸ್ ಸಂದರ್ಶನದಲ್ಲಿ ಅಮೆರಿಕ ಮೂಲದ ಪ್ರತಿಷ್ಠಿತ ಕಂಪನಿಗೆ ಆಯ್ಕೆಯಾಗಿದ್ದಾರೆ.

'ಅನಲಿಟಿಕ್ಸ್ ಕ್ಷೇತ್ರದಲ್ಲಿ ಜಾಗತಿಕವಾಗಿ ಮುಂಚೂಣಿಯಲ್ಲಿರುವ ಈ ಕಂಪನಿಯು ಸಂಸ್ಥೆಯ ವಿದ್ಯಾರ್ಥಿ ಸುಧಾಂಶು ಅವರಿಗೆ ವಾರ್ಷಿಕ ₹ 63 ಲಕ್ಷ ವೇತನ ನಿಗದಿ ಮಾಡಿದೆ' ಎಂದು ವಿಐಟಿ ವಿ.ವಿ ಪ್ರಕಟಣೆ ತಿಳಿಸಿದೆ.

ಸಂಸ್ಥೆಯಲ್ಲಿ ಇತ್ತೀಚೆಗೆ ನಡೆದ ಕಾರ್ಯಕ್ರಮದಲ್ಲಿ ವಿ.ವಿ ಸಂಸ್ಥಾಪಕ ಮತ್ತು ಕುಲಾಧಿಪತಿ ಡಾ.ಜಿ. ವಿಶ್ವನಾಥನ್, ಕುಲಪತಿ ಡಾ.ಎಸ್.ವಿ.ಕೋಟಾರೆಡ್ಡಿ, ಕೆರಿಯರ್ ಡೆವಲೆಪ್‌ಮೆಂಟ್ ಸೆಂಟರ್‌ನ ನಿರ್ದೇಶಕ ಡಾ.ವಿ.ಸಾಮ್ಯುಯೆಲ್ ರಾಜಕುಮಾರ್ ಅವರು ಸುಧಾಂಶು ದೊಡ್ಡಿ ಅವರನ್ನು ಸನ್ಮಾನಿಸಿದರು.

'ದೇಶಿ ಉತ್ಪನ್ನಗಳಿಗೆ ಜಾಗತಿಕ ಪ್ರಾಮುಖ್ಯತೆ'

ನವದೆಹಲಿ (ಪಿಟಿಐ): 'ಭಾರತ ಪ್ರಸಕ್ತ ಹಣಕಾಸು ವರ್ಷದಲ್ಲಿ ₹ 30.51 ಲಕ್ಷ ಕೋಟಿ ಮೌಲ್ಯದ ರಫ್ತು ಸಾಧನೆ ಮಾಡಿದೆ. ಇದು, ದೇಶೀಯ ಉತ್ಪನ್ನಗಳಿಗೆ ವಿಶ್ವದಾದ್ಯಂತ ಬೇಡಿಕೆ ಇರುವುದಕ್ಕೆ ನಿದರ್ಶನ' ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಹೇಳಿದರು.

'ಎಲ್ಲ ಭಾರತೀಯರು ದೇಶಿ ಉತ್ಪನ್ನಗಳಿಗೆ ಹೆಚ್ಚಿನ ಬೆಂಬಲ ನೀಡಲು ಆರಂಭಿಸಿದರೆ, ದೇಶಿಯ ಉತ್ಪನ್ನಗಳು ಜಾಗತಿಕ ಪ್ರಾಮುಖ್ಯತೆ ಪಡೆಯಲು ಹೆಚ್ಚು ಸಮಯ ಬೇಕಾಗದು' ಎಂದೂ ಅವರು ತಮ್ಮ ಮಾಸಿಕ 'ಮನ್ ಕಿ ಬಾತ್' ಬಾನುಲಿ ಭಾಷಣದಲ್ಲಿ ಹೇಳಿದರು.

ಬಿಜಾಪುರದ ಹಣ್ಣು, ತರಕಾರಿ, ಅಸ್ಸಾಂನ ಹೈಲಾಕಡಿ, ಒಸ್ಮಾನಾಬಾದ್‌ನ ಕೈಮಗ್ಗದ ವಸ್ತುಗಳು ಸೇರಿದಂತೆ ವಿವಿಧೆಡೆಯ ಉತ್ಪನ್ನಗಳು ಈಗ ವಿದೇಶಗಳಿಗೆ ರಫ್ತಾಗುತ್ತಿದೆ. ರಫ್ತು ಮೌಲ್ಯವು 2020–21ನೇ ಸಾಲಿನಲ್ಲಿ 292 ಬಿಲಿಯನ್ ಡಾಲರ್ ಇದ್ದರೆ, ಈಗ 21–22ನೇ ಸಾಲಿನಲ್ಲಿ 400 ಬಿಲಿಯನ್ ಡಾಲರ್‌ಗೆ ಅಂದರೆ 30.51 ಲಕ್ಷ ಕೋಟಿಗೆ ಏರಿಕೆಯಾಗಿದೆ ಎಂದು ಪ್ರಧಾನಿ ಹೇಳಿದರು.

ಅಂತರರಾಷ್ಟ್ರೀಯ ವಿಮಾನಗಳ ಸೇವೆ ಪುನರಾರಂಭ

ನವದೆಹಲಿ(ಪಿಟಿಐ): ಕೊರೊನಾ ಸೋಂಕು ಕಾರಣಕ್ಕೆ ಕಳೆದ 2 ವರ್ಷಗಳಿಂದ ಸ್ಥಗಿತವಾಗಿದ್ದ ಅಂತರರಾಷ್ಟ್ರೀಯ ವಿಮಾನಗಳ ಸೇವೆ ಭಾನುವಾರದಿಂದ ಆರಂಭವಾಗಿದೆ ಎಂದು ಕೇಂದ್ರ ನಾಗರಿಕ ವಿಮಾನಯಾನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಅವರು ಹೇಳಿದ್ದಾರೆ. ಅಲ್ಲದೆ ಇದು ಬಹುಮುಖ್ಯವಾದ ದಿನ ಎಂದು ಅವರು ಪ್ರತಿಪಾದಿಸಿದ್ದಾರೆ.

ಕೊರೊನಾ ಸೋಂಕು ನಿಯಂತ್ರಣದ ಭಾಗವಾಗಿ 2020ರ ಮಾರ್ಚ್ 23ರಂದು ಅಂತರರಾಷ್ಟ್ರೀಯ ವಿಮಾನ ಸೇವೆಗಳನ್ನು ಭಾರತ ಸರ್ಕಾರ ರದ್ದುಗೊಳಿಸಿತ್ತು. ಏರ್ ಬಬಲ್ ವ್ಯವಸ್ಥೆಯಡಿ ಕೆಲವೇ ಕೆಲವು ದೇಶಗಳಿಗೆ ಮಾತ್ರ ವಿಮಾನ ಸೇವೆ ನೀಡಲಾಗಿತ್ತು.

ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಮೇಲೆ ಹಲ್ಲೆ

ಪಟ್ನಾ (ಪಿಟಿಐ): ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ಮೇಲೆ ಅಪರಿಚಿತನೊಬ್ಬ ದಾಳಿ ನಡೆಸಿದ ಘಟನೆ ಭಾನುವಾರ ನಡೆದಿದೆ. ಭಕ್ತಿಯಾರ್‌ಪುರದಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಪ್ರತಿಮೆಗಳಿಗೆ ನಿತೀಶ್ ಅವರು ಪುಷ್ಪನಮನ ಸಲ್ಲಿಸುವ ಕಾರ್ಯಕ್ರಮದ ವೇಳೆ ಈ ಹಲ್ಲೆ ನಡೆದಿದೆ ಎಂದು ಮೂಲಗಳು ತಿಳಿಸಿವೆ.

20ರಿಂದ 30 ವರ್ಷದೊಳಗಿನ ಯುವಕನೊಬ್ಬ ನಿತೀಶ್ ಅವರ ಹಿಂಬದಿಯಿಂದ ಬಂದು ಅವರೆದುರು ನಿಂತುಕೊಳ್ಳುತ್ತಿರುವ ದೃಶ್ಯವು ಸಿ.ಸಿ.ಟಿ.ವಿ ಕ್ಯಾಮರಾದಲ್ಲಿ ದಾಖಲಾಗಿದೆ. ತಕ್ಷಣವೇ ಮಧ್ಯಪ್ರವೇಶಿಸಿದ ಮುಖ್ಯಮಂತ್ರಿಗಳ ಭದ್ರತಾ ಸಿಬ್ಬಂದಿ, ವ್ಯಕ್ತಿಯನ್ನು ಹಿಡಿದು ಪೊಲೀಸರ ವಶಕ್ಕೆ ಒಪ್ಪಿಸಿದರು.

ಮುಕೇಶ್ ಸಹಾನಿ ವಜಾ: ಬಿಹಾರದ ಮೀನುಗಾರಿಕಾ ಸಚಿವ ಮುಕೇಶ್ ಸಹಾನಿ ಅವರನ್ನು ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಸಚಿವ ಸಂಪುಟದಿಂದ ವಜಾ ಮಾಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸಹಾನಿ ಅವರು ವಿಕಾಸಶೀಲ ಇನ್ಸಾನ್ ಪಕ್ಷದ ಸ್ಥಾಪಕರು. ಅವರ ಪಕ್ಷವು ಎನ್‌ಡಿಎ ಮಿತ್ರಪಕ್ಷವಾಗಿ ಉಳಿದಿಲ್ಲ ಎಂಬುದಾಗಿ ಬಿಜೆಪಿ ತಿಳಿಸಿದ್ದ ಕಾರಣ, ನಿತೀಶ್ ಅವರು ಈ ಕ್ರಮ ತೆಗೆದುಕೊಂಡಿದ್ದು, ಈ ಸಂಬಂಧ ರಾಜ್ಯಪಾಲರಿಗೆ ಸದ್ಯದಲ್ಲೇ ಲಿಖಿತ ಮನವಿ ಸಲ್ಲಿಸಲಾಗುತ್ತದೆ ಎಂದು ಮೂಲಗಳು ತಿಳಿಸಿವೆ.

ಬಿಜೆಪಿ ಬೆಂಬಲದೊಂದಿಗೆ ವಿಧಾನ ಪರಿಷತ್‌ಗೆ ಆಯ್ಕೆಯಾಗಿದ್ದ ಸಹಾನಿ, ನಿತೀಶ್ ನೇತೃತ್ವದ ಸಂಪುಟ ಸೇರ್ಪಡೆಯಾಗಿದ್ದರು.

ಸಾವಂತ್ ಪ್ರಮಾಣ ಇಂದು

ಪಣಜಿ (ಪಿಟಿಐ): ಪ್ರಮೋದ್ ಸಾವಂತ್ ಅವರು ಎರಡನೇ ಬಾರಿಗೆ ಗೋವಾ ಮುಖ್ಯಮಂತ್ರಿಯಾಗಿ ಸೋಮವಾರ ಪ್ರಮಾಣವಚನ ಸ್ವೀಕರಿಸಲಿದ್ದಾರೆ. ಪ್ರಧಾನಿ ನರೇಂದ್ರ ಮೋದಿ, ಸಚಿವ ರಾಜನಾಥ್ ಸಿಂಗ್ ಸೇರಿದಂತೆ ಹಲವರ ಸಮ್ಮುಖದಲ್ಲಿ ಅವರು ಅಧಿಕಾರ ವಹಿಸಿಕೊಳ್ಳಲಿದ್ದಾರೆ.

ಪ್ರಮೋದ್ ಸಾವಂತ್

ಇಲ್ಲಿನ ಶ್ಯಾಮ್‌ಪ್ರಸಾದ್ ಮುಖರ್ಜಿ ಮೈದಾನದಲ್ಲಿ ಬೆಳಿಗ್ಗೆ 11 ಗಂಟೆಗೆ ಪ್ರಮಾಣವಚನ ಸ್ವೀಕಾರ ಕಾರ್ಯಕ್ರಮ ನಿಗದಿಯಾಗಿದೆ. ಸುಮಾರು 10 ಸಾವಿರ ಜನರು ಭಾಗವಹಿಸುವ ನಿರೀಕ್ಷೆಯಿದೆ. ರಾಜಭವನದ ಹೊರಗಡೆ ಮುಖ್ಯಮಂತ್ರಿ ಪ್ರಮಾಣವಚನ ಸ್ವೀಕಾರ ಕಾರ್ಯಕ್ರಮ ನಡೆಯುತ್ತಿರುವುದು ಇದು ಎರಡನೇ ಬಾರಿ. 2012ರಲ್ಲಿ ಮನೋಹರ್ ಪರಿಕ್ಕರ್ ಅವರು ಕಂಪಾಲ್‌ನ ಪರೇಡ್ ಮೈದಾನದಲ್ಲಿ ಅಧಿಕಾರ ಸ್ವೀಕರಿಸಿದ್ದರು.

ಸಚಿವರಾಗಿ ಸೋಮವಾರ ಪ್ರಮಾಣವಚನ ಸ್ವೀಕರಿಸುವವರ ಪಟ್ಟಿಯನ್ನು ಬಿಜೆಪಿ ಗೋಪ್ಯವಾಗಿಟ್ಟಿದೆ. ಎಷ್ಟು ಮಂದಿ ಸಚಿವರಾಗಲಿದ್ದಾರೆ ಎಂಬ ಬಗ್ಗೆ ಸೋಮವಾರದವರೆಗೆ ಕಾದುನೋಡಿ ಎಂದು ಸಾವಂತ್ ಅವರು ಭಾನುವಾರ ಹೇಳಿದ್ದಾರೆ. ಗೋವಾ ಸಂಪುಟದಲ್ಲಿ ಮುಖ್ಯಮಂತ್ರಿಯನ್ನು ಬಿಟ್ಟು 11 ಮಂದಿ ಸಚಿವರಾಗಲು ಅವಕಾಶವಿದೆ.

2017ರಲ್ಲಿ ಪರಿಕ್ಕರ್ ಅವರ ಸರ್ಕಾರದಲ್ಲಿ ಸಾವಂತ್ ಅವರು ಸ್ಪೀಕರ್ ಆಗಿ ಕೆಲಸ ಮಾಡಿದ್ದರು. ಪರಿಕ್ಕರ್ ಅವರ ನಿಧನದ ಬಳಿಕ ಮುಖ್ಯಮಂತ್ರಿಯಾಗಿ ನೇಮಕಗೊಂಡಿದ್ದರು.

ಮೋದಿ–ಯೋಗಿ ಜೋಡಿ ಮುರಿಯಲಾಗದು: ಆನಂದಿಬೆನ್

ಸೂರತ್ (ಪಿಟಿಐ): ಪ್ರಧಾನಿ ಮೋದಿ–ಮುಖ್ಯಮಂತ್ರಿ ಯೋಗಿ ಜೋಡಿಯನ್ನು ಮುರಿಯಲು ಯಾರಿಂದಲೂ ಸಾಧ್ಯವಿಲ್ಲ ಎಂದು ಉತ್ತರ ಪ್ರದೇಶ ರಾಜ್ಯಪಾಲೆ ಆನಂದಿ ಬೆನ್ ಪಟೇಲ್ ಅವರು ಅಭಿಪ್ರಾಯಪಟ್ಟಿದ್ದಾರೆ. ಗುಜರಾತಿನ ಸೂರತ್‌ನವರು ಸೇರಿದಂತೆ ದೊಡ್ಡ ಸಂಖ್ಯೆಯ ಉತ್ತರ ಭಾರತೀಯರ ಬೆಂಬಲದಿಂದ ಈ ಬಾರಿ ಉತ್ತರ ಪ್ರದೇಶದಲ್ಲಿ ಬಿಜೆಪಿ ಅಧಿಕಾರ ಉಳಿಸಿಕೊಳ್ಳಲು ಸಾಧ್ಯವಾಗಿದೆ ಎಂದು ಅವರು ಹೇಳಿದ್ದಾರೆ.

'ಉತ್ತರ ಪ್ರದೇಶದ ಗೆಲುವಿಗೆ ಸಾಕಷ್ಟು ಜನರ ಕೊಡುಗೆಯಿದೆ. ಸೂರತ್‌ನ ನೂರಾರು ಜನರು ಉತ್ತರ ಪ್ರದೇಶಕ್ಕೆ ತೆರಳಿ ಚುನಾವಣಾ ಪ್ರಚಾರ ನಡೆಸಿದ್ದಾರೆ. ಸಾಕಷ್ಟು ಸಂಖ್ಯೆಯ ಉತ್ತರ ಭಾರತೀಯರು ಸೂರತ್‌ನಲ್ಲಿ ನೆಲೆಸಿದ್ದಾರೆ. ಅವರೆಲ್ಲರ ಬೆಂಬಲದಿಂದ ಗೆಲುವು ಸಾಧ್ಯವಾಯಿತು. ಈ ಕಾರಣಕ್ಕೆ ನಮ್ಮನ್ನು ಅಭಿನಂದಿಸಬೇಕು. 35 ವರ್ಷಗಳ ಬಳಿಕ ಪಕ್ಷವೊಂದು ಎರಡನೇ ಬಾರಿಗೆ ಅಧಿಕಾರಕ್ಕೆ ಬಂದು ಇತಿಹಾಸ ಸೃಷ್ಟಿಸಿದೆ' ಎಂದರು.

ಆನಂದಿಬೆನ್ ಪಟೇಲ್ ಅವರು ಈ ಹಿಂದೆ, ಗುಜರಾತ್‌ನ ಮುಖ್ಯಮಂತ್ರಿಯಾಗಿ ಕೆಲಸ ಮಾಡಿದ್ದರು.

ಸಮಸ್ತ ಪಾಟಿದಾರ್ ಆರೋಗ್ಯ ಟ್ರಸ್ಟ್‌ನ ಕಿರಣ್ ವೈದ್ಯಕೀಯ ಕಾಲೇಜಿಗೆ ಶಿಲಾನ್ಯಾಸ ನೆರವೇರಿಸಿ ಮಾತನಾಡಿದರು. ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ, ಗುಜರಾತ್ ಸಿ.ಎಂ ಭೂಪೇಂದ್ರ ಪಟೇಲ್ ಉಪಸ್ಥಿತರಿದ್ದರು.

EXAM DH ಪ್ರಜಾವಾಣಿ MASTERMIND™

ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹599 ₹399ಕ್ಕೆ ಮಾತ್ರ

ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ

ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ www.exammastermind.comಗೆ ಭೇಟಿ ಕೊಡಿ

ಕಥೆ ಕೇಳುವುದು, ಹೇಳುವುದೆಂದರೆ ಮಕ್ಕಳಿಗೆ ಬಹಳ ಇಷ್ಟ. ಇದೇ ಆಸಕ್ತಿಯನ್ನು ಕಥೆಗಳ ಓದು, ರಚನೆ ಮತ್ತು ವಾಚನಕ್ಕೂ ವಿಸ್ತರಿಸುವಂತಾದರೆ, ಅವರಲ್ಲಿ ಸಾಹಿತ್ಯ ಮತ್ತು ಶೈಕ್ಷಣಿಕ ಜ್ಞಾನವನ್ನು ವೃದ್ಧಿಸಬಹುದು. ಈಗ ಪರೀಕ್ಷೆಗಳು ಮುಗಿದು, ಬೇಸಿಗೆ ರಜೆ ಶುರುವಾಗಿದೆ. ಮಕ್ಕಳಿಗೆ ಕಥಾಲೋಕವನ್ನು ಪರಿಚಯಿಸಲು ಇದು ಸಕಾಲ.

ಒಂದಾನೊಂದು ಕಾಲದಲ್ಲಿ..

ಭಾರತಿ ಎ. ಕೊಪ್ಪ

ಶಾಲೆಗಳಲ್ಲಿ ಶಿಕ್ಷಕರು 'ಒಂದೂರಲ್ಲಿ.. ಒಂದಾನೊಂದು ಕಾಲದಲ್ಲಿ' ಅಂತ ಕಥೆ ಹೇಳೋಕೆ ಶುರು ಮಾಡಿದರೆ ಸಾಕು, ಮಕ್ಕಳ ಮುಖ ಅರಳುತ್ತದೆ. ಗಲಾಟೆ ಮಾಡುತ್ತಿದ್ದವರೆಲ್ಲ ಗಂಭೀರವಾಗಿ ಕೂತು, 'ಮುಂದೇನಾಯ್ತು ಹೇಳಿ' ಅಂತ ಕೇಳೋಕೆ ಶುರು ಮಾಡ್ತಾರೆ.

ಕಥೆಗಳೆಂದರೆ ಹಾಗೆ. ಅದಕ್ಕೆ ವಯಸ್ಸಿನ ಭೇದವಿಲ್ಲ. ಶಾಲೆಗಳಲ್ಲಿ ಅದೆಷ್ಟೊ ಶಿಕ್ಷಕರು ಕಥೆಗಳ ಮೂಲಕವೇ ಪಠ್ಯಗಳನ್ನು ಮಕ್ಕಳಿಗೆ ದಾಟಿಸುವ ಪ್ರಯತ್ನ ಮಾಡುತ್ತಾರೆ. ಪಠ್ಯಕ್ಕೆ ಹೊಂದುವಂತಹ ನೈಜ ಘಟನೆಗಳು, ಪುರಾಣಗಳ ತುಣುಕುಗಳನ್ನು ಉಪಕಥೆಗಳ ರೂಪದಲ್ಲಿ ನಿರೂಪಣೆ ಮಾಡುತ್ತಾರೆ. ಕೆಲವೊಮ್ಮೆ ಮಕ್ಕಳಿಂದಲೂ ಕಥೆ ಹೇಳಿಸಿ, ಅವರ ಮನದಲ್ಲಿ ಪಠ್ಯದ ವಿಷಯ ಅಚ್ಚೊತ್ತುವಂತೆ ಮಾಡುತ್ತಾರೆ.

ಹೌದು, ಶಾಲೆಗಳಲ್ಲಿ ಮಕ್ಕಳಿಗೆ ಪಠ್ಯದ ಜೊತೆಗೆ, ಕಥೆ ಓದುವ ಹವ್ಯಾಸ ಬೆಳೆಸಬೇಕು. ಕಥೆಗಳು ಮಕ್ಕಳಲ್ಲಿರುವ ಕಲ್ಪನಾಶಕ್ತಿಯನ್ನು ವಿಸ್ತರಿಸಲು ನೆರವಾಗುತ್ತವೆ. ಹಾಗಾಗಿ, ಬಿಡುವಿನ ವೇಳೆಯಲ್ಲಿ ಮಕ್ಕಳ ಕೈಗೆ ಕಥೆ ಪುಸ್ತಕಗಳನ್ನಿಟ್ಟು, ಓದುವಂತೆ ಪೋಷಕರು ಮತ್ತು ಶಿಕ್ಷಕರು ಉತ್ತೇಜಿಸಬೇಕು.

ಕಥೆ ಓದುವ ಹವ್ಯಾಸ ಆರಂಭ ಹೇಗೆ?

ಪುಟ್ಟ ಮಕ್ಕಳಾದರೆ, ಚಿತ್ರಗಳ ಮೂಲಕ ಕಥೆಗಳನ್ನು ಓದಿಸಬೇಕು. ಈ ವಿಧಾನ ಮಕ್ಕಳಿಗೆ ಬೇಗ ರುಚಿಸುತ್ತದೆ. ಹಾಗೆಯೇ ಕಥೆಯತ್ತ ಆಕರ್ಷಿತರಾಗುತ್ತಾರೆ. ಮಕ್ಕಳಿಗೆ ಒಮ್ಮೆ ಈ ಚಿತ್ರಕಥೆಗಳನ್ನು ಹೇಗೆ ಓದಬೇಕೆಂದು ತಿಳಿಸಿ ಕೊಡಿ. ಮುಂದೆ ಅವರೇ ಚಿತ್ರಗಳನ್ನು ತೋರಿಸುತ್ತಾ ಕಥೆ ಹೇಳುತ್ತಾರೆ. ಅಷ್ಟೇ ಅಲ್ಲ, ತಮ್ಮ ಪಠ್ಯಗಳಲ್ಲಿರುವ ವಿಷಯಗಳನ್ನಿಟ್ಟುಕೊಂಡೇ ಕಥೆ ರೂಪಿಸಲು ಪ್ರಯತ್ನಿಸಲೂಬಹುದು.

ಮುಂದಿನ ಹಂತ, ಚಿತ್ರ ರಹಿತ ಕಥೆಗಳನ್ನು ಓದುವ ಅಭ್ಯಾಸ ಮಾಡಿಸುವುದು. ಆರಂಭದಲ್ಲಿ ಸರಳವಾಗಿರುವ ಸಣ್ಣ ಸಣ್ಣ ನೀತಿಕಥೆಗಳನ್ನು ಓದಿಸಿ. ಅವುಗಳ ಅರ್ಥವನ್ನು ಮನಮುಟ್ಟುವಂತೆ ಹೇಳಿ. ಮಕ್ಕಳಿಗೆ ಸಣ್ಣ ಕಥೆಗಳು ಅರ್ಥವಾಗುತ್ತದೆ ಎಂದು ನಿಮಗೆ ಎನ್ನಿಸಿದರೆ, ಮುಂದೆ ದಿನಪತ್ರಿಕೆ, ವಾರಪತ್ರಿಕೆ, ಪಾಕ್ಷಿಕ, ಮಾಸಪತ್ರಿಕೆಗಳಲ್ಲಿ ಪ್ರಕಟವಾಗುವ ಮಕ್ಕಳ ಕಥೆಗಳನ್ನು ಓದಿ ಹೇಳಿ. ನಂತರ ಅವುಗಳನ್ನು ಮಕ್ಕಳಿಂದ ಓದಿಸಿ. ಒಂದೆರಡು ಬಾರಿ ಮಕ್ಕಳ ಜೊತೆಯಲ್ಲೇ, ನೀವೂ ಕಥೆ ಓದಿ. ಆನಂತರದಲ್ಲಿ ವಿಭಿನ್ನ ರೀತಿಯ ಕಥೆಗಳ ಓದಿನತ್ತ ಆಸಕ್ತಿ ಬೆಳೆಯುತ್ತದೆ.

ಮಕ್ಕಳಿಗೆ ಜನಪದ ಕಥೆಗಳು ಬಹಳ ಇಷ್ಟವಾಗುತ್ತವೆ. ಇಂಥ ಕಥೆಗಳನ್ನು ಅಜ್ಜ, ಅಜ್ಜಿಯರು ಸೊಗಸಾಗಿ ಹೇಳುತ್ತಾರೆ. ಜನಪದ ಕಥೆಗಳನ್ನು ಕೇಳುವುದರಿಂದ ಮಕ್ಕಳಲ್ಲಿ ನೆಲ-ಮೂಲ ಸಂಸ್ಕೃತಿಯ ಅರಿವು ಮೂಡುತ್ತದೆ.

ಕಥೆಗಳ ವಾಚನ, ರಚನೆ

ಮಕ್ಕಳಲ್ಲಿ ಕಥೆಗಳನ್ನು ಆಲಿಸುವ, ಓದುವ ಅಭ್ಯಾಸದ ಜೊತೆಗೆ ಜೊತೆಗೆ, ಕಥೆ ವಾಚಿಸುವ ಹಾಗೂ ರಚಿಸುವ ಹವ್ಯಾಸ ಬೆಳೆಸಬೇಕು. ತಾನು ಓದಿದ, ದೃಶ್ಯ ಮಾಧ್ಯಮಗಳಲ್ಲಿ ನೋಡಿದ ಸನ್ನಿವೇಶಗಳನ್ನು ತನ್ನದೇ ಮಾತುಗಳಲ್ಲಿ ಹೇಳುವುದಕ್ಕೆ ಅವರಿಗೆ ವೇದಿಕೆ ಕಲ್ಪಿಸಬೇಕು. ಕಥೆಯಲ್ಲಿನ ಪಾತ್ರಗಳನ್ನು ಅನುಭವಿಸಿ, ಭಾವಾಭಿನಯದೊಂದಿಗೆ ಹೇಳುವ ಕೌಶಲ ಬೆಳೆಸಬೇಕು. ಮನೆಯಲ್ಲಿರುವ ಹಿರಿಯರು ಮಕ್ಕಳು ಹೇಳುವ ಕಥೆಗಳನ್ನು ಕೇಳಿಸಿಕೊಂಡು, ಅದಕ್ಕೆ ಪ್ರತಿಕ್ರಿಯಿಸಬೇಕು. ಆಗ ಮಕ್ಕಳಿಗೂ ಕಥೆ ಹೇಳುವ ಉತ್ಸಾಹ ಹೆಚ್ಚುತ್ತದೆ.

ಶಾಲೆಗಳಲ್ಲೂ ಕಥಾ ಅಭಿವ್ಯಕ್ತಿಗೆ ಅವಕಾಶ ನೀಡುವುದರಿಂದ ಮಕ್ಕಳ ಸಭಾಕಂಪನ ದೂರವಾಗುತ್ತದೆ.

ಮಕ್ಕಳು ನಿರಂತರವಾಗಿ ಕಥೆಗಳನ್ನು ಓದುತ್ತಿದ್ದರೆ, ಮುಂದೊಂದು ದಿನ 'ನಾನೂ ಒಂದು ಕಥೆ ಬರೆಯುತ್ತೇನೆ' ಎನ್ನಬಹುದು. ಮಕ್ಕಳಲ್ಲಿನ ಈ ಬೆಳವಣಿಗೆಯನ್ನು ಪೋಷಕರು, ಶಿಕ್ಷಕರು ಗಮನಿಸಬೇಕು. ಕಥೆ ಬರೆಯುವ ಆಸಕ್ತಿ ಚಿಗುರೊಡೆದ ಮಕ್ಕಳಿಗೆ, ನೀವು ನೋಡಿದ ಘಟನೆಗಳನ್ನು, ದೈನಂದಿನ ಅನುಭವಗಳು, ತನ್ನೂರಿನ ವಿವಿಧ ಆಚರಣೆಗಳನ್ನು ಆಧರಿಸಿ ಕಥೆ ಬರೆಯಿರಿ ಎಂದು ಪ್ರೇರೇಪಿಸಬೇಕು. ಆಗ ಕಥೆ ಬರೆಯುವ ಅಭ್ಯಾಸ ರೂಢಿಯಾಗುತ್ತದೆ.

ಪೌರಾಣಿಕ ಕಥೆಗಳು, ಹಾಡ್ಗತೆಗಳು

ಪೌರಾಣಿಕ ಕಥೆಗಳು ಮಕ್ಕಳಿಗೆ ಬಲು ಇಷ್ಟ. ಸ್ಥಳೀಯ ಪರಿಸರದ ಕಥೆಗಳನ್ನು ಬರೆಯಲು ಉತ್ತೇಜಿಸಬೇಕು. ಇದೇ ರೀತಿ 'ಪುಣ್ಯಕೋಟಿ', 'ಮುಂಗುಸಿ-ಹಾವಿನ' ಹಾಡ್ಗತೆ(ಹಾಡಿನ ಮೂಲಕ ಕಥೆ ಹೇಳುವುದು)ಗಳು ದೀರ್ಘಕಾಲ ಮನಸ್ಸಿನಲ್ಲಿ ಉಳಿದಿವೆ. ಇಂಥ ಹಾಡ್ಗತೆಗಳ ಮೂಲಕವೂ ಮಕ್ಕಳನ್ನು ಕಥಾಲೋಕಕ್ಕೆ ಕರೆದೊಯ್ಯಬಹುದು.

ಶಾಲೆಗಳಲ್ಲಿ ಬಿಡುವಿನ ಅವಧಿಯಲ್ಲಿ ಮಕ್ಕಳಿಗೆ ಮುಕ್ತವಾಗಿ ಕಥೆ ಹೇಳಲು ಅವಕಾಶ ಕೊಡಿ. ಕಥಾ ಗೋಷ್ಠಿಗಳು, ಸಣ್ಣ ಕಥೆಗಳ ಸ್ಪರ್ಧೆಗಳನ್ನು ಏರ್ಪಡಿಸಬಹುದು. ಅಲ್ಲಿ ಸಂಗ್ರಹವಾದ ಕಥೆಗಳನ್ನು 'ಗೋಡೆ ಪತ್ರಿಕೆ' ಮಾಡಿ ಪ್ರಕಟಿಸಬಹುದು. ಇಲ್ಲವೇ, ಸಂಕಲನ ರೂಪದಲ್ಲೂ ಪ್ರಕಟಿಸಬಹುದು. ಇದು ಮಕ್ಕಳಲ್ಲಿನ ಸಾಹಿತ್ಯ ಅಭಿರುಚಿ ಉದ್ದೀಪನಗೊಂಡು, ಶೈಕ್ಷಣಿಕ ಬೆಳವಣಿಗೆಗೂ ಸಹಾಯವಾಗುತ್ತದೆ.

ಈಗ ಪ್ರಾಥಮಿಕ ಹಾಗೂ ಪ್ರೌಢಶಾಲೆಯ ಪರೀಕ್ಷೆಗಳು (10ನೇ ತರಗತಿ ಹೊರತುಪಡಿಸಿ) ಮುಗಿದಿವೆ. ಬೇಸಿಗೆ ರಜೆಯೂ ಆರಂಭವಾಗಿದೆ. ಮಕ್ಕಳಿಗೆ ಕಥೆ ಹೇಳಲು, ಕಥೆ ಬರೆಯುವಂತೆ ಉತ್ತೇಜಿಸಲು ಇದು ಸಕಾಲ.

ಪರೀಕ್ಷಾರ್ಥಿಗಳೇ ಗಮನಿಸಿ...

ಅರವಿಂದ ಚೊಕ್ಕಾಡಿ

ಎಸ್ಸೆಸ್ಸೆಲ್ಸಿ ಪರೀಕ್ಷೆ ಇಂದಿನಿಂದ ನಡೆಯಲಿದೆ. ಮಕ್ಕಳು ಪರೀಕ್ಷೆ ಬರೆಯುವಾಗ ಏನೆಲ್ಲ ಎಚ್ಚರಿಕೆ ತೆಗೆದುಕೊಳ್ಳಬೇಕು ಎಂಬ ಮಾಹಿತಿ ಇಲ್ಲಿದೆ.

ಅವಸರದಲ್ಲಿ ಕೆಲವು ವಿದ್ಯಾರ್ಥಿಗಳು ಉತ್ತರ ಪತ್ರಿಕೆಯಲ್ಲಿ ಪ್ರಶ್ನೆ ಸಂಖ್ಯೆ ಹಾಕುವುದನ್ನೇ ಮರೆತು ಉತ್ತರ ಬರೆಯುತ್ತಾರೆ. ಆದರೆ ಮೌಲ್ಯ ಮಾಪನ ಮಾಡುವವರು, ಪ್ರತಿ ಪ್ರಶ್ನೆ ಸಂಖ್ಯೆಗೂ ಎಷ್ಟು ಅಂಕ ಪಡೆದಿರುವರೆಂದು ನಮೂದಿಸಬೇಕು. ಪ್ರಶ್ನೆ ಸಂಖ್ಯೆ ಹಾಕದೆ ಬರೆದರೆ ಯಾವ ಪ್ರಶ್ನೆಗೆ ಈ ಉತ್ತರ ಎಂದು ಪರಿಗಣಿಸಲು ಕಷ್ಟ ಆಗುತ್ತದೆ. ಆದ್ದರಿಂದ ಪ್ರಶ್ನೆ ಸಂಖ್ಯೆಯನ್ನು ನಮೂದಿಸಲೇಬೇಕು. ಇನ್ನು ಕೆಲವರು ಒಂದು ಪ್ರಶ್ನೆ ಸಂಖ್ಯೆಯನ್ನು ನಮೂದಿಸುತ್ತಾರೆ. ನಂತರ, ಇನ್ನೊಂದು ಪ್ರಶ್ನೆಗೆ ಉತ್ತರ ಸುಲಭ ಎನಿಸಿ ಆ ಪ್ರಶ್ನೆಯ ಉತ್ತರವನ್ನು ಬರೆಯುತ್ತಾರೆ. ಆದರೆ ನಮೂದಿಸಿರುವ ಪ್ರಶ್ನೆ ಸಂಖ್ಯೆಯನ್ನು ಬದಲಿಸಲು ಮರೆಯುತ್ತಾರೆ. ಆಗ ಅವರು ಬರೆದ ಉತ್ತರ ಸರಿ ಇದ್ದರೂ, ಅದು ನಮೂದಿಸಿದ ಪ್ರಶ್ನೆ ಸಂಖ್ಯೆಯ ಪ್ರಶ್ನೆಗೆ ಅದು ಸರಿ ಉತ್ತರವಾಗಿರುವುದಿಲ್ಲ. ಈ ಸಮಸ್ಯೆ ಆಗದಂತೆ ಎಚ್ಚರವಿರಲಿ. ಯಾವ ಪ್ರಶ್ನೆ ಸಂಖ್ಯೆ ಹಾಕಿರುತ್ತೀರೋ, ಅಲ್ಲಿ ಬರೆದ ಉತ್ತರವೂ ಆ ಪ್ರಶ್ನೆಯದ್ದೇ ಆಗಿರುವಂತೆ ಗಮನಿಸಿಕೊಳ್ಳಬೇಕು.

ರೋಮನ್ ನಂಬರ್ ಮತ್ತು ಪ್ರಶ್ನೆ ಸಂಖ್ಯೆಯನ್ನು ಮಾರ್ಜಿನ್‌ನ ಹೊರಗೆ ಬರೆಯಬೇಕು. ಉಳಿದಂತೆ ಉತ್ತರದಲ್ಲಿ ಪಾಯಿಂಟ್‌ಗಳನ್ನು ಬರೆಯುವಾಗ ಅವುಗಳಿಗೆ ನಂಬರನ್ನೊ, a,b,c,d ಯನ್ನೊ ಹಾಕಬೇಕಿದ್ದರೆ, ಅದು ಮಾರ್ಜಿನ್ ಒಳಗೆ ಇರಬೇಕು.

ಸ್ಫುಟವಾಗಿರಲಿ ಬರಹ

ಅಕ್ಷರಗಳನ್ನು ಈ ಕ್ಷಣದಲ್ಲಿ ಸುಂದರಗೊಳಿಸಲು ಸಾಧ್ಯವಿಲ್ಲ. ಅದು 'ಕಾಪಿ ರೈಟಿಂಗ್' ಪುಸ್ತಕದಲ್ಲಿ ಬರೆದು ಬರೆದು ದೀರ್ಘಕಾಲ ಅಭ್ಯಾಸ ಮಾಡಬೇಕಾಗುತ್ತದೆ. ಅದು ತಕ್ಷಣಕ್ಕೆ ಆಗುವುದಿಲ್ಲ. ಹಾಗಾಗಿ, ಪರೀಕ್ಷೆ ಉತ್ತರವನ್ನು ಸ್ಫುಟವಾಗಿ ಬರೆಯಬಹುದು. ಪದಗಳ ನಡುವೆ ಜಾಗ (ಸ್ಪೇಸ್) ಕೊಟ್ಟರೆ ಸ್ಫುಟವಾಗಿ ಕಾಣುತ್ತದೆ. ಒಟ್ಟಿನಲ್ಲಿ ಅಕ್ಷರಗಳು ಸುಲಭವಾಗಿ ಓದಲು ಸಾಧ್ಯವಾಗುವಂತಿರಬೇಕು.

ಕೆಲವು ವಿದ್ಯಾರ್ಥಿಗಳು ಅತೀ ಚಿಕ್ಕ ಅಕ್ಷರದಲ್ಲಿ ಬರೆಯುತ್ತಾರೆ. ಸಣ್ಣ ಅಕ್ಷರದ ಬರಹ ಸ್ಫುಟವಾಗಿ ಕಾಣಬೇಕಾದರೆ ಬಹಳ ನಿಧಾನವಾಗಿ ಬರೆಯಬೇಕಾಗುತ್ತದೆ. ಆದರೆ ಪರೀಕ್ಷೆಯಲ್ಲಿ ಅದು ಸಾಧ್ಯವಿಲ್ಲ. ಚಿಕ್ಕ ಗಾತ್ರದ ಅಕ್ಷರದಲ್ಲಿ ಸ್ವಲ್ಪ ವೇಗವಾಗಿ ಬರೆದರೆ ಬರೆದದ್ದು ಏನೆಂದೇ ಗೊತ್ತಾಗುವುದಿಲ್ಲ. ಆದ್ದರಿಂದ ತೀರಾ ಚಿಕ್ಕ ಅಕ್ಷರದ ಬರಹ ಸೂಕ್ತವಲ್ಲ.

'ಸಮಯ' ಬಳಸಿಕೊಳ್ಳಿ

ಇತ್ತೀಚಿನ ದಿನಗಳಲ್ಲಿ ವಿಜ್ಞಾನ ಮತ್ತು ಸಮಾಜ ವಿಜ್ಞಾನ ಮಕ್ಕಳಿಗೆ ಸವಾಲಾಗುತ್ತಿದೆ. ಸಮಾಜ ವಿಜ್ಞಾನ ಪಠ್ಯಕ್ಕೂ ವಿಪರೀತ ಪಾಠಗಳು ಸೇರಿಕೊಂಡು ಕಲಿಕಾ ಹೊರೆ ನಿರ್ಮಾಣವಾಗಿದೆ. ಈ ನಡುವೆ, 'ಗಣಿತ ಮತ್ತು ಇಂಗ್ಲಿಷ್ ಕಷ್ಟ' ಎಂಬ ಹಳೇ ನಂಬಿಕೆಗೆ ಹೆಚ್ಚು ಒತ್ತು ಕೊಟ್ಟು ವಿದ್ಯಾರ್ಥಿಗಳು ಅಭ್ಯಾಸ ನಡೆಸಿದ್ದಾರೆ. ಆದರೆ, ಗಣಿತದಲ್ಲಿ ಸೂತ್ರ ಮತ್ತು ತಾಂತ್ರಿಕ ಅಂಶಗಳು, ಇಂಗ್ಲಿಷ್‌ನಲ್ಲಿ ಕತೆಗಳು ಮತ್ತು ವ್ಯಾಕರಣಗಳು ಮಕ್ಕಳು ಉತ್ತೀರ್ಣವಾಗಲು ತುಸು ನೆರವಾಗುತ್ತವೆ. ವಿಜ್ಞಾನ ಮತ್ತು ಸಮಾಜ ವಿಜ್ಞಾನ ಹಾಗಲ್ಲ. ಇವುಗಳಲ್ಲಿ ಈಗ ಬ್ಯಾಂಕ್ ರೇಟ್ ಪಾಲಿಸಿ, ರೆಪೊದಂತಹ ಸ್ವಲ್ಪ ಪ್ರಯತ್ನಪಟ್ಟು ಅರ್ಥ ಮಾಡಿಕೊಳ್ಳಬೇಕಾದ ಉನ್ನತ ಪರಿಕಲ್ಪನೆಗಳು 10ನೇ ತರಗತಿಯಲ್ಲೇ ಬರುತ್ತವೆ. ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಭಾಷೆಯ ಮೇಲೆ ಹಿಡಿತ ಇಲ್ಲದಿದ್ದರೆ ಇಂಥವನ್ನೆಲ್ಲ ಅರ್ಥ ಮಾಡಿಕೊಳ್ಳುವುದು ಸವಾಲಾಗುತ್ತದೆ.

ಹಾಗೆಂದು ಭಯಪಡಬೇಕಾಗಿಲ್ಲ. ಪ್ರತಿ ಪರೀಕ್ಷೆಗೂ ಒಂದು ದಿನವಂತೂ ರಜೆ ಇದೆ. ಸವಾಲು ಎನಿಸುವ ಪರಿಕಲ್ಪನೆಗಳನ್ನು ಮೊದಲು ಸ್ಪಷ್ಟಪಡಿಸಿಕೊಳ್ಳಿ. ಆಮೇಲೆ ಆ ಇಡೀ ಪಾಠ ಸುಲಭವಾಗಿ ಗೊತ್ತಾಗುತ್ತದೆ. ಇಷ್ಟನ್ನು ಮಾಡಲು ಆರು ಗಂಟೆ ಸಾಕು. ಆಗ ವಿಜ್ಞಾನ, ಸಮಾಜ ವಿಜ್ಞಾನವೂ ಸಲೀಸು.

ಪರೀಕ್ಷೆಗೆ ನಿರಾಳವಾಗಿ ಹೋಗಿ. ಅತಿಯಾದ ಮಾನಸಿಕ ಒತ್ತಡ ಮತ್ತು ಹಿಂಸೆಯಾಗದಂತೆ ನೋಡಿಕೊಳ್ಳಿ. ಕೆಲವೊಮ್ಮೆ ಒಂದು ಪರೀಕ್ಷೆಯಲ್ಲಿ ಸ್ವಲ್ಪ ಹಿನ್ನಡೆಯಾದರೆ ಅದರ ಬಗ್ಗೆಯೇ ಚಿಂತಿಸಬೇಡಿ. ಇದರಿಂದ ಉಳಿದ ಪತ್ರಿಕೆಗಳನ್ನು ಬರೆಯಲು ತೊಂದರೆಯಾಗುತ್ತದೆ. ಈ ಬಗ್ಗೆ ಪಾಲಕರು ಶೈಕ್ಷಣಿಕ ಸುಗಮಕಾರರ ರೀತಿಯಲ್ಲಿ ಮಕ್ಕಳೊಂದಿಗೆ ವರ್ತಿಸಬೇಕು.

ಎಂಬಿಎ ನಂತರ ಮುಂದೇನು?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ಪ್ರದೀಪ್ ಕುಮಾರ್

1. ನಾನು ಎಚ್‌ಆರ್ ಮತ್ತು ಮಾರ್ಕೆಟಿಂಗ್‌ನಲ್ಲಿ ಎಂಬಿಎ ಮಾಡುತ್ತಿದ್ದೇನೆ. ಈ ವಿಭಾಗಗಳಿಗೆ ಸಂಬಂಧಿಸಿದಂತೆ ಸರ್ಕಾರಿ ವಲಯವೂ ಸೇರಿದಂತೆ ಯಾವ ಉದ್ಯೋಗಾವಕಾಶಗಳಿವೆ?

ಸುಹಾಸ್ ಪವಾರ್, ಊರು ತಿಳಿಸಿಲ್ಲ.

ಎಂ.ಬಿ.ಎ. ಕೋರ್ಸಿನಲ್ಲಿ ವೃತ್ತಿಗೂ, ಜೀವನಕ್ಕೂ ಅಗತ್ಯವಾದ ಅನೇಕ ಮೂಲಭೂತ ತತ್ವಗಳ, ಮೌಲ್ಯಗಳ ಮನದಟ್ಟಾಗುತ್ತದೆ. ಈ ತತ್ವಗಳ ಆಧಾರದ ಮೇಲೆ, ನೀವು ವೃತ್ತಿ ಮತ್ತು ಖಾಸಗೀ ಜೀವನಗಳೆರಡರಲ್ಲೂ ಯಶಸ್ಸು ಸಾಧಿಸಬಹುದು. ಎಂಬಿಎ ಕೋರ್ಸ್ ನಂತರ ಆಕರ್ಷಕ ವೃತ್ತಿಯ ಅವಕಾಶಗಳಿವೆ. ಐಟಿ, ಬ್ಯಾಂಕಿಂಗ್, ಫೈನಾನ್ಸ್, ಇನ್ವೆಸ್ಟ್‌ಮೆಂಟ್, ಇನ್ಶೂರೆನ್ಸ್, ರೀಟೇಲ್, ಮಾರ್ಕೆಟಿಂಗ್, ಎಫ್‌ಎಂಜಿಸಿ ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ನೀವು ವೃತ್ತಿಯನ್ನು ಅರಸಬಹುದು. ಯುಪಿಎಸ್‌ಸಿ/ ಕೆಪಿಎಸ್‌ಸಿ ಪರೀಕ್ಷೆಯ ಮುಖಾಂತರ ಅನೇಕ ಸರ್ಕಾರಿ ವಲಯದ ಉನ್ನತ ಹುದ್ದೆಗಳನ್ನೂ ಪಡೆದುಕೊಳ್ಳಬಹುದು. ಅನುಭವದ ನಂತರ ಸ್ವಂತ ಉದ್ಯಮವನ್ನೂ ಆರಂಭಿಸಬಹುದು.



2. ನನಗೀಗ 43 ವರ್ಷ. ನಾನು 1993-95 ರ ಬ್ಯಾಚ್‌ನಲ್ಲಿ ಐಟಿಐ ಮಾಡಿದ್ದೆ. ಈಗ ನಾನು ಸರ್ಕಾರಿ ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆ ತೆಗೆದುಕೊಂಡಿದ್ದೇನೆ. ನನಗೆ ಎಲ್‌ಎಲ್‌ಬಿ ಮಾಡುವ ಆಸೆ ಇದೆ. ಇದರ ವಯೋಮಿತಿ ಏನು? ಈ ಕೋರ್ಸ್‌ಗೆ ಯಾವ ಕಾಲೇಜು ಉತ್ತಮ ತಿಳಿಸಿ.

ಕೆ. ನಾಗರಾಜು, ಬೆಂಗಳೂರು.

ಕಾನೂನು ವೃತ್ತಿಯನ್ನು ಅನುಸರಿಸಲು ಯಾವುದಾದರೂ ಪದವಿಯ ನಂತರ 3 ವರ್ಷದ ಎಲ್‌ಎಲ್‌ಬಿ ಕೋರ್ಸ್ ಅಥವಾ ಪಿಯುಸಿ ನಂತರ 5 ವರ್ಷದ ಇಂಟಿಗ್ರೇಟೆಡ್ ಎಲ್‌ಎಲ್‌ಬಿ ಕೋರ್ಸ್ ಮಾಡಬೇಕು.

ಪ್ರಮುಖವಾಗಿ, ನೀವು ಮಾಡುವ ಕೋರ್ಸ್‌ಗೆ ಬಾರ್ ಕೌನ್ಸಿಲ್ ಆಫ್ ಇಂಡಿಯ ಮಾನ್ಯತೆ ಇರಬೇಕು. ಸಾಮಾನ್ಯವಾಗಿ, ಸಿಎಲ್‌ಎಟಿ/ ಎಲ್‌ಎಸ್‌ಎಟಿ ಪ್ರವೇಶ ಪರೀಕ್ಷೆ ಬರೆಯಬೇಕು. ಆದರೆ, ಕೆಲವು ಕಾಲೇಜುಗಳಲ್ಲಿ ನೇರವಾಗಿಯೂ ಪ್ರವೇಶಾತಿ ಇರುತ್ತದೆ. ಸುಪ್ರೀಂ ಕೋರ್ಟ್ ತಡೆಯಾಜ್ಞೆಯ ಅನುಸಾರ ಈಗ ಎಲ್‌ಎಲ್‌ಬಿ ಕೋರ್ಸ್ ಮಾಡಲು ವಯೋಮಿತಿಯ ನಿರ್ಬಂಧವಿಲ್ಲ. ಆದರೂ, ನೀವು ಕೋರ್ಸ್ ಮಾಡಲು ಇಚ್ಛಿಸುವ ಕಾಲೇಜು/ ವಿಶ್ವವಿದ್ಯಾಲಯದಲ್ಲಿ ಈ ಸಾಧ್ಯತೆಯನ್ನು ಖಚಿತಪಡಿಸಿಕೊಳ್ಳಿ. ಎಲ್‌ಎಲ್‌ಬಿ ಕೋರ್ಸ್ ಕುರಿತು ಹೆಚ್ಚಿನ ಮಾಹಿತಿಗಾಗಿ ಗಮನಿಸಿ:https://www.getmyuni.com/llb-course#llb-admission-process

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ವಿದ್ಯಾರ್ಥಿ ವೇತನ ಕೈಪಿಡಿ

ಇಸ್ರೋ- ಯಂಗ್ ಸೈಂಟಿಸ್ಟ್ ಪ್ರೋಗ್ರಾಂ (ಯುವಿಕಾ) 2022

ವಿವರ: ಬಾಹ್ಯಾಕಾಶ ಇಲಾಖೆ, ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯು (ಇಸ್ರೋ) ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿನ ಉದಯೋನ್ಮುಖ ಪ್ರವೃತ್ತಿಗಳ ಬಗ್ಗೆ ಅರಿವು ಮೂಡಿಸಲು ವಿಜ್ಞಾನ ವಿದ್ಯಾರ್ಥಿಗಳಿಗೆ ನೀಡುವ ವಿದ್ಯಾರ್ಥಿವೇತನವಾಗಿದೆ.

ಅರ್ಹತೆ: ಈ ವಿದ್ಯಾರ್ಥಿವೇತನಕ್ಕೆ ಮಾರ್ಚ್ 1, 2022ಕ್ಕೆ ಅನುಗುಣವಾಗುವಂತೆ 9ನೇ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಏಪ್ರಿಲ್ 10, 2022

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಆನ್‌ಲೈನ್ ಮೂಲಕ

ಹೆಚ್ಚಿನ ಮಾಹಿತಿಗೆ: www.b4s.in/praja/YSY7

ಪಿಯುಸಿ ಪರೀಕ್ಷೆ ದಿಕ್ಸೂಚಿ

ಮಾದರಿ ಪ್ರಶ್ನೋತ್ತರ
ಹೈಗನ್‌ನ ತತ್ವದ ವಿವರಣೆ

ಭೌತಶಾಸ್ತ್ರ

44) ಪ್ರಕೃತಿಯಲ್ಲಿ ಪೂರ್ಣಾಂತರಿಕ ಪ್ರತಿಫಲನ ಮತ್ತು ಅದರ ತಾಂತ್ರಿಕ ಉಪಯೋಗಗಳಲ್ಲಿ ಒಂದಾದ ಮರೀಚಿಕೆ ಕುರಿತು ಬರೆಯಿರಿ

ಉತ್ತರ:- ಸುಡು ಬೇಸಿಗೆಯ ದಿನಗಳಲ್ಲಿ ಭೂಮಿಯ ಮೇಲ್ಮೆಗೆ ತಾಗಿಕೊಂಡಿರುವ ಗಾಳಿಯ ಪದರವು ತನ್ನ ಮೇಲಿನ ಪದರಕ್ಕಿಂತ ಹೆಚ್ಚು ಬಿಸಿಯಾಗುತ್ತದೆ. ಗಾಳಿಯ ವಕ್ರೀಭವನಾಂಕವು ಅದರ ರಾಶಿ ಸಾಂದ್ರತೆಯೊಂದಿಗೆ ಹೆಚ್ಚಾಗುತ್ತಾ ಹೋಗುತ್ತದೆ. ಬಿಸಿಗಾಳಿಯು ಕಡಿಮೆ ಸಾಂದ್ರತೆಯನ್ನು ಹೊಂದಿರುತ್ತದೆ ಹಾಗು ತಣ್ಣಗಿನ ಗಾಳಿಗಿಂತ ಕಡಿಮೆ ವಕ್ರೀಭವನಾಂಕವನ್ನು ಹೊಂದಿರುತ್ತದೆ. ಗಾಳಿಯ ಪ್ರವಾಹವು ಕಡಿಮೆ ಇದ್ದಾಗ, ಅಂದರೆ ಗಾಳಿಯು ನಿಶ್ಚಲವಾಗಿದ್ದಾಗ ಗಾಳಿಯ ವಿವಿಧ ಪದರಗಳ ದ್ಯುತಿ ಸಾಂದ್ರತೆಯು ಭೂಮಿಯಿಂದ ಎತ್ತರ ಹೆಚ್ಚಾದಂತೆ, ಹೆಚ್ಚಾಗುತ್ತಾ ಹೋಗುತ್ತದೆ. ಇದರಿಂದಾಗಿ, ಮರದಂತಹ ಉದ್ದನೆಯ ವಸ್ತುಗಳಿಂದ ಬಂದ ಬೆಳಕು ನೆಲದ ಕಡೆ ಕಡಿಮೆಯಾಗುತ್ತಿರುವ ವಕ್ರೀಭವನಾಂಶ ಹೊಂದಿದ್ದ ಮಾಧ್ಯಮದ ಮೂಲಕ ಹಾದು ಹೋಗುವುದು. ಹೀಗೆ, ಇಂತಹ ವಸ್ತುಗಳಿಂದ ಬಂದ ಕಿರಣಗಳು ನಿರಂತರವಾಗಿ ಲಂಬದಿಂದ ದೂರ ಬಾಗುತ್ತಾ ಆಪಾತ ಕೋನವು ಕ್ರಾಂತಿಕೋನವನ್ನು ಮೀರಿದಾಗ ಪೂರ್ಣಾಂತರಿಕ ಪ್ರತಿಫಲನ ಹೊಂದುತ್ತದೆ. ಚಿತ್ರ (b)ಯಲ್ಲಿ ಇದನ್ನು ತೋರಿಸಲಾಗಿದೆ. ದೂರದಿಂದ ನೋಡುವ ವ್ಯಕ್ತಿಗೆ ಈ ಬೆಳಕಿನ ಕಿರಣಗಳು ಭೂಮಿಯ ತಳಭಾಗದಿಂದ ಬಂದಂತೆ ಭಾಸವಾಗುತ್ತದೆ. ಆದ್ದರಿಂದ, ಆ ವ್ಯಕ್ತಿಯು ಬೆಳಕು ಭೂಮಿಯ ಮೇಲ್ಮೈಯಲ್ಲಿರುವ ನೀರಿನ ಕೊಳದಿಂದ ಪ್ರತಿಫಲನಗೊಂಡಿದೆ ಎಂದು ಭಾವಿಸುತ್ತಾನೆ. ಅಂತಹ ವಿಶೇಷತಾ, ದೂರದ ವಸ್ತುಗಳ ತಲೆಕೆಳಗಾದ ಪ್ರತಿಬಿಂಬವು ಅವನಲ್ಲಿ ಈ ತರದ ಭ್ರಮೆಯನ್ನು ಉಂಟು ಮಾಡುತ್ತದೆ. ಇದನ್ನು ಮರೀಚಿಕೆ ಎನ್ನುತ್ತಾರೆ (Mirage). ಇಂತಹ ಮರೀಚಿಕೆಗಳು ಬಿಸಿ ಮರುಭೂಮಿಯಲ್ಲಿ ಸಾಮಾನ್ಯ. ಹಾಗೆಯೇ ಬೇಸಿಗೆಯಲ್ಲಿ ಕಾರು ಅಥವಾ ಬಸ್ಸಿನಲ್ಲಿ ಪ್ರಯಾಣ ಮಾಡುವಾಗ ದೂರದ ರಸ್ತೆಯಲ್ಲಿ ನೀರು ಚೆಲ್ಲಿದ ಹಾಗೆ ಇರುವ ಅನುಭವವು ನಮಗೆ ಆಗುತ್ತದೆ. ಆ ಪ್ರದೇಶದ ಹತ್ತಿರ ಬಂದಾಗ ನೀರು ಇರುವುದಿಲ್ಲ ಎಂಬ ನಿಜ ತಿಳಿಯುತ್ತದೆ. ಇದೂ ಕೂಡಾ ಮರೀಚಿಕೆಯಿಂದ ಆಗಿರುತ್ತದೆ.



(a) ನೆಲದ ಮೇಲಿನ ಗಾಳಿಯ ಉಷ್ಣತೆ ಏಪ್ರಕಾರವಾಗಿದ್ದಾಗ ಒಬ್ಬ ನೋಡುಗನು ಮರವೊಂದನ್ನು ಅದರ ಸ್ಥಾನದಲ್ಲೇ ಕಾಣುವನು (b) ನೆಲಕ್ಕೆ ಸಮೀಪದ ಗಾಳಿ ಹೆಚ್ಚು ಬಿಸಿಯಾಗಿದ್ದು ಅದರ ಮೇಲಿನ ಪದರಗಳು ಬೇರೆ ಬೇರೆ ಉತ್ಪನ್ನಗಳನ್ನು ಹೊಂದಿದಾಗ, ದೂರದ ಮರದಿಂದ ಬರುವ ಬೆಳಕು ಪುರ್ಣಾಂತರಿಕ ಪ್ರತಿಫಲನ ಹೊಂದಬಹುದು ಮತ್ತು ಮರದ ಮಿಥ್ಯ ಬಿಂಬವು ಮರವು ನೀರಿನ ಕೆರೆಯ ಬಳಿ ಇರುವಂತೆ ನೋಡುಗನಿಗೆ ಭ್ರಮೆಯುಂಟು ಮಾಡಬಹುದು.

45) ಹೈಗನ್‌ನ ತತ್ವ ವಿವರಿಸಿ

ಉತ್ತರ:- ನಿಶ್ಚಲವಾಗಿ ನಿಂತಿರುವ ಕೊಳದಲ್ಲಿರುವ ನೀರಿಗೆ ಒಂದು ಕಲ್ಲನ್ನು ಎಸೆದಾಗ ಕಲ್ಲು ನೀರಿಗೆ ತಾಗಿದಲ್ಲಿಂದ ತರಂಗಗಳು ಹರಡುತ್ತವೆ. ಮೇಲ್ಮೈಯ ಎಲ್ಲಾ ಬಿಂದುಗಳು ಸಮಯದೊಂದಿಗೆ ಕಂಪಿಸಲು ಆರಂಭಿಸುತ್ತದೆ. ಯಾವುದೇ ಸಂದರ್ಭದಲ್ಲಿ, ಮೇಲ್ಮೈಯ ಛಾಯಾ ಪ್ರತಿಯು ವೃತ್ತಾಕಾರದ ಉಂಗುರಗಳನ್ನು ತೋರಿಸುತ್ತದೆ. ಮತ್ತು ಇಲ್ಲಿ ಕ್ಷೋಭೆಯು ಗರಿಷ್ಠವಾಗಿರುತ್ತದೆ. ಅಂದರೆ ವೃತ್ತಾಕಾರದ ಎಲ್ಲಾ ಬಿಂದುವಿನಲ್ಲಿ ಎಲ್ಲವೂ ಒಂದೇ ಪ್ರಾವಸ್ಥೆಯಲ್ಲಿ ಕಂಪಿಸುತ್ತದೆ. ಯಾಕೆಂದರೆ ಆ ಎಲ್ಲಾ ಬಿಂದುಗಳು ಆಕರದಿಂದ ಸಮಾನ ದೂರದಲ್ಲಿರುತ್ತವೆ. ಈ ರೀತಿಯಾಗಿ ಒಂದೇ ಕಂಪನಾವಸ್ಥೆಯಲ್ಲಿರುವ ಬಿಂದುಗಳ ಪಥವನ್ನು ತರಂಗ ಮುಖ ಎಂದು ಕರೆಯುತ್ತಾರೆ. ಯಾವ ವೇಗದಲ್ಲಿ ಈ ತರಂಗ ಮುಖವು ಆಕರದಿಂದ ಹೊರಗಡೆ ಚಲಿಸುತ್ತವೆಯೋ ಇದನ್ನು ತರಂಗದ ಜವ ಎಂದು ಕರೆಯುತ್ತಾರೆ. ಇಲ್ಲಿ ಶಕ್ತಿಯು ತರಂಗ ಮುಖಕ್ಕೆ ಲಂಬವಾಗಿ ಚಲಿಸುತ್ತದೆ.



ಸಮಾನವಾಗಿ ಎಲ್ಲಾ ದಿಕ್ಕುಗಳಲ್ಲೂ ತರಂಗವನ್ನು ಹೊರಸೂಸುವ ಬಿಂದು ಆಕರವೊಂದಿದ್ದರೆ, ಆಗ ಒಂದೇ ಪಾರ ಮತ್ತು ಒಂದೇ ಪ್ರಾವಸ್ಥೆಯಲ್ಲಿ ಕಂಪಿಸುವ ಬಿಂದುಗಳ ಪಥವು ಗೋಳಗಳಾಗಿದ್ದು (ಮೇಲಿನ ಚಿತ್ರದಲ್ಲಿರುವಂತೆ) ಗೋಳೀಯ ತರಂಗಗಳು ಉಂಟಾಗುತ್ತವೆ.



ಆಕರದಿಂದ ತುಂಬಾ ದೂರದಲ್ಲಿ, ಗೋಳದ ಮೇಲಿನ ಒಂದು ಸಣ್ಣ ಭಾಗವನ್ನು ಒಂದು ಸಮತಲ ಎಂದು ಪರಿಗಣಿಸಿದಾಗ ಅದನ್ನು ಸಮತಲ ತರಂಗ (ಮೇಲಿನ ಚಿತ್ರದಲ್ಲಿರುವಂತೆ) ಎನ್ನುವರು.

ಈಗ $t = 0$ ದಲ್ಲಿ ನಾವು ತರಂಗ ಮುಖದ ಆಕಾರವನ್ನು ತಿಳಿದುಕೊಂಡಿದ್ದರೆ, ಹೈಗನ್‌ನ ತತ್ವವು ನಂತರದ ಸಮಯ τ ದಲ್ಲಿ ತರಂಗ ಮುಖದ ಆಕಾರವನ್ನು ತಿಳಿಯಲು ಸಹಾಯ ಮಾಡುತ್ತದೆ. ಈ ರೀತಿಯಾಗಿ ಹೈಗನ್ ತತ್ವವು ಒಂದು ಜ್ಯಾಮಿತೀಯ ರಚನೆಯಾಗಿದ್ದು ಯಾವುದೇ ನಂತರದ ಸಮಯದಲ್ಲಿ ತರಂಗ ಮುಖದ ಆಕಾರವನ್ನು ತಿಳಿದುಕೊಳ್ಳಲು ಸಹಾಯಕವಾಗಿದೆ. ಒಂದು ಬಿಂದುವಿನಿಂದ ಅಪಸರಣಗೊಳ್ಳುವ ಒಂದು ತರಂಗವನ್ನು ತೆಗೆದುಕೊಳ್ಳಿ ಮತ್ತು F1F2 ಗೋಳೀಯ ತರಂಗ ಮುಖದ ಒಂದು ಸಣ್ಣ ಭಾಗವನ್ನು $t = 0$ ದಲ್ಲಿ ಸೂಚಿಸುತ್ತದೆ. ಈಗ ಹೈಗನ್‌ನ ತತ್ವದ ಪ್ರಕಾರ ತರಂಗ ಮುಖದ ಮೇಲಿನ ಎಲ್ಲಾ ಬಿಂದುಗಳೂ ಕ್ಷೋಭೆಯ ಆಕರಗಳಾಗಿ ವರ್ತಿಸುತ್ತವೆ ಮತ್ತು ಎಲ್ಲಾ ದಿಕ್ಕಿನಲ್ಲೂ ದ್ವಿತೀಯ ತರಂಗಗಳನ್ನು ಉತ್ಪಾದಿಸುತ್ತವೆ ಮತ್ತು ಈ ತರಂಗ ಮುಖಗಳು ಮೂಲ ಜವದೊಂದಿಗೆ ಎಲ್ಲಾ ದಿಕ್ಕಿಗೆ ಹರಡುತ್ತವೆ. ಇವುಗಳನ್ನು ದ್ವಿತೀಯಕ ತರಂಗಗಳೆಂದು ಕರೆಯುತ್ತಾರೆ. ಈಗ ನಾವು ಈ ಎಲ್ಲಾ ಗೋಳಗಳಿಗೆ ಸಾಮಾನ್ಯ ಸ್ಪರ್ಶಕವನ್ನು ಎಳೆದರೆ ನಮಗೆ ತರಂಗ ಮುಖದ ಹೊಸ ಸ್ಥಾನವು $t = \tau$ ದಲ್ಲಿ ಸಿಗುತ್ತದೆ.



ಮೇಲಿನ ಮಾದರಿಯು ನ್ಯೂನತೆಯೊಂದನ್ನು ಹೊಂದಿದೆ : (ಮೇಲಿನ ಚಿತ್ರದಲ್ಲಿರುವಂತೆ) D1D2 ಎಂದು ತೋರಿಸುವ ಹಿಮ್ಮುಖ ತರಂಗವೂ ಇರುತ್ತದೆ. ದ್ವಿತೀಯಕ ತರಂಗಗಳ ಪಾರವು ಗರಿಷ್ಠವಾಗಿದ್ದು ಹಿಮ್ಮುಖ ದಿಕ್ಕಿನಲ್ಲಿ ಶೂನ್ಯವಾಗಿರುತ್ತದೆಂದು ಹೈಗನ್‌ನು ತರ್ಕಿಸಿದನು ಮತ್ತು ಈ ತಾತ್ಕಾಲಿಕ ಪರಿಕಲ್ಪನೆಯಿಂದ, ಅವನು ಹಿಮ್ಮುಖ ತರಂಗವು ಅಸ್ತಿತ್ವದಲ್ಲಿಲ್ಲವೆಂದು ವಿವರಿಸಲು ಶಕ್ತನಾದನು. ಆದರೆ, ಈ ತಾತ್ಕಾಲಿಕ ಪರಿಕಲ್ಪನೆಯು ತೃಪ್ತಿಕರವಲ್ಲ ಮತ್ತು ಹಿಮ್ಮುಖ ತರಂಗದ ಇಲ್ಲದಿರುವಿಕೆಯನ್ನು ಸುಧಾರಿತ ತರಂಗ ಸಿದ್ಧಾಂತವು ಪುಷ್ಠೀಕರಿಸಿತು.



ಇದೇ ರೀತಿ, ಮಾಧ್ಯಮವೊಂದರಲ್ಲಿ ಚಲಿಸುವ ಸಮತಲ ತರಂಗದ ತರಂಗ ಮುಖದ ಆಕಾರವನ್ನು ತಿಳಿಯಲು ಹೈಗನ್ ತತ್ವವನ್ನು ಬಳಸಬಹುದು(ಮೇಲಿನ ಚಿತ್ರದಲ್ಲಿರುವಂತೆ)

ಸಹಕಾರ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ಬೆಂಗಳೂರು

ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯುಸಿ ಭೌತಶಾಸ್ತ್ರದ ಆಂಗ್ಲಭಾಷೆಯ ಮಾದರಿ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

❦ ಸುಭಾಷಿತ ❦

ಎಲ್ಲಕ್ಕಿಂತ ಶ್ರೇಷ್ಠ ಸತ್ಯ. ಆದರೆ, ಪ್ರಾಮಾಣಿಕ ಜೀವನವು ಅದಕ್ಕಿಂತಲೂ ಮಿಗಿಲಾದುದು.

-ಗುರುನಾನಕ್

ಮುಚ್ಚಿದ ಲಕೋಟೆ ಪದ್ಧತಿ ಮೂಲಭೂತ ಹಕ್ಕಿನ ನಿರಾಕರಣೆ

ಪ್ರಕರಣಗಳ ವಿಚಾರಣೆಯ ಸಂದರ್ಭದಲ್ಲಿ, ಗೋಪ್ಯ ಎನ್ನಲಾದ ಮಾಹಿತಿಯನ್ನು ನ್ಯಾಯಾಲಯಗಳು ಮುಚ್ಚಿದ ಲಕೋಟೆಯಲ್ಲಿ ಸ್ವೀಕರಿಸುವ ಪದ್ಧತಿಗೆ ಸುಪ್ರೀಂ ಕೋರ್ಟ್ ಈಚೆಗೆ ಅಸಮಾಧಾನ ವ್ಯಕ್ತಪಡಿಸಿದೆ. ಸುಪ್ರೀಂ ಕೋರ್ಟ್‌ನ ಅಸಮಾಧಾನ ಸರಿಯಾಗಿಯೇ ಇದೆ. ಈ ರೀತಿ ಮುಚ್ಚಿದ ಲಕೋಟೆಯಲ್ಲಿ ಕೆಲವು ಮಾಹಿತಿಯನ್ನು ಸುಪ್ರೀಂ ಕೋರ್ಟ್‌ನ ನ್ಯಾಯಪೀಠಗಳಿಗೇ ಸಲ್ಲಿಸಿರುವ ನಿದರ್ಶನಗಳು ಇವೆ. ನ್ಯಾಯಾಂಗದಲ್ಲಿಯೇ ಆಚರಣೆಯಲ್ಲಿ ಇರುವ ಮತ್ತು ನ್ಯಾಯಾಂಗದ ತತ್ವಗಳಿಗೆ ವಿರುದ್ಧವಾಗಿರುವ ಇಂತಹ ಪದ್ಧತಿಗಳ ಬಗ್ಗೆ ಸುಪ್ರೀಂ ಕೋರ್ಟ್ ಹುಬ್ಬು ಗಂಟಿಕ್ಕಿರುವುದು ಸ್ವಾಗತಾರ್ಹ. 'ನಮಗೆ ಮುಚ್ಚಿದ ಲಕೋಟೆಯಲ್ಲಿ ಮಾಹಿತಿ ನೀಡಬೇಡಿ. ಅದು ನಮಗೆ ಇಲ್ಲಿ ಬೇಕಾಗಿಲ್ಲ' ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ಅವರು ಪಟ್ನಾ ಹೈಕೋರ್ಟ್‌ನ ವಕೀಲರಿಗೆ ಹೇಳಿದ್ದಾರೆ. ಮಲಯಾಳದ ಟಿ.ವಿ. ವಾಹಿನಿ 'ಮೀಡಿಯಾ ಒನ್' ನಿಷೇಧಿಸಿದ ಕೇಂದ್ರ ಸರ್ಕಾರದ ಆದೇಶವನ್ನು ಎತ್ತಿಹಿಡಿದ ಕೇರಳ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಮೇಲ್ಮನವಿಯೊಂದರ ವಿಚಾರಣೆ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರು ಇದೇ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಸರ್ಕಾರವು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿದ ದಾಖಲೆಗಳನ್ನು ಆಧರಿಸಿ ಕೇರಳ ಹೈಕೋರ್ಟ್ ಆದೇಶ ಹೊರಡಿಸಿತ್ತು. ಸರ್ಕಾರವು ತನ್ನ ಮುಂದೆ ಮುಚ್ಚಿದ ಲಕೋಟೆಯಲ್ಲಿ ಇರಿಸಿದ್ದ ಮಾಹಿತಿಯನ್ನು ಒಪ್ಪದ ನ್ಯಾಯಮೂರ್ತಿ ಚಂದ್ರಚೂಡ್ ನೇತೃತ್ವದ ತ್ರಿಸದಸ್ಯ ಪೀಠವು, ನಿಷೇಧಕ್ಕೆ ತಡೆಯಾಜ್ಞೆ ನೀಡಿದೆ.

ಪ್ರಜಾತಂತ್ರ ವ್ಯವಸ್ಥೆಯಲ್ಲಿ ಪಾರದರ್ಶಕತೆ ಬಹಳ ಮುಖ್ಯ. ಅದರಲ್ಲೂ ನ್ಯಾಯಾಂಗ ವ್ಯವಸ್ಥೆಯಲ್ಲಿ ಅದು ಇನ್ನೂ ಮುಖ್ಯ

ಈಚೆಗಿನ ಕೆಲವು ಪ್ರಮುಖ ಪ್ರಕರಣಗಳ ವಿಚಾರಣೆ ಸಂದರ್ಭದಲ್ಲಿ ಮುಚ್ಚಿದ ಲಕೋಟೆಯಲ್ಲಿ ವಿವರಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿತ್ತು. ರಫೇಲ್ ಯುದ್ಧ ವಿಮಾನ ಖರೀದಿಗೆ ಸಂಬಂಧಿಸಿದ ಅರ್ಜಿ, ಭೀಮಾ ಕೋರೆಗಾಂವ್ ಪ್ರಕರಣ, ಅಸ್ಸಾಂನ ರಾಷ್ಟ್ರೀಯ ಪೌರತ್ವ ನೋಂದಣಿಗೆ ಸಂಬಂಧಿಸಿದ ಪ್ರಕರಣ, ಕೇಂದ್ರದ ಮಾಜಿ ಸಚಿವ ಪಿ. ಚಿದಂಬರಂ ಅವರ ನಿರೀಕ್ಷಣಾ ಜಾಮೀನು ಅರ್ಜಿಯ ವಿಚಾರಣೆ ಸಂದರ್ಭದಲ್ಲಿ ಈ ರೀತಿ ಮುಚ್ಚಿದ ಲಕೋಟೆಯಲ್ಲಿ ಮಾಹಿತಿ ಸಲ್ಲಿಸಿದ್ದು ಇದೆ. ಮುಚ್ಚಿದ ಲಕೋಟೆಯಲ್ಲಿ ವಿವರಗಳನ್ನು ಸಲ್ಲಿಸುವುದು ಬಹುತೇಕ ಸಂದರ್ಭಗಳಲ್ಲಿ ಸರ್ಕಾರವೇ ಆಗಿರುತ್ತದೆ. ಆಗ ಆ ಲಕೋಟೆಯಲ್ಲಿ ಯಾವ ವಿವರ ಇದೆ ಎಂಬುದು ಎದುರು ಪಕ್ಷದವರಿಗೆ ಗೊತ್ತಾಗುವುದಿಲ್ಲ. ಹೀಗೆ ಮಾಡುವುದು ತಪ್ಪು, ಇದು ನ್ಯಾಯಸಮ್ಮತ ಅಲ್ಲ. ಈ ರೀತಿ ಮಾಡುವುದರಿಂದ ಎದುರು ಪಕ್ಷದವರಿಗೆ ಆ ಲಕೋಟೆಯಲ್ಲಿ ಇರುವ ಮಾಹಿತಿ ಏನು ಎಂಬುದನ್ನು ಪರಿಶೀಲಿಸುವ ಹಾಗೂ ಅವುಗಳಿಗೆ ಪ್ರತಿವಾದ ಸಿದ್ಧಪಡಿಸುವ ಅವಕಾಶ ಇಲ್ಲದಂತೆ ಆಗುತ್ತದೆ. ಅಂದರೆ, ಪ್ರಕರಣದ ಕಕ್ಷಿದಾರರೊಬ್ಬರಿಗೆ ಮೂಲಭೂತ ಕಾನೂನು ಹಕ್ಕಿನ ನಿರಾಕರಣೆ ಆದಂತಾಗುತ್ತದೆ.

ಕೋರ್ಟ್‌ಗೆ ಮಾಹಿತಿಯನ್ನು ಮುಚ್ಚಿದ ಲಕೋಟೆಯಲ್ಲಿ ನೀಡುವ ಪರಿಪಾಟವು ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಅವಧಿಯಲ್ಲಿ ಹೆಚ್ಚಳ ಆಗಿದೆ. ರಾಷ್ಟ್ರೀಯ ಭದ್ರತೆಯ ಹೆಸರಿನಲ್ಲಿ ಅಥವಾ ಕೆಲವು ಮಾಹಿತಿ ಬಹಿರಂಗಪಡಿಸುವುದರಿಂದ ಪ್ರಗತಿಯಲ್ಲಿ ಇರುವ ತನಿಖೆಯ ಮೇಲೆ ಪರಿಣಾಮ ಆಗಬಾರದು ಎಂಬ ಕಾರಣ ನೀಡಿ, ಮುಚ್ಚಿದ ಲಕೋಟೆಯಲ್ಲಿ ಮಾಹಿತಿ ಸಲ್ಲಿಸಿರುವ ಕ್ರಮವನ್ನು ಸರ್ಕಾರವು ಸಮರ್ಥಿಸಿಕೊಂಡಿದೆ. ಆದರೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಪಾರದರ್ಶಕತೆ ಬಹಳ ಮುಖ್ಯ. ಅದರಲ್ಲೂ, ನ್ಯಾಯಾಂಗ ವ್ಯವಸ್ಥೆಯಲ್ಲಿ ಅದು ಇನ್ನೂ ಮುಖ್ಯ. ಮಾಹಿತಿಯನ್ನು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿದ ಹಲವು ಪ್ರಕರಣಗಳು ಪ್ರಜೆಗಳ ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದವು, ಉನ್ನತ ಹುದ್ದೆಯಲ್ಲಿ ಇರುವ ವ್ಯಕ್ತಿಗಳ ನಡವಳಿಕೆಗಳಿಗೆ ಸಂಬಂಧಿಸಿದವು. ಆರೋಪಿ ಸ್ಥಾನದಲ್ಲಿ ನಿಂತ ವ್ಯಕ್ತಿಗೆ ತನ್ನ ವಿರುದ್ಧದ ಸಾಕ್ಷ್ಯಗಳು ಯಾವುವು ಎಂಬುದನ್ನು ತಿಳಿದುಕೊಳ್ಳುವ ಅವಕಾಶ ಇಲ್ಲದಿದ್ದರೆ ನ್ಯಾಯದಾನ ಪ್ರಕ್ರಿಯೆಯು ಅಪಾರದರ್ಶಕ ಆಗುತ್ತದೆ. ರಫೇಲ್ ಪ್ರಕರಣದಂತಹವುಗಳಲ್ಲಿ ಉನ್ನತ ಸ್ಥಾನಗಳಲ್ಲಿನ ವ್ಯಕ್ತಿಗಳ ಬಗ್ಗೆಯೇ ಅನುಮಾನಗಳು ಇದ್ದವು. ಮಾಹಿತಿಯನ್ನು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿ, ಮಾಹಿತಿಯನ್ನು ರಹಸ್ಯವಾಗಿಟ್ಟು ತನಿಖೆಯಿಂದ ತಪ್ಪಿಸಿಕೊಳ್ಳುವುದಕ್ಕೆ ಅಂಥವರಿಗೆ ಅವಕಾಶ ನೀಡಲಾಗದು. ಗೋಪ್ಯ ಮಾಹಿತಿಯನ್ನು ಆಧರಿಸಿದ ತೀರ್ಮಾನಗಳು 'ನ್ಯಾಯದಾನ ನಡೆದರೆ ಮಾತ್ರವೇ ಸಾಲದು; ನ್ಯಾಯದಾನ ಆಗಿದೆ ಎಂಬುದು ಗೊತ್ತಾಗುವಂತೆಯೂ ಇರಬೇಕು' ಎಂಬ ಮಾತಿಗೆ ವಿರುದ್ಧ. ನ್ಯಾಯದಾನ ಎಂಬುದು ಪ್ರಕರಣದ ಒಬ್ಬ ಕಕ್ಷಿದಾರ ಹಾಗೂ ಕೋರ್ಟ್‌ನ ನಡುವಣ ವಿಚಾರ ಅಲ್ಲ. ಅರ್ಜಿದಾರ ಮತ್ತು ಪ್ರತಿವಾದಿ ಮಾತ್ರವೇ ಅಲ್ಲದೆ, ನ್ಯಾಯಾಲಯದ ತೀರ್ಮಾನಕ್ಕೆ ಕಾರಣವಾದ ವಿಚಾರಗಳು ಯಾವುವು ಎಂಬುದನ್ನು ತಿಳಿಯುವ ಹಕ್ಕು ಪ್ರಜೆಗಳಿಗೂ ಇರುತ್ತದೆ. ಆದರೆ, ಮುಚ್ಚಿದ ಲಕೋಟೆಯಲ್ಲಿ ವಿವರ ಸಲ್ಲಿಸುವ ಪದ್ಧತಿಯು ಈ ಹಕ್ಕನ್ನು ನಿರಾಕರಿಸುತ್ತದೆ.

ದಿನದ ಟ್ವೀಟ್

ಸಾರ್ವಜನಿಕರಿಗೆ ಕಿರಿಕಿರಿ

ಬೆಂಗಳೂರಿನ ಕೋರಮಂಗಲದ ನ್ಯಾಷನಲ್ ಗೇಮ್ಸ್ ವಿಲೇಜ್ ಪ್ರದೇಶದಲ್ಲಿ ಮತ್ತು ನಗರದ ಇತರ ಹಲವೆಡೆಗಳಲ್ಲಿ ಹತ್ತಾರು ವಾಹನಗಳು ವಾರಸುದಾರರಿಲ್ಲದೆ ಬಿದ್ದಿವೆ. ಇವು ಸಾರ್ವಜನಿಕರಿಗೆ ಕಿರಿಕಿರಿ ಉಂಟುಮಾಡುವುದಷ್ಟೇ ಅಲ್ಲದೆ, ಕಿಡಿಗೇಡಿಗಳು ಉದ್ದೇಶಪೂರ್ವಕವಾಗಿ ಸೇದಿ ಎಸೆದ, ಬೆಂಕಿಗೆ ಕಾರಣವಾಗಬಲ್ಲ ಸಿಗರೇಟಿನ ತುಂಡುಗಳಂತೆ ಅಪಾಯಕಾರಿಯೂ ಆಗಬಲ್ಲವು.

ರವಿಕೃಷ್ಣಾ ರೆಡ್ಡಿ, ಕರ್ನಾಟಕ ರಾಷ್ಟ್ರ ಸಮಿತಿ ಅಧ್ಯಕ್ಷ

ಕಿಡಿನುಡಿ

ಭಾರತ ಕ್ರಿಕೆಟ್ ತಂಡದ ಆಟಗಾರ್ತಿಯರ ದೈಹಿಕ ಸಾಮರ್ಥ್ಯದ (ಫಿಟ್‌ನೆಸ್) ಮಟ್ಟ ಹೆಚ್ಚಬೇಕಿದೆ. ಇಂಗ್ಲೆಂಡ್ ಮತ್ತು ಆಸ್ಟ್ರೇಲಿಯಾದವರೊಂದಿಗೆ ಹೋಲಿಕೆ ಮಾಡಿದರೆ ನಾವಿನ್ನೂ ಬಹುದೂರ ಇದ್ದೇವೆ. ಆದ್ದರಿಂದ ದೈಹಿಕ ಸಾಮರ್ಥ್ಯ ವೃದ್ಧಿಸುವತ್ತ ಗಮನ ನೀಡಬೇಕಿದೆ. ಉತ್ತಮ ಫಿಟ್‌ನೆಸ್ ಇದ್ದಾಗ ಮಾತ್ರ ಕಠಿಣವಾದ ಕ್ಯಾಚ್‌ಗಳನ್ನು ಪಡೆಯಲು ಸಾಧ್ಯ. ಬ್ಯಾಟಿಂಗ್ ಮಾಡುವಾಗ ಚುರುಕಾಗಿ ಒಂದು, ಎರಡು ರನ್ ಓಡಲು ಸಾಧ್ಯ. ಫಿಟ್‌ನೆಸ್ ಕೊರತೆ ಕಾರಣಕ್ಕೆ ಕ್ಯಾಚ್ ಬಿಡುವುದರೊಂದಿಗೆ ಪಂದ್ಯವನ್ನೂ ಕೈಚೆಲ್ಲಿದ್ದನ್ನು ನಾವು ನೋಡಿದ್ದೇವೆ.

ಡಯಾನಾ ಎಡುಲ್ಜಿ, ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕಿ

25 ವರ್ಷಗಳ ಹಿಂದೆ

ಶುಕ್ರವಾರ, 28-3-1997

• **ರಾಜೀವ್ ಹಂತಕರ ಜತೆ ಜಯಾ ಚಿತ್ರ ಎಬ್ಬಿಸಿದ ಕೋಲಾಹಲ**

ಚೆನ್ನೈ, ಮಾರ್ಚ್ 27 (ಪಿಟಿಐ)– ಕೆಲವು ಪತ್ರಿಕೆಗಳಲ್ಲಿ ಪ್ರಕಟವಾಗಿರುವ, ರಾಜೀವ್ ಗಾಂಧಿ ಅವರ ಹಂತಕರಾದ ಧನು ಮತ್ತು ಶಿವರಸನ್ ಜತೆ ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಜಯಲಲಿತಾ ಅವರು ನಿಂತಿರುವ ಚಿತ್ರ ಇಂದು ರಾಜ್ಯ ವಿಧಾನಸಭೆಯಲ್ಲಿ ಕೋಲಾಹಲ ಉಂಟು ಮಾಡಿತು.

ತಮಿಳು ಮಾನಿಲ ಕಾಂಗ್ರೆಸ್‌ನ ಉದ್ರಿಕ್ತ ಶಾಸಕರು, ಹತ್ಯೆ ಪ್ರಕರಣವನ್ನು ಈ ಚಿತ್ರದ ಆಧಾರದ ಮೇಲೆ ಹೊಸತಾಗಿ ವಿಚಾರಣೆ ನಡೆಸುವಂತೆ ಒತ್ತಾಯಿಸಿದರು.

ರಾಜೀವ್ ಹಂತಕರ ಜತೆಗಿನ ತಮ್ಮ ಚಿತ್ರವನ್ನು ಮುದ್ರಿಸಿರುವ ಪತ್ರಿಕೆಯ ವಿರುದ್ಧ ಕಿಡಿಕಾರಿರುವ ಜಯಲಲಿತಾ, ತಾವು ಈ ಸಂಬಂಧ ಸಿಬಿಐ ವಿಚಾರಣೆಗೆ ಸಿದ್ಧ ಎಂದಿದ್ದಾರೆ.

ತಮ್ಮ ಪಕ್ಕ ನಿಂತಿರುವ ಧನು ಎಂದು ಕರೆಯಲಾಗುತ್ತಿರುವ ಹುಡುಗಿ ಹೊಸೂರಿನಲ್ಲಿ ವಕೀಲ ವೃತ್ತಿಯಲ್ಲಿರುವ ದಾಕ್ಷಾಯಿಣಿ ಮತ್ತು ಶಿವರಸನ್ ಎಂದು ಕರೆಯಲಾಗುತ್ತಿರುವವರು ಹೊಸೂರಿನ ವಕೀಲ ನಂಜಯ್ಯ ಗೌಡರ್; ಇದನ್ನು ತಾವು ಶೀಘ್ರದಲ್ಲೇ ರುಜುವಾತು ಪಡಿಸುವುದಾಗಿ ಅವರು ಹೇಳಿದ್ದಾರೆ.

• **ಗೃಹಬಳಕೆ ಪ್ಲಾಸ್ಟಿಕ್ ತೆರಿಗೆಯಲ್ಲಿ ಇಳಿತ**

ಬೆಂಗಳೂರು, ಮಾರ್ಚ್ 27– ಗೃಹಬಳಕೆ ಪ್ಲಾಸ್ಟಿಕ್ ಸಾಮಗ್ರಿಗಳ ಮೇಲೆ ಹಾಕಲಾಗಿದ್ದ ತೆರಿಗೆಯಲ್ಲಿ ಇಳಿತ ಹಾಗೂ ಸಿನಿಮಾದ ಮೇಲಿನ ಮನರಂಜನಾ ತೆರಿಗೆಯ ಪರಿಷ್ಕೃತ ನೀತಿಯಲ್ಲಿ ವಿನಾಯಿತಿ ನೀಡಿರುವುದಾಗಿ ಉಪಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಂದು ವಿಧಾನಸಭೆಯಲ್ಲಿ ಘೋಷಿಸಿದರು.

50 ವರ್ಷಗಳ ಹಿಂದೆ

ಮಂಗಳವಾರ, 28-3-1972

• **ಹುಬ್ಬಳ್ಳಿ ಗಲಭೆ: ನ್ಯಾಯಾಂಗ ತನಿಖೆಗೆ ಅರಸು ನಕಾರ**

ಬೆಂಗಳೂರು, ಮಾರ್ಚ್ 27– ಕೋಮುದ್ವೇಷ ಬಿತ್ತಿ ಗಲಭೆಗಳನ್ನು ಪ್ರಚೋದಿಸುವುದನ್ನೇ ವೃತ್ತಿಯಾಗಿ ಹೊಂದಿರುವವರು ಇದ್ದು, ಅವರೇ ಕಿಡಿ ಹೊತ್ತಿಸುತ್ತಿರುವರೆಂದು ಮುಖ್ಯಮಂತ್ರಿ ಶ್ರೀ ಡಿ. ದೇವರಾಜ ಅರಸು ಅವರು ಇಂದು ವಿಧಾನಸಭೆಯಲ್ಲಿ ತಿಳಿಸಿ ಸರ್ಕಾರ ಅಂತಹವರನ್ನು ಪತ್ತೆ ಮಾಡಿ ಸೂಕ್ತ ಕ್ರಮ ಕೈಗೊಳ್ಳುವುದೆಂದು ತಿಳಿಸಿದರು.

ಈ ಕಾರ್ಯದಲ್ಲಿ ಸಲಹೆ ಮತ್ತು ಸಹಕಾರ ನೀಡಬೇಕೆಂದು ವಿರೋಧ ಪಕ್ಷದ ಸದಸ್ಯರನ್ನು ಮುಖ್ಯಮಂತ್ರಿಯವರು ಕೋರಿದರು. ಹುಬ್ಬಳ್ಳಿ ಗಲಭೆ ಪ್ರಕರಣದ ವಿಚಾರಕ್ಕೆ ಸಂಬಂಧಿಸಿದಂತೆ ನ್ಯಾಯಾಂಗ ತನಿಖೆ ನಡೆಸಲು ಮುಖ್ಯಮಂತ್ರಿ ಅವರು ನಿರಾಕರಿಸಿದರು.

• **ಶುಕ್ರನತ್ತ ಮತ್ತೊಂದು ರಷ್ಯನ್ ಉಪಗ್ರಹ**

ಮಾಸ್ಕೋ, ಮಾರ್ಚ್ 27– ಮಾನವ ರಹಿತ ಉಪಗ್ರಹ –ವೀನಸ್ 8 ಅನ್ನು ಶುಕ್ರ ಗ್ರಹದತ್ತ ಇಂದು ರಷ್ಯಾ ಹಾರಿಬಿಟ್ಟಿತು.

ಶುಕ್ರ ಗ್ರಹ ವಾತಾವರಣಕ್ಕೆ ನಿಧಾನವಾಗಿ ಇಳಿಯುವ ಉಪಗ್ರಹದ ನೌಕೆಯು ಅಲ್ಲಿ ವೈಜ್ಞಾನಿಕ ಅಂಕಿ- ಅಂಶಗಳನ್ನು ಸಂಗ್ರಹಿಸಲಿದೆ.

ಅರ್ಥಪೂರ್ಣ ಕಲಿಕಾ ಸನ್ನಿವೇಶವನ್ನು ರೂಪಿಸುವ ಕಡೆಗೆ ಚಿಂತಿಸಬೇಕಾದುದು ಇಂದಿನ ಅಗತ್ಯ

ಕಲಿಕಾ ಪರಿಸರ ಮತ್ತು ಶೈಕ್ಷಣಿಕ ಪರಿಣಾಮ

ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

ವಿದ್ಯಾರ್ಥಿಗಳಲ್ಲಿ ಕಲಿಕೆ ಚೆನ್ನಾಗಿ ನಡೆಯಬೇಕಾದರೆ ಕಲಿಕಾ ಪರಿಸರ ಮತ್ತು ಕಲಿಕಾ ಸಿದ್ಧತೆ ಈ ಎರಡೂ ಪೂರಕವಾಗಿರಬೇಕು ಎಂಬುದು ಶೈಕ್ಷಣಿಕ ಮನೋವಿಜ್ಞಾನವು ನೀಡುವ ತಿಳಿವಳಿಕೆಯಾಗಿದೆ. ಅದರ ಆಧಾರದಲ್ಲಿ ಯಾವ ಪರಿಸರದಲ್ಲಿ ಶಾಲೆ ಇರಬೇಕು, ಶಾಲಾ ಕಟ್ಟಡದ ವಿನ್ಯಾಸ ಹೇಗಿರಬೇಕು ಎಂಬ ಮಾರ್ಗಸೂಚಿಗಳು ಇವೆ. ಕಾರ್ಪೊರೇಟ್ ಶೈಲಿಯ ಶಾಲೆಗಳು ಬರುವವರೆಗೆ ಈ ಮಾರ್ಗಸೂಚಿಗಳನ್ನು ತಕ್ಕಮಟ್ಟಿಗೆ ಪಾಲಿಸಲಾಗಿದೆ. ಬೇಕಾದರೆ ಗಮನಿಸಿ; ಹಳೆಯ ಶಾಲೆಗಳು ಶಬ್ದಮಾಲಿನ್ಯ ಇರುವ ಸ್ಥಳದಲ್ಲಿ ಇರುವುದಿಲ್ಲ. ಪಂಚತಾರಾ ಹೋಟೆಲ್‌ನಂತೆಯೂ ಇರುವುದಿಲ್ಲ. ಮೈದಾನವಿಲ್ಲದೆ ಶಾಲಾ- ಕಾಲೇಜುಗಳು ಇರುವುದಿಲ್ಲ. ಇದು ಭೌತಿಕ ಪರಿಸರಕ್ಕೆ ಸಂಬಂಧಿಸಿದ ಸಂಗತಿಯಾದರೆ, ಬೌದ್ಧಿಕ ಪರಿಸರದಲ್ಲಿಯೂ ಕಲಿಕೆಗೆ ಪೂರಕವಾದ ಸಂಗತಿಗಳಿವೆ. ಶಿಕ್ಷಕರು ಯಾವ ಉಡುಪನ್ನು ಧರಿಸಬೇಕು, ಅಧ್ಯಾಪಕರ ನಡವಳಿಕೆ ಹೇಗಿರಬೇಕು, ಪೋಷಕರು ಮಕ್ಕಳನ್ನು ಹೇಗೆ ನಿರ್ವಹಿಸಬೇಕು ಎಂಬಿತ್ಯಾದಿ ವಿಷಯಗಳು ಬೌದ್ಧಿಕ ಪರಿಸರಕ್ಕೆ ಸಂಬಂಧಿಸಿವೆ. ಇವೆಲ್ಲವೂ ಕಲಿಕೆಯ ಮೇಲೆ ಪ್ರಭಾವವನ್ನು ಬೀರುತ್ತವೆ.

ವರ್ತಮಾನದ ಶಿಕ್ಷಣದಲ್ಲಿ ಕಲಿಕೆಯ ಉತ್ಪನ್ನವಾಗಿ ಅಂಕಗಳನ್ನು ಪರಿಗಣಿಸುವ ಪದ್ಧತಿ ಇದೆ. ಯಾವತ್ತಾದರೂ ಕಾಲೇಜು ವಿದ್ಯಾರ್ಥಿಗಳು ತಪ್ಪು ಮಾಡಿದಾಗ, 'ನಿಮಗೆ ಶಿಕ್ಷಕರು ಕಲಿಸಿದ್ದೇನು?' ಎಂದು ಗೊಣಗಿಕೊಳ್ಳುವಿಕೆಯನ್ನು ಬಿಟ್ಟರೆ ಅಂಕಗಳ ಆಚೆಗೆ ಕಲಿಕೆ ಇದೆ ಎಂಬ ಚಿಂತನೆ ಸಮಾಜದಿಂದ ಕಡಿಮೆಯಾಗಿದೆ. ಇಂತಹ ಸಂದರ್ಭದಲ್ಲಿ ಶಾಲಾ-ಕಾಲೇಜುಗಳಿಗೆ ಸಂಬಂಧಿಸಿದಂತೆ ನಡೆಯುವ ಚರ್ಚೆಯ ದಿಕ್ಕು ಕಲಿಕಾ ಸನ್ನಿವೇಶವನ್ನು ಪರಿಗಣನೆಗೇ ತೆಗೆದುಕೊಳ್ಳುವುದಿಲ್ಲ ಎಂಬುದು ಕಲಿಕಾ ಸಾಧ್ಯತೆಗಳನ್ನು ತೀವ್ರವಾಗಿ ಕುಸಿಯುವಂತೆ ಮಾಡುತ್ತದೆ.

ಉದಾಹರಣೆಗೆ ಇತ್ತೀಚೆಗೆ ಸಮವಸ್ತ್ರದ ವಿಚಾರವು ಧಾರ್ಮಿಕ ಹಕ್ಕಿನ ದೃಷ್ಟಿಯಲ್ಲಿ, ಸಮಾನತೆಯ ದೃಷ್ಟಿಯಲ್ಲಿ, ಕಾನೂನಿನ ದೃಷ್ಟಿಯಲ್ಲಿ, ನಂಬಿಕೆಯ ದೃಷ್ಟಿಯಲ್ಲಿ, ಸ್ತ್ರೀ ಸ್ವಾತಂತ್ರ್ಯದ ದೃಷ್ಟಿಯಲ್ಲೆಲ್ಲ ಚರ್ಚೆಗೆ ಒಳಗಾಗಿದೆ. ಆದರೆ ವಿದ್ಯಾರ್ಥಿಗಳು ಶಾಲಾ ಆಡಳಿತ ಹಾಗೂ ತಮಗೆ ಬೋಧಿಸುವ ಅಧ್ಯಾಪಕರನ್ನು ನಿರಾಕರಿಸಿ ನಡೆಯಬಹುದಾದ ಒಂದು ಸನ್ನಿವೇಶ ಮತ್ತು ಆ ಸನ್ನಿವೇಶದಲ್ಲಿ ವಿದ್ಯಾರ್ಥಿಗಳ ನಿರಾಕರಣಾ ನಡವಳಿಕೆಗಳಿಗೆ ಬೆಂಬಲ ಉಂಟಾಗುವ ಸ್ಥಿತಿಯಲ್ಲಿ ಕಲಿಕಾ ಶಿಸ್ತು ಹೇಗೆ ಉಳಿಯುತ್ತದೆ ಎಂಬುದರ ಬಗ್ಗೆ ಸಾರ್ವಜನಿಕ ಚರ್ಚೆಗಳು ಗಮನಿಸಿಲ್ಲ. ಹಾಗೆಯೇ, ತನ್ನ ಪ್ರೀತಿಯನ್ನು ಪಡೆಯುವ ಹಕ್ಕು ಇರುವ ವಿದ್ಯಾರ್ಥಿಗಳ ಮೇಲೆ ಕಲಿಕಾ ಅಗತ್ಯಗಳಿಗೆ ಹೊರತಾದ ವಿಚಾರಗಳ ಆಧಾರದಲ್ಲಿ ಕ್ರಮ ತೆಗೆದುಕೊಳ್ಳಬೇಕಾದ ಸ್ಥಿತಿ ಅಧ್ಯಾಪಕರಿಗೆ ಉಂಟಾಗುವುದು ಅಧ್ಯಾಪಕರನ್ನೂ ದುರ್ಬಲಗೊಳಿಸುತ್ತದೆ. ಇದರಿಂದ ಅಧ್ಯಾಪಕ-ವಿದ್ಯಾರ್ಥಿ ಸಂಬಂಧಗಳು ಕುಸಿಯುತ್ತವೆ. ಅಧ್ಯಾಪಕ-ವಿದ್ಯಾರ್ಥಿ ಸಂಬಂಧಗಳು ದುರ್ಬಲವಾದರೆ ಅಧ್ಯಾಪಕರ ಬೋಧನೆಯು ವಿದ್ಯಾರ್ಥಿಗಳ ಮೇಲೆ ಉಂಟು ಮಾಡಬೇಕಾದ ಪರಿಣಾಮ ಕಡಿಯಾಗುತ್ತದೆ. ಅಂತಿಮವಾಗಿ ಅದು ಶಿಕ್ಷಣವನ್ನು ದುರ್ಬಲಗೊಳಿಸುತ್ತದೆ. ಆಗ ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ಒಳ್ಳೆಯ ಅಂಕಗಳು ಬಂದರೂ ಕಲಿಕೆ ನಡೆದಿರುವುದಿಲ್ಲ.

ಕಲಿಕೆ ಯಶಸ್ವಿಯಾಗಿ ನಡೆಯಲು ಕಲಿಕಾ ಸನ್ನಿವೇಶವು ಪ್ರಜಾಸತ್ತಾತ್ಮಕವಿರಬೇಕು. ಕಲಿಕಾ ಶಿಸ್ತು ಇರಬೇಕು. ಬಹುಮಟ್ಟಿಗೆ ನಾವು ಪ್ರಜಾಸತ್ತೆ ಮತ್ತು ಕಲಿಕಾ ಸನ್ನಿವೇಶ ಎರಡನ್ನೂ ಅರ್ಥ ಮಾಡಿಕೊಂಡದ್ದರಲ್ಲಿ ದೋಷವಿದೆ. ಪ್ರಜಾಪ್ರಭುತ್ವ ಎಂದರೆ 'ಅಶಿಸ್ತು' ಎಂದು ಅರ್ಥವಲ್ಲ. ಸಾರ್ವಜನಿಕ ಶಿಸ್ತನ್ನು ಶಿಕ್ಷೆಯ ಭಯವು ರೂಪಿಸದೆ, ಪರಸ್ಪರ ಸಂವಾದದಿಂದ ಹುಟ್ಟಿಕೊಂಡ ಜ್ಞಾನವು ರೂಪಿಸುತ್ತದೆ ಎಂದು ಅರ್ಥ. ಶಿಸ್ತಂತೂ ಇದ್ದೇ ಇರುತ್ತದೆ. ಅದು ಸ್ವಯಂ ಶಿಸ್ತಾಗಿದ್ದಷ್ಟೂ ಶಿಸ್ತಿನ ದಕ್ಷತೆ ಜಾಸ್ತಿ ಇರುತ್ತದೆ.

ಅದೇ ರೀತಿ, ತರಗತಿಯಲ್ಲಿ ವಿದ್ಯಾರ್ಥಿಗಳಿಗೆ ಸ್ವಾತಂತ್ರ್ಯವಿದೆ ಎಂದರೆ ವಿದ್ಯಾರ್ಥಿಗಳನ್ನು ಹೇಳುವವರು, ಕೇಳುವವರು ಯಾರೂ ಇರುವುದೇ ಇಲ್ಲ, ಅವರು ಬೇಕಾದ ಹಾಗೆ ವರ್ತಿಸಬಹುದು ಎಂದು ಅರ್ಥ ಅಲ್ಲ. ಕಲಿಕಾ ಸನ್ನಿವೇಶದಲ್ಲಿ ಅಧ್ಯಾಪಕರ ಅವಲೋಕನದ ಒಳಗೆ, ಶೈಕ್ಷಣಿಕ ಆಡಳಿತದ ಸನ್ನಿವೇಶದಲ್ಲಿ ಶಾಲಾ ಆಡಳಿತದ ಅವಲೋಕನದ ಒಳಗೆ ವಿದ್ಯಾರ್ಥಿಗಳು ಸ್ವತಂತ್ರರಾಗಿರುತ್ತಾರೆ ಎಂದು ಅರ್ಥ. ವಿದ್ಯಾರ್ಥಿಗಳ ಅವಲೋಕನದ ಅಧಿಕಾರವು ಅಧ್ಯಾಪಕರಿಗೂ ಆಡಳಿತಕ್ಕೂ ಇರುವುದಿಲ್ಲವಾದರೆ ವಿದ್ಯಾರ್ಥಿಗಳಿಗೆ ಏನಾದರೂ ತೊಂದರೆಯಾದಾಗ ಹೊಣೆಗಾರಿಕೆಯನ್ನು ಅಧ್ಯಾಪಕರು ಮತ್ತು ಶಾಲಾ ಆಡಳಿತ ಹೇಗೆ ವಹಿಸಿಕೊಳ್ಳಲು ಬರುತ್ತದೆ. 'ನಾನು ಜೊತೆಯಲ್ಲಿಲ್ಲದೆ ನದಿಗೆ ಹೋಗಬೇಡ' ಎಂದು ವಿದ್ಯಾರ್ಥಿಗಳಿಗೆ ಅಧ್ಯಾಪಕರು ಹೇಳಿದಾಗ ಅದನ್ನು ವಿದ್ಯಾರ್ಥಿಗಳು ಪಾಲಿಸಬೇಕು ಎಂಬುದನ್ನು ಸಮಾಜ ಒಪ್ಪಿಕೊಂಡಾಗ ಮಾತ್ರ ವಿದ್ಯಾರ್ಥಿ ನದಿಯಲ್ಲಿ

ಯಾವುದಾದರೂ ಅವಘಡಕ್ಕೆ ಒಳಗಾದರೆ ಸಮಾಜ ಅಧ್ಯಾಪಕರನ್ನು ಪ್ರಶ್ನಿಸಲು ಬರುತ್ತದೆ. ಶಾಲಾ ವ್ಯವಸ್ಥೆಯ ಮೇಲೆ ಹರಿಹಾಯುವಾಗ ಇಷ್ಟು ಪ್ರಜ್ಞೆ ಇರಬೇಕಾಗಿದೆ. ಆಡಳಿತಾತ್ಮಕ ವ್ಯವಸ್ಥೆಗೆ ತನ್ನ ಅಧೀನದಲ್ಲಿರುವವರ ಮೇಲೆ ಕೆಲವು ಅಧಿಕಾರಗಳಿದ್ದಾಗ ಮಾತ್ರ ಕೆಲಸ ಮಾಡಲು ಸಾಧ್ಯವಾಗುವುದು.

ಮೂರನೆಯದಾಗಿ ಶಾಲಾ ಸನ್ನಿವೇಶಗಳು ಜಾಗತೀಕರಣದ ನಂತರದ ದಿನಗಳಲ್ಲಿ ತೀವ್ರವಾಗಿ ಸಾಂಸ್ಕೃತಿಕ ರಾಜಕಾರಣಕ್ಕೆ ಒಳಗಾದವು. ಜಾಗತೀಕರಣಕ್ಕೆ ಹಿಂದಿನ ಕಾಲಾವಧಿಯ 20 ಅಂಶಗಳ ಕಾರ್ಯಕ್ರಮಗಳು, ಜನತಾ ಕಾಲೊನಿ ಯೋಜನೆ, ವಿದ್ಯಾರ್ಥಿಗಳಿಗೆ ಸಮವಸ್ತ್ರ ಯೋಜನೆ ಇಂತಹವುಗಳೆಲ್ಲ ಜಾತ್ಯತೀತವಾಗಿ ಎಲ್ಲ ಬಡವರಿಗೂ ಅನುಕೂಲ ಮಾಡಿಕೊಡುವ ಬಡತನ ನಿರ್ಮೂಲನಾ ಕಾರ್ಯಕ್ರಮಗಳಾಗಿದ್ದವು. ಸಾಮಾಜಿಕ ನ್ಯಾಯಕ್ಕಾಗಿನ ಯೋಜನೆಗಳು ಬೇರೆ ಇರುತ್ತಿದ್ದವು. ಉದಾಹರಣೆಗೆ ಮೀಸಲಾತಿಯ ಉದ್ದೇಶ ಸಾಮಾಜಿಕ ನ್ಯಾಯ. ಅದಕ್ಕೂ ಬಡತನ ನಿರ್ಮೂಲನಾ ಕಾರ್ಯಕ್ರಮಗಳಿಗೂ ನಡುವೆ ವ್ಯತ್ಯಾಸವಿದೆ. ಜಾಗತೀಕರಣದ ನಂತರದ ದಿನಗಳಲ್ಲಿ ಬಡತನ ನಿರ್ಮೂಲನಾ ಕಾರ್ಯಕ್ರಮಗಳು ಬಹುಮಟ್ಟಿಗೆ ಪ್ರತ್ಯೇಕ ಅಸ್ತಿತ್ವವನ್ನು ಕಳೆದುಕೊಂಡು ಸಾಮಾಜಿಕ ನ್ಯಾಯಕ್ಕಾಗಿನ ವ್ಯವಸ್ಥೆಯ ಭಾಗವಾದವು. ಆಗ ಹುಟ್ಟಿಕೊಂಡದ್ದೇ ಎಲ್ಲ ಜಾತಿಗಳಲ್ಲೂ ಬಡವರು ಇಲ್ಲವೇ ಎಂಬ ಪ್ರಶ್ನೆ.

ಹೀಗೆ ಶಿಕ್ಷಣ ಸಂಸ್ಥೆಗಳಿಗೂ ಪ್ರವೇಶಿಸಿದ ಸಾಂಸ್ಕೃತಿಕ ರಾಜಕಾರಣವು ಅದರ ಎರಡನೆಯ ಹಂತದಲ್ಲಿ ಭಿನ್ನ ಧರ್ಮಗಳ ನಡುವಿನ ಸಾಂಸ್ಕೃತಿಕ ಸಂಘರ್ಷವಾಗಿ ವರ್ತಮಾನದಲ್ಲಿ ಮುಂದುವರಿಯುತ್ತಿದೆ. ಪ್ರಜಾಪ್ರಭುತ್ವದಲ್ಲಿ ಭಿನ್ನ ನೆಲೆಯ ರಾಜಕಾರಣವೂ ಸಹಜವೇ. ವಿದ್ಯಾರ್ಥಿಗಳಲ್ಲೂ ಅದರ ಅರಿವು ಸಹಜವೇ. ಆದರೆ ವಿದ್ಯಾಸಂಸ್ಥೆಗಳಲ್ಲಿ ರಾಜಕಾರಣವು ಅರಿವಾಗಿ ಬರಬೇಕೆ ಹೊರತು ಕಲಿಕಾ ಅಡಚಣೆಯಾಗಿ ಬರಬಾರದು ಎಂಬುದು ಎಲ್ಲ ನೆಲೆಯ ರಾಜಕಾರಣಗಳಿಗೆ ಇರಬೇಕಾದ ಬದ್ಧತೆಯಾಗಿದೆ. ಈಗ ಆ ಬದ್ಧತೆ ಉಳಿದಿಲ್ಲ.

ಕಲಿಕಾ ಸನ್ನಿವೇಶ ಹೀಗಿರಬೇಕು ಎಂಬ ಕುರಿತ ಶೈಕ್ಷಣಿಕ ಸಂಶೋಧನೆಗಳನ್ನು ಎಲ್ಲರೂ ಒಪ್ಪುತ್ತಾರೆ. ಆದರೆ ಅವರವರ ಹಿತಾಸಕ್ತಿಯ ವಿಚಾರ ಬಂದಾಗ ಕಲಿಕಾ ಸನ್ನಿವೇಶ ತನ್ನ ಮೂಗಿನ ನೇರಕ್ಕೆ ಇರಬೇಕು ಎನ್ನುವುದೇ ಎಲ್ಲರ ವಾದವೂ ಆಗುತ್ತದೆ. ಆಗ ಶೈಕ್ಷಣಿಕ ಕಾಳಜಿಗಳಿಗೆ ಮಹತ್ವ ಇರುವುದಿಲ್ಲ. ಸಾಹಿತಿಗಳು ಕೂಡ ಈ ವಿಷಯದಲ್ಲಿ ಕಲಿಕಾ ಸನ್ನಿವೇಶವನ್ನು ಪರಿಗಣಿಸದೆಯೇ, ತಾವು ಯಾವುದರ ಪರವಾಗಿದ್ದೇವೋ ಅದನ್ನು ಗೆಲ್ಲಿಸಿಕೊಳ್ಳಲು ಪ್ರತಿಪಾದನೆ ನಡೆಸುವವರೇ ಆಗಿದ್ದಾರೆ. ಆದರೆ, ಸಂವಾದಗಳು ಶಿಕ್ಷಣವನ್ನು ಬೆಳೆಸುತ್ತವೆ. ಪ್ರತಿಪಾದನೆಗಳು ಶಿಕ್ಷಣವನ್ನು ಸಾಯಿಸುತ್ತವೆ. ಭವಿಷ್ಯ ಖಾಸಗೀಕರಣದ ಯುಗದ್ದಾಗಿದೆ. ಖಾಸಗೀಕರಣದಲ್ಲಿ ಸಾಮಾಜಿಕ ನ್ಯಾಯದ ಸಾಧನೆ ಕೂಡ ಪ್ರತಿಭೆ ಮತ್ತು ಪರಿಶ್ರಮವನ್ನು ಅವಲಂಬಿಸಿರುತ್ತದೆಯೆ ವಿನಾ ವ್ಯಕ್ತಿಯ ಸ್ಥಿತಿ ಅಲ್ಲ. ಆದ್ದರಿಂದ ವಿದ್ಯಾರ್ಥಿಗಳು ಪ್ರತಿಭೆಯನ್ನು ವಿಕಾಸಗೊಳಿಸಿಕೊಳ್ಳದೆ ಕೇವಲ ಅಂಕಗಳು ಮತ್ತು ಪುಡಿ ಜಗಳಗಳಿಗೆ ತಮ್ಮ ಕಲಿಕಾ ವರ್ಷಗಳನ್ನು ಸೀಮಿತಗೊಳಿಸಿದರೆ ಭವಿಷ್ಯವನ್ನು ಅವರು ಕಳೆದುಕೊಳ್ಳಬಹುದಾದ ಪ್ರಮೇಯವಿದೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು, ಪಾಲಕರು, ಶೈಕ್ಷಣಿಕ ಆಡಳಿತಗಳು ಅರ್ಥಪೂರ್ಣ ಕಲಿಕಾ ಸನ್ನಿವೇಶವನ್ನು ರೂಪಿಸುವ ಕಡೆಗೆ ಚಿಂತಿಸಬೇಕಾದ ಅಗತ್ಯವಿದೆ.

ಚುರುಮುರಿ

ನಗುನಗುತಾ ದ್ವೇಷಿಸು!

• ಸುಮಂಗಲಾ

'ಯೋಗಮಾಮಾನ ಸಿಂಹಾಸನಾರೋಹಣ ಕಣ್ಣು ತುಂಬಿಕೊಳ್ಳಾಕ ನಾನೂ ಹೋಗತೀನಿ ಅಂದ್ರ ನೀ ಕಳಿಸಲಿಲ್ಲ. ನಮ್ಮ ಕರುನಾಡಿನ ಉಡುಪಿ ಸ್ವಾಮಿಗಳು, ಇಸ್ಕಾನ್ ಸ್ವಾಮಿಗಳು, ಹಿಂಗ ಎಷ್ಟ್ ಮಂದಿ ಸ್ವಾಮಿಗೋಳ್ ಸಹಿತ ನೋಡಾಕೆ ಹೋಗಿದ್ರು. ಸ್ವಾಮಿಗಳಿಗೇ ಆಸೆ ಇರತೈತಿ ಅಂದ್ರ ನಾ ಆಸೆ ಪಡೂದು ತಪ್ಪೇನು' ಅಂತ ಬೆಕ್ಕಣ್ಣ ಗುರುಗುರು ನಡೆಸಿತ್ತು.

'ಲಕ್ನೋದಾಗೆ ಟ್ರಾಫಿಕ್ ಜಾಮ್ ಆಗಿ ಸ್ವಾಮೀಜಿನೂ 2 ಕಿ.ಮೀ. ನಡಕೊಂಡೇ ಹೋಗ್ಯಾರಂತ. ಆ ಉರಿಬಿಸಿಲಿನಾಗೆ ನೀ ಅಷ್ಟ್ ನಡೀತಿದ್ಯೇನು? ಡೀಸೆಲ್, ಪೆಟ್ರೋಲು ಇನ್ನಾ ದುಬಾರಿ ಆಗ್ಯೆತಿ, ಮುಂದಿನ ತಿಂಗಳಿಂದ ಔಷಧಗಳೂ ದುಬಾರಿ ಆಗತಾವು. ಆರೋಗ್ಯ ಕೆಟ್ಟರ ಏನ್ ಮಾಡ್ತೀ? ಸಿಂಹಾಸನಾರೋಹಣದ ವಿಡಿಯೊ ಹಾಕಿ ತೋರಿಸ್ತೇನೆಳು' ಎಂದು ಸಮಾಧಾನಿಸಿದೆ.

'ನೀ ಎಲ್ಲದಕ್ಕ ನಮ್ಮ ನಿರ್ಮಲಕ್ಕನ್ನ ದೂರಬ್ಯಾಡ. ಅವೆಲ್ಲ ದುಬಾರಿ ಆದರೇನಾತು... ಬಾಯಿಗಿ ಬಂದಂಗ ಒದರೂ ನಾಲಗಿ ಅಗ್ಗ ಆಗ್ಯೆತಲ್ಲ, ಸಾಕೇಳು' ಎಂದು ಉಡಾಫೆ ಹೊಡೆದು ಪೇಪರು ಜಾಲಾಡತೊಡಗಿತು.

ಐದೇ ನಿಮಿಷದಲ್ಲಿ ಕನ್ನಡಿ ಮುಂದೆ ನಿಂತು 'ಆ ಸಾದಿಕಣ್ಣಂಗೆ ಮೂಲಿ ಅಂಗಡಿ ಮೊದ್ಲು ಖಾಲಿ ಮಾಡು ಅನ್ನಬಕು. ಇಲ್ಲಾಂದ್ರ ನಾವ್ ಒಂದ್ ಕೈ ನೋಡತೀವಿ. ನಮ್ಮ ಹಿಂದೂ ಬೆಕ್ಕುಗಳೆಲ್ಲ ಅಲ್ಲಿ ಹೊಕ್ಕಂಡು ಹೆಗ್ಗಣ, ಇಲಿ ಹಿಡಿತಾವು. ನಾಳೆವಳಗ ಅಂಗಡಿ ಖಾಲಿ ಮಾಡದಿದ್ರ ಒಂದೂ ಮೂಳೆ ನೆಟ್ಟಗಿರಂಗಿಲ್ಲ. ಗೋಲಿ ಮಾರೋ ಅವ್ರಿಗಿ' ಎಂದು ಭಾರಿ ನಗುಮೊಗದಿಂದ ಹಲ್ಲು ಕಿಸಿಯುತ್ತ ಭಾಷಣ ಪ್ರಾಕ್ಟೀಸ್ ಮಾಡುತ್ತಿತ್ತು.

'ಹಂಗೆಲ್ಲ ದ್ವೇಷಭಾಷಣ ಮಾಡಬಾರದಲೇ... ಜೈಲಿಗಿ ಹಾಕತಾರ' ಎಂದೆ ಗಾಬರಿಯಾಗಿ.

'ನಾ ನಕ್ಕೋತ ದ್ವೇಷಭಾಷಣ ಮಾಡತೀನಿ. ಹಂಗೇ ಆರ್ಡರು ಆಗ್ಯೆತಿ. ನಕ್ಕೋತ ಹೊಡೀರಿ ಅಂದ್ರೂನೂ ಅಪರಾಧ ಅಲ್ಲಂತ. ನೀ ಅಷ್ಟ್ ಗಂಭೀರ ಮಾರಿ ಮಾಡಿಕೊಂಡು ಶಾಂತಿ ಕಾಪಾಡೂಣು ಅಂದ್ರ ನಿನ್ನೇ ಒದ್ದು ಜೈಲಿಗಿ ಹಾಕತಾರಷ್ಟೇ' ಎಂದು ಕಿಸಿಕಿಸಿ ನಕ್ಕಿತು!

ಸಂಗತ

'ಅಪ್ಪು' ಎಂಬ ರಾಜಕೀಯ ವಿದ್ಯಮಾನ

'ಕೂಡಿಬಾಳುವ ಸಾಮುದಾಯಿಕ ವಿವೇಕ'ವನ್ನು ಜಾಗೃತಗೊಳಿಸಿದ ಬೆಳವಣಿಗೆಗಳು

• ಡಾ. ಕಿರಣ್ ಎಂ. ಗಾಜನೂರು

'ನಿಜ ಹೇಳಬೇಕು ಅಂದರೆ ಅಪ್ಪು, ಡಾ. ರಾಜ್‌ಕುಮಾರ್ ಅವರ ಮನೆಯಲ್ಲಿ ಬೆಳೆಯಲಿಲ್ಲ, ಬದಲಾಗಿ ಆತ ಕನ್ನಡದ ಬೆಳ್ಳಿತೆರೆಯ ಮೇಲೆ ಬೆಳೆದು ದೊಡ್ಡವನಾದ ಹುಡುಗ. ಆತನ ಬಾಲ್ಯ, ಯೌವನ, ಯಶಸ್ಸು ಎಲ್ಲದರೊಂದಿಗೂ ಕನ್ನಡದ ಜನಸಮುದಾಯಕ್ಕೆ ಬಿಡಿಸಲಾರದ ಬಾಂಧವ್ಯ ಏರ್ಪಟ್ಟಿದೆ. ಆ ಕಾರಣಕ್ಕೆ ಇಂದು ಕನ್ನಡನಾಡು ತಮ್ಮ ಮನೆಯ ಮಗನನ್ನೇ ಕಳೆದುಕೊಂಡಂತೆ ವ್ಯಥೆಪಡುತ್ತಿದೆ' ಎಂಬ ಅರ್ಥದ ವಿವರಣೆಯನ್ನು ಪುನೀತ್ ರಾಜ್‌ಕುಮಾರ್ ನಿಧನರಾದ ದಿನ ಅಂತರರಾಷ್ಟ್ರೀಯ ಸುದ್ದಿವಾಹಿನಿ ಬಿಬಿಸಿಗೆ ಸಿನಿಮಾ ವಿಮರ್ಶಕಿ ಅಶಾಂಟಿ ಓಂಕಾರ್ ನೀಡಿದ್ದರು.

ಅಪ್ಪು ನಮ್ಮ ನಡುವೆ ಇಲ್ಲವಾಗಿ ಸರಿಸುಮಾರು ಐದು ತಿಂಗಳು ಕಳೆದರೂ ಕನ್ನಡದ ಜನಸಮುದಾಯ ಮಾತ್ರ ಅವರನ್ನು ನೆನೆಯುತ್ತಲೇ ಇದೆ. 'ಯಾವ ಧರ್ಮಗಳ ಕಟ್ಟುಪಾಡುಗಳೂ ಇಲ್ಲದ ಒಂದೇ ಒಂದು ಹಬ್ಬ ಯಾವುದಾದರೂ ಇದ್ದರೆ ಅದು ಅಪ್ಪು ಹುಟ್ಟುಹಬ್ಬ' ಎಂಬ ಅರ್ಥದ ಸಂದೇಶಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿವೆ. ನಾಡಿನ ಸಾವಿರಾರು ಹಳ್ಳಿ ಮತ್ತು ನಗರಗಳ ರಸ್ತೆಗಳು, ವೃತ್ತಗಳು ಅಪ್ಪು ಹೆಸರು ಹೊತ್ತುಕೊಂಡು ನಿಂತಿವೆ. ಹಂಪಿ ಕನ್ನಡ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಪ್ರೊ. ಎ.ಎಸ್.ಪ್ರಭಾಕರ್, 'ಮುಗ್ಧ ನಗುವೊಂದರ ಕಣ್ಮರೆ' ಎಂಬ ಪುಸ್ತಕವೊಂದನ್ನು ಹೊರತಂದಿದ್ದಾರೆ. ಅಪ್ಪುವಿನ ಸಮಾಧಿಯು ಅಭಿಮಾನಿಗಳ ಪಾಲಿಗೆ ಪವಿತ್ರ ಕ್ಷೇತ್ರವಾಗಿ ಮಾರ್ಪಟ್ಟಿದೆ.

ಅಪ್ಪು ಎಂಬ ವ್ಯಕ್ತಿತ್ವವೊಂದರ ಹಠಾತ್ ಕಣ್ಮರೆಯನ್ನು ಕೇಂದ್ರವಾಗಿ ಇಟ್ಟುಕೊಂಡು ನಡೆಯುತ್ತಿರುವ ಈ ಎಲ್ಲಾ ಮಾದರಿಯ ಅಭಿವ್ಯಕ್ತಿಗಳು 'ನಮ್ಮ ಸಮಾಜವು ಜಾತಿ, ಧರ್ಮಗಳಲ್ಲಿ ಒಡೆದುಹೋಗಿದೆ. ಸಾಮುದಾಯಿಕ ಬದುಕು ಇಲ್ಲವಾಗಿದೆ. ಜನ ಮತ್ತೊಬ್ಬರ ನೋವಿಗೆ ಮಿಡಿಯದಷ್ಟು ಸ್ವಾರ್ಥಿಗಳಾಗಿದ್ದಾರೆ. ಮಾರುಕಟ್ಟೆ ಆರ್ಥಿಕತೆ ಸೃಷ್ಟಿಸಿರುವ ಮನೋವೈಕಲ್ಯಕ್ಕೆ ಒಳಗಾಗಿ ಮನುಷ್ಯರು ಕೇವಲ ಗ್ರಾಹಕರಾಗಿ ಬದಲಾಗಿದ್ದಾರೆ' ಎಂಬಂತಹ, ಆಧುನಿಕತೆ ಸೃಜಿಸಿರುವ ಎಲ್ಲಾ ಕ್ಲೀಷೆಗಳನ್ನು ಒಡೆದುಹಾಕಿವೆ.

ಬಹಳ ಮುಖ್ಯವಾಗಿ, ಆಧುನಿಕ ಸಂವಹನ ಮಾಧ್ಯಮಗಳನ್ನು ಬಳಸಿಕೊಳ್ಳುವ ಮೂಲಕ ಜನಸಮುದಾಯಗಳನ್ನು ನಿಯಂತ್ರಿಸಬಹುದು, ಆಳಲು ಬೇಕಾದ ಒಪ್ಪಿಗೆಯನ್ನು ಉತ್ಪಾದಿಸಿಕೊಳ್ಳಬಹುದು ಎಂಬ ಸಂಕುಚಿತ ತಿಳಿವಳಿಕೆಯನ್ನು ಅಪ್ಪು ವಿದ್ಯಮಾನ ಸುಳ್ಳಾಗಿಸಿದೆ. ಜನಸಮುದಾಯಗಳು ತಮ್ಮ ಬದುಕಿಗೆ ಹತ್ತಿರವಾದ, ಪೂರಕವಾದ ಸಾಂಸ್ಕೃತಿಕ ನಿರೂಪಣೆಯನ್ನು ಕ್ಷಣಮಾತ್ರದಲ್ಲಿ ಚಳವಳಿಯಂತೆ ಸೃಷ್ಟಿಸಿಕೊಳ್ಳಬಲ್ಲವು. ಆ ಪ್ರಕ್ರಿಯೆಗೆ ಜಾತಿ, ಧರ್ಮ, ಲಿಂಗಗಳ ಹಂಗಿಲ್ಲ ಎಂಬ ಅರಿವನ್ನು 'ಅಪ್ಪು ಚಳವಳಿ' ತೋರಿಸಿಕೊಟ್ಟಿದೆ.

ನಿಜವಾದ ಅರ್ಥದಲ್ಲಿ ರಾಜಕೀಯ ಎಂದರೆ 'ವೈವಿಧ್ಯದಿಂದ ಕೂಡಿದ ಜನಸಮುದಾಯಗಳು ಪರಸ್ಪರ ಕೂಡಿ ಬಾಳಲು ಬೇಕಾದ ವಿವೇಕವೊಂದನ್ನು ಕಟ್ಟಿಕೊಳ್ಳುವ ಬಗೆ' ಎಂಬ ಅರ್ಥವನ್ನು ಹೊಂದಿದೆ. ಹಾಗಾಗಿಯೇ ಪ್ರಮುಖ ರಾಜಕೀಯ ಚಿಂತಕಿ ಹನ್ನಾ ಅರೆಂಟ್, 'ರಾಜಕೀಯ ಎಂಬುದು ಸಮುದಾಯಗಳು ಗಟ್ಟಿಗೊಳ್ಳುವ ಪ್ರಕ್ರಿಯೆ. ಇದನ್ನು ನಾವು ಪ್ರೇಮ ಮತ್ತು ಪರಸ್ಪರ ಒಪ್ಪಿಗೆಯಿಂದ ಕಟ್ಟಿಕೊಳ್ಳಬಹುದೇ ವಿನಾ ದ್ವೇಷ ಮತ್ತು ಹಿಂಸೆಯ ಸಹಾಯದಿಂದ ಅಲ್ಲ. ನಾವು ಯಾವಾಗ ರಾಜಕೀಯ ಎಂಬ ಪರಿಭಾಷೆಯನ್ನು ಬಳಸುತ್ತೇವೆಯೋ ಆಗ ನಾವು ನಮ್ಮ ವೈಯಕ್ತಿಕ ಬದುಕಿನ ಕುರಿತು ಮಾತನಾಡುತ್ತಿರುವುದಿಲ್ಲ. ಬದಲಾಗಿ, ಉತ್ತಮ ಸಾಮುದಾಯಿಕ ಬದುಕಿನ ಕುರಿತು ಚರ್ಚಿಸುತ್ತಿರುತ್ತೇವೆ' ಎಂಬ ವಿಶ್ಲೇಷಣೆಯನ್ನು ಮುಂದಿಟ್ಟಿದ್ದಾರೆ.

ಈ ಅರ್ಥದಲ್ಲಿ ರಾಜಕೀಯ ಎಂಬುದು 'ಒಳ್ಳೆಯ ಸಾಮುದಾಯಿಕ ಜೀವನವನ್ನು ನೆಲೆಗೊಳಿಸುವ ಪ್ರಕ್ರಿಯೆ'. ಆದರೆ ವರ್ತಮಾನದಲ್ಲಿನ ಅಧಿಕಾರ ರಾಜಕೀಯವು ಸಮುದಾಯ ವಿಘಟನೆಯ ಭಾಷೆಯನ್ನು ಬಳಸುತ್ತಿದೆ. ಜನರಲ್ಲಿ ಪರಸ್ಪರ ಅಪನಂಬಿಕೆಯನ್ನು ಸೃಜಿಸುವ ಮೂಲಕ ಅವರ ಬದುಕಿಗೆ ಸಂಬಂಧಿಸಿದ ಮೂಲಭೂತ ಪ್ರಶ್ನೆಗಳಿಂದ ಅವರನ್ನು ವಿಮುಖರನ್ನಾಗಿಸುತ್ತಿದೆ. ಇದನ್ನು ನಾವು ರಾಜಕೀಯ ಎಂದು ಕರೆಯಲು ಸಾಧ್ಯವಿಲ್ಲ. ಈ ಮಾದರಿಯ ಸಂಕುಚಿತ ಬೆಳವಣಿಗೆಗಳು ನಡೆಯುತ್ತಿರುವ ಕಾಲದಲ್ಲಿಯೇ ಅಪ್ಪು ಎಂಬ ರಾಜಕೀಯ ವಿದ್ಯಮಾನ ಘಟಿಸಿದೆ.

ಜನಸಮುದಾಯಗಳ ಒಳಗೆ ಇರುವ ಈ 'ಕೂಡಿಬಾಳುವ ಸಾಮುದಾಯಿಕ ವಿವೇಕ'ವನ್ನು ಅಪ್ಪು ನಿರ್ಗಮನ ಜಾಗೃತಗೊಳಿಸಿದೆ. ಆ ಮೂಲಕ ಮನುಷ್ಯನ ಕುರಿತು ಆಧುನಿಕತೆ ಸೃಜಿಸಿದ್ದ ಸಂಕುಚಿತ ಕ್ಲೀಷೆಗಳನ್ನು ಒಡೆದುಹಾಕಿದೆ. ಮನುಷ್ಯ ಮೂಲತಃ ಸಾಮಾಜಿಕ ಜೀವಿ ಆಗಿರುವುದು ಎಷ್ಟು ಸತ್ಯವೋ ಹಾಗೇ ಆತ ರಾಜಕೀಯ ಜೀವಿ ಆಗಿರುವುದೂ ಅಷ್ಟೇ ಸತ್ಯ. 'ರಾಜಕೀಯ' ಎಂಬ ವಿದ್ಯಮಾನ ವ್ಯಕ್ತಿಯ ಹುಟ್ಟಿನಿಂದ ಸಾಯುವವರೆಗೆ ಆತನ ಬದುಕಿನ ಎಲ್ಲಾ ಅಂಶಗಳನ್ನು ಪ್ರಭಾವಿಸುವ ಸಂಗತಿಯಾಗಿದೆ. ಆದರೆ ಅಪ್ಪು ಎಂಬ ರಾಜಕೀಯ ವಿದ್ಯಮಾನವು ಅಪ್ಪುವಿನ ನಿರ್ಗಮನದ ನಂತರವೂ ನಮ್ಮ ನಾಡಿನ ಜನಸಮುದಾಯಗಳು ಹೊಂದಿರುವ ವೈವಿಧ್ಯಮಯ ವಿವೇಕಕ್ಕೆ ಸಾಕ್ಷಿಯಾಗಿದೆ.

ಅಪ್ಪುವಿನ ನಿರ್ಗಮನದ ನಂತರ ಅವರ ಪತ್ನಿ ಅಶ್ವಿನಿ ಅವರು ಸಾರ್ವಜನಿಕವಾಗಿ ನಡೆದುಕೊಳ್ಳುತ್ತಿರುವ ರೀತಿ, ಬದುಕಿನಲ್ಲಿ ಘಟಿಸುವ ದುರಂತವೊಂದನ್ನು ಒಬ್ಬ ಸಬಲ ಹೆಣ್ಣಾಗಿ ಹೇಗೆ ಪ್ರೌಢಿಮೆಯಿಂದ ಎದುರುಗೊಳ್ಳಬೇಕು, ನಿಭಾಯಿಸಬೇಕು ಎಂಬ 'ಸಹಜ ಹೆಣ್ತನ'ದ ಶಕ್ತಿಯನ್ನು ನಮ್ಮೆದುರು ಅನಾವರಣಗೊಳಿಸಿದೆ. ಅಪ್ಪು ನಿರ್ಗಮನಕ್ಕೆ ಹೊಂದಿಕೊಂಡು ಘಟಿಸುತ್ತಿರುವ ಈ ಎಲ್ಲಾ ಸಂಗತಿಗಳು ನಮ್ಮದೇ ವರ್ತಮಾನವನ್ನು ಗ್ರಹಿಸಲು ಬೇಕಾದ ಹೊಸ 'ರಾಜಕೀಯ ವಿದ್ಯಮಾನ'ವಾಗಿ ಕಾಣುತ್ತಿದೆ.

ಲೇಖಕ: ಸಹಾಯಕ ಪ್ರಾಧ್ಯಾಪಕ, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಲಬುರಗಿ

ವಾಚಕರ ವಾಣಿ

ಮಂಗನ ಕಾಯಿಲೆ: ಲಸಿಕೆಯೊಂದೇ ಈಗಿರುವ ದಾರಿ

ಬೇಸಿಗೆ ಬಂದೊಡನೆ ಮಲೆನಾಡು ಹಾಗೂ ಕರಾವಳಿ ಜನರನ್ನು ತೀವ್ರವಾಗಿ ಕಾಡುವ ಮಂಗನ ಕಾಯಿಲೆ ಸಮಸ್ಯೆ ಕುರಿತು ಸತೀಶ ಜಿ.ಕೆ. ತೀರ್ಥಹಳ್ಳಿ ಅವರ ಬರಹ (ಸಂಗತ, ಮಾರ್ಚ್ 25) ಸಕಾಲಿಕವಾದುದು. ಅವರು ಉಲ್ಲೇಖಿಸಿರುವಂತೆ, ಹೆಲಿಕಾಪ್ಟರ್ ಮೂಲಕ ಕ್ರಿಮಿನಾಶಕ ಸಿಂಪಡಿಸಿ ರೋಗವಾಹಕ ಉಣ್ಣೆಗಳನ್ನು ಕೊಲ್ಲಬಹುದೆಂಬ ಕೆಲವು ಸ್ಥಳೀಯರ ಸಲಹೆ ಖಂಡಿತಾ ಸಾಧುವಲ್ಲ. ಅದು ಇನ್ನೂ ಹೊಸ ಸಮಸ್ಯೆಗಳಿಗೆ ಕಾರಣವಾಗಬಹುದು. ಎಲ್ಲ ವೈರಸ್ ಕಾಯಿಲೆಗಳಿಗೆ ಹಾಕಿಸಿಕೊಳ್ಳುವಂತೆ, ರೋಗಬರದಂತೆ ಲಸಿಕೆ ಹಾಕಿಸಿಕೊಳ್ಳುವುದೊಂದೇ ಈಗಿರುವ ದಾರಿ. ಜೊತೆಗೆ, ಕಾಡಿಗೆ ತೆರಳುವಾಗ ಹಳ್ಳಿಗರು ಉಣ್ಣೆಹುಳು ನಿರೋಧಕ ತೈಲವನ್ನು ಲೇಪಿಸಿಕೊಳ್ಳಬೇಕು. ಈ ಕುರಿತು ಆರೋಗ್ಯ ಇಲಾಖೆಯು ನೀಡುತ್ತಿರುವ ಎಲ್ಲ ಸಲಹೆ ಹಾಗೂ ಸೌಲಭ್ಯಗಳನ್ನು ಹಳ್ಳಿಗರು ಸಂಪೂರ್ಣವಾಗಿ ಬಳಸಿಕೊಳ್ಳಬೇಕಿದೆ.

ಹಾಗಾದರೆ, ಈ ಗಂಭೀರ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವತ್ತ ಮುಂದೇನು ಮಾಡಬೇಕಿದೆ? ಈ ಕುರಿತಾಗಿ ಕೆಲವು ವರ್ಷಗಳಿಂದ ಅಧ್ಯಯನ ಕೈಗೊಂಡಿರುವ ನಮ್ಮ ಅನುಭವದಲ್ಲಿ ಹೇಳಬಹುದಾದರೆ, ಕನಿಷ್ಠ ಐದು ಆಯಾಮಗಳಲ್ಲಿ ಪ್ರಯತ್ನಿಸುವ ಅಗತ್ಯವಿದೆ. ಒಂದು, ಲಸಿಕೆಯ ಕ್ಷಮತೆ ಹೆಚ್ಚಿಸುವುದು. ಎರಡನೆಯದು, ರೋಗಪತ್ತೆ ಹಚ್ಚುವ ಪ್ರಯೋಗಾಲಯ ತಂತ್ರಗಳ ಕ್ಷಮತೆ ವರ್ಧಿಸುವುದು. ಮೂರು, ಮಂಗನ ಹೊರತಾಗಿಯೂ ಇರಬಹುದಾದ ಇತರ ವೈರಾಣು ಪೋಷಕ ಜೀವಿಗಳನ್ನು ಪತ್ತೆಹಚ್ಚುವುದು. ನಾಲ್ಕು, ಉಣ್ಣೆಯ ಹೊರತಾದ ರೋಗವಾಹಕ ಇರಬಹುದೇ ಎಂದು ಪರಿಶೀಲಿಸುವುದು. ಕೊನೆಯದಾಗಿ, ಇಲ್ಲಿನ ಮಣ್ಣು, ನೀರು, ಇತರ ಜೀವಿಗಳು, ಹವಾಮಾನ- ಇತ್ಯಾದಿಗಳೆಲ್ಲ ಸೇರಿದಂತೆ, ಒಟ್ಟೂ ಪರಿಸರವು ಈ ವೈರಸ್ಸನ್ನು ಪ್ರಭಾವಿಸುವ ರೀತಿಯನ್ನು ಅರಿಯುವುದು. ಆಳವಾದ, ಅಂತರ್‌ಶಿಸ್ತೀಯ ಹಾಗೂ ಕಾಲಬದ್ಧ ಸಂಶೋಧನೆ ಅಗತ್ಯವಿರುವ ಸಂಗತಿಯಿದು.

ಪಶ್ಚಿಮಘಟ್ಟದ ಮಳೆಕಾಡು ತೀವ್ರವಾಗಿ ನಾಶವಾಗಿದ್ದೇ, ಸೃಷ್ಟಿಯಲ್ಲಿ ಹುದುಗಿಕೊಂಡಿದ್ದ ಈ ವೈರಸ್ ಕ್ರಿಯಾಶೀಲವಾಗಲು ಕಾರಣವಾಯಿತು ಎಂಬುದನ್ನು ಅಧ್ಯಯನಗಳು ದೃಢಪಡಿಸಿವೆ. ಅಣೆಕಟ್ಟು, ಗಣಿಗಾರಿಕೆಯಂಥ ಮಿತಿಯಿರದ ಅಭಿವೃದ್ಧಿ ಯೋಜನೆಗಳು, ವಾಣಿಜ್ಯಕೃಷಿ ಹಾಗೂ ನೆಡುತೋಪು ವಿಸ್ತರಣೆ, ವ್ಯಾಪಕ ಅರಣ್ಯ ಅತಿಕ್ರಮಣ- ಇತ್ಯಾದಿ ಅನರ್ಥಗಳಿಗೆ ಹಳ್ಳಿಗಳ ಜನಜೀವನ ಬೆಲೆ ತೆರುತ್ತಿರುವುದಕ್ಕೆ ಜೀವಂತ ನಿದರ್ಶನವಿದು.

ಡಾ. ಕೇಶವ ಎಚ್. ಕೊರ್ಸೆ, ಶಿರಸಿ

ಭಗವದ್ಗೀತೆ: ಔಚಿತ್ಯದ ಪ್ರಶ್ನೆ

ಶಾಲಾ ಶಿಕ್ಷಣದಲ್ಲಿ ಭಗವದ್ಗೀತೆಯ ಪಠ್ಯ ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಎರಡು ಭಿನ್ನ ಅಭಿಪ್ರಾಯಗಳನ್ನು (ಪ್ರ.ಜಾ., ಚರ್ಚೆ, ಮಾರ್ಚ್ 26) ಪ್ರಕಟಿಸಿದ್ದು ಸಾಂದರ್ಭಿಕವಾದುದಾಗಿದೆ. ಆದರೆ, 'ಶಿಕ್ಷಣದಲ್ಲಿ ಭಗವದ್ಗೀತೆ ಬೇಡವೇ?' ಎಂಬ ನಾರಾಯಣ ಶೇವರೆ ಅವರ ಲೇಖನವು ಚರ್ಚಾಪಟುವಿನ ವಾದ ಮಂಡನೆಯಂತೆ ತೋರುತ್ತದೆ. ಬೌದ್ಧಿಕ ವಲಯವು ಭಗವದ್ಗೀತೆಯನ್ನು ವಿರೋಧಿಸುತ್ತದೆ ಎಂಬ ಅವರ ಪೂರ್ವಗ್ರಹಿಕೆಯು ಇದಕ್ಕೆ ಬಹುಶಃ ಕಾರಣವಾಗಿರಬಹುದು. ಕೆಲವು ಕಾರಣಗಳಿಗಾಗಿ ಮತ್ತು ಕೆಲವು ಶ್ಲೋಕಗಳಲ್ಲಿನ ವಿಚಾರಗಳಿಗಾಗಿ ವಿರೋಧವಿದೆಯೇ ಹೊರತು ಇಡೀ ಭಗವದ್ಗೀತೆಯನ್ನು ಯಾರೂ ವಿರೋಧಿಸುತ್ತಿಲ್ಲ ಮತ್ತು ಶಾಲಾ ಹಂತದಲ್ಲಿನ ಸಾಧ್ಯಾಸಾಧ್ಯತೆಗಳ ಹಿನ್ನೆಲೆಯಲ್ಲಿ ಇದರ ಔಚಿತ್ಯ ಉಚಿತವೇ ಎಂಬುದನ್ನು ಅವರು ಅರಿಯಬೇಕಾಗಿದೆ.

ಕುರಾನ್ ಹೇಳುವ 'ಒಬ್ಬ ವ್ಯಕ್ತಿಯ ಸಂಕಟ ಇಡೀ ಮನುಕುಲದ ಸಂಕಟ' ಮತ್ತು 'ಕೂಲಿಯವನ ಮೈಮೇಲಿನ ಬೆವರು ಆರುವುದಕ್ಕೆ ಮುಂಚೆ ಅವನ ಕೂಲಿಯನ್ನು ಕೊಟ್ಟುಬಿಡಬೇಕು' ಹಾಗೂ ಬೈಬಲ್ ಹೇಳುವ 'ನಿನ್ನ ಶತ್ರುವನ್ನು ಪ್ರೀತಿಸು' ಎಂಬ ಮಾತುಗಳು ಎಲ್ಲರನ್ನೂ ಒಳಗೊಳ್ಳುವ ಸಂಗತಿಗಳಲ್ಲವೇ?

'ಕ್ರೈಸ್ತ ರಿಲಿಜನ್ ಬಗ್ಗೆ ಬೈಬಲ್ ಅತ್ಯಂತ ಸ್ಪಷ್ಟವಾಗಿ ಆಗ್ರಹಿಸುತ್ತದೆ. ಹಾಗೆಯೇ ಇಸ್ಲಾಮಿನ ಶ್ರೇಷ್ಠತೆಯನ್ನು ಕುರಾನ್ ಯಾವುದೇ ಗೊಂದಲವಿಲ್ಲದೆ ಸಾರುತ್ತದೆ. ಆದರೆ ಇಡಿಯ ಗೀತೆಯಲ್ಲಿ ಎಲ್ಲಿಯೂ ಹಿಂದೂ ಎಂಬ ಪದವಾಗಲೀ, ದೇಶವಾಚಕವಾಗಿ ಭಾರತದ ಉಲ್ಲೇಖವಾಗಲೀ ಇಲ್ಲ...' ಎಂಬ ಮಾತು ಅಸಂಬದ್ಧವಾಗಿದೆ. ಏಕೆಂದರೆ ಭಗವದ್ಗೀತೆಯಲ್ಲಿ ಹಾಗಂತ ಉಲ್ಲೇಖಿಸದಿದ್ದರೂ ಅದರಲ್ಲಿ ಅಂತರ್ಗತವಾಗಿ ನಿಹಿತವಾಗಿದೆ. ಭಗವದ್ಗೀತೆಯ 'ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ' (18- 66) (ಎಲ್ಲ ಧರ್ಮಗಳನ್ನು ಪರಿತ್ಯಜಿಸಿ ನನ್ನೊಬ್ಬನಲ್ಲಿಯೇ ಶರಣಾಗು), 'ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ಸ್ವನುಷ್ಠಿತಾತ್' (18-47) (ಚೆನ್ನಾಗಿ ಅನುಷ್ಠಾನ ಮಾಡಲ್ಪಟ್ಟ ಪರ ಧರ್ಮಕ್ಕಿಂತ ಗುಣರಹಿತವಾದಾಗ್ಯೂ ಸಹ ತನ್ನ ಧರ್ಮವೇ ಶ್ರೇಯಸ್ಕರವಾದುದು) ಮತ್ತು 'ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ' (3-35) (ತನ್ನ ಧರ್ಮದಲ್ಲಿ ಸತ್ತರೂ ಶ್ರೇಯವೇ, ಬೇರೆ ಧರ್ಮ ಭಯವನ್ನುಂಟು ಮಾಡುವಂತಹುದು)- ಈ ಮುಂತಾದ ಹಲವಾರು ಹೇಳಿಕೆಗಳು ಸೂಚಿಸುವುದು ಹಿಂದೂ ಧರ್ಮವನ್ನಲ್ಲದೆ ಮತ್ತೇನು? ಅಷ್ಟೆ ಅಲ್ಲದೆ ಅವರು ಹೇಳುವ ಸ್ಪರ್ಧಾತ್ಮಕತೆ, ಮನಃಶಾಸ್ತ್ರೀಯ ಗುಣ, ಆತ್ಮತತ್ವ, ಧರ್ಮಸೂಕ್ಷ್ಮತೆ ಇತ್ಯಾದಿ ಅಂಶಗಳು ಭಗವದ್ಗೀತೆಯಲ್ಲಿ ಮಾತ್ರ ಲಭ್ಯವಾಗುವಂತಹವು ಎಂಬುದನ್ನು ಒಪ್ಪಲಾದೀತೆ?

ಪು.ಸೂ. ಲಕ್ಷ್ಮೀನಾರಾಯಣ ರಾವ್, ಬೆಂಗಳೂರು

ಭ್ರಷ್ಟ ಅಧಿಕಾರಿಗಳಿಗೆ ರಕ್ಷಣೆ ಬೇಡ

ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಅಧಿಕಾರಿಗಳು ಇತ್ತೀಚೆಗೆ ಕೆಲವು ಸರ್ಕಾರಿ ಅಧಿಕಾರಿಗಳು ಹಾಗೂ ದಲ್ಲಾಳಿಗಳ ಮನೆ ಮತ್ತು ಕಚೇರಿಗಳ ಮೇಲೆ ದಾಳಿ ನಡೆಸಿ ಅಪಾರ ಪ್ರಮಾಣದ ನಗದು, ಚಿನ್ನ- ಬೆಳ್ಳಿ ಆಭರಣ ಹಾಗೂ ಆಸ್ತಿಪಾಸ್ತಿಗಳ ದಾಖಲೆ ವಶಪಡಿಸಿಕೊಂಡಿರುವುದರ ಬಗ್ಗೆ ವರದಿಯಾಗಿದೆ. ಈ ಹಿಂದೆಯೂ ಎಸಿಬಿ ಹಲವಾರು ದಾಳಿಗಳನ್ನು ನಡೆಸಿ ಅಕ್ರಮ ಗಳಿಕೆಯನ್ನು ಪತ್ತೆಹಚ್ಚಿದೆ. ಇತ್ತೀಚಿನ ವರ್ಷಗಳಲ್ಲಿ ಎಸಿಬಿ ಸ್ವಲ್ಪಮಟ್ಟಿಗೆ ಚುರುಕುಗೊಂಡಿದೆ ಎಂದು ಹೇಳಬಹುದು. ಆದರೆ, ಎಸಿಬಿ ಹೂಡುವ ಪ್ರಕರಣಗಳಲ್ಲಿ ಶಿಕ್ಷೆಯಾಗುವ ಪ್ರಮಾಣ ಮಾತ್ರ ಅತ್ಯಂತ ಕಡಿಮೆ. ಬಹುತೇಕ ಆರೋಪಿಗಳು ರಾಜಕೀಯ ಪ್ರಭಾವ ಬಳಸಿಕೊಂಡು, ಶಿಕ್ಷೆಯಿಂದ ಪಾರಾಗುತ್ತಾರೆ. ಕೆಲವರು ಮತ್ತೆ ಆಯಕಟ್ಟಿನ ಸ್ಥಳಗಳಲ್ಲಿ ಬಂದು ಕುಳಿತುಕೊಳ್ಳುತ್ತಾರೆ.

ಕೆಲವು ಅಧಿಕಾರಿಗಳ ಮನೆಯಲ್ಲಿ ವಶಪಡಿಸಿಕೊಂಡಿರುವ ನಗದು ಮತ್ತು ಕೆಜಿಗಟ್ಟಲೆ ಚಿನ್ನಾಭರಣಗಳನ್ನು ನೋಡಿದರೆ ಯಾರಿಗಾದರೂ ಬೆರಗಾಗದಿರದು. ಎಸಿಬಿ ದಾಖಲಿಸುವ ಪ್ರಕರಣಗಳಲ್ಲಿ ಯಾವುದೇ ಕಾರಣಕ್ಕೂ ರಾಜಕೀಯ ಹಸ್ತಕ್ಷೇಪ ಇರಬಾರದು. ಪ್ರಕರಣವು ನ್ಯಾಯಾಲಯದಿಂದ ಹೊರಬರುವವರೆಗೆ, ಭ್ರಷ್ಟ ಅಧಿಕಾರಿಗಳನ್ನು ಪುನರ್‌ನೇಮಕ ಮಾಡಿಕೊಳ್ಳಬಾರದು. ಭ್ರಷ್ಟ ಅಧಿಕಾರಿಗಳನ್ನು ಸರ್ಕಾರವೇ ರಕ್ಷಿಸಿದರೆ ಎಸಿಬಿ ಏಕೆ ಬೇಕು?

ಕೆ.ವಿ. ವಾಸು, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

‘ಪುಟಿನ್ ಯುದ್ಧವು ಉಕ್ರೇನ್–ರಷ್ಯಾಕ್ಕೆ ಸೀಮಿತವಲ್ಲ’

ಉಕ್ರೇನ್ ಯುದ್ಧಕ್ಕಾಗಿ ಹಣ ಮತ್ತು ಶಸ್ತ್ರಾಸ್ತ್ರ ಸಹಾಯವನ್ನು ಚೀನಾದಿಂದ ರಷ್ಯಾ ಕೇಳಿದೆ ಎಂಬುದು ಈಗ ರಹಸ್ಯವಾಗಿ ಉಳಿದಿಲ್ಲ. ಇದು ರಷ್ಯಾ ಮತ್ತು ಚೀನಾ ನಡುವಣ ಸಂಬಂಧವನ್ನು ಇನ್ನಷ್ಟು ಗಟ್ಟಿಗೊಳಿಸುತ್ತದೆ. ಇಂತಹ ಬದಲಾವಣೆಯು ಅಮೆರಿಕಕ್ಕೂ ಭಾರತಕ್ಕೂ ಅಪಾಯಕಾರಿ ಎನ್ನುತ್ತಾರೆ ಚೆನ್ನೈನಲ್ಲಿರುವ ಅಮೆರಿಕ ಕಾನ್ಸುಲ್ ಜನರಲ್ **ಜುಡಿತ್ ರೇವಿನ್**. ಉಕ್ರೇನ್ ಮೇಲೆ ರಷ್ಯಾ ದಾಳಿಗೆ ಸಂಬಂಧಿಸಿದಂತೆ ಜುಡಿತ್ ಅವರ ಜತೆಗೆ **ಹಮೀದ್ ಕೆ.** ನಡೆಸಿದ ಇ–ಮೇಲ್ ಸಂದರ್ಶನ ಇಲ್ಲಿದೆ

● ಉಕ್ರೇನ್ ಮೇಲೆ ರಷ್ಯಾದ ಅತಿಕ್ರಮಣವು ಶೀತಲ ಯುದ್ಧ ನಂತರದ ಯುಗದಲ್ಲಿನ ಅತ್ಯಂತ ದೊಡ್ಡ ಬಿಕ್ಕಟ್ಟಾಗಿದೆ. ಈ ಬಿಕ್ಕಟ್ಟು ಅಮೆರಿಕದ ವಿದೇಶಾಂಗ ನೀತಿಯನ್ನು ಮಾರ್ಪಡಿಸುವ ಸಾಧ್ಯತೆ ಇದೆಯೇ? ಮಾರ್ಪಾಡು ಆದರೆ ಅದು ಮಿತ್ರ ರಾಷ್ಟ್ರಗಳು ಮತ್ತು ಪ್ರತಿಕೂಲ ರಾಷ್ಟ್ರಗಳ ಮೇಲೆ ಯಾವ ಪರಿಣಾಮ ಉಂಟು ಮಾಡಬಹುದು?

ಹಿಂದೂ ಮಹಾಸಾಗರ–ಪೆಸಿಫಿಕ್ ಪ್ರದೇಶದ ಸಹಭಾಗಿತ್ವಕ್ಕೆ ಅಮೆರಿಕದ ಬದ್ಧತೆ ಅತ್ಯಂತ ಬಲವಾದುದು. ಹಿಂದೂ ಮಹಾಸಾಗರ–ಪೆಸಿಫಿಕ್‌ಗೆ ಸಂಬಂಧಿಸಿ ಅಮೆರಿಕದ ಕಾರ್ಯತಂತ್ರವು ಈ ಪ್ರದೇಶವನ್ನು ಮುಕ್ತ, ನಿರ್ಬಂಧರಹಿತ, ಪರಸ್ಪರ ಸಂಪರ್ಕಿತ, ಸಮೃದ್ಧ, ಸುರಕ್ಷಿತವಾಗಿ ಇರಿಸುವುದಕ್ಕೆ ಬದ್ಧವಾಗಿದೆ. ಈ ಪ್ರದೇಶದ ಸ್ವರೂಪವನ್ನು ಹಿಂದಿನ ಸ್ಥಿತಿಗೆ ಮರಳಿಸುವುದಕ್ಕೂ ಅಮೆರಿಕ ಬದ್ಧ. ಪುಟಿನ್ ಅವರ ಯುದ್ಧವು ಉಕ್ರೇನ್ ಮತ್ತು ರಷ್ಯಾಕ್ಕೆ ಸೀಮಿತವಾದುದಲ್ಲ.

ಯುರೋಪ್, ಹಿಂದೂ ಮಹಾಸಾಗರ–ಪೆಸಿಫಿಕ್ ಪ್ರದೇಶ ಮತ್ತು ಜಗತ್ತಿನಾದ್ಯಂತ ಸಾರ್ವತ್ರಿಕವಾಗಿ ಅನ್ವಯವಾಗುವ ತತ್ವಗಳಿಗೆ ಅಪಾಯ ಎದುರಾಗಿದೆ. ನಮ್ಮ ಮಿತ್ರರು ಮತ್ತು ಸಹಭಾಗಿಗಳು ರಕ್ಷಿಸಲು ಯತ್ನಿಸುತ್ತಿರುವ ಪ್ರಮುಖ ತತ್ವಗಳು ಇವೇ ಆಗಿವೆ: ತನ್ನ ವಿದೇಶಾಂಗ ನೀತಿಯನ್ನು ನಿರ್ಧರಿಸುವ ಹಕ್ಕು ಪ್ರತಿಯೊಂದು ದೇಶಕ್ಕೂ ಇದೆ. ಮೈತ್ರಿ ಮತ್ತು ಸಹಭಾಗಿತ್ವಕ್ಕೆ ಸಂಬಂಧಿಸಿ ಯಾರ ಜತೆಗೆ ಇರಬೇಕು ಎಂಬುದನ್ನು ನಿರ್ಧರಿಸುವ ಹಕ್ಕೂ ಇದೆ.

● ‘ಹಾರಾಟ ನಿಷೇಧ ವಲಯ’ ಘೋಷಣೆ ಮಾಡಿ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರು ಪದೇ ಪದೇ ಮಾಡಿಕೊಂಡ ಮನವಿಗೆ ಅಮೆರಿಕವು ಪೂರಕವಾಗಿ ಯಾಕೆ ಸ್ಪಂದಿಸಲಿಲ್ಲ?

ಪುಟಿನ್ ಆರಂಭಿಸಿದ ಯುದ್ಧವನ್ನು ಕೊನೆಗಾಣಿಸಲು ನಾವು ಯತ್ನಿಸುತ್ತಿದ್ದೇವೆಯೇ ಹೊರತು, ಮತ್ತೊಂದು ದೊಡ್ಡ ಯುದ್ಧವನ್ನು ಆರಂಭಿಸಲು ಅಲ್ಲ. ಅಮೆರಿಕವು ಉಕ್ರೇನ್‌ಗೆ ಭದ್ರತಾ ನೆರವನ್ನು ನೀಡುತ್ತಿದೆ. ಆದರೆ, ‘ಹಾರಾಟ ನಿಷೇಧ ವಲಯ’ ಘೋಷಣೆ ಮಾಡಲು ಅಮೆರಿಕದ ಸೇನೆಯು ಉಕ್ರೇನ್ ಪ್ರವೇಶಿಸಿದರೆ, ಅದು ಅಮೆರಿಕ ಮತ್ತು ರಷ್ಯಾ ನಡುವಣ ನೇರ ಸಂಘರ್ಷಕ್ಕೆ ಕಾರಣವಾಗುತ್ತದೆ ಮತ್ತು ಅಮೆರಿಕ ಸೇನೆಯು ರಷ್ಯಾ ವಿರುದ್ಧ ಯುದ್ಧ ಮಾಡಬೇಕಾಗುತ್ತದೆ. ಹೀಗೆ ಆಗಬಾರದು ಎಂಬುದು ಅಧ್ಯಕ್ಷ ಜೋ ಬೈಡನ್ ಅವರ ಸ್ಪಷ್ಟ ನಿಲುವು.

ಯುದ್ಧ ಆರಂಭವಾಗುವುದಕ್ಕೂ ಮುನ್ನ ಉಕ್ರೇನ್‌ಗೆ ನೆರವು ನೀಡುವಲ್ಲಿ ನಾವು, ನಮ್ಮ ಪಾಲುದಾರರು ಮತ್ತು ಮಿತ್ರರಾಷ್ಟ್ರಗಳ ಜತೆಗೆ ಕೆಲಸ ಮಾಡಿದ್ದೆವು. ಯುದ್ಧ ಆರಂಭವಾದ ನಂತರವೂ ಇದನ್ನು ಮುಂದುವರಿಸಿದ್ದೇವೆ. ಸೋವಿಯತ್ ಮತ್ತು ಸೋವಿಯತೋತ್ತರ ರಷ್ಯಾ ನಿರ್ಮಿತ ಯುದ್ಧವಿಮಾನ ನಿರೋಧಕ ವ್ಯವಸ್ಥೆ, ಅಗತ್ಯ ಮದ್ದುಗುಂಡುಗಳನ್ನು ಉಕ್ರೇನ್‌ಗೆ ಒದಗಿಸಲು ದುಡಿಯುತ್ತಿದ್ದೇವೆ. ಈ ವ್ಯವಸ್ಥೆಗಳ ಬಳಕೆಯಲ್ಲಿ ಉಕ್ರೇನ್ ಸೇನೆಯು ಈಗಾಗಲೇ ತರಬೇತಿ ಪಡೆದಿದೆ.

ಅಮೆರಿಕ ನಿರ್ಮಿತ ಯುದ್ಧಸಲಕರಣೆಗಳನ್ನು ಉಕ್ರೇನ್‌ಗೆ ನೀಡಲು ನಮ್ಮ 14 ಪಾಲುದಾರರಿಗೆ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕನ್ ಅನುಮತಿ ನೀಡಿದ್ದಾರೆ. ವಿಶ್ವದಾದ್ಯಂತ 30ಕ್ಕೂ ಹೆಚ್ಚು ದೇಶಗಳು ಉಕ್ರೇನ್‌ಗೆ ಭದ್ರತಾ ನೆರವು ನೀಡಿವೆ. ಉಕ್ರೇನ್‌ಗೆ ಯಾವ ಶಸ್ತ್ರಾಸ್ತ್ರ ಅಗತ್ಯವಿದೆಯೋ ಅವನ್ನು ಒದಗಿಸಲು, ರಕ್ಷಣಾ ಇಲಾಖೆ ಮತ್ತು ಸಂಬಂಧಪಟ್ಟ ಬೇರೆ ಇಲಾಖೆಗಳು ಒಟ್ಟಿಗೇ ಕೆಲಸ ಮಾಡುತ್ತಿವೆ.

● ರಷ್ಯಾದ ಆಕ್ರಮಣವು ಯುರೋಪ್‌ನ ರಾಷ್ಟ್ರಗಳ ಜತೆಗಿನ ಅಮೆರಿಕದ ಸಂಬಂಧವನ್ನು ಗಟ್ಟಿಗೊಳಿಸಿದೆ; ಏಷ್ಯಾದ ದೇಶಗಳ ಜತೆಗಿನ ಸಂಬಂಧವನ್ನು ಉತ್ತಮಪಡಿಸಿದೆ. ಆದರೆ, ಇದು ರಷ್ಯಾ, ಚೀನಾ, ಇರಾನ್ ಮುಂತಾದ ಕೆಲವು ದೇಶಗಳ ನಡುವಣ ಸಂಬಂಧವನ್ನು ಮರುರೂಪಿಸಬಹುದು. ಇಂತಹ ಸನ್ನಿವೇಶ ಎದುರಾದರೆ ಅಮೆರಿಕ ವಹಿಸಬಹುದಾದ ಪಾತ್ರ ಏನು?

ಪ್ರಜಾವಾಣಿ ಸಂದರ್ಶನ

ಜುಡಿತ್ ರೇವಿನ್

ಉಕ್ರೇನ್ ಯುದ್ಧಕ್ಕಾಗಿ ಹಣ ಮತ್ತು ಶಸ್ತ್ರಾಸ್ತ್ರ ಸಹಾಯವನ್ನು ಚೀನಾದಿಂದ ರಷ್ಯಾ ಕೇಳಿದೆ ಎಂಬುದು ಈಗ ರಹಸ್ಯವಾಗಿ ಉಳಿದಿಲ್ಲ. ಇದು ರಷ್ಯಾ ಮತ್ತು ಚೀನಾ ನಡುವಣ ಸಂಬಂಧವನ್ನು ಇನ್ನಷ್ಟು ಗಟ್ಟಿಗೊಳಿಸುತ್ತದೆ. ಇಂತಹ ಬದಲಾವಣೆಯು ಅಮೆರಿಕಕ್ಕೂ ಭಾರತಕ್ಕೂ ಅಪಾಯಕಾರಿ.

ರಷ್ಯಾ ಮತ್ತು ಚೀನಾ ಇಂತಹ ಪ್ರಯತ್ನಗಳನ್ನು ಇನ್ನಷ್ಟು ತೀವ್ರಗೊಳಿಸಲಿವೆ ಎಂಬುದೇ ನಿಜವಾದ ಕಳವಳ. ನೆರೆಯ ದೇಶವನ್ನು ಆರ್ಥಿಕವಾಗಿ ಅಥವಾ ಸೇನಾ ಬಲದಲ್ಲಿ ಹೇಗೆ ಹಣಿಯಬಹುದು ಎಂಬುದನ್ನು ಅವರು ಪರಸ್ಪರರಿಂದ ಕಲಿಯಲಿದ್ದಾರೆ; ವಿಶ್ವಸಂಸ್ಥೆಯ ವ್ಯವಸ್ಥೆಯನ್ನು ಅಸ್ಥಿರಗೊಳಿಸುವುದು ಹೇಗೆ ಮತ್ತು ಸಂಕಷ್ಟದಿಂದ ಪಾರಾಗಲು ಪರಸ್ಪರರ ಸೇನೆಗಳಿಗೆ ಆರ್ಥಿಕ ನೆರವನ್ನು ಹೇಗೆ ನೀಡಬೇಕು ಎಂಬುದನ್ನೂ ಕಲಿತುಕೊಳ್ಳಲಿದ್ದಾರೆ. ಈ ಎಲ್ಲವೂ ಕಳವಳದ ವಿಚಾರಗಳೇ. ಹಾಗಿದ್ದರೂ ಪ್ರಜಾಪ್ರಭುತ್ವ ದೇಶಗಳಿಗೆ ಚೈತನ್ಯ ತುಂಬುವ ಕ್ಷಣ ಇದು. ಏಕೆಂದರೆ, ನಾವು ಯಾವುದರ ವಿರುದ್ಧ ಇದ್ದೇವೆ ಎಂಬುದು ಈಗ ಸ್ಪಷ್ಟವಾಗಿದೆ.

ಯಾವತ್ತಿನಂತೆ ಈಗಲೂ ಸಂಘರ್ಷದ ಲಾಭ ಪಡೆಯಲು ಚೀನಾ ಯತ್ನಿಸುತ್ತಿದೆ. ಆದರೆ, ಚೀನಾದ ಜನರಿಗೆ ಚೀನಾದ ಕಮ್ಯುನಿಸ್ಟ್ ಪಕ್ಷವು ನೀಡುವುದಕ್ಕಿಂತ ಭಿನ್ನವಾದ ಜೀವನ ವಿಧಾನವನ್ನು ತಮ್ಮ ಜನರಿಗೆ ಒದಗಿಸುವ ಮುಕ್ತ ಮತ್ತು ನಿರ್ಬಂಧರಹಿತ ದೇಶಗಳು ಚೀನಾಕ್ಕೆ ದೊಡ್ಡ ಬೆದರಿಕೆಗಳಾಗಿವೆ. ಇತ್ತೀಚಿನ ವಾರಗಳಲ್ಲಿ, ಉಕ್ರೇನ್‌ಗೆ ಬೆಂಬಲ ನೀಡುವುದಕ್ಕಾಗಿ ಜಾಗತಿಕ ಸಮುದಾಯವು–ಯುರೋಪ್, ಉತ್ತರ ಅಮೆರಿಕ, ಏಷ್ಯಾದ ದೇಶಗಳು – ಎಷ್ಟು ಸಕ್ರಿಯವಾಗಿ ಒಟ್ಟಾಗುತ್ತಿದೆ ಎಂಬುದನ್ನು ಗಮನಿಸಿದ್ದೇವೆ. ರಷ್ಯಾದ ಮೇಲೆ ನಿರ್ಬಂಧಗಳನ್ನು ಹೇರುತ್ತಿವೆ ಮತ್ತು ಈ ರೀತಿಯ (ರಷ್ಯಾದ ಅತಿಕ್ರಮಣ) ಆಕ್ರಮಣವು ಸರಿಯಲ್ಲ ಎಂದು ವಿಶ್ವಸಂಸ್ಥೆಯಲ್ಲಿ ಮತ್ತು ಇತರೆಡೆ ವಿವಿಧ ದೇಶಗಳು ಹೇಳುತ್ತಿವೆ. ಚೀನಾದ ಬಲಪ್ರಯೋಗದಿಂದ ರಕ್ಷಣೆ ಪಡೆಯಲು ಇದೇ ರೀತಿಯ ರಚನೆಗಳು ಮತ್ತು ವ್ಯವಸ್ಥೆಗಳನ್ನು ನಾವು ರೂಪಿಸಬೇಕಾದ ಅಗತ್ಯ ಇದೆ.

> ● ಉಕ್ರೇನ್ ಮೇಲೆ ರಷ್ಯಾದ ಆಕ್ರಮಣದ ವಿಚಾರದಲ್ಲಿ ವಿಶ್ವ ಸಂಸ್ಥೆಯಲ್ಲಿ ಭಾರತವು ತಟಸ್ಥ ನಿಲುವು ತಳೆದಿರುವುದನ್ನು ಅಮೆರಿಕ ಹೇಗೆ ಪರಿಗಣಿಸುತ್ತದೆ?
> ಉಕ್ರೇನ್ ಮೇಲೆ ರಷ್ಯಾದ ದಾಳಿಯು ಉಕ್ರೇನ್‌ನ ಸಾರ್ವಭೌಮತ್ವ ಮತ್ತು ಭೌಗೋಳಿಕ ಸಮಗ್ರತೆಯ ಉಲ್ಲಂಘನೆ ಎಂಬುದು ಸ್ಪಷ್ಟ. ನಿಯಮ ಆಧಾರಿತವಾದ ಅಂತರರಾಷ್ಟ್ರೀಯ ವ್ಯವಸ್ಥೆ ಇರಬೇಕು ಎಂದು ಬಯಸುವ ಎಲ್ಲ ದೇಶಗಳಿಗೂ ಇದು ಅತೀವ ಕಳವಳದ ವಿಚಾರವಾಗಿದೆ.

● ನ್ಯಾಟೊದಿಂದ ತಮ್ಮ ದೇಶಕ್ಕೆ ಅಪಾಯ ಇದೆ ಎಂದು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಮತ್ತು ಆ ದೇಶದ ಅಧಿಕಾರಿಗಳು ಹೇಳುತ್ತಿದ್ದಾರೆ. ನ್ಯಾಟೊದ ವಿಸ್ತರಣವಾದವೇ ಉಕ್ರೇನ್ ಮೇಲಿನ ದಾಳಿಗೆ ಒಂದು ಕಾರಣ ಎಂದೂ ಆರೋಪಿಸಲಾಗಿದೆ. ಇದಕ್ಕೆ ನಿಮ್ಮ ಪ್ರತಿಕ್ರಿಯೆ ಏನು?

ಈ ಸಂಘರ್ಷದುದ್ದಕ್ಕೂ, ಉಕ್ರೇನ್ ಮತ್ತು ನ್ಯಾಟೋದಿಂದ ತನಗೆ ಅಪಾಯವಿದೆ ಎಂದು ರಷ್ಯಾ ಆರೋಪ ಮಾಡುತ್ತಿದೆ. ರಷ್ಯಾ ಜತೆಗೆ ಸಂಘರ್ಷಕ್ಕೆ ಇಳಿಯುವ ಬಯಕೆ ಅಥವಾ ಉದ್ದೇಶ ಅಮೆರಿಕಕ್ಕಾಗಲೀ, ನ್ಯಾಟೊಗಾಗಲೀ ಇಲ್ಲ. ನ್ಯಾಟೊ, ತನ್ನ ಸದಸ್ಯ ರಾಷ್ಟ್ರಗಳಿಗೆ ಭದ್ರತೆ ಒದಗಿಸುವ ಉದ್ದೇಶ ಹೊಂದಿರುವ ಒಂದು ರಕ್ಷಣಾತ್ಮಕ ಒಕ್ಕೂಟವಷ್ಟೆ.

‘ಒಕ್ಕೂಟವು ರಷ್ಯಾದೊಂದಿಗೆ ಮುಖಾಮುಖಿಯಾಗುವ ಮತ್ತು ರಷ್ಯಾಕ್ಕೆ ಅಪಾಯ ಒಡ್ಡುವ ಉದ್ದೇಶ ಹೊಂದಿಲ್ಲ’ ಎಂದು 2021ರ ಜೂನ್‌ನಲ್ಲಿ ನಡೆದ ನ್ಯಾಟೊ ಶೃಂಗಸಭೆಯಲ್ಲಿ ನಿರ್ಣಯ ಘೋಷಿಸಲಾಗಿತ್ತು. ರಷ್ಯಾವನ್ನು ನ್ಯಾಟೊ ಸುತ್ತುವರಿದಿಲ್ಲ. ರಷ್ಯಾದ ನೆಲಗಡಿಯ ಉದ್ದ 20,000 ಕಿ.ಮೀ. ಅದರಲ್ಲಿ ನ್ಯಾಟೊ ದೇಶಗಳ ಜತೆ ಹಂಚಿಕೊಂಡಿರುವ ನೆಲಗಡಿಯ ಉದ್ದ ಕೇವಲ 1,215 ಕಿ.ಮೀ. ರಷ್ಯಾ 14 ದೇಶಗಳ ಜತೆಗೆ ಗಡಿ ಹಂಚಿಕೊಂಡಿದೆ. ಅವುಗಳಲ್ಲಿ ಐದು ಮಾತ್ರ ನ್ಯಾಟೊ ಸದಸ್ಯತ್ವ ಹೊಂದಿವೆ. ಸಾರ್ವಭೌಮ ರಾಷ್ಟ್ರಗಳು ತಮ್ಮ ಇಚ್ಛೆಯ ಒಕ್ಕೂಟವನ್ನು ಆಯ್ಕೆ ಮಾಡಿಕೊಳ್ಳಬಹುದು ಮತ್ತು ತಮ್ಮ ಭದ್ರತೆಗೆ ಸಂಬಂಧಿಸಿದಂತೆ, ತಮ್ಮದೇ ನಿರ್ಧಾರ ತೆಗೆದುಕೊಳ್ಳಬಹುದು ಎಂದು ನಾವು ಹೇಳುತ್ತಲೇ ಬಂದಿದ್ದೇವೆ. ಉಕ್ರೇನ್ ಆಗಲೀ ಬೇರೆ ದೇಶವೇ ಆಗಲಿ, ನ್ಯಾಟೊವನ್ನು ಸೇರಬೇಕು ಎಂದು ಒತ್ತಡ ಹೇರುತ್ತಿಲ್ಲ ಎಂದು ನಾವು ಹೇಳುತ್ತಲೇ ಬಂದಿದ್ದೇವೆ. ಸತ್ಯ ತುಂಬಾ ಸರಳವಾಗಿದೆ: ಉಕ್ರೇನ್ ಅನ್ನು ಅತಿಕ್ರಮಿಸಿದ್ದು ರಷ್ಯಾ, ನ್ಯಾಟೊ ಅಲ್ಲ.

● ಕಚ್ಚಾ ತೈಲ ಮತ್ತು ಇತರ ಸರಕುಗಳನ್ನು ರಿಯಾಯಿತಿ ದರದಲ್ಲಿ ಪಡೆದುಕೊಳ್ಳುವ ಹಾಗೂ ರೂಪಾಯಿ–ರೂಬಲ್‌ನಲ್ಲಿ ಪಾವತಿ ವ್ಯವಹಾರ ನಡೆಸುವ ಪ್ರಸ್ತಾವವನ್ನು ಭಾರತ ಪರಿಶೀಲಿಸುತ್ತಿದೆ. ಈ ಕುರಿತು ಅಮೆರಿಕದ ನಿಲುವು ಏನು? ಉಕ್ರೇನ್ ಯುದ್ಧದ ನಂತರದ ದಿನಗಳಲ್ಲಿ ಭಾರತ–ಅಮೆರಿಕ ಸಂಬಂಧದ ಮೇಲೆ ಇದು ಯಾವ ಪರಿಣಾಮ ಬೀರಬಹುದು?

ಇಂಧನಕ್ಕಾಗಿ ರಷ್ಯಾದ ಮೇಲೆ ಕಡಿಮೆ ಅವಲಂಬನೆ ಹೊಂದಿರುವ ಅಮೆರಿಕ ಮತ್ತು ಇತರ ಹಲವು ದೇಶಗಳಿಗೆ, ರಷ್ಯಾದಿಂದ ತೈಲ ಆಮದು ಕಡಿತಗೊಳಿಸುವುದು ತುಲನಾತ್ಮಕವಾಗಿ ನೇರವಾಗಿ ತೆಗೆದುಕೊಳ್ಳಬಹುದಾದ ನಿರ್ಧಾರ. ಯುರೋಪ್ ಮತ್ತು ಜಗತ್ತಿನ ಇತರ ಭಾಗಗಳ ಕೆಲವು ದೇಶಗಳಿಗೆ ಇದೊಂದು ಪಲ್ಲಟದ ವಿಚಾರ. ಈ ದೇಶಗಳು ರಷ್ಯಾದ ಮೇಲಿನ ತೈಲ ಮತ್ತು ಅನಿಲ ಅವಲಂಬನೆಯಿಂದ ನಿಧಾನವಾಗಿ ದೂರ ಸರಿಯಬೇಕಾಗುತ್ತದೆ. ಈ ಸ್ಥಿತಿಯು ನಮಗೆ ಅರ್ಥವಾಗುತ್ತದೆ.

● ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು ರಷ್ಯಾದ ಮೇಲೆ ಕಠಿಣ ನಿರ್ಬಂಧಗಳನ್ನು ಹೇರಿದ್ದಾರೆ ಮತ್ತು ಉಕ್ರೇನ್‌ಗೆ ಸೇನಾ ಸಲಕರಣೆಗಳನ್ನು ಒದಗಿಸಿದ್ದಾರೆ. ಇದು ಅಗತ್ಯ ಕ್ರಮವೇ ಆಗಿದ್ದರೂ ಬೇಕಾದಷ್ಟು ಅಲ್ಲ ಎಂದು ಹಲವು ದೇಶಗಳು ಭಾವಿಸಿವೆ. ಉಕ್ರೇನ್ ಅನ್ನು ಅಮೆರಿಕವು ಕೈಬಿಟ್ಟಿತು ಎಂಬ ಭಾವನೆಯೂ ಇದೆ. ಈ ಕುರಿತು ಏನೆನ್ನುವಿರಿ?

ಉಕ್ರೇನ್‌ನ ಮೇಲೆ ರಷ್ಯಾ ನಡೆಸಿದ ಅಪ್ರಚೋದಿತ ಮತ್ತು ನ್ಯಾಯಸಮ್ಮತವಲ್ಲದ ಅತಿಕ್ರಮಣಕ್ಕೆ ಮಾರ್ಚ್ 24ರಂದು ಒಂದು ತಿಂಗಳು ತುಂಬಿದೆ. ಆ ಸಂದರ್ಭದಲ್ಲಿ ಬೈಡನ್ ಅವರು, ಬ್ರಸೆಲ್ಸ್‌ನಲ್ಲಿ ನ್ಯಾಟೊ ನಾಯಕರನ್ನು ಭೇಟಿ ಮಾಡಿದ್ದರು. ಉಕ್ರೇನ್‌ಗೆ ನಮ್ಮ ಬೆಂಬಲವಿದೆ ಎಂಬುದನ್ನು ಒತ್ತಿ ಹೇಳುವ, ಈ ಯುದ್ಧದ ಸಂಪೂರ್ಣ ಹೊಣೆಯನ್ನು ರಷ್ಯಾ ಹೊರಬೇಕು ಎಂದು ಆಗ್ರಹಿಸುವ ಮತ್ತು ನ್ಯಾಟೊವನ್ನು ಬಲಪಡಿಸಬೇಕು ಎಂಬ ನಮ್ಮ ಧ್ಯೇಯವನ್ನು ಒತ್ತಿ ಹೇಳುವ ಉದ್ದೇಶದಿಂದ ಈ ಸಭೆ ನಡೆಸಲಾಗಿತ್ತು. ಅಲ್ಲದೆ ಕೆಲವಾರಗಳ ಹಿಂದೆ ಅಮೆರಿಕವು ಉಕ್ರೇನ್‌ಗೆ ಭದ್ರತಾ ಸಹಾಯಕ್ಕಾಗಿ ಎಂದು ನೂರು ಕೋಟಿ ಡಾಲರ್ (ಸುಮಾರು ₹7,500 ಕೋಟಿ) ನೆರವು ಘೋಷಿಸಿದೆ. ಯುದ್ಧವಿಮಾನ ನಿರೋಧಕ ವ್ಯವಸ್ಥೆ, ಗುಂಡುನಿರೋಧಕ ವಾಹನ ನಿರೋಧಕ ವ್ಯವಸ್ಥೆ, ಡ್ರೋನ್, ಕೋಟ್ಯಂತರ ಸಂಖ್ಯೆಯ ಮದ್ದುಗುಂಡುಗಳನ್ನು ಈ ನೆರವಿನಡಿ ನೀಡಲಾಗಿದೆ. ಉಕ್ರೇನ್‌ನಲ್ಲಿ ರಷ್ಯಾದ ಅತಿಕ್ರಮಣದಿಂದ ಆಗಿರುವ ಹಾನಿಯನ್ನು ಸರಿಪಡಿಸಲು ಮತ್ತೆ ನೂರು ಕೋಟಿ ಡಾಲರ್‌ಗಿಂತಲೂ ಹೆಚ್ಚು ನೆರವನ್ನು ಮಾನವೀಯ ನೆಲೆಯಲ್ಲಿ ನೀಡುವುದಾಗಿ ಮಾರ್ಚ್ 24ರ ಸಭೆಯಲ್ಲಿ ಅಧ್ಯಕ್ಷ ಬೈಡನ್ ಘೋಷಿಸಿದ್ದಾರೆ. ರಷ್ಯಾ ಅತಿಕ್ರಮಣದಿಂದ ಮುಂದಿನ ದಿನಗಳಲ್ಲಿ ಉಕ್ರೇನ್ ಮತ್ತು ಜಗತ್ತಿನ ಹಲವೆಡೆ ಆಹಾರದ ಅಭದ್ರತೆ ಉಂಟಾಗಲಿದೆ. ಈ ನೆರವಿನ ಮೂಲಕ ಆಹಾರ ಪದಾರ್ಥ, ವಸತಿ, ಶುದ್ಧ ನೀರು, ವೈದ್ಯಕೀಯ–ಔಷಧೀಯ ಸೇವೆಯನ್ನು ಒದಗಿಸಲಾಗುತ್ತದೆ.

ಈಗ ಉಕ್ರೇನ್‌ಗೆ ನಾವು ನೀಡುತ್ತಿರುವ ನೆರವು ಮುಂದುವರಿಯಲಿದೆ. ಉಕ್ರೇನ್ ತನ್ನನ್ನು ತಾನು ರಕ್ಷಿಸಿಕೊಳ್ಳಲು ಮತ್ತು ಅಂದಾಜು 37 ಲಕ್ಷ ನಿರಾಶ್ರಿತರಿಗೆ ನೆಲೆ ಕಲ್ಪಿಸಲು ಅಗತ್ಯವಿರುವ ಎಲ್ಲಾ ನೆರವನ್ನು ಅಮೆರಿಕವು ನೀಡಲಿದೆ. ರಷ್ಯಾದ ಸೈಬರ್ ಅತಿಕ್ರಮಣಗಳು ಮತ್ತು ಸುಳ್ಳುಸುದ್ದಿಗಳನ್ನು ನಿಗ್ರಹಿಸಲು ಪ್ರಾದೇಶಿಕ ಸಹಕಾರವನ್ನು ಅಮೆರಿಕವು ಉತ್ತೇಜಿಸಲಿದೆ. ಈ ಸಂಘರ್ಷದ ಸಂದರ್ಭದಲ್ಲಿ ಉಕ್ರೇನ್‌ನ ವಿದ್ಯುತ್ ಪೂರೈಕೆ ಸ್ಥಿರವಾಗಿ ಇರುವಂತೆ ನೋಡಿಕೊಳ್ಳಲು ಎಚ್ಚರವಹಿಸಿದ್ದೇವೆ.

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 79

ನಾರದನಿಗೆ ವಿಷ್ಣು ಉಪದೇಶ

ಶಿವಶತನಾಮಸ್ತೋತ್ರವನ್ನು ಅನನ್ಯ ಮನಸ್ಸಿನಿಂದ ಸದಾ ಜಪಿಸುತ್ತಾ, ಈಗ ಬಂದಿರುವ ಶಿವಮಾಯೆಯಿಂದ ಪಾರಾಗುವಂತೆ ವಿಷ್ಣು ಪರಿಹಾರ ಸೂಚಿಸಿದರೂ, ನಾರದನಿಗೆ ಸಮಾಧಾನವಾಗದೆ ರೋದಿಸುತ್ತಿದ್ದ. ಆಗ ಮತ್ತೆ ವಿಷ್ಣು, ನಾರದನಿಗೆ ಮತ್ತಷ್ಟು ಸಾಂತ್ವನದ ಮಾತುಗಳನ್ನು ಆಡುತ್ತಾನೆ.

‘ಓ ಮುನೀಂದ್ರ, ವ್ಯಥೆಪಡಬೇಡ. ನಿನ್ನಿಂದ ಯಾವುದೂ ನಡೆಯಲಿಲ್ಲ. ಇದೆಲ್ಲವನ್ನೂ ಆ ಶಂಭುವೇ ತನ್ನ ಇಚ್ಛೆಯಂತೆ ನಿನ್ನ ಮೂಲಕ ನಡೆಸಿದ. ಲೋಕಕಲ್ಯಾಣಕ್ಕಾಗಿ ಮಾಡಿದ ಈ ಕಾರ್ಯದಲ್ಲಿ ನೀನು ನಿಮಿತ್ತ ಮಾತ್ರ. ನಿನ್ನ ಶುದ್ಧವಾದ ದಿವ್ಯಜ್ಞಾನವನ್ನು ಶಿವನೇ ಅಪಹರಿಸಿ, ನಿನಗೆ ಈ ರೀತಿ ಕಾಮವಿಕಾರದಿಂದ ತೊಳಲುವಂತೆ ಮಾಡಿದ. ನಿನ್ನ ಮುಖಭಂಗ ಮಾಡಲು ನನ್ನನ್ನು ಶ್ರೀಮತಿ ಸ್ವಯಂವರಕ್ಕೆ ಹೋಗಲು ಅವನಿಂದಲೇ ಪ್ರೇರಣೆಯಾಯಿತು. ನಿನಗೆ ಕೋಪ ಬಂದು ನನಗೆ ಶಾಪ ಕೊಡಲು ಸಹ ಆ ಮಹೇಶ್ವರನೇ ಕಾರಣ. ನನಗೆ ನಿನ್ನಿಂದ ಶಾಪವನ್ನು ಕೊಡಿಸಿ, ಮತ್ತೊಂದು ಜಗನ್ನಾಟಕವಾಡಲು ವೇದಿಕೆ ಸಿದ್ಧಪಡಿಸಿದ್ದಾನೆ ಆ ಜಗನ್ನಾಥ ಮಹಾದೇವ. ಅವನು ಸೂತ್ರಧಾರಿ, ನಾನು-ನೀನು ಪಾತ್ರಧಾರಿಗಳಷ್ಟೆ. ಭಕ್ತರನ್ನು ಉದ್ಧಾರ ಮಾಡುವುದೇ ಶಿವನ ಕೆಲಸ. ಕಾಲನಿಗೂ ಕಾಲನಾದ ಆ ಮೃತ್ಯುಂಜಯ ಮಹಾಶಿವ ಈ ರೀತಿ ತಾನಾಗಿಯೇ ತನ್ನ ಚರಿತ್ರೆಯನ್ನು ಲೋಕದಲ್ಲಿ ಪ್ರಕಟಮಾಡಿದ. ಶಿವನಿಗೆ ಸಮಾನನಾದವನು ಜಗತ್ತಿನಲ್ಲಿ ಬೇರೊಬ್ಬನಿಲ್ಲ’ ಎಂದು ಶಿವನ ಮಹಿಮೆಯನ್ನು ವಿಷ್ಣು ಕೊಂಡಾಡುತ್ತಾನೆ.

‘ಮುನೀಂದ್ರ, ಶಿವನ ಸೇವೆಯನ್ನು ಮಾಡು. ಯಾವಾಗಲೂ ಅವನನ್ನೇ ಭಜಿಸುತ್ತಿರು. ಅವನ ಕೀರ್ತಿಯನ್ನು ಕೇಳು. ಅಷ್ಟೇ ಅಲ್ಲ, ಅದರ ಸಂಕೀರ್ತನೆಯನ್ನೂ ಮಾಡು. ಸದಾ ಆತನನ್ನು ಪೂಜಿಸುತ್ತಿರು. ಯಾರು ಶಿವನನ್ನು ಸೇವಿಸುವರೋ, ಅವರೇ ಪಂಡಿತರೆಂದು ತಿಳಿ. ಅಂಥವರೆ ಜೀವನ್ಮುಕ್ತರೆನಿಸುವರು. ನಾನಾ ವಿಧವಾದ ದುಃಖಗಳೆಲ್ಲಕ್ಕೂ ಪಾಪವೇ ಮೂಲಕಾರಣ. ಅವೆಲ್ಲವೂ ಶಿವಾರ್ಚನೆಯೊಂದರಿಂದಲೇ ನಾಶವಾಗುವುದು. ಯಾವ ಪುರುಷನು ಸದಾ ಶಿವನನ್ನೇ ಮೊರೆಹೋಗುವನೋ, ಆತನೇ ವೈದಿಕನು. ಅವನೇ ಪುಣ್ಯಾತ್ಮನು. ಆತನೇ ಧನ್ಯನು, ವಿವೇಕಿ. ನಾನಾ ವಿಧವಾದ ಧರ್ಮಕಾರ್ಯಗಳನ್ನು ಮಾಡುವಂಥವರಿಗೆ ಮಾತ್ರ ಆ ತ್ರಿಪುರಸಂಹಾರಿಯಾದ ಶಿವನನ್ನು ಪೂಜಿಸುವ ವಿಷಯದಲ್ಲಿ ನಂಬಿಕೆಯುಂಟಾಗುವುದು.

‘ಓ ನಾರದಮಹರ್ಷಿ, ಶಿವಪೂಜೆಯಿಂದ ಎಲ್ಲ ಪಾಪಗಳೂ ನಾಶವಾಗು ವುವು. ಶಿವನಾಮವೆಂಬ ಹಡಗನ್ನು ಏರಿದವರು ಈ ಸಂಸಾರಸಾಗರವನ್ನು ದಾಟುವರು. ಶಿವನಾಮವೆಂಬ ಕೊಡಲಿಯಿಂದ ಸಂಸಾರಕ್ಕೆ ಕಾರಣಭೂತ ಗಳಾದ ಪಾತಕಗಳು ವಿನಾಶವನ್ನು ಹೊಂದುವುವು. ಯಾರು ಅನೇಕ ಜನ್ಮಗಳಲ್ಲಿ ತಪಸ್ಸನ್ನು ಮಾಡಿರುವರೋ, ಅವರಿಗೆ ಮಾತ್ರವೇ ಶಿವನಲ್ಲಿ ಭಕ್ತಿ ಹುಟ್ಟುವುದು. ಯಾರಿಗೆ ಶಿವನೊಬ್ಬನಲ್ಲಿಯೇ ಭಕ್ತಿ ಉಂಟಾಗುವುದೋ, ಅವರಿಗೆ ಮೋಕ್ಷವು ಬಹುಸುಲಭವಾಗಿ ದೊರೆಯುವುದು. ಆದ್ದರಿಂದ, ಕಾಲಿನಿಂದ ಹಿಡಿದು ತಲೆಯವರೆಗೂ ಚೆನ್ನಾಗಿ ಭಸ್ಮವನ್ನು ಆದರದಿಂದ ಹಚ್ಚಿಕೊಂಡು, ‘ಓಂ ನಮಃ ಶಿವಾಯ’ ಎಂಬ ಷಡಕ್ಷರಮಂತ್ರವನ್ನು ಜಪಿಸು. ಶಿವನಿಗೆ ಪರಮಪ್ರೇಮಾಸ್ಪದವಾದ ರುದ್ರಾಕ್ಷಿಗಳನ್ನು ಬಹು ಭಕ್ತಿಯಿಂದ ವಿಧಿಗನುಸಾರವಾಗಿ ಮಂತ್ರೋಚ್ಚಾರಣದೊಂದಿಗೆ ಸರ್ವಾಂಗಗಳಲ್ಲಿಯೂ ಧರಿಸು. ನಿತ್ಯವೂ ಶಿವನ ಕಥೆಗಳನ್ನು ಕೇಳು. ಯಾವಾಗಲೂ ಶಿವನ ಚರಿತ್ರಗಳನ್ನೇ ವರ್ಣಿಸುತ್ತಿರು. ಯಾವಾಗಲೂ ಪ್ರಮಾದಕ್ಕೆ ವಶನಾಗದೆ ಶಿವನೊಬ್ಬನನ್ನೇ ಮೊರೆಹೋಗು. ಕೊನೆಗೆ ಆ ಶಂಕರನಿಗೆ ಬಹಳ ಪ್ರಿಯವಾದ ‘ಆನಂದವನ’ವೆಂದು ಪ್ರಸಿದ್ಧಿಯಾದ ಕಾಶಿಗೆ ಹೋಗು. ಅಲ್ಲಿ ವಿಶ್ವೇಶ್ವರನನ್ನು ಕಂಡು ಭಕ್ತಿಯಿಂದ ಆತನನ್ನು ಆರಾಧಿಸು. ನಿನ್ನ ಇಷ್ಟವು ನೆರವೇರಿದಮೇಲೆ, ನೀನು ನನ್ನ ಅಪ್ಪಣೆಯಂತೆ ಭಕ್ತಿಯಿಂದ ಬ್ರಹ್ಮಲೋಕಕ್ಕೆ ಖಂಡಿತವಾಗಿಯೂ ಹೋಗುವೆ.

‘ಓ ನಾರದ, ಅಲ್ಲಿ ನಿನ್ನ ತಂದೆಯಾದ ಬ್ರಹ್ಮನಿಂದ ಶಿವನ ಮಹಿಮೆಯನ್ನು ಕೇಳಿ ತಿಳಿದುಕೊ. ಶಿವಭಕ್ತರಲ್ಲಿ ಶ್ರೇಷ್ಠನಾದ ಬ್ರಹ್ಮನು ನಿನಗೆ ಶಿವನ ಮಹಾತ್ಮ್ಯವನ್ನು ಹೇಳಿ, ಶಿವಶತನಾಮಸ್ತೋತ್ರವನ್ನೂ ಉಪದೇಶಿಸುವನು. ಶಿವನು ನಿನಗೆ ಒಳ್ಳೆಯದನ್ನು ಮಾಡುವನು’ ಎಂದು ಶ್ರೀಮಹಾವಿಷ್ಣುವು ನಾರದಮಹರ್ಷಿಗೆ ಉಪದೇಶಿಸಿ ಅಂತರ್ಧಾನನಾದನು ಎಂಬಲ್ಲಿಗೆ ಶ್ರೀ ಶಿವಮಹಾಪುರಾಣದಲ್ಲಿ, ಎರಡನೆಯದಾದ ರುದ್ರಸಂಹಿತೆಯಲ್ಲಿ ಬರುವ ಮೊದಲನೆಯ ಖಂಡದ ನಾಲ್ಕನೆ ಅಧ್ಯಾಯ ಮುಗಿಯುತ್ತದೆ. ●

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ದುಷ್ಕರ್ಮಿಗಳ ಗುಂಪೊಂದು ರಸ್ತೆಯಲ್ಲಿ ಸಾಗುವ ವಾಹನಗಳ ಮೇಲೆ ಕಲ್ಲು ತೂರಾಟ ನಡೆಸುತ್ತಿರುವ ವಿಡಿಯೊ ವೈರಲ್ ಆಗಿದೆ. ‘ಈ ಘಟನೆಯು ಕೋಲ್ಕತ್ತದಲ್ಲಿ ನಡೆದಿದೆ. ಪಶ್ಚಿಮ ಬಂಗಾಳದ ಪರಿಸ್ಥಿತಿಯು ಪಾಕಿಸ್ತಾನದಂತೆ ಆಗಿದೆ. ಮುಸ್ಲಿಮರ ಗುಂಪೊಂದು ವಾಹನಗಳಿಗೆ ಕಲ್ಲು ಹೊಡೆದು ಹಿಂಸಾಚಾರ ನಡೆಸುತ್ತಿದೆ. ರಸ್ತೆಯಲ್ಲಿ ಕುಳಿತು ತಮ್ಮ ಉಪವಾಸ ಮುರಿಯುವ ಸಲುವಾಗಿ ಅವರು ಈ ರೀತಿ ನಡೆದುಕೊಂಡಿದ್ದಾರೆ. ಸದ್ಯದಲ್ಲೇ ಈ ರೀತಿಯ ಘಟನೆಗಳು ದೇಶದಾದ್ಯಂತ ನಡೆಯುತ್ತವೆ’ ಎಂದು ಅಡಿಬರಹ ನೀಡಲಾಗಿದೆ.

ಈ ವಿಡಿಯೊ ಜೊತೆ ಹಂಚಲಾಗಿರುವ ಮಾಹಿತಿ ಸಂಪೂರ್ಣ ಸುಳ್ಳು ಎಂದು ದಿ ಲಾಜಿಕಲ್ ಇಂಡಿಯನ್ ವೇದಿಕೆಯು ವರದಿ ಮಾಡಿದೆ. ಈ ಘಟನೆಯು ನಾಲ್ಕು ವರ್ಷಗಳ ಕೆಳಗೆ ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ನಡೆದಿತ್ತು. ಸ್ವಿಟ್ಜರ್‌ಲ್ಯಾಂಡ್‌ನ ಸೇಂಟ್ ಜಾಕೊಬ್ ಕ್ರೀಡಾಂಗಣದಲ್ಲಿ ಬಾಸೆಲ್ ಮತ್ತು ಲ್ಯೂಸರ್ನ್ ತಂಡಗಳ ನಡುವೆ ಫುಟ್‌ಬಾಲ್ ಚಾಂಪಿಯನ್‌ಶಿಪ್ ನಡೆದ ಬಳಿಕ ಉಭಯ ತಂಡದ ಬೆಂಬಲಿಗರ ನಡುವೆ ಘರ್ಷಣೆ ನಡೆದಿತ್ತು. ಹಲವಾರು ಮಾಧ್ಯಮಗಳು ಈ ಘಟನೆ ಕುರಿತು 2018ರ ಮೇ 21 ರಂದು ವರದಿ ಮಾಡಿದ್ದವು ಎಂದು ದಿ ಲಾಜಿಕಲ್ ಇಂಡಿಯನ್ ಹೇಳಿದೆ.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಸೋಮವಾರ ಮಾರ್ಚ್ 28, 2022

ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ–ಶಿಶಿರ ಋತು ಮೀನ ಮಾಸದ 14 ನೇ ದಿನ
ತಿಥಿ: (ಫಾಲ್ಗುಣ ಕೃಷ್ಣ) ಏಕಾದಶಿ ಗಂ. 16-16 ನಕ್ಷತ್ರ: ಶ್ರವಣ ಗಂ. 12-24 ಯೋಗ: ಸಿದ್ಧ ಗಂ. 17-39, ಕರಣ: ಬಾಲವ ಗಂ. 16-16. ರಾಹುಕಾಲ : ಬೆಳಿಗ್ಗೆ 07:30 – 09:00 ಸೂರ್ಯೋದಯ : 06-33 ಸೂರ್ಯಾಸ್ತ : 06-38 ಮುಸ್ಲಿಂ ದಿನಾಂಕ : 24 ಶಬನ್ ದಿನ ವಿಶೇಷ : ಪಾಪಮೋಚನಿ ಏಕಾದಶಿ, ಶೃಂಗೇರಿ ಜಗದ್ಗುರು ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹ ಭಾರತೀ ಮಹಾಸ್ವಾಮಿಗಳವರ ಜಯಂತೀ. ಅದೃಷ್ಟ ಸಂಖ್ಯೆ: 6, 11

ಮೇಷ: ಕೆಲಸದಲ್ಲಿ ಆತುರದ ಸ್ವಭಾವ ಬೇಡ. ನಿಕಟ ಸಂಬಂಧಿಗಳೊಂದಿಗೆ ನಿಮ್ಮ ಬದುಕಿನ ದುರ್ಘಟನೆಯ ವಿಷಯಗಳನ್ನು ಹಂಚಿಕೊಳ್ಳುವುದರಿಂದ ಸಹಾಯ ಹೊಂದುವಿರಿ. ಸದ್ಯಕ್ಕೆ ವೃತ್ತಿಯ ಬದಲಾವಣೆಯ ಯೋಚನೆ ಸರಿಯಲ್ಲ.

ವೃಷಭ: ಮಕ್ಕಳಿಗೆ ಓದಿನಲ್ಲಿ ಹೆಚ್ಚು ಆಸಕ್ತಿ ಹುಟ್ಟುವಂತೆ ಮನೆಯ ಪರಿಸರವನ್ನು ನಿರ್ಮಿಸಿ. ಸಹನಾಶೀಲರಾಗಿ ವರ್ತಿಸಿದಲ್ಲಿ ನಿಮ್ಮ ಪ್ರಯತ್ನಬಲಕ್ಕೆ ಯಶಸ್ಸು ಸಿಗುತ್ತದೆ. ದಾಂಪತ್ಯದಲ್ಲಿನ ವಿಚಾರಗಳಿಂದ ಮಾನಸಿಕ ಅಸಮಾಧಾನ.

ಮಿಥುನ: ಊರಿನ ರಾಜಕಾರಣದ ವಿಷಯಗಳಲ್ಲಿ ಹೆಚ್ಚು ಸಮಯ ಕಳೆಯುವಂತಾಗುವುದು. ನಿಮ್ಮ ಸೃಜನಶೀಲತೆ, ಚಿಂತನಾ ಲಹರಿಗಳು ಇತರರಿಗೆ ವಿಭಿನ್ನವೆನಿಸುವುದು. ದೈಹಿಕ ನೋವು ಇರುವವರಿಗೆ ವೈದ್ಯರ ದರ್ಶನ ಅಗತ್ಯ.

ಕರ್ಕಾಟಕ: ವೃತ್ತಿಯಲ್ಲಿದ್ದ ಸ್ಪರ್ಧಾತ್ಮಕ ಪೈಪೋಟಿಯಲ್ಲಿ ಸಿಕ್ಕ ಗೆಲುವಿನಿಂದ ಹೆಚ್ಚಿನ ತೃಪ್ತಿ, ಸಂತೋಷ ಉಂಟಾಗಲಿದೆ. ಹೆಸರಾಂತ ಶಿಕ್ಷಣ ಸಂಸ್ಥೆಯಲ್ಲಿ ಬಹಳ ಸುಲಭವಾಗಿ ಅಧ್ಯಾಪಕ ವೃತ್ತಿ ದೊರೆಯುವ ಸಂಭವವಿದೆ.

ಸಿಂಹ: ವೃತ್ತಿ ಜೀವನಕ್ಕೆ ಸಂಬಂಧಿಸಿದಂತೆ ನಿರ್ಧಾರ ತೆಗೆದುಕೊಳ್ಳುವಾಗ ಗೊಂದಲ ಆಗಬಹುದು. ಮಾರ್ಗದರ್ಶಕರ ಸಲಹೆ ಪಡೆದು ಪಾಲಿಸಿರಿ. ಸಂಘ ಸಂಸ್ಥೆಗಳ ಹುದ್ದೆಯನ್ನು ಅಲಂಕರಿಸುವ ಅವಕಾಶ ಮತ್ತು ಮನಸ್ಸು ಇರುವುದು.

ಕನ್ಯಾ: ನಿಮ್ಮ ಜೀವನದಲ್ಲಿ ಅತಿಯಾಗಿ ನಂಬುವ ಅಥವಾ ಅತಿಯಾಗಿ ಅವಲಂಬಿಸಿರುವ ವ್ಯಕ್ತಿ ಜೊತೆ ಸಮಯ ಕಳೆಯುವಿರಿ. ನಿಮ್ಮ ಕಲ್ಪನಾಶಕ್ತಿ ಇಂದು ಚುರುಕಾಗಿ ಕೆಲಸ ಮಾಡಲಿದೆ. ಆಭರಣ ವ್ಯಾಪಾರಿಗಳಿಗೆ ಧನಲಾಭ ಪ್ರಾಪ್ತಿ.

ತುಲಾ: ಕಾರ್ಯಕ್ಷೇತ್ರದಲ್ಲಿ ಒಳ್ಳೆಯ ಅವಕಾಶ. ಈ ದಿನ ವ್ಯಕ್ತಿತ್ವದಲ್ಲಿ ಹಾಗೂ ಧನಲಾಭದಲ್ಲಿ ಒಂದು ರೀತಿಯ ಹೊಸ ಅನುಭವ ಹಾಗೂ ಅದೃಷ್ಟವನ್ನು ಕಾಣುವಿರಿ. ಮನೆ ದೇವರ ದರ್ಶನ, ಸೇವೆಗಳಿಂದ ಮಂಗಳ ಪ್ರದವಾಗಲಿದೆ.

ವೃಶ್ಚಿಕ: ಹಿರಿಯರ ಆಶೀರ್ವಾದ ಪಡೆದು ಕೆಲಸ ಕಾರ್ಯಗಳನ್ನು ಆರಂಭಿಸಿದಲ್ಲಿ ಜಯ ನಿಮ್ಮದೇ ಆಗಿರುತ್ತದೆ. ಸಹಾಯಕ ವರ್ಗದವರ ಕಷ್ಟಗಳಿಗೆ ನೆರವಾಗುವ ಗುಣಗಳನ್ನು ಜೀವನದಲ್ಲಿ ರೂಢಿಸಿಕೊಳ್ಳಿ. ಪ್ರಯಾಣಕ್ಕೆ ಹೆಚ್ಚು ಧನವ್ಯಯ.

ಧನು: ಇಂದಿನ ನಿಮ್ಮ ಜೀವನದ ನಡೆ-ನುಡಿಗಳು ಕಿರಿಯರ ಜೀವನಕ್ಕೆ ಮಾರ್ಗದರ್ಶನದಂತಾಗಿ ಸಹಕಾರಿಯಾಗುವುದು. ನಿಮ್ಮ ಆಂತರಿಕ ಸಮಸ್ಯೆ ಬಗೆಹರಿಯಬೇಕಾದರೆ ನೀವು ಸಣ್ಣಪುಟ್ಟ ಬದಲಾವಣೆ ಮಾಡಿಕೊಳ್ಳಬೇಕಾಗುವುದು.

ಮಕರ: ಸಾಧಿಸಲೇಬೇಕೆಂಬ ಛಲವಿರುವ ನಿಮಗೆ ಕಾರ್ಯಗಳೆಲ್ಲವೂ ಅರ್ಧದ ಹಾದಿಯನ್ನು ಮಾತ್ರ ನೋಡುವುದು. ನಿರಂತರತೆಯ ಧನಾಗಮನದಲ್ಲಿ ವ್ಯತ್ಯಯ ಅಥವಾ ವಿಳಂಬ. ವಿದ್ಯಾರ್ಥಿಗಳಿಗೆ ವಿದ್ಯಾಭಿವೃದ್ಧಿ ಇರುವುದು.

ಕುಂಭ: ತಾತ್ಕಾಲಿಕ ಹುದ್ದೆಯಲ್ಲಿರುವವರಿಗೆ ಬದಲಾವಣೆಯ ಸೂಚನೆ ಕಂಡುಬರಲಿದೆ. ಆರ್ಥಿಕ ಬಲವನ್ನು ಮತ್ತು ನೆಮ್ಮದಿಯನ್ನು ಸದ್ಯದ ಪರಿಸ್ಥಿತಿಯಲ್ಲಿ ಕಡಿಮೆ ಹೊಂದಿರುವ ನಿಮಗೆ ಮಹಾಗಣಪತಿ ಆರಾಧನೆಯಿಂದ ಶುಭ.

ಮೀನ: ಸಾಂಸಾರಿಕ ಜವಾಬ್ದಾರಿ ಹೆಚ್ಚಲಿದೆ. ನಿಮ್ಮ ಸಲಹೆ ಸೂಚನೆಗಳನ್ನು ನಿಮ್ಮ ಮೇಲಧಿಕಾರಿಗಳು ಮಾನ್ಯ ಮಾಡಿದ್ದಕ್ಕೆ ಸಂತೋಷವಾಗಲಿದೆ. ಕೃಷಿಕರಿಗೆ ಕೃಷಿಯಲ್ಲಿ ಉತ್ಸಾಹ ಹೆಚ್ಚುವಂತಾಗಲಿದೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಹತಾಶೆಗೆ ಸ್ಥಾನವಿಲ್ಲ

ಸತ್ತೆನೆಂದೆನಬೇಡ; ಸೋತೆನೆಂದೆನಬೇಡ |
ಬತ್ತಿತೆನ್ನೊಳು ಸತ್ತ್ವದೂಟೆಯೆನಬೇಡ ||
ಮೃತ್ಯುವೆನ್ನುವುದೊಂದು ತೆರೆಯಿಳಿತ; ತೆರೆಯೇರು |
ಮತ್ತೆ ತೋರ್ಪುದು ನಾಳೆ – ಮಂಕುತಿಮ್ಮ
|| 593 ||

ಪದ-ಅರ್ಥ: ಸತ್ತೆನೆಂದೆನಬೇಡ = ಸತ್ತೆ + ಎಂದು- + ಎನಬೇಡ, ಬತ್ತಿತೆನ್ನೊಳು = ಬತ್ತಿತು + ಎನ್ನೊಳು, ಸತ್ತ್ವದೂಟೆಯೆನಬೇಡ = ಸತ್ತ್ವದ + ಊಟೆ(ಚಿಲುಮೆ) + ಎನಬೇಡ, ತೋರ್ಪುದು = ತೋರುತ್ತದೆ.

ವಾಚ್ಯಾರ್ಥ: ಸತ್ತೆ ಎನಬೇಡ, ಸೋತೆ ಎಂದುಕೊಳ್ಳಬೇಡ, ನನ್ನಲ್ಲಿ ಸತ್ವದ ಚಿಲುಮೆ ಬತ್ತಿತು ಎನ್ನಬೇಡ. ಸಾವು ಕೂಡ ಸಾಗರದ ಅಲೆಗಳಂತೆ. ಒಮ್ಮೆ ಕೆಳಗೆ ಇಳಿಯುತ್ತದೆ ಮತ್ತೆ ಮೇಲೆದ್ದು ತೋರುತ್ತದೆ.

ವಿವರಣೆ: ಅವನೊಬ್ಬ ರಷ್ಯನ್ ಸೈನಿಕ. ಎರಡನೇ ಮಹಾಯುದ್ಧದಲ್ಲಿ ಭಾಗವಹಿಸಲು ಹೋಗಿದ್ದ. ಆತ ಮರಳಿ ಬಂದದ್ದೇ ಪವಾಡ. ಅಲ್ಲಿಯ ಸಾವು-ನೋವುಗಳಿಗೆ ಸಾಕ್ಷಿಯಾಗಿದ್ದ ಅವನ ಮನಸ್ಸು ಬೆಂದು ಹೋಗಿತ್ತು. ಮರಳಿ ಮಾಸ್ಕೋಗೆ ಒಂದು ಪುಟ್ಟ ವಿರಾಮಕ್ಕಾಗಿ ಬಂದಿದ್ದ. ತನ್ನ ಮನೆಯ ಹತ್ತಿರ ಹೋಗುತ್ತಿದ್ದಂತೆ ಅವನ ಎದೆಯೊಡೆಯಿತು. ಅಲ್ಲಿ ಫುಟ್‌ಪಾಥ್ ಮೇಲೆ ಹೆಣಗಳ ರಾಶಿ! ಕಾರ್ಯಕರ್ತರು ಅವುಗಳನ್ನು ನಿರ್ವಿಕಾರದಿಂದ ಎತ್ತಿ ಲಾರಿಯಲ್ಲಿ ಹಾಕುತ್ತಿದ್ದಾರೆ. ಸೈನಿಕನಿಗೆ ಆ ಹೆಣಗಳ ರಾಶಿಯಲ್ಲಿ ಒಬ್ಬ ಹೆಂಗಸಿನ ಕಾಲು ಕಾಣಿಸಿತು. ಆಕೆಯ ಬೂಟುಗಳನ್ನು ನೋಡಿದಾಗ ಆಕೆ ತನ್ನ ಹೆಂಡತಿ ಎಂದು ತಿಳಿಯಿತು. ದಿಕ್ಕು ತಪ್ಪಿದವನಂತೆ ಓಡಿ ಬೇರೆ ಹೆಣಗಳನ್ನು ಸರಿಸಿ ಆಕೆ ತನ್ನ ಹೆಂಡತಿಯೇ ಎಂದು ಖಾತ್ರಿ ಮಾಡಿಕೊಂಡ. ಅಧಿಕಾರಿಗಳಿಗೆ ಬೇಡಿ ಕಾಡಿ ಆಕೆಯ ಹೆಣವನ್ನು ಪಡೆದ. ಅವನಿಗೆ ಇನ್ನೊಂದು ಆಶ್ಚರ್ಯ! ಆಕೆ ಸತ್ತಿಲ್ಲ, ಬದುಕಿದ್ದಾಳೆ!! ಆಕೆಯನ್ನು ಎತ್ತಿಕೊಂಡು ಮನೆಗೆ ಹೋಗಿ ಉಪಚಾರ ಮಾಡಿದ. ಆಕೆಗೆ ಮೊದಲಿನ ಆರೋಗ್ಯ ಬರಲು ಒಂದು ವರ್ಷವೇ ಹಿಡಿಯಿತು. ಎಂಟು ವರ್ಷಗಳ ನಂತರ 1952 ರಲ್ಲಿ ಆಕೆಗೊಬ್ಬ ಮಗ ಹುಟ್ಟಿದ. ಮುಂದೆ ಆತ ವ್ಲಾಡಿಮಿರ್ ಪುಟಿನ್ ಎಂಬ ಹೆಸರಿನಿಂದ ಖ್ಯಾತನಾಗಿ ರಷ್ಯಾದ ರಾಷ್ಟ್ರಪತಿಯಾದ. ಇದೆಂಥ ಜೀವನದ ಜೋಕಾಲಿ! ಹೆಣಗಳ ರಾಶಿಯಲ್ಲಿ ಮತ್ತೊಂದು ಹೆಣದಂತೆಯೇ ಬಿದ್ದಿದ್ದ ಹೆಂಗಸನ್ನು ಆಕೆಯ ಗಂಡ ಆಗಲೇ ಬಂದು ಕಾಣುವುದು, ಗುರುತಿಸುವುದು, ಆಕೆಯನ್ನು ಬದುಕಿಸಿ ಚೇತರಿಸಿಕೊಳ್ಳುವಂತೆ ಮಾಡುವುದು ಒಂದು ಪವಾಡವೇ ಅಲ್ಲವೆ? ಬದುಕದಿರುವಂತೆ ಬಿದ್ದಿದ್ದ ಆ ಹೆಂಗಸಿನ ಹೊಟ್ಟೆಯಿಂದ ಮುಂದಿನ ರಾಷ್ಟ್ರಪತಿ ಜನಿಸುವುದು ಮತ್ತೊಂದು ಪವಾಡ!

ಕಗ್ಗ ಅದಕ್ಕೇ ಒತ್ತು ಕೊಟ್ಟು ಹೇಳುತ್ತದೆ. ಆಯ್ತು, ನನ್ನ ಬದುಕು ಮುಗಿಯಿತು, ನಾನು ಸೋತು ಹೋದೆ ಎನ್ನಬೇಡ. ನನ್ನಲ್ಲಿ ಇದ್ದ ಸತ್ವವೆಲ್ಲ ಬರಿದಾಗಿ ಹೋಯಿತು ಎಂದು ಕೊರಗಬೇಡ. ಯಾಕೆಂದರೆ ಯಾವಾಗ ಚೈತನ್ಯ ಚಿಗುರೀತು, ಯಾವ ಸಮಯದಲ್ಲಿ ಸಾಧನೆ ಬಲಿತೀತು ಎಂಬುದನ್ನು ಹೇಳುವುದು ಕಷ್ಟ. ಕ್ಯಾನ್ಸರ್‌ದಿಂದ ಬದುಕು ಮುಗಿಯಿತು ಎಂದೇ ಭಾವಿಸಿದ್ದ ಜನರಿಗೆ ಯುವರಾಜ್ ಸಿಂಗ್ ಮರಳಿ ರಾಷ್ಟ್ರೀಯ ಕ್ರಿಕೆಟ್‌ಗೆ ಬಂದದ್ದು, ಕಾಲು ಕತ್ತರಿಸಿ ಜೀವನಕ್ಕೇನೂ ಅರ್ಥವಿಲ್ಲವೆನ್ನಿಸಿದಾಗ, ಬೇರೊಂದು ದಿಕ್ಕಿನಲ್ಲಿ ಉತ್ಸಾಹ ಚಿಮ್ಮಿ ಅರುಣಿಮಾ ಸಿನ್ಹಾ ಎವರೆಸ್ಟ್ ಶಿಖರ ಏರಿದ್ದು, ಇವೆಲ್ಲ ಒಣಗಿದಂತೆ ಕಂಡ ಸತ್ವದೂಟೆ ಉಕ್ಕಿದ ದೃಷ್ಟಾಂತಗಳು.

ಹಾಗೆ ನೋಡಿದರೆ ಸಾವು ಕೂಡ ಕೊನೆಯಲ್ಲ. ಅದು ಮತ್ತೊಂದು ಹುಟ್ಟಿಗೆ ನಾಂದಿ. ಒಂದು ತೆರೆ ಇಳಿಯಿತು ಎಂದಾಗ ಮತ್ತೊಂದು ತೆರೆ ಏಳುತ್ತದೆ. ಆದ್ದರಿಂದ ಯಾವುದೇ ಪ್ರಸಂಗದಲ್ಲಿ ನಿರಾಸೆ, ಹತಾಶೆ ಬೇಡ. ❖

ಪದಬಂಧ 4911

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಆಯಾಳಿಗಾದ ಸುಸ್ತು! (3)
3.ಇದು ಮಣ್ಣಿಗೆ ಸಂಬಂಧಿಸಿದ್ದು (3)
6.ಈತ ಮಧ್ಯವರ್ತಿ (3)
7.ಕಾವ್ಯ, ನಾಟಕದಂಥ ಸಾರಸ್ವತ ರಚನೆ (3)
8.ಶರ ಹಿಡಿದಿರುವ ಬೇಡ (3)
9.ಮಾತುಲನಾಡಿದ ನುಡಿ (2)
10.ಕನ್ನಡಿಗನ ಲೆನ್ಸು! (3)
12.ಬೀಜ ಬಿತ್ತಲು ಮಾಡಿರುವ ಮಡಿ (2)
13.ಮಧುರವಾದ ತುಟಿ! (3)
14.ಇಂಪಾದ ಧ್ವನಿ (3)
15.ಮಂದಿ ಪ್ರವೇಶಿಸಿರುವ ಗುಡಿ (3)
17.ಗುಡಿಸಲ ಹತ್ತಿರವಿರುವ ಗಂಡಾನೆ (3)
18.ಏಳು ದಿನ ನಡೆಯುವ ಉತ್ಸವ (3)

ಮೇಲಿಂದ ಕೆಳಕ್ಕೆ
1.ಅಂತರಿಕ್ಷದಲ್ಲಿ ಸಂಚರಿಸುವವ (5)
2.ಕೊನೆಗೆ ಬೆಲೆಯಿಟ್ಟು ನೀಡಿದ ಸಲಿಗೆ! (3)
3.ಸರದಿಯನ್ನು ಹೀಗೂ ಹೇಳಬಹುದು (2)
4.ವಲಸೆ ಹೊರಟವರು ನೆಲೆ ನಿಂತ ಪ್ರದೇಶ (4)
5.ನಿಜವಾಗಿಯೂ ಇದು ಸುಳ್ಳಲ್ಲ! (2)
9.ಮನ್ಮಥನ ಮತ್ತೊಂದು ಹೆಸರು (2)
10.ಬುದ್ಧಿ ಇಲ್ಲಿದೆ (2)
11.ಯುದ್ಧದ ಕೇಸರಿಯಿದು (5)
12.ಕನ್ನಡಿಗನ ಕಾಲ ಬುಡದಲ್ಲಿರುವ ಮರ್ಕುರಿ! (4)
13.ಅವಸರದಲ್ಲಿರುವ ರಾಜ! (3)
14.ಎಡೆ ಅಥವಾ ಆಶ್ರಯ (2)
15.ಮಂಗಳವಾರ ಪ್ರತ್ಯಕ್ಷವಾದ ಕೋತಿ! (2)

1		2	■	3		4	■	5
	■	6			■	7		
8			■	■	■		■	■
	■	■	■	■	9		■	■
	■	■	10			■	■	11
■	■	12		■	■	■	■	
■	■		■	■	■	13		
14			■	15			■	
	■	17			■	18		

4910ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 2.ಪರೋಕ್ಷ 4.ಸಾಕ್ಷರ 5.ಅಂಟುಜಾಡ್ಯ 6.ಮರಕತ 7.ಸಖ 9.ಗವಿ 13.ಮೃಗಾಲಯ 14.ಅಂಗರಾಗ 15.ಶಾಬ್ದಿಕ 16.ನಕಲಿ

ಮೇಲಿಂದ ಕೆಳಕ್ಕೆ: 1.ವಸಾಹತು 2.ಪರಮಹಂಸ 3.ವಿಜಾತಿ 5.ಅಂತರಂಗ 8.ಖಡ್ಗಮೃಗ 10.ವಿಜಯಶಾಲಿ 11.ದಸಕತ್ತು 12.ಅಂಗನೆ

ಸುಡೊಕು 5297

7		4		5				3
			1		9	6		5
6		5		3				
2					4	1		9
9	7	1		8			4	
4			9		2	3		7
	4		3		7		2	
						7		
1	3			2			6	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5296 ಸುಡೊಕು

8	7	9	6	2	1	3	4	5
3	2	6	5	4	8	9	1	7
1	4	5	9	7	3	2	8	6
2	6	8	1	3	5	4	7	9
9	3	1	7	8	4	5	6	2
4	5	7	2	9	6	1	3	8
6	9	2	3	1	7	8	5	4
7	1	4	8	5	9	6	2	3
5	8	3	4	6	2	7	9	1

ರಷ್ಯಾ–ಉಕ್ರೇನ್ ಬಿಕ್ಕಟ್ಟು, ಹಣದುಬ್ಬರ ಏರಿಕೆ ಪರಿಣಾಮ

₹ 1 ಲಕ್ಷ ಕೋಟಿ ದಾಟಿದ ಎಫ್‌ಪಿಐ ಹೊರಹರಿವು

ನವದೆಹಲಿ (ಪಿಟಿಐ): ಜಾಗತಿಕ ರಾಜಕೀಯ ಬಿಕ್ಕಟ್ಟು ಮತ್ತು ಹಣದುಬ್ಬರದ ಕಾರಣಗಳಿಂದಾಗಿ ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ಈ ವರ್ಷದಲ್ಲಿ ಇದುವರೆಗೆ ₹ 1.14 ಲಕ್ಷ ಕೋಟಿ ಬಂಡವಾಳ ಹಿಂದಕ್ಕೆ ಪಡೆದಿದ್ದಾರೆ.

ಮಾರ್ಚ್ ತಿಂಗಳಿನಲ್ಲಿ ಈವರೆಗೆ ₹ 48,262 ಕೋಟಿ ಮೌಲ್ಯದ ದೇಶಿ ಷೇರುಗಳನ್ನು ಮಾರಾಟ ಮಾಡಿದ್ದಾರೆ. ಹೀಗಾಗಿ ಒಟ್ಟಾರೆ ಬಂಡವಾಳ ಹೊರಹರಿವು ₹ 1 ಲಕ್ಷ ಕೋಟಿಯನ್ನು ದಾಟುವಂತಾಗಿದೆ.

ರಷ್ಯಾ–ಉಕ್ರೇನ್ ಸಂಘರ್ಷದಿಂದ ಜಾಗತಿಕ ಆರ್ಥಿಕತೆಯ ಮೇಲೆ ಆಗುತ್ತಿರುವ ಪರಿಣಾಮ ಮತ್ತು ಹಣದುಬ್ಬರದ ಒತ್ತಡದಿಂದಾಗಿ ಬಂಡವಾಳ ಹೊರಹರಿವು ಆಗುತ್ತಿದೆ ಎಂದು ತಜ್ಞರು ಹೇಳಿದ್ದಾರೆ.

ಹೂಡಿಕೆದಾರರು ಸತತ ಆರನೇ ತಿಂಗಳಿನಲ್ಲಿಯೂ ಭಾರತದ ಷೇರುಪೇಟೆಯಿಂದ ಬಂಡವಾಳ ಹಿಂದಕ್ಕೆ ಪಡೆದಿದ್ದಾರೆ. ಭಾರತವು ಹೆಚ್ಚಿನ ಪ್ರಮಾಣದಲ್ಲಿ ತೈಲ ಆಮದು ಮಾಡಿಕೊಳ್ಳುತ್ತಿದೆ. ಹೀಗಾಗಿ ತೈಲ ದರ ಏರಿಕೆಯು ಸರಕುಗಳ ಬೆಲೆ ಹೆಚ್ಚಳಕ್ಕೆ ಕಾರಣವಾಗಿ ದೇಶದ ಆರ್ಥಿಕತೆಯ ಮೇಲೆ ಕೆಟ್ಟ ಪರಿಣಾಮ ಉಂಟಾಗಬಹುದು ಎಂದು ಹೂಡಿಕೆದಾರರು ಆತಂಕಗೊಂಡಿದ್ದಾರೆ.

‘ಕಚ್ಚಾ ತೈಲ ದರದಲ್ಲಿ ಶೇಕಡ 10ರಷ್ಟು ಏರಿಕೆ ಆದಲ್ಲಿ ಅದರಿಂದ ಚಾಲ್ತಿ ಖಾತೆ ಕೊರತೆಯು ಶೇ 0.30ರಷ್ಟು ಹೆಚ್ಚಾಗಲಿದೆ. ಗ್ರಾಹಕ ದರ ಸೂಚ್ಯಂಕ ಆಧರಿಸಿದ ಚಿಲ್ಲರೆ ಹಣದುಬ್ಬರ ಪ್ರಮಾಣ ಶೇ 0.40ರಷ್ಟು ಹೆಚ್ಚಾಗಲಿದೆ’ ಎಂದು ಕೋಟಕ್ ಮಹೀಂದ್ರ ಅಸೆಟ್ ಮ್ಯಾನೇಜ್‌ಮೆಂಟ್ ಕಂಪನಿಯ ಹಿರಿಯ ಕಾರ್ಯನಿರ್ವಾಹಕ ಉಪಾಧ್ಯಕ್ಷೆ ಶಿವಾನಿ ಕುರಿಯನ್ ಹೇಳಿದ್ದಾರೆ.

‘ಜಾಗತಿಕ ರಾಜಕೀಯ ಬಿಕ್ಕಟ್ಟು ಮತ್ತು ಸರಕುಗಳ ಬೆಲೆ ಏರಿಕೆಯಿಂದಾಗಿ ಬೇಡಿಕೆ ಮತ್ತು ಲಾಭದ ಮೇಲೆ ಪರಿಣಾಮ ಉಂಟಾಗಲಿದೆ. ಇದರಿಂದಾಗಿ ಬೆಳವಣಿಗೆ ಮತ್ತು ಗಳಿಕೆಯ ಅಂದಾಜು ತಗ್ಗಿಸಬೇಕಾಗಿ ಬರಲಿದೆ’ ಎಂದು ಜೂಲಿಯಸ್ ಬೇರ್ ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕ ಮಿಲಿಂದ್ ಮುಚ್ಚಾಲಾ ಹೇಳಿದ್ದಾರೆ.

ಬಂಡವಾಳ ಹೊರಹರಿವು
(ಕೋಟಿಗಳಲ್ಲಿ)



ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲಾ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಹಣಕಾಸು ವಂಚನೆ, ಇರಲಿ ವಿವೇಚನೆ

ಬಂಡವಾಳ ಮಾರುಕಟ್ಟೆ

ಅವಿನಾಶ್ ಕೆ.ಟಿ.

2020-21ನೇ ಹಣಕಾಸಿನ ವರ್ಷದಲ್ಲಿ ಎಷ್ಟು ಹಣಕಾಸಿನ ವಂಚನೆ ಪ್ರಕರಣಗಳು ವರದಿಯಾಗಿವೆ ಎಂದು ವ್ಯಕ್ತಿಯೊಬ್ಬರು ಭಾರತೀಯ ರಿಸರ್ವ್ ಬ್ಯಾಂಕ್‌ಗೆ (ಆರ್‌ಬಿಐ) ಆರ್‌ಟಿಐ ಅಡಿಯಲ್ಲಿ ಅರ್ಜಿ ಸಲ್ಲಿಸಿದ್ದರು. ಆರ್‌ಬಿಐ ಕೊಟ್ಟ ಉತ್ತರ ಆತಂಕಕಾರಿಯಾಗಿತ್ತು. 2020-21ರಲ್ಲಿ ಪ್ರತಿದಿನ ಸರಾಸರಿ 229 ಹಣಕಾಸಿನ ವಂಚನೆ ಪ್ರಕರಣಗಳು ನಡೆದಿವೆ. ಇಡೀ ವರ್ಷದಲ್ಲಿ, ಈ ರೀತಿಯ ವಂಚನೆಗಳಿಂದ ಜನರು ಸುಮಾರು ₹ 1.38 ಲಕ್ಷ ಕೋಟಿ ಕಳೆದುಕೊಂಡಿದ್ದಾರೆ. ಹೌದು ನಮ್ಮ ದೇಶದಲ್ಲಿ ಪ್ರತಿ ನಿಮಿಷವೂ ಹಣಕಾಸಿನ ವಂಚನೆ ಪ್ರಕರಣಗಳು ನಡೆಯುತ್ತಲೇ ಇವೆ. ಹಣಕಾಸು ವಂಚನೆ ಅಂದರೆ ಏನು, ಅದನ್ನು ಪತ್ತೆ ಮಾಡುವುದು ಹೇಗೆ, ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳೇನು ಎನ್ನುವ ಬಗ್ಗೆ ತಿಳಿದುಕೊಳ್ಳೋಣ.

ನಕಲಿ ಕ್ರಿಪ್ಟೊ ಕರೆನ್ಸಿಯಿಂದ ₹ 1,200 ಕೋಟಿ ವಂಚನೆ: ಈ ವರ್ಷದ ಜನವರಿಯಲ್ಲಿ ಮೊರೆಸ್ ಕಾಯಿನ್ ಎಂಬ ಹೆಸರಿನಲ್ಲಿ ನಕಲಿ ಕ್ರಿಪ್ಟೊ ಕರೆನ್ಸಿ ಚಾಲ್ತಿಗೆ ತಂದು ಸುಮಾರು ₹ 1,200 ಕೋಟಿ ಮೊತ್ತದ ವಂಚನೆ ಮಾಡಲಾಗಿದೆ. ಮೊರೆಸ್ ಕಾಯಿನ್ ವ್ಯವಸ್ಥಿತವಾಗಿ ನಡೆದ ಪೂರ್ವಯೋಜಿತ ವಂಚನೆ. ಝಗಮಗಿಸುವ ನಕಲಿ ವೆಬ್‌ಸೈಟ್ ಸೃಷ್ಟಿ ಮಾಡಿ ಮೊರೆಸ್ ಕಾಯಿನ್ ಪ್ರಮೋಷನ್‌ಗಾಗಿ ಸೆಲೆಬ್ರೆಟಿಗಳನ್ನು ಬಳಸಿಕೊಳ್ಳಲಾಯಿತು. ಪ್ರತಿ ದಿನ ಶೇಕಡ 3ರಷ್ಟು ಲಾಭಾಂಶ ನೀಡುವುದಾಗಿ ತಿಳಿಸಿ ಆರಂಭಿಕವಾಗಿ ಹೂಡಿಕೆ ಮಾಡಿದವರಿಗೆ ಕೆಲವು ದಿನಗಳ ಕಾಲ ನಿಗದಿತ ಲಾಭಾಂಶ ಕೊಡಲಾಯಿತು. ಈ ರೀತಿಯಲ್ಲಿ ನಡೆದ ವ್ಯವಸ್ಥಿತ ವಂಚನೆ ಕಸರತ್ತಿನಿಂದ ಸುಮಾರು 10 ಲಕ್ಷಕ್ಕೂ ಹೆಚ್ಚು ಮಂದಿ ₹ 1,200 ಕೋಟಿ ಹಣ ಕಳೆದುಕೊಂಡರು.

ಹೀಗೆಲ್ಲಾ ನಡೆಯುತ್ತೆ ವಂಚನೆ: ವಂಚಕರು ಅಮಾಯಕರನ್ನು ಹಣಕಾಸಿನ ವಂಚನೆ ಜಾಲಕ್ಕೆ ಬೀಳಿಸಲು ಹಲವು ತಂತ್ರಗಳನ್ನು ಬಳಸುತ್ತಾರೆ. ‘ಅತಿ ವಿನಯಂ ಧೂರ್ತ ಲಕ್ಷಣಂ’ ಎಂಬ ಮಾತನ್ನು ನೀವು ಕೇಳಿದ್ದೀರಿ ಅಲ್ಲವೇ? ನಿಮಗೆ ಹಣಕಾಸಿನ ಸಲಹೆ ಕೊಡುವಾಗ ಅಥವಾ ಹಣಕಾಸಿನ ಉತ್ಪನ್ನಗಳನ್ನು ಮಾರಾಟ ಮಾಡುವಾಗ ಯಾರಾದರೂ ಅತಿ ವಿನಯದಿಂದ ನಡೆದುಕೊಂಡರೆ ಅವರನ್ನು ಅನುಮಾನಿಸಿಯೇ ನೋಡಬೇಕಾಗುತ್ತದೆ.

ವಿಮೆ, ಬ್ಯಾಂಕಿಂಗ್, ಮ್ಯೂಚುವಲ್ ಫಂಡ್ ಸೇರಿ ಹಣಕಾಸಿನ ಹಲವು ವಲಯಗಳಲ್ಲಿನ ಕೆಲವು ಏಜೆಂಟ್‌ಗಳು ಉತ್ಪನ್ನಗಳನ್ನು ಮಾರುವಾಗ ಸುಳ್ಳು ಭರವಸೆಗಳನ್ನು ನೀಡುವ ಮೂಲಕ ನಿರ್ದಿಷ್ಟ ಹಣಕಾಸು ಉತ್ಪನ್ನದಲ್ಲಿ ಹೂಡಿಕೆ ಮಾಡಲು ಪ್ರೇರೇಪಿಸುತ್ತಾರೆ. ಆದರೆ ನಿಖರ ದಾಖಲೆಗಳನ್ನು ಪರಿಶೀಲಿಸದೆ ಅವರ ಗಾಳಿ ಗೋಪುರದ ಮಾತುಗಳನ್ನು ನಂಬಬೇಡಿ. ಯಾವುದೇ ಹೊಸ ಯೋಜನೆ ಬಗ್ಗೆ ವಿವರಿಸಿದರೆ ಕಂಪನಿಯ ಅಸಲಿ ಮುದ್ರಿತ ಬ್ರೋಷರ್ ಕೇಳಿ, ಏಜೆಂಟ್ ಹೇಳಿದ ಮಾಹಿತಿ ಸತ್ಯವೇ ಎನ್ನುವುದನ್ನು ಖಾತರಿಪಡಿಸಿಕೊಳ್ಳಿ. ಬಾಯಿ ಮಾತನ್ನು ಮಾತ್ರ ನಂಬಿ ದೊಡ್ಡ ಮೊತ್ತದ ಹಣದ ಹೂಡಿಕೆಯ ತೀರ್ಮಾನಕ್ಕೆ ಬರಬೇಡಿ. ವಂಚಕರು ಸಾಮಾನ್ಯವಾಗಿ ನಿಮ್ಮ ಹೂಡಿಕೆಯ ಮೇಲೆ ಅತಿ ಹೆಚ್ಚು ಗ್ಯಾರಂಟಿ ಲಾಭಾಂಶ ಕೊಡುವ ಭರವಸೆ ಕೊಡುತ್ತಾರೆ.

ಗ್ಯಾರಂಟಿ ಲಾಭಾಂಶ ಎಂದ ತಕ್ಷಣ ಹಲವರು ಬಲೆಗೆ ಬೀಳುತ್ತಾರೆ. ವಿಮೆ, ಹೂಡಿಕೆಗಳು, ಕ್ರಿಪ್ಟೊ ಕರೆನ್ಸಿ, ರಿಯಲ್ ಎಸ್ಟೇಟ್ ಹೀಗೆ ಅನೇಕ ಹೆಸರುಗಳಲ್ಲಿ ಸ್ಕೀಂಗಳನ್ನು ಮಾಡಿ ವಂಚನೆಗೆ ಬೀಳಿಸುವ ಯತ್ನಗಳು ನಡೆಯುತ್ತಲೇ ಇರುತ್ತವೆ. ಕೆಲವು ರಿಯಲ್ ಎಸ್ಟೇಟ್ ಬ್ರೋಕರ್‌ಗಳು ನಿರ್ದಿಷ್ಟ ಜಾಗದಲ್ಲಿ ಈಗ ಚದರ ಅಡಿಗೆ ಬರೀ ₹ 3 ಸಾವಿರ ಕೊಟ್ಟು ಸೈಟ್ ಖರೀದಿಸಿ, ಕೇವಲ ಆರು ತಿಂಗಳಲ್ಲಿ ಅದರ ಬೆಲೆ ಚದರ ಅಡಿಗೆ ₹ 6 ಸಾವಿರ ಆಗುತ್ತದೆ ಎಂದು ಪುಸಲಾಯಿಸಬಹುದು. ಇಂತಹ ಅತಿ ಲಾಭದ ಆಫರ್‌ಗಳ ಬಗ್ಗೆ ಎಚ್ಚರವಿರಲಿ.

ಕೆಲವರು ಹಣಕಾಸಿನ ಹೂಡಿಕೆಗಳನ್ನು ಮಾಡಿಸುವ ಮೊದಲು ಉಚಿತ ಕೂಪನ್, ಉಚಿತ ಪ್ರವಾಸದ ಆಮಿಷಗಳನ್ನು ಒಡ್ಡುತ್ತಾರೆ. ಇಲ್ಲಿ ನಿಮಗಾಗುವ ಲಾಭಕ್ಕಿಂತ ಅವರಿಗಾಗುವ ಲಾಭವೇ ಜಾಸ್ತಿ ಎನ್ನುವುದು ಗೊತ್ತಿರಲಿ. ಇನ್ನು ನೇರವಾಗಿ ಭೇಟಿಯಾಗದೆ ಇ-ಮೇಲ್ ಮೂಲಕ, ಮೊಬೈಲ್ ಕರೆ ಮೂಲಕ ನಿಮ್ಮನ್ನು ತಲುಪಿ ಹೆಚ್ಚು ಲಾಭಾಂಶ ಕೊಡುತ್ತೇವೆ ಹೂಡಿಕೆ ಮಾಡಿ ಎಂದು ಯಾರಾದರೂ ಹೇಳಿದರೆ ಅದನ್ನು ಹಿಂದೆ–ಮುಂದೆ ನೋಡದೆ ನಂಬಬೇಡಿ. ಹಿರಿಯ ನಾಗರಿಕರಿಗೆ ನಿವೃತ್ತಿಯ ಸಮಯದಲ್ಲಿ ಬರುವ ದೊಡ್ಡ ಮೊತ್ತದ ಹಣದ ಮೇಲೆ ಕಣ್ಣಿಟ್ಟು ಅನೇಕರು ವಂಚಿಸುವ ಪ್ರಯತ್ನ ಮಾಡುತ್ತಾರೆ. ನಿಮ್ಮ ಮನೆಯಲ್ಲಿ ಹಿರಿಯ ನಾಗರಿಕರಿದ್ದು ಅವರಿಗೆ ಹಣಕಾಸು ನಿರ್ವಹಣೆ ಸರಿಯಾಗಿ ಗೊತ್ತಿಲ್ಲದಿದ್ದರೆ ಅವರ ಬಗ್ಗೆ ಕಾಳಜಿ ವಹಿಸಿ.

ತಜ್ಞರ ಅಭಿಪ್ರಾಯ ಪಡೆಯಿರಿ: ವಿಮೆ, ಬ್ಯಾಂಕಿಂಗ್, ಮ್ಯೂಚುವಲ್ ಫಂಡ್ ಸೇರಿ ಹಣಕಾಸಿನ ಉತ್ಪನ್ನಗಳನ್ನು ಕೊಳ್ಳುವಾಗ ಆತುರ ಬೇಡ. ಇವತ್ತು ಖರೀದಿಸಿ ನಾಳೆ ಬದಲಾಯಿಸುವುದಕ್ಕೆ ಅದು ಬಟ್ಟೆಯಲ್ಲ. ಒಮ್ಮೆ ಸಹಿ ಹಾಕಿ ಹಣಕಾಸು ಹೂಡಿಕೆ ಉತ್ಪನ್ನಗಳನ್ನು ಖರೀದಿಸಿದ ಮೇಲೆ ನೀವು ಷರತ್ತು ಮತ್ತು ನಿಬಂಧನೆಗಳ ವ್ಯಾಪ್ತಿಗೆ ಬರುತ್ತೀರಿ. ಹಾಗಾಗಿ ಯಾವುದೇ ಹೂಡಿಕೆ ಮಾಡುವಾಗ ಸಾಕಷ್ಟು ವಿಚಾರ ಮಾಡಿ, ಸ್ವತಂತ್ರವಾಗಿ ಕಾರ್ಯನಿರ್ವಹಿಸುವ ತಜ್ಞರ ಅಭಿಪ್ರಾಯ ಪಡೆದು ಮುನ್ನಡೆಯಿರಿ. ಖರೀದಿಸುವ ತೀರ್ಮಾನಕ್ಕೆ ಬರುವ ಮುನ್ನ 10ರಿಂದ 12 ದಿನಗಳ ಕಾಲಾವಕಾಶ ಪಡೆದುಕೊಳ್ಳಿ. ಹಣಕಾಸು ಉತ್ಪನ್ನಗಳನ್ನು ಖರೀದಿಸುವಾಗ ಖಾಲಿ ಅರ್ಜಿಗೆ ಸಹಿ ಮಾಡಿಕೊಡುವ ಪ್ರವೃತ್ತಿ ಅನೇಕರಲ್ಲಿದೆ. ಆದರೆ ಹೀಗೆ ಮಾಡುವ ಮೊದಲು ಬಹಳ ಎಚ್ಚರಿಕೆ ವಹಿಸಿರಿ. ಯಾವುದೇ ಹಣಕಾಸಿನ ಉತ್ಪನ್ನ ಕೊಳ್ಳುವಾಗ ನಾವೇ ಅರ್ಜಿ ತುಂಬಿ ಸಹಿ ಹಾಕಬೇಕು.

(ಲೇಖಕ: ಇಂಡಿಯನ್ ಮನಿ ಡಾಟ್ ಕಾಂನ ಹಣಕಾಸು ಸಲಹ ವಿಭಾಗದ ಮುಖ್ಯಸ್ಥ)

ಷೇರುಪೇಟೆ

ಷೇರುಪೇಟೆಗೆ ತಟ್ಟಿದ ಬೆಲೆ ಏರಿಕೆ ಬಿಸಿ

ಸತತ ಎರಡು ವಾರಗಳಿಂದ ಗಳಿಕೆಯ ಹಾದಿಯಲ್ಲಿದ್ದ ಷೇರುಪೇಟೆ ಸೂಚ್ಯಂಕಗಳು ಕುಸಿತದ ಹಾದಿ ಹಿಡಿದಿವೆ. ಮಾರ್ಚ್ 25ಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಸೂಚ್ಯಂಕಗಳು ಕುಸಿತ ಕಂಡಿವೆ. 57,362 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 0.87ರಷ್ಟು ಇಳಿಕೆಯಾಗಿದೆ. 17,153 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 0.78ರಷ್ಟು ತಗ್ಗಿದೆ. ಆದರೆ ನಿಫ್ಟಿ ಮಿಡ್ ಕ್ಯಾಪ್ ಸೂಚ್ಯಂಕ ಮಾತ್ರ ಶೇ 1ರಷ್ಟು ಹೆಚ್ಚಳ ದಾಖಲಿಸಿದೆ.

ತೈಲ ಬೆಲೆ ಹೆಚ್ಚಳ, ಹಣದುಬ್ಬರ, ಅಮೆರಿಕದ ಫೆಡರಲ್ ಬ್ಯಾಂಕ್‌ನಿಂದ ಬಡ್ಡಿ ದರ ಮತ್ತಷ್ಟು ಹೆಚ್ಚಳ ಸಾಧ್ಯತೆ ಸೇರಿ ಹಲವು ಅಂಶಗಳು ಷೇರುಪೇಟೆ ಕುಸಿತಕ್ಕೆ ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಮಾಧ್ಯಮ ವಲಯ ಶೇ 6.95ರಷ್ಟು, ಲೋಹ ವಲಯ ಶೇ 5.12ರಷ್ಟು, ಮಾಹಿತಿ ತಂತ್ರಜ್ಞಾನ ವಲಯ ಶೇ 1.43ರಷ್ಟು, ಫಾರ್ಮಾ ಶೇ 0.45ರಷ್ಟು ಹೆಚ್ಚಳ ಕಂಡಿವೆ. ನಿಫ್ಟಿ ಎಫ್‌ಎಂಜಿಸಿ ಶೇ 3.43ರಷ್ಟು, ನಿಫ್ಟಿ ಬ್ಯಾಂಕ್ ಶೇ 2.80ರಷ್ಟು, ವಾಹನ ವಲಯ ಶೇ 2.10ರಷ್ಟು, ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 1.50ರಷ್ಟು ಇಳಿಕೆಯಾಗಿವೆ.

ಏರಿಕೆ–ಇಳಿಕೆ: ನಿಫ್ಟಿಯಲ್ಲಿ ಡಾ. ರೆಡ್ಡೀಸ್ ಶೇ 7.5ರಷ್ಟು, ಹಿಂಡಾಲ್ಕೊ ಶೇ 7ರಷ್ಟು, ಕೋಲ್ ಇಂಡಿಯಾ ಶೇ 5ರಷ್ಟು, ರಿಲಯನ್ಸ್ ಶೇ 4.5ರಷ್ಟು, ಜೆಎಸ್‌ಡಬ್ಲ್ಯು ಸ್ಟೀಲ್ ಶೇ 4.5ರಷ್ಟು ಹೆಚ್ಚಳ ದಾಖಲಿಸಿವೆ. ಬ್ರಿಟಾನಿಯಾ ಶೇ 8ರಷ್ಟು, ಹಿಂದುಸ್ತಾನ್ ಯುನಿಲಿವರ್ ಶೇ 7ರಷ್ಟು, ಟೈಟನ್ ಶೇ 6.5ರಷ್ಟು, ನೆಸ್ಲೆ ಶೇ 6ರಷ್ಟು, ಕೋಟಕ್ ಮಹೀಂದ್ರ ಶೇ 5.5ರಷ್ಟು ಕುಸಿದಿವೆ.

ಮುನ್ನೋಟ: ಜಾಗತಿಕ ಮಾರುಕಟ್ಟೆಗಳ ಸ್ಥಿತಿ ಆಶಾದಾಯಕವಾಗಿಲ್ಲ, ಷೇರುಪೇಟೆ ಸೂಚ್ಯಂಕಗಳು ಮತ್ತಷ್ಟು ಕುಸಿತ ಕಾಣುವ ಸಾಧ್ಯತೆ ಹೆಚ್ಚಿಗೆ ಇದೆ. ಸದ್ಯಕ್ಕೆ ಷೇರುಗಳ ಖರೀದಿಗೆ ಸಮಯ ಸೂಕ್ತವಲ್ಲ ಎನ್ನಬಹುದು. ಹಣದುಬ್ಬರ ಹೆಚ್ಚಳದಿಂದ ಕಚ್ಚಾ ವಸ್ತುಗಳ ಖರೀದಿ ಹೊರೆಯಾಗುತ್ತಿದ್ದು ಕಂಪನಿಗಳ ಬೆಳವಣಿಗೆ ಮತ್ತು ಲಾಭಾಂಶದ ಮೇಲೆ ನೇರ ಪರಿಣಾಮ ಉಂಟಾಗುತ್ತಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹420
12 ಮೊಟ್ಟೆಗೆ	₹58
ಮೈಸೂರು	
100 ಮೊಟ್ಟೆಗೆ	₹425

ಜನ್ಮತಳೆಯಲಿದೆ 1,500ಕ್ಕೂ ಹೆಚ್ಚಿನ ಪರದೆಗಳ ಮಲ್ಟಿಪ್ಲೆಕ್ಸ್ ಸಮೂಹ

ಪಿವಿಆರ್, ಐನಾಕ್ಸ್ ವಿಲೀನ ಘೋಷಣೆ

ನವದೆಹಲಿ (ಪಿಟಿಐ): ದೇಶದ ಉದ್ದಗಲಕ್ಕೂ ಸಿನಿಮಾ ಮಲ್ಟಿಪ್ಲೆಕ್ಸ್ ಹೊಂದಿರುವ ಪಿವಿಆರ್ ಲಿಮಿಟೆಡ್ ಮತ್ತು ಐನಾಕ್ಸ್ ಲೀಷರ್ ಲಿಮಿಟೆಡ್ ಕಂಪನಿಗಳು ವಿಲೀನ ಆಗುತ್ತಿವೆ. ಈ ಮೂಲಕ ದೇಶದ 109 ನಗರಗಳಲ್ಲಿ 1,500ಕ್ಕೂ ಹೆಚ್ಚಿನ ಚಿತ್ರಪರದೆಗಳ ಜಾಲ ಹೊಂದಿರುವ ಅತಿದೊಡ್ಡ ಮಲ್ಟಿಪ್ಲೆಕ್ಸ್ ಸಮೂಹ ಜನ್ಮತಳೆಯಲಿದೆ.

ಎರಡೂ ಕಂಪನಿಗಳ ಆಡಳಿತ ಮಂಡಳಿಗಳು ವಿಲೀನಕ್ಕೆ ಭಾನುವಾರ ಒಪ್ಪಿಗೆ ನೀಡಿವೆ. ದೇಶದ ಸಿನಿಮಾ ಪ್ರದರ್ಶನ ವಲಯವು ಕೋವಿಡ್ ಸಾಂಕ್ರಾಮಿಕ ಹಾಗೂ ಒಟಿಟಿ ವೇದಿಕೆಗಳ ಬೆಳವಣಿಗೆಯಿಂದಾಗಿ ತೊಂದರೆಗೆ ಒಳಗಾಗಿರುವ ಸಂದರ್ಭದಲ್ಲಿ ಈ ವಿಲೀನ ನಡೆಯಲಿದೆ.

ವಿಲೀನ ಆದ ನಂತರದ ಕಂಪನಿಯನ್ನು ಪಿವಿಆರ್ ಐನಾಕ್ಸ್ ಲಿಮಿಟೆಡ್ ಎಂದು ಕರೆಯಲಾಗುತ್ತದೆ. ಈಗ ಇರುವ ಮಲ್ಟಿಪ್ಲೆಕ್ಸ್‌ಗಳು ‘ಪಿವಿಆರ್’ ಹಾಗೂ ‘ಐನಾಕ್ಸ್’ ಎಂಬ ಹೆಸರುಗಳನ್ನು ಹೊಂದಿರಲಿವೆ. ವಿಲೀನದ ನಂತರ ತೆರೆಯಲಾಗುವ ಮಲ್ಟಿಪ್ಲೆಕ್ಸ್‌ಗಳನ್ನು ‘ಪಿವಿಆರ್ ಐನಾಕ್ಸ್’ ಎಂದು ಕರೆಯಲಾಗುತ್ತದೆ.

ವಿಲೀನದ ನಂತರದಲ್ಲಿ ಪಿವಿಆರ್ ಪ್ರವರ್ತಕರು ಶೇಕಡ 10.62ರಷ್ಟು ಷೇರುಗಳನ್ನು, ಐನಾಕ್ಸ್ ಪ್ರವರ್ತಕರು ಶೇ 16.66ರಷ್ಟು ಷೇರುಗಳನ್ನು ಹೊಂದಿರುತ್ತಾರೆ ಎಂದು ಕಂಪನಿಗಳು ತಿಳಿಸಿವೆ.

‘ಸಾಂಕ್ರಾಮಿಕವು ಸಿನಿಮಾ ಪ್ರದರ್ಶನ ಉದ್ಯಮಕ್ಕೆ ಬಹಳ ಏಟು ಕೊಟ್ಟಿದೆ. ಒಟಿಟಿ ವೇದಿಕೆಗಳ ಅಬ್ಬರ ಜಾಸ್ತಿ ಆಗಿರುವುದು ಕೂಡ ಈ ಉದ್ಯಮಕ್ಕೆ ಸವಾಲಾಗಿದೆ. ಭಾರತದಲ್ಲಿ ಜನರಿಗೆ ಚಿತ್ರಮಂದಿರಗಳಲ್ಲಿ ಸಿನಿಮಾ ವೀಕ್ಷಣೆಯೇ ಮನರಂಜನೆ ಪಡೆಯಲು ಇರುವ ಮೊದಲ ಆಯ್ಕೆ ಎಂಬುದು ನಮ್ಮ ನಂಬಿಕೆ. ಸಮಾನ ಉದ್ದೇಶ ಹೊಂದಿರುವ ಎರಡು ಬ್ರ್ಯಾಂಡ್‌ಗಳು ಒಟ್ಟಾಗುವುದರಿಂದ ಉದ್ಯಮ ಮುಂದೆ ಸಾಗಲು ಇಂಬು ಕೊಟ್ಟಂತೆ ಆಗುತ್ತದೆ’ ಎಂದು ಪಿವಿಆರ್ ಕಂಪನಿಯ ಸಿಎಂಡಿ ಅಜಯ್ ಬಿಜಲಿ ಸುದ್ದಿಗಾರರಿಗೆ ತಿಳಿಸಿದರು.

ವಿಲೀನ ಒಪ್ಪಂದವು ಯಾವಾಗ ಪೂರ್ಣಗೊಳ್ಳಲಿದೆ ಎಂಬ ಪ್ರಶ್ನೆಗೆ ಐನಾಕ್ಸ್ ಲೀಷರ್ ಲಿಮಿಟೆಡ್‌ನ ನಿರ್ದೇಶಕ ಸಿದ್ಧಾರ್ಥ ಜೈನ್, ‘ಆರರಿಂದ ಒಂಬತ್ತು ತಿಂಗಳುಗಳಲ್ಲಿ ಇಡೀ ಪ್ರಕ್ರಿಯೆ ಪೂರ್ಣಗೊಳ್ಳಲಿದೆ’ ಎಂದರು. ವಿಶ್ವದರ್ಜೆಯ ಸಿನಿಮಾ ವೀಕ್ಷಣೆ ಅನುಭವವನ್ನು ಎರಡನೆಯ ಹಾಗೂ ಮೂರನೆಯ ಹಂತದ ನಗರಗಳಿಗೂ ಕೊಂಡೊಯ್ಯುವ ದಿಸೆಯಲ್ಲಿಯೂ ಕೆಲಸ ನಡೆಯಲಿದೆ ಎಂದು ಎರಡೂ ಕಂಪನಿಗಳು ಹೇಳಿವೆ.

ಅಂಕಿ ಅಂಶ

871 ಪಿವಿಆರ್ ಮಾಲೀಕತ್ವದಲ್ಲಿನ ಪರದೆಗಳು

675 ಐನಾಕ್ಸ್ ಮಾಲೀಕತ್ವದ ಪರದೆಗಳು

₹3,784 ಐನಾಕ್ಸ್‌ನ ಆಸ್ತಿಗಳ ಮೌಲ್ಯ

₹7,450 ಪಿವಿಆರ್‌ನ ಆಸ್ತಿಗಳ ಮೌಲ್ಯ

ವಿಲೀನಕ್ಕೆ ಎರಡೂ ಕಂಪನಿಗಳ ಷೇರುದಾರರು, ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ, ಷೇರುಪೇಟೆಗಳ ಅನುಮೋದನೆ ಸಿಗಬೇಕಿದೆ.

ಪೆಟ್ರೋಲ್ ದರ 50 ಪೈಸೆ, ಡೀಸೆಲ್ 55 ಪೈಸೆ ಹೆಚ್ಚಳ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ದೇಶದಾದ್ಯಂತ ಭಾನುವಾರವೂ ಇಂಧನ ದರ ಹೆಚ್ಚಿಸಿವೆ.

ಆರು ದಿನಗಳಲ್ಲಿ ಐದನೇ ಬಾರಿಗೆ ದರ ಹೆಚ್ಚಳ ಮಾಡಲಾಗಿದೆ. ಈ ಅವಧಿಯಲ್ಲಿ ಪೆಟ್ರೋಲ್ ದರ ಲೀಟರಿಗೆ ₹ 3.70ರಷ್ಟು ಮತ್ತು ಡೀಸೆಲ್ ದರ ₹ 3.70ರಷ್ಟು ಏರಿಕೆಯಾಗಿದೆ.

ದೆಹಲಿಯಲ್ಲಿ ಪೆಟ್ರೋಲ್ ದರ 50 ಪೈಸೆ ಮತ್ತು ಡೀಸೆಲ್ ದರ 55 ಪೈಸೆ ಹೆಚ್ಚಿಸಲಾಗಿದೆ. ಇದರಿಂದ ಮಾರಾಟ ದರವು ಲೀಟರಿಗೆ ₹ 99.11 ಮತ್ತು ₹ 90.42ಕ್ಕೆ ಏರಿಕೆ ಆಗಿದೆ.

ಬೆಂಗಳೂರಿನಲ್ಲಿ ಪ್ರತಿ ಲೀಟರ್ ಪೆಟ್ರೋಲ್ ದರ ₹ 104.44 ಮತ್ತು ಡೀಸೆಲ್ ದರ ₹ 88.66ಕ್ಕೆ ತಲುಪಿದೆ. ಸ್ಥಳೀಯ ತೆರಿಗೆಗೆ ಅನುಗುಣವಾಗಿ ರಾಜ್ಯದಿಂದ ರಾಜ್ಯಕ್ಕೆ ಮಾರಾಟ ದರದಲ್ಲಿ ವ್ಯತ್ಯಾಸ ಆಗುತ್ತದೆ.

ದೇಶಿ ಬೇಡಿಕೆಯನ್ನು ಪೂರೈಸಲು ಶೇ 85ರಷ್ಟು ತೈಲವನ್ನು ಆಮದು ಮಾಡಿಕೊಳ್ಳಲಾಗುತ್ತಿದೆ.

ರಾಮನಗರ ರೇಷ್ಮೆ ಗೂಡು ಧಾರಣೆ

ಮಿಶ್ರತಳಿ	₹250-495
ದ್ವಿತಳಿ	₹366-890

ಬ್ಯಾಂಕಿಂಗ್ ಸೇವೆಗಳಿಗೆ ಭಾಗಶಃ ಅಡ್ಡಿ ಸಂಭವ

ನವದೆಹಲಿ (ಪಿಟಿಐ): ಕಾರ್ಮಿಕ ಸಂಘಟನೆಗಳು ಕರೆ ನೀಡಿರುವ ಎರಡು ದಿನಗಳ ಮುಷ್ಕರಕ್ಕೆ ಬ್ಯಾಂಕಿಂಗ್ ವಲಯದ ಕೆಲವು ಸಂಘಟನೆಗಳು ಬೆಂಬಲ ನೀಡಿದ್ದು, ಸೋಮವಾರ ಮತ್ತು ಮಂಗಳವಾರ ಬ್ಯಾಂಕಿಂಗ್ ಸೇವೆಗಳಿಗೆ ಭಾಗಶಃ ಅಡ್ಡಿಯಾಗುವ ಸಾಧ್ಯತೆ ಇದೆ.

ಬ್ಯಾಂಕಿಂಗ್ ವಲಯದ ಬೇಡಿಕೆಗಳತ್ತ ಗಮನ ಸೆಳೆಯುವ ಉದ್ದೇಶದಿಂದ ಈ ಮುಷ್ಕರಕ್ಕೆ ಬೆಂಬಲ ನೀಡಿ, ಮುಷ್ಕರದಲ್ಲಿ ಭಾಗವಹಿಸಲು ಅಖಿಲ ಭಾರತ ಬ್ಯಾಂಕ್ ಉದ್ಯೋಗಿಗಳ ಸಂಘವು (ಎಐಬಿಇಎ) ನಿರ್ಧರಿಸಿದೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಎಚ್. ವೆಂಕಟಾಚಲಂ ತಿಳಿಸಿದ್ದಾರೆ.

ಮುಷ್ಕರದಿಂದಾಗಿ ಬ್ಯಾಂಕಿಂಗ್ ಸೇವೆಯಲ್ಲಿ ಸ್ವಲ್ಪ ಮಟ್ಟಿನ ಸಮಸ್ಯೆ ಎದುರಾಗಬಹುದು ಎಂದು ಎಸ್‌ಬಿಐ, ಪಂಜಾಬ್ ನ್ಯಾಷನಲ್ ಬ್ಯಾಂಕ್ ಸೇರಿದಂತೆ ಹಲವು ಸರ್ಕಾರಿ ಬ್ಯಾಂಕ್‌ಗಳು ಹೇಳಿವೆ. ಎರಡೂ ದಿನಗಳಲ್ಲಿ ಕಚೇರಿಗಳು ಮತ್ತು ಶಾಖೆಗಳಲ್ಲಿ ಎಂದಿನಂತೆಯೇ ಕಾರ್ಯಾಚರಣೆ ನಡೆಸುವ ಸಲುವಾಗಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದು ಎಸ್‌ಬಿಐ ಮತ್ತು ಕೆನರಾ ಬ್ಯಾಂಕ್ ಹೇಳಿವೆ.

ಚೆಕ್ ಕ್ಲಿಯರೆನ್ಸ್‌ಗೆ ತೊಂದರೆ ಸಾಧ್ಯತೆ

ಬೆಂಗಳೂರು: ‘ಬ್ಯಾಂಕ್ ಅಧಿಕಾರಿಗಳಲ್ಲಿ ಹೆಚ್ಚಿನವರು ಮುಷ್ಕರದಲ್ಲಿ ಪಾಲ್ಗೊಳ್ಳುತ್ತಿಲ್ಲ. ಆದರೆ ಅವರು ಮುಷ್ಕರಕ್ಕೆ ಬೆಂಬಲ ವ್ಯಕ್ತಪಡಿಸಿದ್ದಾರೆ. ಬ್ಯಾಂಕ್‌ಗಳ ಕೆಳಹಂತದ ಸಿಬ್ಬಂದಿ ಪೈಕಿ ಒಂದಿಷ್ಟು ಮಂದಿ ಮುಷ್ಕರದಲ್ಲಿ ಪಾಲ್ಗೊಳ್ಳುತ್ತಿರುವ ಕಾರಣ, ಕೆಲವು ಸೇವೆಗಳಲ್ಲಿ ವ್ಯತ್ಯಯ ಆಗಬಹುದು’ ಎಂದು ಬ್ಯಾಂಕ್ ನೌಕರರ ಸಂಘದ ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

ಚೆಕ್ ಕ್ಲಿಯರೆನ್ಸ್, ಹಣ ಜಮಾ, ಕೆಲವು ಕೌಂಟರ್ ಸೇವೆಗಳಿಗೆ ಅಡಚಣೆ ಆಗಬಹುದು. ಆದರೆ, ಎಟಿಎಂ ಸೇವೆಗಳು, ಕಿಯೋಸ್ಕ್ ಮೂಲಕ ಹಣ ಜಮಾ, ಆನ್‌ಲೈನ್ ಮೂಲಕ ಹಣ ವರ್ಗಾವಣೆಗೆ ತೊಂದರೆ ಆಗುವುದಿಲ್ಲ. ಬ್ಯಾಂಕ್‌ಗಳು ತೆರೆದಿರುವ ಕಾರಣ ತುರ್ತು ಸೇವೆಗಳಿಗೆ ಕೂಡ ಅಡ್ಡಿ ಆಗಲಿಕ್ಕಿಲ್ಲ ಎಂದು ಮೂಲಗಳು ವಿವರಿಸಿವೆ.

ಮುಷ್ಕರಕ್ಕೆ ಬೆಂಬಲ ನೀಡಿರುವ ಎಐಬಿಒಎ, ಬಿಇಎಫ್‌ಐ ಹಾಗೂ ಕರ್ನಾಟಕ ಪ್ರದೇಶ ಬ್ಯಾಂಕ್ ನೌಕರರ ಸಂಘದ ಸದಸ್ಯರು ಹೆಚ್ಚಿರುವ ಬ್ಯಾಂಕ್ ಶಾಖೆಗಳಲ್ಲಿ ಮುಷ್ಕರದ ಪರಿಣಾಮ ಹೆಚ್ಚಿರಬಹುದು ಎಂದು ತಿಳಿಸಿವೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ರೆಂಟಲ್ ಪ್ರಾಪರ್ಟೀಸ್

Accommodation Available

Commercial

SPACE FOR RENT- 20x100sqft (15 HP Power) Industrial/ Commercial. Address: P.B.Road, Avaragere, Davanagere. Contact:- 7204577823

ಉದ್ಯೋಗಾವಕಾಶ

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/-ರ ವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಮನೆಯಿಂದಲೆ ಅಣಬೆ ಬೇಸಾಯ, ಕಡಿಮೆ ಜಾಗ ಹಾಗೂ ಕಡಿಮೆ ಖರ್ಚಿನಲ್ಲಿಯೇ ಮನೆಯಿಂದಲೇ ತಿಂಗಳಿಗೆ 20,000ಕ್ಕು ಹೆಚ್ಚು ಸಂಪಾದಿಸಿ. 8431781442/ 8095555516

General

ಪ್ರತಿಷ್ಠಿತ ಲಿಮಿಟೆಡ್ ಕಂಪನಿಯೊಂದಕ್ಕೆ SSLC ಮೇಲ್ಪಟ್ಟ 800 ಯುವಕ ಯುವತಿಯರು ರಾಜ್ಯಾದ್ಯಂತ ಬೇಕಾಗಿದ್ದಾರೆ. ಉಚಿತ ವಸತಿಯೂಟದೊಂದಿಗೆ ESI, PF, OT ಸೇರಿ 13,000 -37,000/- 9353753194, 9663704915

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ ಮಹಿಳೆಯರು ಹೋಂನರ್ಸ್‌ಳು, ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ. 10,000-15,000. 8951315839, 9880545002 .

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ ಹಾಗೂ ಆಫೀಸ್ ಕೆಲಸಕ್ಕೆ ಯುವಕ/ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary + OT. 17,800-68,000/-. 8884666597, 8884666594.

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600- 60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ: 7760014526, 9739544856

ಕಂಪನಿಗಳಿಗೆ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, TVS, ಬ್ರಿಟಾನಿಯಾಗಳಿಗೆ SSLC, PUC, Degree ಯವರು ITI ನವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,100-56,000/- ವಸತಿಯೂಟದೊಂದಿಗೆ. 7899778278, 9611715755

ನಮ್ಮ ಕಂಪನಿಯ ಆಯುರ್ವೇದಿಕ್ ಉತ್ಪನ್ನಗಳನ್ನು ಕಾರಿನಲ್ಲಿ ತೆರಳಿ ಪ್ರಮೋಟ್ ಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ. ಉಚಿತ ವಸತಿಯೊಂದಿಗೆ ದಿನಕ್ಕೆ 900- 1200 ಸಂಪಾದಿಸಲು ಸಂಪರ್ಕಿಸಿ: 8904379634/ 9513670249

URGNTLY REQD delivery boys in Bangalore. Salary incentive. Female riders can apply. Call7892076087/ 9008046480/ 7019573722

ಭವಿಷ್ಯ

Astrology

ಕೇರಳ ಹಾಗೂ ಕೊಳ್ಳೆಗಾಲದ ಪ್ರಸಿದ್ಧ ಮಾಂತ್ರಿಕ ವಶೀಕರಣ ಜ್ಯೋತಿಷ್ಯರು ಇವರು ಎಂತಹ ಕಠಿಣ ಗುಪ್ತ ಸಮಸ್ಯೆಗಳಿದ್ದರೂ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ. ಮಂಗಳೂರು, ಮೈಸೂರು,ಚಿತ್ರದುರ್ಗ 9008867041

ಶ್ರೀ ಜೈ ಶಂಕರಿ ಜ್ಯೋತಿಷ್ಯ ಕೇಂದ್ರ: ವಿದ್ಯೆ, ಉದ್ಯೋಗ, ಸ್ತ್ರೀ-ಪುರುಷ ವಶೀಕರಣ, ಇಷ್ಟಪಟ್ಟವರು ನಿಮ್ಮಂತಾಗಲು, ಕೇವಲ ಮೂರು ದಿನಗಳಲ್ಲಿ ಶಾಶ್ವತವಾದ ಪರಿಹಾರ. Ph:9980057857 (ಫೋನಿನ ಮೂಲಕ ಪರಿಹಾರ ಮಾಡಿಕೊಡುತ್ತಾರೆ)

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ ಭವಿಷ್ಯ ಖಚಿತ ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಧರ್ಮಸ್ಥಳ: 7022443071

★★ಅಂಭಾಭವಾನಿ★★ ಜ್ಯೋತಿಷ್ಯಾಲಯ ಕೊಳ್ಳೆಗಾಲದ ನಂ.1 'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್. (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೇಯಿರಲಿ 2ದಿನದಲ್ಲಿ ಪರಿಹಾರ.9886755306

ಪ್ರವಾಸ

Travel

27.04.2022ರಿಂದ ರೈಲು/ಏಸಿ ಬಸ್ಸಿನಲ್ಲಿ 35/22ದಿನಗಳ 'ಚಾರೋಧಾಮ್'ಸಮೇತ ವೈಷ್ಣೋದೇವಿ, ಕೋಲ್ಕತ್ತಾ, ಪುರಿ,ಅಮೃತಸರ್,ಕಾಶಿ, ಗಯಾ,ಹರಿದ್ವಾರ್. 28.05.2022ರಿಂದ ವಿಮಾನ/ಬಸ್ಸಿನಲ್ಲಿ 13ದಿನಗಳ 'ಚಾರೋಧಾಮ್',ಮಸ್ಸೂರಿ, ಗುಪ್ತಕಾಶಿ,ನವದೆಹಲಿ, ಹರಿದ್ವಾರ್. ಜೂನ್/ಜುಲೈ ತಿಂಗಳಲ್ಲಿ ಅಮರನಾಥ್ ಸಮೇತ,ಕಾಶ್ಮೀರ್,ವೈಷ್ಣೊದೇವಿ, ಅಮೃತಸರ್, ಕುರುಕ್ಷೇತ್ರ,ಹರಿದ್ವಾರ್ 19ದಿನಗಳು. ವಿವರಗಳಿಗೆ: ಏಷ್ಯನ್ ಟ್ರಾವೆಲ್ ಲೈನ್ಸ್,#164, ಆರ್.ವಿ.ರಸ್ತೆ (ಮಿನರ್ವ ಬಸ್ ಸ್ಟಾಪ್ ಎದುರು)ಬೆಂಗಳೂರು4. ಫೋನ್:8105657052, 9480182865. 08026565085.

18.04.2022, 18.05.2022 ಶ್ರೀಲಂಕಾ 7ದಿನಗಳು. 12.04.2022, 11.05.2022 ಕಾಶಿ,ಗಯಾ,ಅಯೋಧ್ಯ, ಚಿತ್ರಕೂಟ 7ದಿನಗಳು. 16.04.2022 ಗುಜರಾತ್ 8ದಿನಗಳು. 12.04.2022, 04.05.2022 ಶಿಮ್ಲಾ,ಕುಲುಮನಾಲಿ 7ದಿನಗಳು. 22.04.2022, 16.05.2022 ರಾಮೇಶ್ವರ, ಕುಂಭಕೋಣಂ, ಕನ್ಯಾಕುಮಾರಿ 6ದಿನಗಳು. ಮಲೆನಾಡು ಪ್ರವಾಸ 2/3 ದಿನಗಳು. ಇದಲ್ಲದೆ ಕಸ್ಟಮೈಸ್ ಫ್ಯಾಮಿಲಿ ಪ್ರವಾಸಗಳಿಗಾಗಿ ವಿಚಾರಿಸಿ: ಜೈನ್ ಟ್ರಾವಲ್ಸ್, ಬೆಂಗಳೂರು-03. 9448402248, 7022547922

27.04.2022, 06.05.2022, 22.05.2022 ರಿಂದ 14/20/26 ದಿನಗಳ ಪೂರಿಜಗನ್ನಾಥ್, ಗಯಾ,ಕಾಶಿ,ಪ್ರಯಾಗ, ನೈಮಿಶಾರಣ್ಯ, ಅಯೋಧ್ಯ, ಬದರಿನಾಥ್, ಕೇದಾರನಾಥ್, ಗಂಗೋತ್ರಿ, ಯಮುನೋತ್ರಿ, ದೆಹಲಿ,ಅಮೃತ್‌ಸರ್, ವೈಷ್ಣೋದೇವಿ/ ಹಾಗು ಜುಲೈ, ಅಗಸ್ಟ್, ಸೆಪ್ಟಂಬರ್ ತಿಂಗಳಲ್ಲಿ ಅಮರನಾಥ್‌ಯಾತ್ರೆ/ ಮುಕ್ತಿನಾಥ್, ಗ್ಯಾಂಗ್‌ಟಾಕ್, ಡಾರ್ಜಲಿಂಗ್ ಪ್ರವಾಸಗಳನ್ನು ಏರ್ಪಡಿಸಲಾಗುತ್ತದೆ 'ಶ್ರೀಸುಧಾ ಟ್ರಾವಲ್ಸ್' 080-22429289, 9448119290, 9019301300

18.04.2022, 05.05.2022, 11ದಿನಗಳ ಕಾಶಿ 13.04.2022 ರಿಂದ ರಾಮೇಶ್ವರ, ಕನ್ಯಾಕುಮಾರಿ, ಮದುರೈ,ಶ್ರೀರಂಗಂ, ನವಗ್ರಹಗಳು 7/10 ದಿನಗಳು 02.05.2022, 18.05.2022, 15ದಿನಗಳ ಚಾರ್ಧಾಮ್‌ಯಾತ್ರೆ. ಬದರಿನಾಥ್, ಕೇದಾರನಾಥ್, ಗಂಗೋತ್ರಿ, ಯಮುನೋತ್ರಿ, ಜೂನ್‌ನಲ್ಲಿ ವೈಷ್ಣವಿದೇವಿ, ಅಮರನಾಥಯಾತ್ರೆ ಸಂಪರ್ಕಿಸಿ: ಏಷ್ಯನ್ ಟೂರ್ಸ್ ಅಂಡ್ ಟ್ರಾವಲ್ಸ್ ತ್ಯಾಗರಾಜನಗರ, ಬೆಂಗಳೂರು-70. 9342287551, 8050629305

ಅಂಡಮಾನ್ ಹವಳದ್ವೀಪ 5ದಿನಗಳು ವಿಮಾನದಲ್ಲಿ ಏಪ್ರಿಲ್, ಮೇ, ಜೂನ್ನಲ್ಲಿ Royal Package. 10/07/2022 13/17 ದಿನಗಳು ದೆಹಲಿ, ಅಮೃತಸರ, ವೈಶ್ಣವದೇವಿ, ಅಮರನಾಥ್ ಕಾಶ್ಮೀರ, ಇತ್ಯಾದಿ. 'ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್' 9739847429/ 9845560219.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH ಪ್ರಜಾವಾಣಿ
BOOK YOUR CLASSIFIEDS ONLINE
5 EASY STEP
5 Easy steps to book your ads
LOG INTO WWW.DHCLASSIFIEDS.COM
CHOOSE THE CATEGORY
CHOOSE THE AD DATES
COMPOSE THE MATTER
CONFIRM AND PAY
TO BOOK YOUR CLASSIFIEDS ADS ONLINE
JOB | LOST | REAL ESTATE | NAME CHANGE | EDU | HEALTH
MATRI | AUTO | ASTRO | NOTICE | TRAVEL
condition apply*
WWW.DHCLASSIFIEDS.COM
For more information Contact:
9880856233 | 9731810277 | 9901641752 | 9845114560 | 9886213331
Email: dhclassifieds@deccanherald.co.in

ಮಯೂರ
ಏಪ್ರಿಲ್ 2022 ಸಂಚಿಕೆಯಲ್ಲಿ
ಆರ್ದ್ರತೆಯಿಲ್ಲದೆ ದೊಡ್ಡ ಸಾಹಿತ್ಯ ಹುಟ್ಟಲ್ಲ
ಮಾತು-ಕತೆ
ಕತೆಗಾರ್ತಿ ಕಸ್ತೂರಿ ಬಾಯರಿ ಅವರೊಂದಿಗೆ ಒಂದು ಸಂವಾದ
ಸಂದರ್ಶನ: ರಹಮತ್ ತರೀಕೆರೆ
ಅಂಕಣಗಳು
ಪ್ರಣ ಕುತೂಹಲ ಲೇಖಕ ಎಂ.ಎಸ್. ಶ್ರೀರಾಮ್ ಅವರ ಹೊಸ ಅಂಕಣ
ಇಮ್ಮೊಜಿ ಭಾಷೆ ಕತೆಗಾರ ಕರ್ಕಿ ಕೃಷ್ಣಮೂರ್ತಿ ಅವರ ಅಂಕಣ
ಅನನ್ಯ
• ಡಿ.ಆರ್. ನಾಗರಾಜರ ತಾರುಣ್ಯದ ಟಿಪ್ಪಣಿಗಳು
ನಟರಾಜ್ ಹುಳಿಯಾರ್
ನಂದಾದೀಪ
• ಆತಂಕ–ತಲ್ಲಣಗಳ ನಡುವೆ ಭರವಸೆಯ ಆಶಾವಾದ ಚೆನ್ನವೀರ ಕಣವಿ
ನರಹಳ್ಳಿ ಬಾಲಸುಬ್ರಹ್ಮಣ್ಯ
ಮೆಲುಕು
• ಓಂ ಣಮೋ ದೇಸಾಯಿ ಶಾಂತಿನಾಥಾಯ...
ಸಿದ್ಧಲಿಂಗ ಪಟ್ಟಣಶೆಟ್ಟಿ
ಕತೆಗಳು
• ಗುರುಪ್ರಸಾದ್ ಕಂಟಲಗೆರೆ
• ಮಧುರಾ ಕರ್ಣಮ್
• ಕುರುವ ಬಸವರಾಜ್
• ಡಾ. ಮಿರ್ಜಾ ಬಷೀರ್
• ರವಿರಾಜ ಬೈಕಂಪಾಡಿ
• ಎಂ.ಟಿ. ವಾಸುದೇವನ್ ನಾಯರ್
ಕವಿತೆಗಳು
• ದಾದಾಪೀರ್ ಜೈಮನ್
• ಸುಮಿತ್ ಮೇತ್ರಿ
• ರೇಣುಕಾ ರಮಾನಂದ
• ನೂತನ ದೋಶೆಟ್ಟಿ
ವೀರಭದ್ರ ಕೌದಿ ಅವರ ಪ್ರಬಂಧ – ಮನೆ ಹೊಕ್ಕೊಳ್ಳುವುದು
₹15 ನಿಮ್ಮ ಪ್ರತಿಗಳಿಗೆ ಏಜೆಂಟರನ್ನು ಸಂಪರ್ಕಿಸಿ
editormy@mayura.co.in | /mayuramonthly
mayuraezine.com | 080-45557333/264

ವಿರಾಟ್ ಕೊಹ್ಲಿ –ದಿನೇಶ್ ಕಾರ್ತಿಕ್ ಜೊತೆಯಾಟ, ನಾಯಕ ಫಫ್ ಸ್ಫೋಟಕ ಆಟಕ್ಕೆ ಸಿಗದ ಫಲ

ಬ್ಯಾಟರ್‌ಗಳ ಅಬ್ಬರ; ಪಂಜಾಬ್ ಜಯಭೇರಿ

ನವೀ ಮುಂಬೈ (ಪಿಟಿಐ): ಸವಾಲಿನ ಮೊತ್ತ ಕಲೆ ಹಾಕಿದರೂ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡ ಸೋಲಿನ ದವಡೆಗೆ ಸಿಲುಕಿ ನಿರಾಸೆ ಅನುಭವಿಸಿತು.

ಡಿ.ವೈ. ಪಾಟೀಲ ಕ್ರೀಡಾಂಗಣದಲ್ಲಿ ಭಾನುವಾರ ರಾತ್ರಿ ನಡೆದ ಪಂದ್ಯದಲ್ಲಿ ಮಯಂಕ್ ಅಗರವಾಲ್ ನಾಯಕತ್ವದ ಪಂಜಾಬ್ ಕಿಂಗ್ಸ್ ಐದು ವಿಕೆಟ್‌ಗಳಿಂದ ಆರ್‌ಸಿಬಿಯನ್ನು ಮಣಿಸಿತು.

206 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ತಂಡ 19 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು 208 ರನ್ ಗಳಿಸಿತು. ಮಯಂಕ್ ಅಗರವಾಲ್ ಮತ್ತು ಶಿಖರ್ ಧವನ್ ತಂಡಕ್ಕೆ ಉತ್ತಮ ಆರಂಭ ಒದಗಿಸಿದರು. ಮೊದಲ ವಿಕೆಟ್‌ಗೆ ಇವರಿಬ್ಬರು 71 ಸೇರಿಸಿದರು.

ಮೂರನೇ ಕ್ರಮಾಂಕದ ಭಾನುಕ ರಾಜಪಕ್ಸೆ ನಾಲ್ಕು ಸಿಕ್ಸರ್‌ಗಳನ್ನು ಸಿಡಿಸಿ ಮಿಂಚಿದರು. 14ನೇ ಓವರ್‌ನ ಮೊದಲ ಎರಡು ಎಸೆತಗಳಲ್ಲಿ ಎರಡು ವಿಕೆಟ್ ಉರುಳಿಸಿ ಮೊಹಮ್ಮದ್ ಸಿರಾಜ್ ಬೆಂಗಳೂರು ತಂಡದಲ್ಲಿ ನಿರೀಕ್ಷೆ ಮೂಡಿಸಿದರು.

ಆದರೆ ನಂತರ ಶಾರೂಖ್ ಖಾನ್ ಮತ್ತು ಒಡೀನ್ ಸ್ಮಿತ್ ಜೊತೆಯಾಟ ರಂಗೇರಿತು. ಇವರಿಬ್ಬರು ಮುರಿಯದ 6ನೇ ವಿಕೆಟ್‌ಗೆ 52 ರನ್ ಸೇರಿಸಿ ಪಂಜಾಬ್‌ಗೆ ಸುಲಭ ಜಯ ತಂದುಕೊಟ್ಟರು. ಒಡೀನ್ ಎಂಟು ಎಸೆತಗಳಲ್ಲಿ 25 ರನ್ ಗಳಿಸಿದರು.

ಫಫ್ ಸ್ಫೋಟಕ ಬ್ಯಾಟಿಂಗ್: ಬೆಂಗಳೂರು ತಂಡದ ನಾಯಕನಾಗಿ ಆಡಿದ ಚೊಚ್ಚಲ ಪಂದ್ಯದಲ್ಲಿಯೇ ಫಫ್ ಡುಪ್ಲೆಸಿ ತಮ್ಮ ಭುಜಬಲ ಪರಾಕ್ರಮ ಮೆರೆದರು. ಡುಪ್ಲೆಸಿ (88; 57ಎ,4X3, 6X7) ಮತ್ತು ಕೊಹ್ಲಿ (ಔಟಾಗದೆ 41;29ಎ, 4X1, 6X2) ಅವರಿಬ್ಬರೂ ಎರಡನೇ ವಿಕೆಟ್ ಜೊತೆಯಾಟದಲ್ಲಿ ಸೇರಿಸಿದ 118 ರನ್‌ಗಳ (61 ಎಸೆತ) ಜೊತೆಯಾಟದಿಂದಾಗಿ ಬೆಂಗಳೂರು ತಂಡ ಎರಡು ವಿಕೆಟ್‌ಗಳಿಗೆ 205 ರನ್ ಗಳಿಸಿತು.

ಟಾಸ್ ಗೆದ್ದ ಪಂಜಾಬ್ ತಂಡದ ನಾಯಕ ಮಯಂಕ್ ಅಗರವಾಲ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಇನಿಂಗ್ಸ್‌ನ 12ನೇ ಓವರ್ ಮುಗಿಯುವವರೆಗೂ ಅವರ ನಿರ್ಧಾರ ಸರಿ ಎಂದು ಸಾಬೀತಾಗಿತ್ತು. ನಂತರದ ಎಂಟು ಓವರ್‌ಗಳಲ್ಲಿ 113 ರನ್‌ಗಳನ್ನು ಆರ್‌ಸಿಬಿ ಸೂರೆ ಮಾಡಿತು. ಇದಕ್ಕೆ ಕಾರಣವಾಗಿದ್ದು ಡುಪ್ಲೆಸಿ ಬ್ಯಾಟಿಂಗ್. ಒಡೀನ್ ಸ್ಮಿತ್ ಹಾಕಿದ 13ನೇ ಓವರ್‌ನಲ್ಲಿ ಎರಡು ಸಿಕ್ಸರ್, ಒಂದು ಬೌಂಡರಿ ಮತ್ತು ಹರ್‌ಪ್ರೀತ್ ಬ್ರಾರ್ ಹಾಕಿದ 14ನೇ ಓವರ್‌ನಲ್ಲಿ ಎರಡು ಸಿಕ್ಸರ್ ಮತ್ತು ಎರಡು ಬೌಂಡರಿ ಬಾರಿಸಿದ ಡುಪ್ಲೆಸಿ ಇನಿಂಗ್ಸ್‌ನ ದಿಕ್ಕು ಬದಲಿಸಿದರು. 'ನಿಕಟಪೂರ್ವ' ನಾಯಕ ವಿರಾಟ್ ಕೊಹ್ಲಿ ಕೂಡ ಫಫ್ ಜೊತೆ ಕೈಜೋಡಿಸಿದರು.

ಅನುಜ್ ರಾವತ್ ಜೊತೆಗೆ ಇನಿಂಗ್ಸ್ ಆರಂಭಿಸಿದ ಡುಪ್ಲೆಸಿ ಮೊದಲ ವಿಕೆಟ್‌ಗೆ 50 ರನ್ ಸೇರಿಸಿದರು. ಏಳನೇ ಓವರ್‌ನಲ್ಲಿ ಸ್ಪಿನ್ನರ್ ರಾಹುಲ್ ಎಸೆತದಲ್ಲಿ ಕ್ಲೀನ್‌ಬೌಲ್ಡ್ ಆದ ಅನುಜ್ ಡಗ್‌ಔಟ್ ಸೇರಿದರು. ಐಪಿಎಲ್‌ನಲ್ಲಿ ಡುಪ್ಲೆಸಿ ಅವರು 3,000 ರನ್ ಸಾಧನೆ ಮಾಡಿದರು.

ತಂಡದ ನಾಯಕತ್ವ ಬಿಟ್ಟ ನಂತರ ಮೊದಲ ಪಂದ್ಯ ಆಡಲು ಬಂದ ಕೊಹ್ಲಿಗೆ ಅಭಿಮಾನಿಗಳಿಂದ ಭರ್ಜರಿ ಸ್ವಾಗತ ಲಭಿಸಿತು. ಅದರಿಂದ ಹುರುಪುಗೊಂಡಂತೆ ಕಂಡ ಕೊಹ್ಲಿ ಆಟಕ್ಕೆ ಕುದುರಿಕೊಂಡರು. ಒಂದು ಕಡೆ ಫಫ್ ಚೆಂಡು ಇರುವುದೇ ಬೌಂಡರಿ ದಾಟಿಸಲು ಎಂಬ ಧೋರಣೆಯೊಂದಿಗೆ ಆಡಿದರು. 37 ವರ್ಷದ ಫಫ್, ಶತಕ ದಾಖಲಿಸುವ ನಿರೀಕ್ಷೆ ಮೂಡಿಸಿದ್ದರು.

ಆದರೆ, 18ನೇ ಓವರ್‌ನಲ್ಲಿ ಶಾರೂಕ್ ಖಾನ್ ಮುಂದೆ ಹಾರಿ ಹಿಡಿದ ಕ್ಯಾಚ್‌ಗೆ ಡುಪ್ಲೆಸಿ ನಿರ್ಗಮಿಸಿದರು. ನಾಲ್ಕನೇ ಓವರ್‌ನಲ್ಲಿ ಡುಪ್ಲೆಸಿ ಕ್ಯಾಚ್ ಕೈಚೆಲ್ಲಿದ್ದ ಶಾರೂಕ್, ತಪ್ಪು ತಿದ್ದಿಕೊಂಡರು!

ಕಾರ್ತಿಕ್ ಅಬ್ಬರ: ಬೆಂಗಳೂರು ತಂಡದಲ್ಲಿ ಮೊದಲ ಪಂದ್ಯ ಆಡಿದ ದಿನೇಶ್ ಕಾರ್ತಿಕ್ 14 ಎಸೆತಗಳಲ್ಲಿ 32 ರನ್ ಗಳಿಸಿ ಭರ್ಜರಿ ಆರಂಭ ಮಾಡಿದರು. ಮೂರು ಸಿಕ್ಸರ್ ಮತ್ತು ಮೂರು ಬೌಂಡರಿ ಸಿಡಿಸಿದರು.

ಕೊಹ್ಲಿ ಜೊತೆಗೆ ಮುರಿಯದ ಮೂರನೇ ವಿಕೆಟ್ ಜೊತೆಯಾಟದಲ್ಲಿ 37 ರನ್ ಸೇರಿಸಿದರು. ಹೋದ ಬಾರಿ ಅವರು ಕೋಲ್ಕತ್ತ ನೈಟ್ ರೈಡರ್ಸ್ ತಂಡದಲ್ಲಿದ್ದರು. ಹೋದ ತಿಂಗಳು ನಡೆದಿದ್ದ ಮೆಗಾ ಹರಾಜಿನಲ್ಲಿ ದಿನೇಶ್ ಅವರನ್ನು ಆರ್‌ಸಿಬಿ ಖರೀದಿಸಿತ್ತು.

ಒಡೀನ್ ಸ್ಮಿತ್ ಅವರ ಬ್ಯಾಟಿಂಗ್ ವೈಖರಿ –ಪಿಟಿಐ ಚಿತ್ರ

ಫಫ್ ಡುಪ್ಲೆಸಿ ಆಟದ ಸೊಬಗು –ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ರಾಯಲ್ ಚಾಲೆಂಜರ್ಸ್ ಬೆಂಗಳೂರು 2ಕ್ಕೆ 205 (20 ಓವರ್)

ಡುಪ್ಲೆಸಿ ಸಿ ಶಾರೂಖ್ ಬಿ ಅರ್ಷದೀಪ್ 88 (57ಎ, 4X3, 6X7), ಅನುಜ್ ಬಿ ಚಾಹರ್ 21 (20ಎ, 4X2, 6X1), ವಿರಾಟ್ ಔಟಾಗದೆ 41 (29ಎ, 4X1, 6X2), ದಿನೇಶ್ ಔಟಾಗದೆ 32 (14ಎ, 4X3, 6X3)

ಇತರೆ (ಬೈ 5, ಲೆಗ್‌ಬೈ 6, ವೈಡ್ 12) 23

ವಿಕೆಟ್ ಪತನ: 1–50 (ಅನುಜ್ ರಾವತ್, 6.6), 2–168 (ಫಫ್ ಡುಪ್ಲೆಸಿ, 17.1)

ಬೌಲಿಂಗ್: ಸಂದೀಪ್ ಶರ್ಮಾ 4–0–37–0, ಅರ್ಷದೀಪ್ ಸಿಂಗ್ 4–0–31–1, ಒಡೀನ್ ಸ್ಮಿತ್ 4–0–52–0, ರಾಹುಲ್ ಚಾಹರ್ 4–0–22–1, ಹರ್‌ಪ್ರೀತ್ ಬ್ರಾರ್ 3–0–38–0, ಲಿಯಾಮ್ ಲಿವಿಂಗ್‌ಸ್ಟೋನ್ 1–0–14–0

ಪಂಜಾಬ್ ಕಿಂಗ್ಸ್ 5ಕ್ಕೆ 208 (19 ಓವರ್)

ಮಯಂಕ್ ಸಿ ಶಹಬಾಜ್ ಬಿ ಡಿಸಿಲ್ವಾ 32 (24ಎ, 4X2, 6X2), ಶಿಖರ್ ಸಿ ಅನುಜ್ ಬಿ ಹರ್ಷಲ್ 43 (29ಎ, 4X5, 6X1), ಭಾನುಕ ಸಿ ಶಹಬಾಜ್ ಬಿ ಸಿರಾಜ್ 43 (22ಎ, 4X2, 6X4), ಲಿಯಾಮ್ ಸಿ ಅನುಜ್ ಬಿ ಆಕಾಶ್ ದೀಪ್ 19 (10ಎ, 6X2), ರಾಜ್ ಬಾವಾ ಎಲ್‌ಬಿಡಬ್ಲ್ಯು ಬಿ ಸಿರಾಜ್ 0 (1ಎ), ಶಾರೂಕ್ ಔಟಾಗದೆ 24 (20ಎ, 4X1, 6X2), ಒಡೀನ್ ಔಟಾಗದೆ 25 (8ಎ, 4X1, 6X3)

ಇತರೆ (ಲೆಗ್ ಬೈ 1, ವೈಡ್ 21) 22

ವಿಕೆಟ್ ಪತನ: 1-71 (ಮಯಂಕ್ ಅಗರವಾಲ್, 7.1), 2-118 (ಶಿಖರ್ ಧವನ್, 11.2), 3-139 (ಭಾನುಕ ರಾಜಪಕ್ಸ, 13.1), 4-139 (ರಾಜ್ ಬಾವ, 13.2), 5–156 (ಲಿಯಾಮ್ ಲಿವಿಂಗ್‌ಸ್ಟೋನ್, 14.5)

ಬೌಲಿಂಗ್: ಡೇವಿಡ್ ವಿಲ್ಲಿ 3-0-28-0, ಮೊಹಮ್ಮದ್ ಸಿರಾಜ್ 4-0-59-2, ಶಹಬಾಜ್ ಅಹಮ್ಮದ್ 1-0-6-0, ಆಕಾಶ್ ದೀಪ್ 3-0-38-1, ವನಿಂದು ಹಸರಂಗ 4-0-40-1, ಹರ್ಷಲ್ ಪಟೇಲ್ 4-0-36-1

ಫಲಿತಾಂಶ: ಪಂಜಾಬ್ ಕಿಂಗ್ಸ್ ತಂಡಕ್ಕೆ 5 ವಿಕೆಟ್‌ಗಳ ಜಯ

ಡೆಲ್ಲಿಗೆ ಮಣಿದ ಮುಂಬೈ

ಲಲಿತ್ –ಅಕ್ಷರ್ ಪಟೇಲ್ ಜೊತೆಯಾಟಕ್ಕೆ ಒಲಿದ ಜಯ

ಮುಂಬೈ (ಪಿಟಿಐ): ಸೋಲಿನ ಸುಳಿಯಿಂದ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ರಕ್ಷಿಸಿದ ಲಲಿತ್ ಯಾದವ್ ಮತ್ತು ಅಕ್ಷರ್ ಪಟೇಲ್ ಅವರು ಬ್ರೆಬಾರ್ನ್ ಕ್ರೀಡಾಂಗಣದಲ್ಲಿ ಪ್ರೇಕ್ಷಕರನ್ನು ರಂಜಿಸಿದರು.

ಲಲಿತ್ ಮತ್ತು ಅಕ್ಷರ್ ಅವರ ಅಮೋಘ ಜೊತೆಯಾಟದ ನೆರವಿನಿಂದ ಡೆಲ್ಲಿ ತಂಡ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯ 15ನೇ ಆವೃತ್ತಿಯಲ್ಲಿ ಶುಭಾರಂಭ ಮಾಡಿತು. ಭಾನುವಾರ ನಡೆದ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ವಿರುದ್ಧ ಡೆಲ್ಲಿ ಕ್ಯಾಪಿಟಲ್ಸ್ ನಾಲ್ಕು ವಿಕೆಟ್‌ಗಳಿಂದ ಗೆಲುವು ಸಾಧಿಸಿತು.

ವಿಕೆಟ್ ಕೀಪರ್ ಬ್ಯಾಟರ್ ಇಶಾನ್ ಕಿಶನ್ ಅವರ ಅಜೇಯ ಅರ್ಧಶತಕದ (81; 48 ಎಸೆತ, 11 ಬೌಂಡರಿ, 2 ಸಿಕ್ಸರ್) ಬಲದಿಂದ ಮುಂಬೈ ಇಂಡಿಯನ್ಸ್ 177 ರನ್ ಗಳಿಸಿತ್ತು.

ಗುರಿ ಬೆನ್ನತ್ತಿದ ಡೆಲ್ಲಿ ಕ್ಯಾಪಿಟಲ್ಸ್ 10 ಎಸೆತ ಬಾಕಿ ಇರುವಾಗಲೇ ಗೆಲುವಿನ ದಡ ಸೇರಿತು. ಒಂದು ಹಂತದಲ್ಲಿ ಸೋಲಿನತ್ತ ಸಾಗಿದ್ದ ತಂಡಕ್ಕೆ ಯಾದವ್ (ಔಟಾಗದೆ 48; 38 ಎ, 4 ಬೌಂ, 2 ಸಿ) ಮತ್ತು ಎಡಗೈ ಬ್ಯಾಟರ್ ಅಕ್ಷರ್ (ಔಟಾಗದೆ 38; 17 ಎ, 2 ಬೌಂ, 3 ಸಿ) ಆಸರೆಯಾದರು. ಮುರಿಯದ ಏಳನೇ ವಿಕೆಟ್‌ಗೆ ಅವರಿಬ್ಬರು 75 ರನ್ ಸೇರಿಸಿದರು.

ಇಶಾನ್ ಸತತ 3ನೇ ಅರ್ಧಶತಕ: ಟಾಸ್ ಗೆದ್ದ ಡೆಲ್ಲಿ ಕ್ಯಾಪಿಟಲ್ಸ್ ಎದುರಾಳಿ ತಂಡವನ್ನು ಬ್ಯಾಟಿಂಗ್‌ಗೆ ಆಹ್ವಾನಿಸಿತು. ಇಶಾನ್ ಕಿಶನ್ ಮತ್ತು ನಾಯಕ ರೋಹಿತ್ ಶರ್ಮಾ ಆರಂಭದಲ್ಲೇ ಗರ್ಜಿಸಿದರು.

ಮೊದಲ ವಿಕೆಟ್‌ಗೆ ಇಬ್ಬರೂ 67 ರನ್ ಕಲೆ ಹಾಕಿದರು. ಮುಂಬೈ ಇಂಡಿಯನ್ಸ್‌ಗಾಗಿ ಇಶಾನ್ ಗಳಿಸಿದ ಸತತ ಮೂರನೇ ಅರ್ಧಶತಕ ಇದಾಗಿದೆ. ಟೂರ್ನಿಯಲ್ಲಿ ಅವರು ಒಟ್ಟಾರೆ 10 ಅರ್ಧಶತಕ ಗಳಿಸಿದ್ದಾರೆ.

ಇನಿಂಗ್ಸ್‌ನ ಮಧ್ಯದಲ್ಲಿ ಡೆಲ್ಲಿ ತಿರುಗೇಟು ನೀಡಿತು. ಸ್ಪಿನ್ನರ್ ಕುಲದೀಪ್ ಯಾದವ್ ಅವರು ರೋಹಿತ್ ಶರ್ಮಾ ಮತ್ತು ಕೀರನ್ ಪೊಲಾರ್ಡ್ ಅವರ ವಿಕೆಟ್ ಸೇರಿದಂತೆ ಮೂವರನ್ನು ಔಟ್ ಮಾಡಿದರು. ಆದರೆ ಇಶಾನ್ ಕ್ರೀಸ್‌ನಲ್ಲಿ ತಳವೂರಿ ಇನಿಂಗ್ಸ್‌ಗೆ ಬಲ ತುಂಬಿದರು. ತಂಡ ಕೊನೆಯ ಐದು ಓವರ್‌ಗಳಲ್ಲಿ 59 ರನ್ ಕಲೆ ಹಾಕಿತು. ಚೊಚ್ಚಲ ಪಂದ್ಯ ಆಡಿದ ತಿಲಕ್ ವರ್ಮಾ 15 ಎಸೆತಗಳಲ್ಲಿ 22 ರನ್ ಗಳಿಸಿ ಮಿಂಚಿದರು.


ಲಲಿತ್ ಯಾದವ್ ಬ್ಯಾಟಿಂಗ್ ವೈಖರಿ –ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಮುಂಬೈ ಇಂಡಿಯನ್ಸ್ 5ಕ್ಕೆ 177 (20 ಓವರ್)

ರೋಹಿತ್ ಶರ್ಮಾ ಸಿ ಪೊವೆಲ್ ಬಿ ಕುಲದೀಪ್ 41 (32 ಎ, 4x4, 6x2), ಇಶಾನ್ ಔಟಾಗದೆ 81 (48 ಎ, 4x11, 6x2), ಅನ್ಮೋಲ್‌ಪ್ರೀತ್ ಸಿ ಲಲಿತ್ ಬಿ ಕುಲದೀಪ್ 8 (9 ಎ), ತಿಲಕ್ ಸಿ ಶಾ ಬಿ ಅಹಮ್ಮದ್ 22 (15 ಎ, 4x3), ಕೀರನ್ ಡಿ ಸೀಫರ್ಟ್ ಬಿ ಕುಲದೀಪ್ 3 (6 ಎ), ಟಿಮ್ ಸಿ ಮನದೀಪ್ ಬಿ ಖಲೀಲ್ 12 (8 ಎ, 6x1), ಡ್ಯಾನಿಯಲ್ ಔಟಾಗದೆ 7 (2 ಎ, 6x1)

ಇತರೆ (ಲೆಗ್‌ಬೈ 1, ವೈಡ್ 2) 3

ವಿಕೆಟ್ ಪತನ: 1-67 (ರೋಹಿತ್ ಶರ್ಮಾ, 8.2), 2-83 (ಅನ್ಮೋಲ್ ಪ್ರೀತ್ ಸಿಂಗ್, 10.4), 3-117 (ತಿಲಕ್ ವರ್ಮಾ, 14.2), 4-122 (ಕೀರನ್ ಪೊಲಾರ್ಡ್, 15.5), 5-159 (ಟಿಮ್ ಡೇವಿಡ್, 18.6)

ಬೌಲಿಂಗ್: ಶಾರ್ದೂಲ್ ಠಾಕೂರ್ 4–0–47–0, ಖಲೀಲ್ ಅಹಮ್ಮದ್ 4–0–27–2, ಅಕ್ಷರ್ ಪಟೇಲ್ 4–0–40–0, ಕಮಲೇಶ್ ನಾಗರಕೋಟಿ 2–0–29–0, ಕುಲದೀಪ್ ಯಾದವ್ 4–0–18–3, ಲಲಿತ್ ಯಾದವ್ 2–0–15–0

ಡೆಲ್ಲಿ ಕ್ಯಾಪಿಟಲ್ಸ್ 6ಕ್ಕೆ 179 (18.2 ಓವರ್)

ಪೃಥ್ವಿ ಸಿ ಇಶಾನ್ ಬಿ ಬಾಸಿಲ್ 38 (24 ಎ, 4x4, 6x2), ಟಿಮ್ ಬಿ ಅಶ್ವಿನ್ 21 (14 ಎ), ಮನದೀಪ್ ಸಿ ತಿಲಕ್ ಬಿ ಅಶ್ವಿನ್ 0 (2 ಎ), ರಿಷಭ್ ಸಿ ಡೇವಿಡ್ ಬಿ ಮಿಲ್ಸ್ 1 (2 ಎ), ಲಲಿತ್ ಔಟಾಗದೆ 48 (38 ಎ, 4x4, 6x2), ರೊವ್ಮನ್ ಸಿ ಸ್ಯಾಮ್ಸ್ ಬಿ ಬಾಸಿಲ್ 0 (2 ಎ), ಶಾರ್ದೂಲ್ ಸಿ ರೋಹಿತ್ ಬಿ ಬಾಸಿಲ್ 22 (11 ಎ, 4x4), ಅಕ್ಷರ್ ಔಟಾಗದೆ 38 (17 ಎ, 4x2, 6x3)

ಇತರೆ (ಲೆಗ್ ಬೈ 4, ವೈಡ್ 7) 11

ವಿಕೆಟ್ ಪತನ: 1-30 (ಟಿಮ್ ಸೀಫರ್ಟ್, 3.3), 2-30 (ಮನದೀಪ್ ಸಿಂಗ್, 3.5), 3-32 (ರಿಷಭ್ ಪಂತ್, 4.1), 4-72 (ಪೃಥ್ವಿ ಶಾ, 9.2), 5-72 (ರೋವ್ಮನ್ ಪೊವೆಲ್, 9.4), 6-104 (ಶಾರ್ದೂಲ್ ಠಾಕೂರ್, 13.2))

ಬೌಲಿಂಗ್: ಡ್ಯಾನಿಯಲ್ ಸ್ಯಾಮ್ಸ್ 4-0-57-0, ಜಸ್‌ಪ್ರೀತ್ ಬೂಮ್ರಾ 3.2-0-43-0, ಬಾಸಿಲ್ ಥಂಪಿ 4-0-35-3, ಮುರುಗನ್ ಅಶ್ವಿನ್ 4-0-14-2, ಟೈಮಲ್ ಮಿಲ್ಸ್ 3-0-26-1

ಫಲಿತಾಂಶ: ಡೆಲ್ಲಿ ಕ್ಯಾಪಿಟಲ್ಸ್‌ಗೆ 4 ವಿಕೆಟ್‌ಗಳ ಗೆಲುವು

ಕೆ.ಎಲ್. ರಾಹುಲ್–ಹಾರ್ದಿಕ್ ಪಾಂಡ್ಯ ಮುಖಾಮುಖಿ

ಲಖನೌ–ಗುಜರಾತ್ ಪದಾರ್ಪಣೆ ಇಂದು

ಮುಂಬೈ (ಪಿಟಿಐ): ಎರಡು ಹೊಸ ತಂಡಗಳಾದ ಲಖನೌ ಸೂಪರ್ ಜೈಂಟ್ಸ್ ಮತ್ತು ಗುಜರಾತ್ ಟೈಟನ್ಸ್ ಸೋಮವಾರ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಪದಾರ್ಪಣೆ ಮಾಡಲಿವೆ.

ವಾಂಖೆಡೆ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯದಲ್ಲಿ ಕನ್ನಡಿಗ ಕೆ.ಎಲ್. ರಾಹುಲ್ ಲಖನೌಗೆ ಮತ್ತು ಬರೋಡಾದ ಹಾರ್ದಿಕ್ ಗುಜರಾತ್‌ಗೆ ನಾಯಕತ್ವ ವಹಿಸುವರು. ಕಳೆದ ಋತುವಿನಲ್ಲಿ ಪಂಜಾಬ್ ಕಿಂಗ್ಸ್ ತಂಡದ ನಾಯಕತ್ವ ವಹಿಸಿದ ಮತ್ತು ಭಾರತ ತಂಡದ ಹಂಗಾಮಿ ನಾಯಕನಾಗಿ ಆಡಿದ ಅನುಭವ ರಾಹುಲ್‌ಗೆ ಇದೆ. ಆದರೆ ಹಾರ್ದಿಕ್‌ಗೆ ಇದು ನಾಯಕತ್ವದ ಮೊದಲ ಪಂದ್ಯ.

ಕ್ರಿಕೆಟ್ ವಲಯದಲ್ಲಿ ಆಪ್ತಮಿತ್ರರೆಂದೇ ಗುರುತಿಸಿಕೊಳ್ಳುವ ರಾಹುಲ್ ಮತ್ತು ಹಾರ್ದಿಕ್ ಪ್ರತಿಸ್ಪರ್ಧಿಗಳಾಗಿ ಕಣಕ್ಕಿಳಿಯುತ್ತಿರುವುದು ಕುತೂಹಲ ಕೆರಳಿಸಿದೆ.

ಪಂಜಾಬ್ ತಂಡದಲ್ಲಿದ್ದಾಗ ರಾಹುಲ್ ಬ್ಯಾಟಿಂಗ್‌ನಲ್ಲಿ ಮಿಂಚಿದ್ದರು. ರನ್‌ಗಳ ಹೊಳೆ ಹರಿಸಿದ್ದರು. ಹೋದ ವರ್ಷ ಮುಂಬೈ ಇಂಡಿಯನ್ಸ್ ತಂಡದಲ್ಲಿದ್ದ ಹಾರ್ದಿಕ್ ಪಾಂಡ್ಯ ಬ್ಯಾಟಿಂಗ್‌ನಲ್ಲಿ ಹೇಳಿಕೊಳ್ಳುವಂತಹ ಸಾಧನೆ ಮಾಡಿರಲಿಲ್ಲ. ಬೆನ್ನುನೋವಿನ ಕಾರಣಕ್ಕೆ ಬೌಲಿಂಗ್ ಕೂಡ ಮಾಡಿರಲಿಲ್ಲ. ಭಾರತ ತಂಡದಲ್ಲಿಯೂ ಅವರ ಆಟ ಮಂಕಾಗಿತ್ತು. ಆದ್ದರಿಂದ ಈಗ ಅವರ ಮುಂದೆ ತಮ್ಮ ಆಲ್‌ರೌಂಡ್ ಆಟ ಮತ್ತು ನಾಯಕತ್ವವನ್ನು ತೋರಿಸುವ ಸವಾಲು ಇದೆ. ಲಖನೌ ತಂಡದಲ್ಲಿ ರಾಹುಲ್ ಜೊತೆಗೆ ಕರ್ನಾಟಕದ ಮನೀಷ್ ಪಾಂಡ್ಯ, ಕೃಷ್ಣಪ್ಪ ಗೌತಮ್ ಇದ್ದಾರೆ. ಕೃಣಾಲ್ ಪಾಂಡ್ಯ, ದೀಪಕ್ ಹೂಡಾ ಮತ್ತು ಜೇಸನ್ ಹೋಲ್ಡರ್ ಗಳಂತಹ ಉತ್ತಮ ಆಲ್‌ರೌಂಡರ್‌ಗಳೂ ಇದ್ದಾರೆ. ಕ್ವಿಂಟನ್ ಡಿಕಾಕ್ ಅವರ ಅನುಭವವೂ ತಂಡದ ಸಾಮರ್ಥ್ಯ ಹೆಚ್ಚಿಸಿದೆ.

ಗುಜರಾತ್ ತಂಡದಲ್ಲಿ ಕನ್ನಡಿಗ ಅಭಿನವ್ ಮನೋಹರ್‌ಗೆ ಕಣಕ್ಕಿಳಿಯುವ ಅವಕಾಶ ಸಿಗುವ ಸಾಧ್ಯತೆ ಇದೆ. ಶುಭಮನ್ ಗಿಲ್, ವಿಜಯಶಂಕರ್, ರಾಹುಲ್ ತೆವಾಟಿಯಾ, ಜಯಂತ್ ಯಾದವ್ ಮತ್ತು ಅಫ್ಗಾನಿಸ್ತಾನದ ಆಟಗಾರ ರಶೀದ್ ಖಾನ್ ತಂಡದಲ್ಲಿದ್ದಾರೆ. ಕಳೆದ ಋತುಗಳಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡದಲ್ಲಿ ಆಡಿದ್ದ ರಶೀದ್ ಯಶಸ್ವಿ ಸ್ಪಿನ್ನರ್ ಆಗಿ ಮಿಂಚಿದ್ದರು. ಇಲ್ಲಿಯೂ ಅದೇ ಲಯ ಮುಂದುವರಿಸಿದರೆ ಹಾರ್ದಿಕ್ ಕಾರ್ಯ ಹಗುರವಾಗುವುದು ಖಚಿತ.

ಹಾರ್ದಿಕ್ ಪಾಂಡ್ಯ

ಕೆ.ಎಲ್. ರಾಹುಲ್

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ
ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್
ಡಿಸ್ನಿ ಹಾಟ್‌ಸ್ಟಾರ್

ನಾಯಕರ ಬಲಾಬಲ (ಐಪಿಎಲ್)

ಆಟಗಾರ	ಪಂದ್ಯ	ರನ್	ಶ್ರೇಷ್ಠ	ಅರ್ಧಶತಕ	ಶತಕ	ಸ್ಟ್ರೈಕ್‌ರೇಟ್
ಕೆ.ಎಲ್.ರಾಹುಲ್	94	3273	132	27	2	136.38
ಹಾರ್ದಿಕ್ ಪಾಂಡ್ಯ	92	1476	91	0	4	153.91

ಮ್ಯಾರಥಾನ್: ಐದನೇ ಸ್ಥಾನ ಗಳಿಸಿದ ಬೆಳ್ಳಿಯಪ್ಪ

ಬೆಂಗಳೂರು: ಕರ್ನಾಟಕದ ಬೆಳ್ಳಿಯಪ್ಪ ಸೇರಿದಂತೆ ಆರು ದೂರ ಅಂತರದ ಓಟಗಾರರು ನವದೆಹಲಿಯಲ್ಲಿ ಭಾನುವಾರ ನಡೆದ ಏಜೀಸ್ ಫೆಡರಲ್ ಲೈಫ್ ಇನ್ಶೂರೆನ್ಸ್ ಡೆಲ್ಲಿ ಮ್ಯಾಥಾರಾನ್‌ನ ಆರನೇ ಆವೃತ್ತಿಯಲ್ಲಿ ಉತ್ತಮ ಪ್ರದರ್ಶನ ತೋರಿ ಕಾಮನ್‌ವೆಲ್ತ್ ಮತ್ತು ಏಷ್ಯನ್ ಗೇಮ್ಸ್‌ಗೆ ಅರ್ಹತೆ ಪಡೆದುಕೊಂಡಿದ್ದಾರೆ.

ನಿತೇಂದ್ರ ಸಿಂಗ್ ರಾವತ್ 2 ತಾಸು 16 ನಿಮಿಷ 5 ಸೆಕೆಂಡುಗಳಲ್ಲಿ ಗುರಿ ತಲುಪುವ ಮೂಲಕ ಫುಲ್ ಮ್ಯಾರಾಥಾನ್ ವಿಭಾಗದ ಪ್ರಶಸ್ತಿ ಮುಡಿಗೇರಿಸಿಕೊಂಡರು. ಅನೀಶ್ ಥಾಪ ಮಗರ್ (2 ತಾಸು 16 ನಿಮಿಷ 41 ಸೆಕೆಂಡು) ಹಾಗೂ ಅನಿಲ್ ಕುಮಾರ್ ಸಿಂಗ್ (2 ತಾಸು 16 ನಿಮಿಷ 47 ಸೆಕೆಂಡು) ಕ್ರಮವಾಗಿ 2 ಹಾಗೂ 3ನೇ ಸ್ಥಾನ ಪಡೆದುಕೊಂಡರು.

ಆಶಿಶ್ ಕುಮಾರ್ (2 ತಾಸು 17 ನಿಮಿಷ, 4 ಸೆಕೆಂಡು), ಎ.ಬಿ.ಬೆಳ್ಳಿಯಪ್ಪ (2 ತಾಸು 17 ನಿಮಿಷ 9 ಸೆಕೆಂಡು) ಮತ್ತು ಕಾಳಿದಾಸ್ ಹಿರವೆ (2 ತಾಸು 18 ನಿಮಿಷ 14 ಸೆಕೆಂಡು) ಕ್ರಮವಾಗಿ 4,5 ಮತ್ತು 6ನೇ ಸ್ಥಾನ ಪಡೆದುಕೊಂಡರು.

ರೋಹಿತ್ ಶರ್ಮಾಗೆ ₹ 12 ಲಕ್ಷ ದಂಡ

ಮುಂಬೈ (ಪಿಟಿಐ): ಡೆಲ್ಲಿ ಕ್ಯಾಪಿಟಲ್ಸ್ ಎದುರಿನ ಪಂದ್ಯದಲ್ಲಿ ನಿಗದಿತ ಅವಧಿಯಲ್ಲಿ ಓವರ್ ಪೂರ್ಣಗೊಳಿಸದ ಕಾರಣ ಮುಂಬೈ ಇಂಡಿಯನ್ಸ್ ತಂಡದ ನಾಯಕ ರೋಹಿತ್ ಶರ್ಮಾ ಅವರಿಗೆ ₹ 12 ಲಕ್ಷ ದಂಡ ವಿಧಿಸಲಾಗಿದೆ. ಭಾನುವಾರ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಆಡಳಿತ ಮಂಡಳಿ ಈ ವಿಷಯ ತಿಳಿಸಿದೆ.

ಅರ್ಧಶತಕ ಗಳಿಸಿದ ಇಶಾನ್ ಕಿಶನ್ ಸಂಭ್ರಮ –ಪಿಟಿಐ ಚಿತ್ರ

ಮಿಕ್ ಶೂಮಾಕರ್ ವಾಹನ ಅಪಘಾತ

ಜೆಡ್ಡಾ (ಎಪಿ/ರಾಯಿಟರ್ಸ್): ಅರ್ಹತಾ ಸುತ್ತಿನಲ್ಲಿ ಕಾರು ಅಫಘಾತಕ್ಕೀಡಾದ ಹಿನ್ನೆಲೆಯಲ್ಲಿ ಹಾಸ್ ತಂಡದ ಚಾಲಕ ಮಿಕ್ ಶೂಮಾಕರ್ ಇಲ್ಲಿ ನಡೆಯುತ್ತಿರುವ ಫಾರ್ಮುಲಾ ಒನ್ ಸ್ಪರ್ಧೆಯಿಂದ ಹಿಂದೆ ಸರಿಯಬೇಕಾಯಿತು.

ಶನಿವಾರ ಕಾರು ಅಪಘಾತಕ್ಕೀಡಾದ ಬಳಿಕ ಅವರನ್ನು ಹೆಲಿಕಾಪ್ಟರ್ ಮೂಲಕ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಅವರು ಸದ್ಯ ಆರೋಗ್ಯವಾಗಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಬರೆದುಕೊಂಡಿರುವ ಜರ್ಮನಿಯ ಶೂಮಾಕರ್ 'ನಾನು ಆರೋಗ್ಯವಾಗಿದ್ದು, ಇನ್ನಷ್ಟು ಬಲಿಷ್ಠನಾಗಿ ಮರಳುವೆ' ಎಂದಿದ್ದಾರೆ.

23 ವರ್ಷದ ಮಿಕ್ ಅವರು ಏಳು ಬಾರಿಯ ಎಫ್1 ಚಾಂಪಿಯನ್ ಮೈಕಲ್ ಶೂಮಾಕರ್ ಅವರ ಪುತ್ರ.

ಚೆಸ್: ಗುಕೇಶ್‌ಗೆ ಅಗ್ರ ಸ್ಥಾನ

ನವದೆಹಲಿ (ಪಿಟಿಐ): ಅರ್ಜುನ್ ಎರಿಗೈಸಿ, ಹರ್ಷ ಭರತ್‌ಕೋಟಿ ಮತ್ತು ಡಿ ಗುಕೇಶ್ ಅವರು ಡೆಲ್ಲಿ ಇಂಟರ್‌ನ್ಯಾಷನಲ್ ಓಪನ್ ಗ್ರ್ಯಾಂಡ್‌ಮಾಸ್ಟರ್ಸ್ ಚೆಸ್ ಟೂರ್ನಿಯಲ್ಲಿ ಮುನ್ನಡೆ ಸಾಧಿಸಿದ್ದಾರೆ.

ಭಾನುವಾರ ಎಂಟನೇ ಸುತ್ತಿನಲ್ಲಿ ಎರಿಗೈಸಿ ಮಾಜಿ ರಾಷ್ಟ್ರೀಯ ಚಾಂಪಿಯನ್ ಲಲಿತ್ ಬಾಬು ಅವರನ್ನು 28 ನಡೆಗಳಲ್ಲಿ ಮಣಿಸಿದರು. ಎರಡನೇ ಶ್ರೇಯಾಂಕದ ರಷ್ಯಾ ಆಟಗಾರ ಪವೆಲ್ ಪೊನ್ಕ್ರಾಟೊವ್ ಅವರನ್ನು 58 ನಡೆಗಳಲ್ಲಿ ಮಣಿಸಿದರು. ಯುವ ಗ್ರ್ಯಾಂಡ್‌ಮಾಸ್ಟರ್ 29 ನಡೆಗಳಲ್ಲಿ ಕಾರ್ತಿಕ್ ವೆಂಕಟರಮಣ ಅವರನ್ನು ಸೋಲಿಸಿದರು.

ಮಹಿಳಾ ವಿಶ್ವಕಪ್: ಮಿಥಾಲಿ ಬಳಗಕ್ಕೆ ಆಘಾತ; ದಕ್ಷಿಣ ಆಫ್ರಿಕಾಕ್ಕೆ ಗೆಲುವು

ಭಾರತದ ಕನಸಿಗೆ 'ನೋಬಾಲ್' ಕಂಟಕ

ಕ್ರೈಸ್ಟ್‌ಚರ್ಚ್ (ಪಿಟಿಐ): ಮಹಿಳಾ ಏಕದಿನ ಕ್ರಿಕೆಟ್ ವಿಶ್ವಕಪ್ ಸೆಮಿಫೈನಲ್ ಪ್ರವೇಶಿಸುವ ಭಾರತ ತಂಡದ ಕನಸಿಗೆ ಒಂದು ನೋಬಾಲ್ ಕಂಟಕವಾಯಿತು.

ವಿಶ್ವಕಪ್ ಗೆದ್ದು ಕ್ರಿಕೆಟ್‌ಗೆ ವಿದಾಯ ಹೇಳುವುದಾಗಿ ಟೂರ್ನಿಗೂ ಮುನ್ನ ಹೇಳಿದ್ದ ನಾಯಕಿ ಮಿಥಾಲಿ ರಾಜ್ ಅವರಿಗೆ ಮತ್ತೊಮ್ಮೆ ನಿರಾಸೆ ಕಾಡಿತು.

ಭಾನುವಾರ ದಕ್ಷಿಣ ಆಫ್ರಿಕಾ ವಿರುದ್ಧ ನಡೆದ ಪಂದ್ಯದಲ್ಲಿ 3 ವಿಕೆಟ್‌ಗಳಿಂದ ಭಾರತ ಸೋತಿತು.

ಮೊದಲು ಬ್ಯಾಟಿಂಗ್ ಮಾಡಿದ ಭಾರತ, ಸ್ಮೃತಿ ಮಂದಾನ (71), ಶಫಾಲಿ ವರ್ಮಾ (53) ಮತ್ತು ಮಿಥಾಲಿ (68) ಅವರ ಅರ್ಧಶತಕಗಳ ಬಲದಿಂದ 274 ರನ್‌ಗಳನ್ನು ಗಳಿಸಿತು.

ಗುರಿ ಬೆನ್ನಟ್ಟಿದ ದಕ್ಷಿಣ ಆಫ್ರಿಕಾ ತಂಡಕ್ಕೆ ಗೆಲುವಿಗಾಗಿ ಇನಿಂಗ್ಸ್‌ನ ಕೊನೆಯ ಓವರ್‌ನಲ್ಲಿ ಏಳು ರನ್‌ಗಳ ಅಗತ್ಯವಿತ್ತು. ಆಫ್‌ಸ್ಪಿನ್ನರ್ ದೀಪ್ತಿ ವರ್ಮಾ ಹಾಕಿದ ಈ ಓವರ್‌ನ ಎರಡನೇ ಎಸೆತದಲ್ಲಿ ತ್ರಿಷಾ ಚೆಟ್ಟಿ ರನ್‌ಔಟ್ ಆದರು. ಇನ್ನೊಂದು ಬದಿಯಲ್ಲಿದ್ದ ಮಿಗ್ನಾನ್ ಡುಪ್ರೀಜ್ ದೃತಿಗೆಡದೇ ತಂಡವನ್ನು ಜಯದ ಸಮೀಪ ತಂದರು. ಆದರೂ ಭಾರತದ ಗೆಲುವಿನ ಆಸೆ ಜೀವಂತವಿತ್ತು.

ಐದನೇ ಎಸೆತದಲ್ಲಿ ನಡೆದ ನಾಟಕೀಯ ಬೆಳವಣಿಗೆಯಲ್ಲಿ ಎಲ್ಲವೂ ತಿರುವುಮುರುವಾಯಿತು. ಈ ಎಸೆತದಲ್ಲಿ ಮಿಗ್ನಾನ್ ಸಿಕ್ಸರ್ ಎತ್ತುವ ಪ್ರಯತ್ನದಲ್ಲಿ ಮಿಡ್‌ವಿಕೆಟ್ ಫೀಲ್ಡರ್‌ಗೆ ಕ್ಯಾಚಿತ್ತರು. ಮಿಥಾಲಿ ಬಳಗದಲ್ಲಿ ಸಂಭ್ರಮ ಕುಡಿಯೊಡಿತು. ಆದರೆ ಕೆಲವೇ ಕ್ಷಣಗಳಲ್ಲಿ ಅಂಪೈರ್ ನೋಬಾಲ್ (ಬೌಲರ್ ಓವರ್ ಸ್ಟೆಪ್) ತೀರ್ಪು ನೀಡಿದಾಗ ನಿರಾಶೆ ಕವಿದಿತ್ತು. ದಕ್ಷಿಣ ಆಫ್ರಿಕಾಗೆ ಫ್ರೀ ಹಿಟ್ ಲಭಿಸಿತು.

ಸಂಕ್ಷಿಪ್ತ ಸ್ಕೋರು: ಭಾರತ: 50 ಓವರ್‌ಗಳಲ್ಲಿ 7 ವಿಕೆಟ್‌ಗೆ 274 (ಸ್ಮೃತಿ ಮಂದಾನ 71, ಶಫಾಲಿ ವರ್ಮಾ 53, ಮಿಥಾಲಿ ರಾಜ್ 68, ಹರ್ಮನ್‌ಪ್ರೀತ್ ಕೌರ್ 48; ಶಬ್ನಿಮ್ ಇಸ್ಮಾಯಿಲ್ 42ಕ್ಕೆ 2 ಮಸಬಾಟ ಕ್ಲಾಸ್ 38ಕ್ಕೆ 2). **ದಕ್ಷಿಣ ಆಫ್ರಿಕಾ:** 50 ಓವರ್‌ಗಳಲ್ಲಿ 7ಕ್ಕೆ 275 (ಲೌರಾ ವೊಲ್ವಾರ್ಟ್ 80, ಲಾರಾ ಗೂಡಾಲ್ 49, ಮಿಗ್ನಾನ್ ಡುಪ್ರೀಜ್ 52; ರಾಜೇಶ್ವರಿ ಗಾಯಕವಾಡ್ 61ಕ್ಕೆ 2, ಹರ್ಮನ್‌ಪ್ರೀತ್ ಕೌರ್ 42ಕ್ಕೆ 2). **ಫಲಿತಾಂಶ:** ದಕ್ಷಿಣ ಆಫ್ರಿಕಾ ತಂಡಕ್ಕೆ ಮೂರು ವಿಕೆಟ್‌ಗಳ ಜಯ.

ಭಾರತದ ಆಟಗಾರ್ತಿಯರು ಸೋಲಿನ ನಿರಾಶೆಯಲ್ಲಿ –ಎಎಫ್‌ಪಿ ಚಿತ್ರ

ಬಾಂಗ್ಲಾಗೆ ನಿರಾಸೆ: ಸೆಮಿಫೈನಲ್‌ಗೆ ಇಂಗ್ಲೆಂಡ್

ವೆಲ್ಲಿಂಗ್ಟನ್ (ಪಿಟಿಐ): ಸೋಫಿಯಾ ಡಂಕ್ಲಿ ಅವರ ಬ್ಯಾಟಿಂಗ್ ಮತ್ತು ಸೋಫಿ ಎಕ್ಲೆಸ್ಟೋನ್ ಅವರ ಬೌಲಿಂಗ್ ಬಲದಿಂದ ಹಾಲಿ ಚಾಂಪಿಯನ್ ಇಂಗ್ಲೆಂಡ್ ತಂಡವು ಬಾಂಗ್ಲಾದೇಶವನ್ನು ಮಣಿಸಿ ಮಹಿಳಾ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿತು. ಬೇಸಿನ್ ರಿಸರ್ವ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಇಂಗ್ಲೆಂಡ್‌ಗೆ 100 ರನ್‌ಗಳ ಜಯ ಒಲಿಯಿತು.

ಸಂಕ್ಷಿಪ್ತ ಸ್ಕೋರು: ಇಂಗ್ಲೆಂಡ್: 50 ಓವರ್‌ಗಳಲ್ಲಿ 6 ವಿಕೆಟ್‌ಗೆ 234 (ಸೋಫಿಯಾ ಡಂಕ್ಲಿ 67, ನಾಟ್ ಸೀವರ್ 40, ಟಾಮಿ ಬಿಮೋಂಟ್ 33, ಆ್ಯಮಿ ಜೋನ್ಸ್ 31; ಫಾಹಿಮಾ ಖಾತೂನ್ 24ಕ್ಕೆ). **ಬಾಂಗ್ಲಾದೇಶ:** 48 ಓವರ್‌ಗಳಲ್ಲಿ 134 (ಲತಾ ಮಂಡಲ್ 30; ಸೋಫಿ ಎಕ್ಲೆಸ್ಟೋನ್ 15ಕ್ಕೆ 3, ಚಾರ್ಲಿ ಡೀನ್ 31ಕ್ಕೆ 3, ಫ್ರೆಯಾ ಡೇವಿಸ್ 36ಕ್ಕೆ 2).

ಚರ್ಚೆ ಹುಟ್ಟುಹಾಕಿದ ನೋಬಾಲ್

ಈ ಹಿಂದೆಯೂ ಬೌಲರ್‌ಗಳು ನೋಬಾಲ್ ಹಾಕಿದ್ದರಿಂದ ಭಾರತ ತಂಡಕ್ಕೆ ಐಸಿಸಿ ಟ್ರೋಫಿಯ ಟೂರ್ನಿಗಳಲ್ಲಿ ಪ್ರಶಸ್ತಿ ಕನಸು ಭಗ್ನವಾಗಿದ್ದರ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆ ನಡೆಯುತ್ತಿದೆ.

'ಒಂದು ನೋಬಾಲ್‌ನಿಂದ ಟ್ರೋಫಿ ಗೆಲುವಿನತ್ತ ಮತ್ತೊಂದು ಹೆಜ್ಜೆ ಇಡುವ ಅವಕಾಶ ತಪ್ಪಿತು. ತಪ್ಪು ಸಣ್ಣದೇ ಆಗಿರಬಹುದು. ಆದರೆ ತೆರಬೇಕಾದ ಬೆಲೆ ದೊಡ್ಡದು. ಇಂತಹ ಅವಕಾಶಕ್ಕಾಗಿ ತಂಡವು ಮತ್ತೆಷ್ಟು ವರ್ಷಗಳನ್ನು ಕಾಯಬೇಕೋ ಗೊತ್ತಿಲ್ಲ. ಇನ್ನು ಕೆಲವು ಆಟಗಾರ್ತಿಯರಿಗೆ ಇದು ಜೀವಮಾನದ ಕೊನೆಯ ಅವಕಾಶವೂ ಆಗಿರಬಹುದು. ದುರದೃಷ್ಟದ ಕ್ಷಣ' ಎಂದು ಮಾಜಿ ಕ್ರಿಕೆಟಿಗ ವೀರೇಂದ್ರ ಸೆಹ್ವಾಗ್ ಟ್ವೀಟ್ ಮಾಡಿದ್ದಾರೆ. ಪುರುಷರ ಕ್ರಿಕೆಟ್‌ನಲ್ಲಿ 2016ರಲ್ಲಿ ಟಿ20 ವಿಶ್ವಕಪ್ ಮತ್ತು 2017ರ ಚಾಂಪಿಯನ್ಸ್ ಟ್ರೋಫಿಯಲ್ಲಿ ನೋಬಾಲ್‌ನಿಂದಾಗಿಯೇ ಭಾರತದ ಕನಸು ಕಮರಿದ್ದನ್ನೂ ಕೆಲವರು ಟ್ವೀಟ್ ಮಾಡಿದ್ದಾರೆ.

ಸ್ವಿಸ್ ಓಪನ್ ಬ್ಯಾಡ್ಮಿಂಟನ್: ಋತುವಿನ ಎರಡನೇ ಪ್ರಶಸ್ತಿಗೆ ಮುತ್ತಿಟ್ಟ ಭಾರತದ ಆಟಗಾರ್ತಿ

ನೆಚ್ಚಿನ ಅಂಗಣದಲ್ಲಿ ಸಿಂಧು ಪಾರಮ್ಯ

ಬಾಸೆಲ್, ಸ್ವಿಟ್ಜರ್ಲೆಂಡ್ (ಪಿಟಿಐ): ವಿಶ್ವ ಚಾಂಪಿಯನ್ ಆದ ಸುಮಧುರ ನೆನಪುಗಳ ನೆಲದಲ್ಲಿ ಭಾರತದ ಪಿ.ವಿ.ಸಿಂಧು ಮತ್ತೊಮ್ಮೆ ಪಾರಮ್ಯ ಮೆರೆದರು. ಸ್ವಿಸ್ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯ ಫೈನಲ್‌ನಲ್ಲಿ ಥಾಯ್ಲೆಂಡ್‌ನ ಬುಸಾನನ್ ಒಂಗ್‌ಬಮ್ರುಂಗ್ ಪನ್ ಸವಾಲು ಮೀರಿ ಭಾನುವಾರ ಪ್ರಶಸ್ತಿಗೆ ಮುತ್ತಿಕ್ಕಿದರು.

ಪುರುಷರ ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ ಎಚ್.ಎಸ್.ಪ್ರಣಯ್ ರನ್ನರ್ ಅಪ್ ಸ್ಥಾನ ಗಳಿಸಿದರು. ಫೈನಲ್‌ನಲ್ಲಿ ಅವರು ಏಷ್ಯನ್ ಗೇಮ್ಸ್ ಚಿನ್ನದ ಪದಕ ವಿಜೇತ, ಇಂಡೊನೇಷ್ಯಾದ ಜೊನಾಥನ್ ಕ್ರಿಸ್ಟಿ ಎದುರು ಎಡವಿದರು.

ಸಿಂಧುಗೆ ಈ ಋತುವಿನಲ್ಲಿ ಒಲಿದ ಎರಡನೇ ಪ್ರಶಸ್ತಿ ಇದು. ಜನವರಿಯಲ್ಲಿ ಲಖನೌನಲ್ಲಿ ನಡೆದ ಸಯ್ಯದ್ ಮೋದಿ ಅಂತರರಾಷ್ಟ್ರೀಯ ಸೂಪರ್ 300 ಟೂರ್ನಿಯಲ್ಲಿ ಚಾಂಪಿಯನ್ ಆಗಿದ್ದರು.

ಸಿಂಧು, ಟೂರ್ನಿಯ ಸತತ ಎರಡನೇ ಆವೃತ್ತಿಯಲ್ಲಿ ಫೈನಲ್ ತಲುಪಿದ್ದರು. 49 ನಿಮಿಷಗಳ ಪಂದ್ಯದಲ್ಲಿ 21-16, 21-8ರಿಂದ ಅವರು ಗೆದ್ದರು.

ಇಲ್ಲಿ ನಡೆದಿದ್ದ 2019ರ ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಸಿಂಧು ಜಪಾನ್‌ನ ನೊಜೊಮಿ ಒಕುಹರಾ ಅವರನ್ನು ಮಣಿಸಿ ಪ್ರಶಸ್ತಿ ಗೆದ್ದಿದ್ದರು.

ಮೊದಲ ಗೇಮ್‌ನ ಆರಂಭದಲ್ಲಿ 3-0ಯೊಂದಿಗೆ ಮುನ್ನಡೆದ ಸಿಂಧು ಅವರಿಗೆ ಬುಸಾನನ್ ತಿರುಗೇಟು ನೀಡಿ, 7-7ರ ಸಮಬಲಕ್ಕೆ ತಂದರು. ಭಾರತದ ಆಟಗಾರ್ತಿ ವಿರಾಮದ ಹೊತ್ತಿಗೆ ಎರಡು ಪಾಯಿಂಟ್‌ಗಳ ಮೇಲುಗೈ ಸಾಧಿಸಿದರು. ಬುಸಾನನ್ ಡ್ರಾಪ್ ಶಾಟ್‌ಗಳ ಮೂಲಕ ಗಮನಸೆಳೆದರೆ, ಸಿಂಧು ರಕ್ಷಣಾತ್ಮಕ ಕೌಶಲಗಳ ಮೊರೆ ಹೋದರು. ನಿಖರ ಆಟದ ಮೂಲಕ ಸಿಂಧು ನಾಲ್ಕು ಗೇಮ್ ಪಾಯಿಂಟ್ಸ್ ಗಳಿಸಿ ಮೊದಲ ಗೇಮ್ ಗೆದ್ದುಕೊಂಡರು.

ಎರಡನೇ ಗೇಮ್‌ನಲ್ಲಿ ಸಿಂಧು ಸಂಪೂರ್ಣ ಅಧಿಪತ್ಯ ಸಾಧಿಸಿದರು. ಆಕ್ರಮಣದ ಆಟಕ್ಕೆ ಹೆಚ್ಚು ಒತ್ತು ನೀಡಿದ ಅವರು ವಿರಾಮದ ವೇಳೆ 9 ಪಾಯಿಂಟ್‌ಗಳಿಂದ ಮುಂದಿದ್ದರು. ಅದೇ ಲಯದೊಂದಿಗೆ ಮುನ್ನುಗ್ಗಿ ಗೇಮ್ ಹಾಗೂ ಪಂದ್ಯ ಗೆದ್ದು ಬೀಗಿದರು.

ಪ್ರಣಯ್ ಹೋರಾಟದ ಆಟ

ಜೊನಾಥನ್ ಚುರುಕಿನ ಆಟಕ್ಕೆ ಪ್ರಣಯ್ 12-21, 18-21ರಲ್ಲಿ ಮಣಿದರು. ಮೊದಲ ಗೇಮ್‌ನ ಆರಂಭದಲ್ಲಿ 1-5ರಿಂದ ಹಿನ್ನಡೆಯಲ್ಲಿದ್ದ ಪ್ರಣಯ್ ಬಳಿಕ 5-5ರ ಸಮಬಲ ಸಾಧಿಸಿದರು. ಜಿದ್ದಾಜಿದ್ದಿನ ಪೈಪೋಟಿಯಲ್ಲಿ ಗೇಮ್ ಜೊನಾಥನ್ ಪಾಲಾಯಿತು. ಎರಡನೇ ಗೇಮ್‌ನ ಆರಂಭದಲ್ಲೂ ಉಭಯ ಆಟಗಾರರು 7-7ರ ಸಮಬಲದಲ್ಲಿ ಸಾಗಿದ್ದರು. ವಿರಾಮದ ವೇಳೆಗೆ 11-7ರಿಂದ ಜೊನಾಥನ್ ಮೇಲುಗೈ ಸಾಧಿಸಿದರು. ಪುಟಿದೆದ್ದ ಪ್ರಣಯ್ 13-13ರ ಸಮಬಲ ಸಾಧಿಸಿದರು. ತೀವ್ರ ಪೈಪೋಟಿ ನಡೆಸಿದರೂ ಗೇಮ್ ಹಾಗೂ ಪಂದ್ಯ ಇಂಡೊನೇಷ್ಯಾ ಆಟಗಾರನ ಕೈವಶವಾಯಿತು.

ಸ್ವಿಸ್ ಓಪನ್ ಪ್ರಶಸ್ತಿ ಜಯಿಸಿದ ಭಾರತೀಯರು

ಆಟಗಾರ	ವರ್ಷ
ಪುರುಷರ ಸಿಂಗಲ್ಸ್	
ಕಿದಂಬಿ ಶ್ರೀಕಾಂತ್	2015
ಎಚ್.ಎಸ್.ಪ್ರಣಯ್	2016
ಸಮೀರ್ ವರ್ಮಾ	2018
ಮಹಿಳಾ ಸಿಂಗಲ್ಸ್	
ಸೈನಾ ನೆಹ್ವಾಲ್	2011, 2012
ಪಿ.ವಿ.ಸಿಂಧು	2022



ಪ್ರಶಸ್ತಿಯೊಂದಿಗೆ ಪಿ.ವಿ. ಸಿಂಧು – ಟ್ವಿಟರ್ ಚಿತ್ರ

ನೆಟ್‌ಬಾಲ್: ಕರ್ನಾಟಕ ಬಾಲಕಿಯರಿಗೆ ಬೆಳ್ಳಿ

ಬೆಂಗಳೂರು: ಕರ್ನಾಟಕ ಬಾಲಕಿಯರ ತಂಡವು ಹರಿಯಾಣದ ಬಿವಾನಿಯಲ್ಲಿ ನಡೆದ 27ನೇ ರಾಷ್ಟ್ರೀಯ ಸಬ್‌ಜೂನಿಯರ್ ನೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಪಡೆಯಿತು. ಬಾಲಕರ ತಂಡವು ಕಂಚು ಗಳಿಸಿತು.

ಬಾಲಕಿಯರ ಫೈನಲ್‌ನಲ್ಲಿ ಕರ್ನಾಟಕ 28-35ರಿಂದ ಹರಿಯಾಣ ಎದುರು ಸೋತಿತು. ಬಾಲಕರ ತಂಡ ಸೆಮಿಫೈನಲ್‌ನಲ್ಲಿ 28-30 ರಿಂದ ಜಾರ್ಖಂಡ್‌ಗೆ ಮಣಿಯಿತು.

ಉತ್ಕರ್ಷಗೆ ಜಯ

ಬೆಂಗಳೂರು: ಪ್ರತಿಭಾನ್ವಿತ ಆಟಗಾರ ಉತ್ಕರ್ಷ ಭಾನುವಾರ ಬೆಂಗಳೂರು ಸ್ನೂಕರ್ ಅಕಾಡೆಮಿ ಅಖಿಲ ಭಾರತ ಓಪನ್ ಸ್ನೂಕರ್ ಚಾಂಪಿಯನ್‌ಷಿಪ್‌ನಲ್ಲಿ ಜಯಿಸಿದರು. ಉತ್ಕರ್ಷ 59-16, 39-64, 56-30ರಿಂದ ಅರಾಫತ್ ಜೆಡಾ ವಿರುದ್ಧ ಜಯಿಸಿದರು.

ಕರ್ಣ ಕಡೂರು ಮತ್ತು ನಿಖಿಲ್ ಪೈ ಟ್ವಿಟರ್ ಚಿತ್ರ

ರ‍್ಯಾಲಿ: ಕರ್ಣ–ನಿಖಿಲ್ ಜೋಡಿ ಜಯಭೇರಿ

ಚೆನ್ನೈ (ಪಿಟಿಐ): ಬೆಂಗಳೂರಿನ ಕರ್ಣ ಕಡೂರು ಮತ್ತು ಸಹ ಚಾಲಕ ನಿಖಿಲ್ ಪೈ ಅವರು ಭಾನುವಾರ ಮುಕ್ತಾಯಗೊಂಡ ದಕ್ಷಿಣ ಭಾರತ ರ‍್ಯಾಲಿಯ ಪ್ರಶಸ್ತಿ ತಮ್ಮದಾಗಿಸಿಕೊಂಡರು.

ಎಫ್‌ಐಎ ಏಷ್ಯಾ ಪೆಸಿಫಿಕ್ ರ‍್ಯಾಲಿ ಚಾಂಪಿಯನ್‌ಷಿಪ್ (ಏಷ್ಯಾ ಕಪ್) ಅಂಗವಾಗಿ ನಡೆದ ಸ್ಪರ್ಧೆಯಲ್ಲಿ ಅರ್ಕಾ ಮೋಟರ್‌ಸ್ಪೋರ್ಟ್ಸ್ ಕ್ಲಬ್ ಪ್ರತಿನಿಧಿಸಿದ ಕರ್ಣ ಮತ್ತು ನಿಖಿಲ್ ಆರಂಭದಿಂದಲೇ ಅಮೋಘ ಸಾಧನೆ ಮಾಡಿದ್ದರು. ಶನಿವಾರದ ಸ್ಪರ್ಧೆಯ ಕೊನೆಯಲ್ಲಿ ಅಗ್ರ ಸ್ಥಾನ ಗಳಿಸಿ ಭರವಸೆ ಮೂಡಿಸಿದ್ದರು.

ಭಾನುವಾರವೂ ಆಧಿಪತ್ಯ ಮುಂದುವರಿಸಿದ ಅವರು ಏಷ್ಯಾಕಪ್‌ನ ಭಾರತ ಲೆಗ್‌ನಲ್ಲಿ ಜಯ ಗಳಿಸಿದ ಸಂಭ್ರಮದಲ್ಲಿ ಮಿಂದೆದ್ದರು.

ಚೆಟ್ಟಿನಾಡ್ ಸ್ಪೋರ್ಟಿಂಗ್ ಪ್ರತಿನಿಧಿಸಿದ ಹಿಮಾಚಲ ಪ್ರದೇಶದ ಆದಿತ್ಯ ಠಾಕೂರ್ ಮತ್ತು ಸಹ ಚಾಲಕ ವೀರೇಂದರ್ ಕಶ್ಯಪ್ ರಾಷ್ಟ್ರೀಯ ಚಾಂಪಿಯನ್‌ಷಿಪ್ ತಮ್ಮದಾಗಿಸಿಕೊಂಡರು.

ಪ್ರತಿಕೂಲ ಪರಿಸ್ಥಿತಿಯನ್ನು ಮೀರಿ ನಿಂತು ಕರ್ಣ ಮತ್ತು ನಿಖಿಲ್ ಮುನ್ನಡೆದಿದ್ದರು. ರ‍್ಯಾಲಿಯ ಕೊನೆಯ ದಿನ ಅವರ ವಾಹನದಲ್ಲಿ ತೊಂದರೆ ಕಾಣಿಸಿಕೊಂಡಿತ್ತು. ಆದರೆ ಅದನ್ನು ಲೆಕ್ಕಿಸದೆ ಅಮೋಘ ಸಾಧನೆ ಮಾಡಿದರು.

ಏಷ್ಯಾಕಪ್ ಸ್ಪರ್ಧೆಯಲ್ಲಿ ಭಾರಿ ಪೈಪೋಟಿ ನೀಡಿದ ಅಮಿತ್‌ರಾಜ್ ಘೋಷ್–ಅಶ್ವಿನ್ ನಾಯಕ್ ಮತ್ತು ಯೂನುಸ್ ಇಲಿಯಾಸ್–ಸನತ್ ಜೋಡಿ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಗಳಿಸಿದರು.

ಫುಟ್‌ಬಾಲ್: ಬೆಲಾರೂಸ್‌ಗೆ ಮಣಿದ ಭಾರತ

ಮನಾಮ (ಪಿಟಿಐ): ಪಂದ್ಯದ ದ್ವಿತೀಯಾರ್ಧದಲ್ಲಿ ಮೂರು ಗೋಲುಗಳನ್ನು ಬಿಟ್ಟುಕೊಟ್ಟ ಭಾರತ ತಂಡವು ಬೆಲಾರೂಸ್ ಎದುರಿನ ಅಂತರರಾಷ್ಟ್ರೀಯ ಸ್ನೇಹಪರ ಫುಟ್‌ಬಾಲ್ ಹಣಾಹಣಿಯಲ್ಲಿ ಶನಿವಾರ 0-3ರಿಂದ ಸೋತಿತು.

ಬ್ಯಾಕಾವು ಅರ್ಟ್‌ಸೆಮ್ (48ನೇ ನಿಮಿಷ), ಸಲವೆಯಿ ಆ್ಯಂಡ್ರೆಯಿ (68ನೇ ನಿ.) ಮತ್ತು ಹ್ರಮ್ಯಕಾ ವಲೇರಿ (90+2ನೇ ನಿಮಿಷ) ಬೆಲಾರೂಸ್ ಪರ ಕಾಲ್ಚಳಕ ತೋರಿದರು.

ಫಿಫಾ ವಿಶ್ವ ರ‍್ಯಾಂಕಿಂಗ್‌ನಲ್ಲಿ 94ನೇ ಸ್ಥಾನದಲ್ಲಿರುವ ಬೆಲಾರೂಸ್ ಎದುರು ಪಂದ್ಯದ ಮೊದಲ ಅವಧಿಯಲ್ಲಿ ಭಾರತ ಉತ್ತಮ ಆಟವಾಡಿತು. ಆದರೆ ದ್ವಿತೀಯಾರ್ಧದಲ್ಲಿ ಲಯ ಕಳೆದುಕೊಂಡಿತು.

ಏಷ್ಯಾಕಪ್ ಅಂತಿಮ ಸುತ್ತಿನ ಅರ್ಹತಾ ಪಂದ್ಯಗಳಿಗೆ ಎರಡು ತಿಂಗಳು ಬಾಕಿ ಇರುವಂತೆಯೇ ಭಾರತ ತಂಡದ ಸಾಮರ್ಥ್ಯ ಕೋಚ್ ಇಗರ್ ಸ್ಟಿಮ್ಯಾಚ್ ಅವರ ಕಳವಳಕ್ಕೆ ಕಾರಣವಾಗಿದೆ. ಕೋಲ್ಕತ್ತದಲ್ಲಿ ಜೂನ್‌ನಲ್ಲಿ ಏಷ್ಯನ್ ಅರ್ಹತಾ ಪಂದ್ಯಗಳು ನಿಗದಿಯಾಗಿವೆ.

ಈ ಪಂದ್ಯದ ಮೂಲಕ ಹಾರ್ಮಿಪಮ್ ರುವಿವಾಹ್ ಭಾರತ ತಂಡಕ್ಕೆ ಪದಾರ್ಪಣೆ ಮಾಡಿದರು.

ಬುಧವಾರ ಬಹ್ರೇನ್ ಎದುರು ನಡೆದ ಸ್ನೇಹಪರ ಪಂದ್ಯದಲ್ಲಿ ಭಾರತ ತಂಡವು 1-2ರಿಂದ ಸೋತಿತ್ತು.

ಬಜರಂಗ್ ಪೂನಿಯಾ– ಪಿಟಿಐ ಚಿತ್ರ

ಬಜರಂಗ್‌ಗೆ ಫಿಸಿಯೊ ವ್ಯವಸ್ಥೆ ಮಾಡಲಾಗಿತ್ತು: ಡಬ್ಲ್ಯುಎಫ್‌ಐ ಸ್ಪಷ್ಟನೆ

ನವದೆಹಲಿ (ಪಿಟಿಐ): ಒಲಿಂಪಿಕ್ ಪದಕ ವಿಜೇತ ಕುಸ್ತಿಪಟು ಬಜರಂಗ್ ಪೂನಿಯಾ ಅವರಿಗೆ ರಾಷ್ಟ್ರೀಯ ಶಿಬಿರದಲ್ಲಿ ನೆರವಾಗಲು ಫಿಸಿಯೊ ವ್ಯವಸ್ಥೆ ಮಾಡಿದ್ದರೂ ಅವರ ನೆರವು ಪಡೆಯಲು ನಿರಾಕರಿಸಿದ್ದರು ಎಂದು ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಸ್ಪಷ್ಟಪಡಿಸಿದೆ.

ಗಾಯಗಳಿಂದ ಚೇತರಿಸಿಕೊಳ್ಳಲು ಒಬ್ಬ ಕಾಯ್ದಿರಿಸಿದ ಫಿಸಿಯೊ ಪಡೆಯಲು ಪರದಾಟ ನಡೆಸಿದ್ದೆ ಎಂದು ಟೋಕಿಯೊ ಒಲಿಂಪಿಕ್ಸ್ ಕಂಚಿನ ಪದಕ ವಿಜೇತ ಬಜರಂಗ್ ಹೇಳಿದ್ದರು.

ರಾಷ್ಟ್ರೀಯ ಶಿಬಿರದಲ್ಲಿ ಫಿಸಿಯೊಗಳು ಲಭ್ಯವಿದ್ದರು. ಅವರು ಹಲವು ಕುಸ್ತಿಪಟುಗಳಿಗೆ ಚಿಕಿತ್ಸೆ ನೀಡಬೇಕಾಗುತ್ತದೆ. ಆದರೆ ಬಜರಂಗ್ ಅವರಂತಹ ಪ್ರಮುಖ ಕುಸ್ತಿಪಟುಗಳಿಗೆ ವೈಯಕ್ತಿಕ ಕಾಳಜಿ ಅಗತ್ಯ ಎಂದು ಅವರ ಕೋಚ್ ಸುಜೀತ್ ಮಾನ್ ಹೇಳಿದ್ದರು.

‘ಬಜರಂಗ್ ಅವರ ಕೋರಿಕೆಯಂತೆ, ಫಿಸಿಯೊಥೆರಪಿಸ್ಟ್‌ಗೆ ಸರ್ಕಾರದ ವೆಚ್ಚದಲ್ಲಿ ಸೋನಿಪತ್‌ನ ಭಾರತ ಕ್ರೀಡಾ ಪ್ರಾಧಿಕಾರ (ಸಾಯ್) ಕೇಂದ್ರದಲ್ಲಿ ತಂಗಲು ವ್ಯವಸ್ಥೆ ಮಾಡಲಾಗಿತ್ತು. ಡಾ ಆನಂದ್ ಕುಮಾರ್ ಅವರನ್ನು ಅವರ ಇಲಾಖೆಯಿಂದ ಬಿಡುಗಡೆ ಮಾಡದ ಕಾರಣ, ಈ ಪರ್ಯಾಯ ವ್ಯವಸ್ಥೆ ಮಾಡಲಾಗಿತ್ತು. ಆದರೆ ಬಜರಂಗ್ ಅವರ ಸೇವೆಯನ್ನು ನಿರಾಕರಿಸಿದ್ದರು’ ಎಂದು ಡಬ್ಲ್ಯುಎಫ್‌ಐ ಪ್ರಕಟಣೆಯಲ್ಲಿ ತಿಳಿಸಿದೆ.